ಸ್ಥಾಪನೆ : ೧೮೬೫

1872

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೮



ಶತಮಾನೋತ್ತರ ಬೆಳ್ಳಿ ಹಬ್ಬದ

(ಎಸ್ಸೆಲ್ಸಿ ೧೯೮೮ ಬ್ಯಾಚ್)

ಪರ್ಯಾಯ/೮೯೧೨

ರಜತ ಶಾಲಾ ಪತ್ರಿಕೆ

ಶ್ರೀ ಚೆನ್ನಬಸವೇಶ್ವರ...

...ಗಲಿಪುರ,

ನೆಲಮಂಗಲ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡಿಫ್ಲೊಟ ಚನ್ನಬಸಪ್ಪ ವೈ.ಪಿ. ಮೊದಲನೆಯ ನಾರಾಯಣ

ಈ ಸಂಚಿಕೆಯೊಳಗಿನ ಸ್ಫುಟವಿಷಯಗಳು.

ಹಿಂದುಸಾ ನವಲ್ಲಿ ಶಿಕ್ಷಣದ ಪ್ರಸಾತವು.
ನೀರಿನ ಉಪಯೋಗವು.
ವಂಶದ ಮೇಲೆ ಉಪಾಯವು.
ಯಿಲ್ಲದ ಗುಪ್ತಸಂದೇಶವಾಹಕ ಯಂತ್ರವು.
ಅಕಲ್ಪಿತವಾದ ಶೋಧವು.
ಮೆಂಟಿನ ಸಭಾಸದರ ವೇತನವು.

ಜಾಹೀರಾತುಗಳು.

ತ ಒನೇ, ಒನೇ ಇಯತ್ತೆಗಳು, ಮುಲಕೀ ಪರೀಕ್ಷೆ, ಟ್ರೇನಿಂಗ ಕಾಲೇ
ಪರೀಕ್ಷೆ, ಸರಟಿಫಿಕೀಟಿನ ಪರೀಕ್ಷೆ, ಸ್ಕೂಲಫಾಯನಲ್ ಪರೀಕ್ಷೆ ಇವು
ೀ ಉಪಯುಕ್ತವಾದ "ಕನ್ನಡ ನಿಬಂಧರತ್ನಾವಲಿ" ಎಂಬ ನಿಬಂಧ
ಸ್ತಕವು ಮೂರಾಟಕ್ಕೆ ಸಿದ್ಧವಾಗಿದೆ. ಬೆಲೆ ೧ ಆಣೆ. ೬ ಸೈ. ಸ್ಟಸ್ಟ
ಯುವ ಸ್ಥಳಗಳು:—

ರಾ॥ ಬಿ. ಜಿ. ಹೊಸೂರ, ಬುಕ್ಸೆಲರ, ಧಾರವಾಡ.
ರಾ॥ ಹಣಮಂತ ಅಪ್ಪಾರಾವ ದಿವೇಕರ, ಸಾಠೇ ವಾಡಾ, ಧಾರವಾಡ.

ಧಾರವಾಡ.
೬-೧೯೧೫. } ಬಿ. ಜಿ. ದಿವೇಕರ, ಬಿ ಎ. ಎಸ್. ಟಿ. ಸಿ. ಡಿ.
ಗ್ರಂಥಕರ್ತ.

ಮಹಾಸುಗಂಧ ಕೇಶವರ್ಧಕ ತೈಲ.

——(೦)——

ನ್ನು ವಾತದಲ್ಲಿ ಯತಡಾವತಿರ್ ಕೂದಲುಗಳಿಗೆ ಹಚ್ಚುವದ
ುಳಿಗೆ ತಂಪು, ಸ್ಮರಣಶಕ್ತಿ ಹೆಚ್ಚಾಗುವದು. ನೇತ್ರಗಳು
ಗಲಾತವು, ವಿದ್ಯಾರ್ಥಿ ಮತ್ತು ಹೆಣ್ಣು ಮಕ್ಕಳಿಗೆ ಅತ್ಯಂತ
ದ್ದು. ಕ್ರಯ— ೫ ತೊಲಿ ಸೀಸೆಗೆ ಐದು ಆಣೆ. ಟಪಾಲ
ೀರೆ.

ರಘುನಾಥರಾವ ಕುಲಕರ್ಣಿ,
ಪೋಷ್ಟ ಹಿಪ್ಪರಗಿ (ಬಿಜಾಪೂರ)

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೨೭.] ಮಾರ್ಚ ೧೮೮೨. [ಸಂಚಿಕೆ ೩.

ಅನುಕ್ರಮಣಿಕೆ.

ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೪೯
೨. ಅಲೀಗಡದ ಕಾಲೇಜದಲ್ಲಿ ಜಸ್ಟಿಸ ಸ್ಟ್ರೈಟ ಧೊರಗಳು ಮಾಡಿದ ಭಾಷಣವು ೫೫
೩. ಕಲಿಸುವ ಪದ್ಧತಿಗಳು. ೬೧
೪. ನೋಟೀಸು ೬೭
೫. ಕೊಲ್ಹಾಪುರದ ವೃತ್ತಾಂತವು ೬೯

CONTENTS.

1. Educational Intelligence and Useful Notes... 49
2. Mr. Justice Straight's address to the M. A. O. College Students Aligarh 55
3. Methods of teaching 61
4. Departmental Notice 67
5. Excussion to Kolhapur 69

DHARWAR:

PRINTED AT THE KARNATIC BOOK DEPOT PRESS,

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಕನ್ನಡ ಕಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ
ಒಂದು ಸಂಚಿಕೆಗೆ ... ... ೨ ಆಣೆ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ
ಮೂರುಸಾರೆ ಇಟ್ಟರೆ.	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಕಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಗಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ೧ ನ್ನುಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಿಸಲಿಕ್ಕೆ ಬೇಕು.

೫. ಟಿಕೇಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಕಾಲಾಪತ್ರಕ.

ಶಾಲಾಪತ್ರಕ.

ಪದ್ಯಂ.

ಪ್ರೀತಿವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷವುಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ತೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೩.] ಮಾರ್ಚ ೧೮೮೨ [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಸನ್ ೧೮೮೦।೮೧ನೇ ವರ್ಷದ ಇಂಗ್ಲಂಡ ಮತ್ತು ವೇಲ್ಸದೊಳಗಿನ ಶಾಲಾಜಾತೆಯ ವಾರ್ಷಿಕ ರಿಪೋರ್ಟು ಪ್ರಸಿದ್ಧವಾಗಿರುತ್ತದೆ. ಅದರಿಂದ ತಿಳಿಯುವದೇನಂದರೆ:—

೧. ಪ್ರಾಥಮಿಕ ಶಿಕ್ಷಣದ ಶಾಲೆಗಳಲ್ಲಿ ಕೆಲಸ ಮಾಡುವ ಟ್ರೇನ್ಡ ಮಾಸ್ತರರಿಗೆ ವರ್ಷಕ್ಕೆ ಸರಾಸರಿ ಮಾನದಿಂದ ೧೮೦ ಪೌಂಡು ಮತ್ತು ಟ್ರೇನ್ಡ ಮಿಸ್ಟ್ರೆಸ್ಸುಗಳಿಗೆ ೭೫ ಪೌಂಡು ತಲಬು ಸಿಗುತ್ತದೆ. ಇವರ ಪೈಕಿ ಕೆಲವು ಶಿಕ್ಷಕರಿಗೆ ಇರಲಿಕ್ಕೆ ಮನೆಗಳನ್ನು ಕಟ್ಟಿಸಿ ಕೊಟ್ಟಿರುತ್ತಾರೆ.

೨. ಟ್ರೇನ್ಡ ಹೆಡ್ಡ ಮಾಸ್ತರರು ೧೮೦೮೭ ಜನರಿರುತ್ತಾರೆ. ಅವರಲ್ಲಿ ೨೫೬೯ ಜನರಿಗೆ ೭೫ರಿಂದ ೧೦೦ ಪೌಂಡುಗಳವರೆಗೆ, ೪೯೬೩ ಜನರಿಗೆ ೧೦೦ರಿಂದ ೧೫೦ ಪೌಂಡುಗಳವರೆಗೆ ೧೯೩೪ ಜನರಿಗೆ ೧೫೦ರಿಂದ ೨೦೦ ಪೌಂಡು

---

* ಇಂಗ್ಲಂಡ ಮತ್ತು ವೇಲ್ಸದ ಜನಸಂಖ್ಯೆಯು ೩ ಕೋಟಿ. ಪ್ರೌಢಶಾಲೆಗಳವು ೧೮೦೦೦ ಜಟಚ್ಚಾಕು ನೆಳಲು.

ಗಳವರೆಗೆ ಮತ್ತು ೧೫೪೩ ಜನರಿಗೆ ೨೦೦ ಪೌಂಡಿಗಿಂತ ಹೆಚ್ಚು ತಲಬು ಸಿಗುತ್ತದೆ. ಟ್ರೇನ್ಡ ಅಸಿಸ್ಟಂಟರು ೫೭೧೨ ಜನರಿರುತ್ತಾರೆ. ಅವರಲ್ಲಿ ೨೦೪೪ ಜನರಿಗೆ ೫೦ ರಿಂದ ೭೫ ಪೌಂಡುಗಳವರೆಗೆ ೧೫೦೯ ಜನರಿಗೆ ೭೫ರಿಂದ ೧೦೦ ಪೌಂಡುಗಳವರೆಗೆ, ೧೭೧೨ ಜನರಿಗೆ ೧೦೦ ರಿಂದ ೧೫೦ ಪೌಂಡುಗಳವರೆಗೆ ಮತ್ತು ೩೩ ಜನರಿಗೆ ಅದಕ್ಕೂ ಹೆಚ್ಚು ತಲಬು ಸಿಗುತ್ತದೆ. ೧೬೩೦೯ ಟ್ರೇನ್ಡ ಹೆಡ್ಡ ಮಿಸ್ಟ್ರೆಸ್ಸುಗಳು ಇರುತ್ತಾರೆ. ೭೩೧೪ ಜನರಿಗೆ ೫೦ರಿಂದ ೭೫ ಪೌಂಡುಗಳವರೆಗೆ, ೩೯೫೨ ಜನರಿಗೆ ೭೫ರಿಂದ ೧೦೦ ಪೌಂಡುಗಳವರೆಗೆ, ೨೪೪೧ ಜನರಿಗೆ ೧೦೦ರಿಂದ ೧೫೦ ಪೌಂಡುಗಳವರೆಗೆ ೬೭೦ ಜನರಿಗೆ ೧೫೦ರಿಂದ ೨೦೦ ಪೌಂಡುಗಳವರೆಗೆ ಮತ್ತು ೪೬೯ ಜನರಿಗೆ ೨೦೦ ಪೌಂಡಿಗಿಂತ ಹೆಚ್ಚು ತಲಬು ಸಿಗುತ್ತದೆ. ಟ್ರೇನ್ಡರಾದ ಸ್ತ್ರೀ ಉಪಶಿಕ್ಷಕರು ೩೦೩೧೦ ಜನರು ಇರುತ್ತಾರೆ. ಅವರಲ್ಲಿ ೩೦೧೧ ಜನರಿಗೆ ೫೦ ಪೌಂಡಿಗಿಂತ ಕಡಿಮೆ ತಲಬು ಸಿಗುವದು, ೩೬೪೧ ಜನರಿಗೆ ೫೦ರಿಂದ ೭೫ ಪೌಂಡಿನವರೆಗೆ ೧೯೪೭ ಜನರಿಗೆ ೭೫ರಿಂದ ೧೦೦ ಪೌಂಡಿನವರೆಗೆ, ೧೬೩೭ ಜನರಿಗೆ ೧೦೦ರಿಂದ ೧೫೦ ಪೌಂಡುಗಳವರೆಗೆ ಮತ್ತು ಉಳಿದ ಇಬ್ಬರಿಗೆ ೧೫೦ಕ್ಕಿಂತ ಹೆಚ್ಚು ಪಗಾರ ದೊರೆಯುವದು. ಈ ಪ್ರಕಾರ ಪಗಾರದ ಸುವ್ಯವಸ್ಥೆಯು ೧೭ ವರ್ಷದಿಂದ ಇತ್ತಲಾಗಿ ಆಗಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಸ್ತ್ರೀ ಶಿಕ್ಷಕರ ಸಂಖ್ಯೆಯು ವರ್ಷ ವರ್ಷಕ್ಕೆ ಹೆಚ್ಚಾಗುತ್ತಲೂ ಗಂಡು ಶಿಕ್ಷಕರ ಸಂಖ್ಯೆಯು ಕಡಿಮೆಯಾಗುತ್ತಲೂ ನಡೆದದೆ. ಆ ದೇಶವ ೧೪ ಟ್ರೇನಿಂಗ ಕಾಲೇಜಗಳಲ್ಲಿ ಈಗ್ಗೆ ೧೪೦೬ ಮಂದಿ ವಿದ್ಯಾರ್ಥಿಗಳೂ ೧೪೯೪ ಮಂದಿ ವಿದ್ಯಾರ್ಥಿನಿಯರೂ ಕಲಿಯುತ್ತಾರೆ.

(೮೯ನೇ ಪುಟದಿಂದ ಮುಂದೆ ಸಾಗಿದ್ದು)

ಮುಂಬಯಿ ಇಲಾಖೆಯೊಳಗಿನ ಅಯಾ ಭಾಗವಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳಿಸುವ ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ.	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	೫ನೇ ೬ನೇ ಇಯತ್ತೆ ಕಲಿಯುವ.			೩ನೇ ೪ನೇ ಇಯತ್ತೆ ಕಲಿಯುವ.			೨ನೇ ಇಯತ್ತೆಯ ವರೆಗೆ ಕಲಿಯುವ.			ಅಂತೂ.		
			ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂ
ಮುಖ್ಯಭಾಗ.	೨೯೯	೧೩೪೦೧	೩೫೪೪೩	೨೩೯೯	೩೭೦೨	೪೫೩೭೪	೪೧೯೯	೪೯೯೩೩	೩೪೪೭	೩೯೭೨೭	೭೩೯೫೫೭	೧೧೯೭೪೪	೧೪೪೫೩೩	೧೩೪
ಉತ್ತರಭಾಗ.	೨೯೦೨	೧೪೯೯೦೪	೫೩೫೭೩	೩೩೦೫	೫೩೭೪೪	೭೭೭೪೯	೨೫೩೧	೩೩೯೦೪	೧೧೭೯೩	೫೯೧೦೦	೧೭೩೭೫೫	೧೭೭೯೫	೧೪೫೫೩	೧೪೯೯
ದಕ್ಷಿಣಭಾಗ.	೨೩೯೪	೧೩೩೨೪೦	೩೭೧೩೦	೧೩೦೪	೩೩೪೩೪	೪೩೯೩೫	೪೫೪೩	೪೭೫೪೪	೩೩೪೪	೪೩೨೪೪	೧೪೯೫೭೦	೧೫೭೦೪೪	೧೪೭೪೪೪	೧೩೩೨
ಸಂಧ.	೧೧೭೭	೪೫೭೧೨	೭೭೩೭	೨೩೯	೭೯೫೫೧	೧೯೪೭೦	೪೦೦೨	೨೫೪೩೪	೧೧೨೨೩	೩೫೯೭	೩೪೭೦೫	೩೩೩೫೫	೩೪೩೩	೪೫೭೨

ಈ ಸಂಬಂಧದಿಂದ ಮೆ. ಡೈರೆಕ್ಟರ ಆವ ಪಬ್ಲಿಕ ಇನೆ ಸ್ಟ್ರಕ್ಶನ್ ದೊರೆಗಳು ಅನ್ನುವದೇನೆಂದರೆ:—೫೯೮ ೬೯೮ ಇಯತ್ತೆ ಕಲಿಸುವ ಶಾಲೆಗಳು ಉತ್ತರ ಭಾಗದಲ್ಲಿ ವಿಶೇಷವಾಗಿ ಬೆಳೆದಿರುತ್ತವೆ, ಅದಕ್ಕೂ ಕಡಿಮೆ ದಕ್ಷಿಣ ಭಾಗದಲ್ಲಿ, ಮಧ್ಯಭಾಗದಲ್ಲಿ ಸ್ವಲ್ಪ; ೫೯೮ ೪೯೮ ಇಯತ್ತೆಗಳನ್ನು ಕಲಿಸುವ ಶಾಲೆಗಳ ಸಂಖ್ಯೆಯು ಸಿಂಧದಲ್ಲಿ ಬಹಳವಾಗಿ ಬೆಳೆದಿರುತ್ತದೆ, ದಕ್ಷಿಣ ಭಾಗದಲ್ಲಿ ತಕ್ಕಷ್ಟು ಬೆಳೆದಿರುತ್ತದೆ. ದಕ್ಷಿಣ ಭಾಗದಲ್ಲಿಯೂ, ಸಿಂಧದಲ್ಲಿಯೂ ಈ ವರ್ಷ ಪರೀಕ್ಷೆಗೆ ನಿಂತ ಹುಡುಗರು ಹೋದ ವರ್ಷಕ್ಕಿಂತ ಹೆಚ್ಚಿಗಿರುತ್ತಾರೆ. ಒಟ್ಟು ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ ೪೯೮೦೦ ಗಂಡು, ೩೫೪೮ ಹೆಣ್ಣು ಹುಡುಗರು ಪರೀಕ್ಷೆಗೆ ನಿಂತಿದ್ದರು. ಅವರಲ್ಲಿ ೪೪೦೦೦ ಗಂಡು, ೧೯೬೬ ಹೆಣ್ಣು ಹುಡುಗರು ಪಾಸಾದರು. ಮುಂಬಯಿ ಇಲಾಖೆಯಲ್ಲಿ ಶಿಕ್ಷಕರ ೪ ಟ್ರೇನಿಂಗ ಕಾಲೇಜಗಳು ಇದ್ದು ಅವುಗಳಲ್ಲಿ ೭೦೪ ಜನ ವಿದ್ಯಾರ್ಥಿಗಳೂ ಸ್ತ್ರೀ ಶಿಕ್ಷಕರ ೭ ಟ್ರೇನಿಂಗ ಕಾಲೇಜಗಳು ಇದ್ದು ಅವುಗಳಲ್ಲಿ ೧೭೩ ಜನ ವಿದ್ಯಾರ್ಥಿನಿಗಳೂ ಕಲಿಯುತ್ತಾರೆ.

ಅಮೇರಿಕದಲ್ಲಿಯ "ಹೋಮಿಯೊಪ್ಯಾಥಿಕ" ಎಂಬ ಸಂಘದ ಡಾಕ್ಟರರು ತಮ್ಮ ಬಹು ದಿವಸದ ಅನುಭವದಿಂದ ಸಿದ್ಧ ಮಾಡಿರುವದು ಏನಂದರೆ:—ಮನುಷ್ಯರಿಗೆ ಎಷ್ಟೋ

---

* ಶೈತ್ಯವನ್ನು ಶೀತೋಪಚಾರದಿಂದಲೇ ಉಷ್ಣವನ್ನು ಉಷ್ಣೋಪಚಾರದಿಂದಲೇ ಹೊಡೆಯುವಂಥ ವೈದ್ಯ ಕ್ರಿಯೆಗೆ 'ಹೋಮಿಯೊಪ್ಯಾಥಿ ಎಂಬ ಹೆಸರು. ಈ ವೈದ್ಯರು ಬಹುತರ ರೋಗಿಗಳಿಗೆ ಗುಳಿಗೆಗಳನ್ನು ಕೊಡುತ್ತಾರೆ. ಆ ಗುಳಿಗೆಗಳು ಸಾಸಿವೆ ಕಾಳಿಗಿಂತ ಸಣ್ಣವಿರುತ್ತವೆ.

ರೋಗಗಳು ನೀರಿನಿಂದ ಬರುತ್ತವೆ. ನೀರನ್ನು ಪ್ರತಿಯೊಬ್ಬನು ಪ್ರಮಾಣದಿಂದ ಕುಡಿಯುತ್ತಿದ್ದರೆ ಅವನ ಅನೇಕ ಬೇನೆಗಳು ಇಲ್ಲವಂತೆ ಆಗುವವು. ಇದಲ್ಲದೆ ಪ್ರತಿ ದಿವಸ ಮೂರಾವರ್ತಿ ಅಂದರೆ ಬೆಳಿಗ್ಗೆ ಎದ್ದ ಕೂಡಲೆ ಒಮ್ಮೆ, ಮಧ್ಯಾಹ್ನದ ೧೨ ಘಂಟೆಗೆ ಒಮ್ಮೆ, ಸಾಯಂಕಾಲಕ್ಕೊಮ್ಮೆ ಈ ಮೇರೆಗೆ ಸರ್ತಿಗೊಮ್ಮೆ ನಾಲ್ಕು ನಾಲ್ಕು ಹನಿ ನೀರನ್ನು ಕುಡಿಯುತ್ತ ಹೋದರೆ, ಆ ಮನುಷ್ಯನಿಗೆ ಬಹುಶಃ ರೋಗಗಳು ಬರಲಿಕ್ಕಿಲ್ಲ; ಕನಿಷ್ಠಕ್ಕೆ ಕೆಡಕು ನೀರಿನ ಬಾಧೆಯಂತು ಆಗಲಿಕ್ಕಿಲ್ಲ. ಈ ಡಾಕ್ಟರರು ಬಹು ಶ್ರಮದಿಂದ ಈಗ್ಗೆ ಗೊತ್ತು ಹಚ್ಚಿದಂಥ ಶೋಧವನ್ನು ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಪೂರ್ವಜರು ಗೊತ್ತು ಹಚ್ಚಿ ಅದಕ್ಕೆ "ಅಚಮನ" ಎಂಬ ಗೌರವವಿವ ಹೆಸರನ್ನು ಕೊಟ್ಟು ಧರ್ಮದ ಕಟ್ಟಳೆಗಳಲ್ಲಿ ಶೇರಿಸಿದ್ದಾರೆ. ಆದರೆ ಇತ್ತಿತ್ತಲಾಗಿ ಈ ಪ್ರಯೋಜನಕರವಾದ ನೇಮವನ್ನು ನಮ್ಮ ಜನರು ಮುರಿಯುಹತ್ತಿರುತ್ತಾರೆ. ಅಜ್ಞಾನದಿಂದ ಧರ್ಮ ಕಟ್ಟಳೆಗಳ ಇಂಗಿತವನ್ನು ತಿಳುಕೊಳ್ಳದೆ ಬಣ ಹೆಮ್ಮೆಗೆ ಬಿದ್ದು, ದೇಚಾಚಾರ ಕುಲಾಚಾರಗಳನ್ನು ಮೂಲಿಗೊತ್ತುವದು ಜಾಣತನವಲ್ಲ. ಪ್ರತಿಯೊಂದು ಕಟ್ಟಳೆಯು ವಿಚಾರದಿಂದಲೇ ಮಾಡಲ್ಪಟ್ಟಿರುತ್ತದೆ. ಅದನ್ನು ಸಹಸಾ ಅತಿಕ್ರಮಿಸುವವಕ್ಕಿಂತ ಅದರಂತೆ ನಡೆಯುವದು ಬಳ್ಳೀದೆಂದು ಮೇಲಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

ಗ್ರೀನಲಂಡ ದೇಶವ ನೆರೆಯಲ್ಲಿಸಿಗುವಂಥ ತಿಮಿಂಗಿಲದ ಭಾರವು ಸುಮಾರು ೧೦೦ ಟನ್ನ ಅಂದರೆ ೮೮ ಆನೆಗಳಷ್ಟು ಇರುತ್ತದೆ.

ನಮ್ಮ ಮಹಾರಾಣಿ ಸಾಹೇಬರವರ ರಾಜ್ಯವಲ್ಲಿ ಬಂದು

ಇಡೀ ಮಹಾದ್ವೀಪವೂ, ನೂರು ದ್ವೀಪಕಲ್ಪಗಳೂ, ಐನೂರು ಭೂಶಿರಗಳೂ, ಸಾವಿರ ಸರೋವರಗಳೂ, ಇನ್ನೂರು ನದಿಗಳೂ, ಹತ್ತುಸಾವಿರ ನಡುಗಡ್ಡಿಗಳೂ ಇರುತ್ತವೆ.

ದೀವಿಗೆ ಕಡ್ಡಿಗಳನ್ನು ವಿಶೇಷವಾಗಿ ಸ್ವೀಡನ್ನ ದೇಶದಲ್ಲಿ ಮಾಡುತ್ತಾರೆ. ಆ ದೇಶದೊಳಗಿಂದ ಪ್ರತಿವರ್ಷ ಸುಮಾರು ೧,೦೦,೦೦,೦೦,೦೦೦ ಪೆಟ್ಟಿಗೆಗಳು ಪರದೇಶಕ್ಕೆ ಹೋಗುತ್ತವೆ. ಅಲ್ಲಿರುವ ಕೆಲವು ಯಂತ್ರಗಳಿಂದ ದಿನ ಬಂದಕ್ಕೆ ಸುಮಾರು ೭೫ ಲಕ್ಷ ಕಡ್ಡಿಗಳು ಸಿದ್ಧವಾಗುತ್ತವೆ. ಇಡೀ ಯುರೋಪಖಂಡದಲ್ಲಿ ಈ ಕಡ್ಡಿಗಳನ್ನು ಮಾಡುವ ಎಲ್ಲ ಕಾರಖಾನೆಗಳು ಕೂಡಿಸುಮಾರು ೫೦ ಸಾವಿರ ಇರುತ್ತವೆ!!

ಸಂಯುಕ್ತ ಸಂಸ್ಥಾನದೊಳಗಿನ ಡಾಕೋಟಾ ಸಂಸ್ಥಾನದಲ್ಲಿ ಬಂದು ಬಾವಿ ಇರುತ್ತದೆ. ಆ ಬಾವಿಯೊಳಗಿಂದ ಜೆಗಟು ಮಣ್ಣಿನಂಥ ಬಂಮು ಬಗೆಯ ಪದಾರ್ಥವನ್ನು ತೆಗೆದು ಅದರಿಂದ ಒಡಿಗಳನ್ನು ಮಾಡಿ ಬಣಗಿಸಿದರೆ ಸಬಕಾರದ ಒಡಿಗಳಾಗುತ್ತವಂತೆ.

ವೋರವೀ ಸಂಸ್ಥಾನದ ಶಾಕುರರು ಎಂಟು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಎಲ್ಲ ಹುಡುಗರನ್ನು ಸಾಲಿಗೆ ಹಾಕಲಿಕ್ಕೆ ಬೇಕೆಂದು ಕಾಯ್ದೆಯನ್ನು ಮಾಡಿದ್ದಾರೆ. ಈ ಕಾಯ್ದೆಯು ಯುರೋಪದೊಳಗಿನ ಸುಧಾರಿಸಿದ ಯಾವತ್ತೂ ರಾಷ್ಟ್ರಗಳಲ್ಲಿ ಇರುತ್ತದೆ.

ಹುಚ್ಚು ನಾಯಿ ಕಡಿದರೆ ಅದರ ವಿಷಪರಿಹಾರಾರ್ಥವಾಗಿ ಬಂದು ಹೊಸ ಔಧವನ್ನು ಇತ್ತಲಾಗಿ ಹಚ್ಚಿದ್ದಾರೆ. ವಿಷವೇರುವ ಲಕ್ಷಣಗಳು ತಿಳಿವ ಕೂಡಲೆ, ಆ ಮನುಷ್ಯನನ್ನು

ಗಾಳಿಯೂಡದಂಥ ಬಂದು ಕೋಣೆಯಲ್ಲಿ ಬರುವ್ದು ಅಲ್ಲಿ ಬಿಸಿ ನೀರಿನದೊಂದು ಪಾತ್ರೆಯಲ್ಲಿ ಕೂಡ್ರಿಸಿ ಅವನ ಮೈ ತಾಳು ವಷ್ಟು ಆ ನೀರನ್ನು ಹೆಚ್ಚಿಗೆ ಕಾಸಬೇಕು. ಈ ಮೇರೆಗೆ ಅವನನ್ನು ಕೆಲವು ತಾಸುಗಳವರೆಗೆ ಕೂಡ್ರಿಸಲು ಆ ವಿಕಾರ ಗಳು ಕ್ರಮೇಣ ಕಡಿಮೆಯಾಗಿ ವಿಷವ ಬಾಧೆಯು ತಪ್ಪು ವದು. ಈ ಶೋಧವು ಅನಾಯಾಸದಿಂದ ಬಹ್ಮಿಂದೊಹ್ಮೆ ಹತ್ತಿತು. ಅದು ಹ್ಯಾಗಂದರೆ,—ಒಬ್ಬ ಫ್ರೆಂಚ ವೈದ್ಯನಿಗೆ ಬಂದು ಪ್ರಸಂಗವಲ್ಲಿ ಹುಚ್ಚು ನಾಯಿಯು ಕಚ್ಚಲು, ಅವನು ಹುಚ್ಚು ಹತ್ತಿ ಸಾಯುವದಕ್ಕಿಂತ ಆತ್ಮಹತ್ಯ ಮಾಡಿಕೊ ಳ್ಳುವದು ಲೇಸೆಂದು ನಿಶ್ಚಯಿಸಿ, ಬಿಸಿನೀರಿನಲ್ಲಿ ಕುಳಿತು ತನ್ನ ನರಗಳನ್ನು ಕೊಯಿಕೊಂಡು ಪ್ರಾಣತ್ಯಾಗ ಮಾ ಡುವ ಮನಸ್ಸು ಮಾಡಿಕೊಂಡು ಬಂದು ಬಿಸಿನೀರಿನ ಪೀಪೆ ಯಲ್ಲಿ ಹೋಗಿ ಕುಳಿತನು. ತುಸು ಹೊತ್ತಿನಲ್ಲಿಯೇ ವಿಷದ ಲಕ್ಷಣಗಳು ಮೆಲ್ಲಮೆಲ್ಲನೆ ಕಡಿಮೆಯಾಗುವದನ್ನು ನೋಡಿ ಆತ್ಮಹತ್ಯವ ಗೊಡವಿಗೆ ಹೋಗದೆ ಹಾಗೆಯೇ ನೀರಿನಲ್ಲಿ ಕುಳಿತುಕೊಂಡನು. ಕಟ್ಟಕಡೆಗೆ ವಿಷವೆಲ್ಲ ಇಳಿದು ಬಾಧೆ ಯು ತಪ್ಪಿದ ಮೇಲೆ ಅವನು ಹೊರಬಂದನು. ಈ ಉಪಾ ಯವು ಬಹಳ ಸುಲಭವಾಗಿರುತ್ತದೆ. ನಾಯಿ ಕಡಿದವರು ಎರಡನೇ ಚಿಕಿತ್ಸೆ ಉಪಾಯ ದೊರೆಯದಿದ್ದರೆ ಇವನ್ನು ಮಾಡಿ ನೋಡಬಹುದು.

MR. JUSTICE STRAIGHT'S ADDRESS TO THE M. A. O. COLLEGE STUDENTS, ALIGARH.

ಅಲೀಗಡದ ಕಾಲೇಜಿನಲ್ಲಿ ಜಸ್ಟಿಸ ಸ್ಟ್ರೇಟ ಧೊರೆ ಗಳು ಮಾಡಿದ ಭಾಷಣವು.

ಕಳೆದ ಜಾನ್ಯುವರಿ ೭೮ನೇ ತಾರೀಖಿನ ದಿವಸ ಅಲೀಗ

ಡ ಕಾಲೇಜಿನ ವ್ಯವಸ್ಥಾಪಕರು ವಾಯವ್ಯ ಪ್ರಾಂತದಲ್ಲಿ ಳಗಿನ ಹೈಕೋರ್ಟಿನ ಜಜ್ಜರಾದ ಜಸ್ಟಿಸ ಸ್ಪ್ರೋಟ ಧೊರೆ ಗಳನ್ನು ತಮ್ಮ ಕಾಲೇಜಕ್ಕೆ ಕರತಂದು ಬಹು ಮರ್ಯಾ ದೆಯಿಂದ ಅವರನ್ನು ಸತ್ಕರಿಸಿದರು. ಆ ಕಾಲಕ್ಕೆ ಆ ಧೊರೆ ಗಳು ಮಾಡಿದ ಭಾಷಣದೊಳಗಿನ ಮುಖ್ಯ ಮುಖ್ಯ ಸಂಗ ತಿಗಳನ್ನು ಕೆಳಗೆ ಬರೆಯುತ್ತೇವೆ.

ಶಿಕ್ಷಣದ ವ್ಯಾಖ್ಯೆ—ವಿದ್ಯಾಭ್ಯಾಸ ಮಾಡಲಿಕ್ಕೆ ನಿಮಗೆ ದೊರೆದಿರುವ ಈ ಅಮೂಲ್ಯ ಪ್ರಸಂಗವನ್ನು ವ್ಯರ್ಥ ಕಳ ಕೊಳ್ಳಬೇಡರಿ. ವಿದ್ಯಾಭ್ಯಾಸವಂದರೆ ಅದಪ್ಪ ಅಪಕ್ವವಿ ಚಾರಗಳನ್ನು ಬಂದರಹಿಂದೊಂದನ್ನು ಎಡೆಬಿಡದೆ ನಿಮ್ಮ ತಲೆಗಳಲ್ಲಿ ತುಂಬಿ ಬಿಡುವದಿರುತ್ತದೆಂದು ಗ್ರಹಿಸುವದು ತಕ್ಕದ್ದಲ್ಲ. ಮನುಷ್ಯನ ಬುದ್ಧಿಯು ಪ್ರಗಲ್ಭವಾಗಿ ಅದರಿಂ ದ ಸಮಾಜಕ್ಕೆ ಪ್ರಯೋಜನವಾಗಬೇಕಾದರೆ ಅವನ ಮಾ ನಸಿಕ ಶಕ್ತಿಯಷ್ಟೇ ಅಲ್ಲ, ಅವನ ಶಾರೀರಿಕ ಮತ್ತು ನೈತಿ ಕ ಶಕ್ತಿಗಳಾದರೂ ಬೆಳೆಯಲಿಕ್ಕೆ ಬೇಕು. ತನ್ನ ಗೆಳೆಯರ ನ್ನು ಕೂಡಿಕೊಂಡು ಸ್ವಾನುಭವದಿಂದ ಜ್ಞಾನ ಸಂಪಾದನ ದ ಪ್ರಸಂಗಗಳನ್ನು ಕೈಕೊಂಡು ಮನಸಿನ ಅಲ್ಪತ್ವವನ್ನು ಹೋಗಲಾಡಿಸುವ ಪ್ರಯತ್ನ ಮಾಡದೆ ಬಂದೀಸವನೆ ತಾ ನಾಯಿತು ಪುಸ್ತಕವಾಯಿತು ಈ ಪ್ರಕಾರ ತಲೆಯನ್ನು ಚ ಟ್ಟಕ್ಕಿಕೊಂಡು ಕೂಡುವಂಥ ಪಂಡಿತಂಮನ್ಯ ವಿದ್ಯಾರ್ಥಿಯ ನ್ನು ನಾವು ಹೊಗಳಲಾರೆವು, ಮತ್ತು ಕಾಯದೆಗಳ ಸಹಾ ಯದಿಂದಲೂ ಪಂಡಿತರು ರಚಿಸಿವ ನೀತಿ ಸೂತ್ರಗಳಿಂದಲೂ ವಿದ್ಯಾರ್ಥಿಗಳನ್ನು ಸನ್ಮಾರ್ಗ ಪ್ರವರ್ತಕರನ್ನೂ ನೀತಿವಂ ತರನ್ನೂ ಮಾಡಬಹುದೆಂದು ನಾವು ನೆನಿಸಲಾರೆವು. ಸತ್ಯ ವಾವುದು? ನ್ಯಾಯ್ಯವಾವುದು? ಪ್ರಸಂಶನೀಯವಾವುದು? ಎಂಬುವನ್ನು ಕಲಿತುಕೊಳ್ಳಲಿಕ್ಕೆ ತಕ್ಕ ಸಾಧನವು ಹಾಸ್ಪರ

ಸಂಘಟ್ಟನವೇ ಇರುತ್ತದೆ. ಪ್ರಬುದ್ಧ ಜನರಿಗೆ ನಿತ್ಯ ವ್ಯವಹಾರಗಳ ಮೂಲಕವಾಗಿ ಈ ಜ್ಞಾನವನ್ನು ಸಂಪಾದಿಸಿಕೊಳ್ಳುವ ಪ್ರಸಂಗಗಳು ಬಾರಿ ಬಾರಿಗೆ ಬರುತ್ತವೆ. ಆದರೆ ವಿದ್ಯಾರ್ಥಿಗಳಿಗೆ ಹಾಗಲ್ಲ; ಅವರಿಗೆ ಶಾಲೆಯಲ್ಲಿಯೂ ಆಟದ ಬೈಲಿನಲ್ಲಿಯೂ ಮಾತ್ರ ಈ ಪ್ರಸಂಗಗಳು ಒದಗುತ್ತವೆ. ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಇರಲಿಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿರುವದರಿಂದ ಬೇರೆ ಶಾಲೆಗಳಿಗಿಂತ, ಪರಸ್ಪರ ವ್ಯವಹಾರಕ್ಕೂ ಮಿತ್ರತ್ವವನ್ನು ಸಂಪಾದಿಸಿ ಅದನ್ನು ಸ್ಥಿರಪಡಿಸಲಿಕ್ಕೂ ಬಹುಮತದಿಂದ ನ್ಯಾಯ್ಯಾನ್ಯಾಯ್ಯಗಳನ್ನು ನಿರ್ಣಯಿಸಿ ನ್ಯಾಯ್ಯವಾದದ್ದನ್ನು ಕೈಕೊಳ್ಳಲಿಕ್ಕೂ ಅನ್ಯಾಯ್ಯವಾದದ್ದನ್ನು ತ್ಯಜಿಸಲಿಕ್ಕೂ ಹೆಚ್ಚು ಅನುಕೂಲವಾಗಿರುತ್ತದೆ. ಅದರ ಯಥಾರ್ಥ ಪ್ರಯೋಜನವನ್ನು ಎಲ್ಲರೂ ಮಾಡಿಕೊಳ್ಳತಕ್ಕದ್ದು.

ವ್ಯಾಯಾಮದ ಆವಶ್ಯಕತೆಯು—ನಿಮ್ಮ ಕಾಲೇಜದಲ್ಲಿ ಶಾರೀರಿಕ ವ್ಯಾಯಾಮಕ್ಕೂ ಉತ್ತೇಜನ ಕೊಡಲ್ಪಡುತ್ತದೆ. ಕ್ರಿಕೆಟ್ ಮತ್ತು ಫುಟ್ ಬಾಲುಗಳಲ್ಲಿ ನೀವು ಅಗಲೇ ಕೀರ್ತಿ ಹೊಂದಿದ್ದನ್ನು ಕೇಳಿ ನಮಗೆ ಆನಂದವಾಗುತ್ತದೆ. "ಶರೀರವು ಸ್ವಸ್ಥವಿದ್ದರೆ ಮನಸು ಸ್ವಸ್ಥವಿರುವದು" ಎಂಬ ಅಭಿಪ್ರಾಯದ ಲ್ಯಾಟಿನ್ ಗಾದೆಯು ಸುಪ್ರಸಿದ್ಧವುಂಟು. ಕನಿಷ್ಠ ಪಕ್ಷಕ್ಕೆ ಯೌವನದಲ್ಲಂತು ಶಾರೀರಿಕ ವ್ಯಾಯಾಮದ ಪೂರ್ತು ಮಾನಸಿಕ ಶಿಕ್ಷಣ ದೊರಕುವದು ಅಸಂಗತವು ಇದುವರೆಗೂ ನಾವು ಸ್ವತಃ ಸಂಪಾದಿಸಿದ ಈ ಅಲ್ಪಸ್ವಲ್ಪ ಕೀರ್ತಿಗೂ ನಮ್ಮಲ್ಲಿ ತೋರುವ ಚಟುವಟಿಕೆಗೂ ಆಚರಣಾದಾರ್ಢ್ಯಕ್ಕೂ ಪಾರೋ ಶಾಲೆಯಲ್ಲಿರುವಾಗ್ಗೆ ನಾವು ಕ್ರಿಕೆಟ್‌ವಲ್ಲಿ ಕಳೆದ ಕಾಲವೇ ಮೂಲಾಧಾರವೆಂದು ಪ್ರತ್ಯೇಕಿಸಲಿನೂ ಸಂಶಯ ಪಡುವದಿಲ್ಲ.

ಶಿಕ್ಷಣದ ಪೂರ್ಣತ್ವವೂ ಅದರ ಕಾಲವೂ—ನಿಮ್ಮ ಕಾಲೇಜಿನಲ್ಲಿ ಕಲಿಸುವ ವಿಷಯಗಳನ್ನೆಲ್ಲ ಕಲಿತು ಎಂ. ಏ. ಬಿ. ಏ. ಮುಂತಾದ ಪದವಿಗಳನ್ನು ಪಟ್ಟಪಟ್ಟಕ್ಕೆ "ನಾವು ಕೃತಕೃತ್ಯರಾದೆವು ಶಿಕ್ಷಣವನ್ನು ಮುಗಿಸಿದೆವು" ಎಂದು ನೀವು ಗ್ರಹಿಸಬೇಡಿರಿ. ನೇಮಿಸಿದ ಪುಸ್ತಕಗಳ ಪೂರ್ಣಾರ್ಥ ಪೂರ್ಣ ಜ್ಞಾನವೂ ಗಳಿಸಿದ ಜ್ಞಾನದ ಪ್ರಯೋಜನಾಪ್ರಯೋಜನವೂ ಪರೀಕ್ಷೆಯಲ್ಲಿ ದೊರಕಿಸಿದ ಗುಣಗಳ ಸಂಖ್ಯೆಯೂ ಶಿಕ್ಷಣದ ಪೂರ್ಣತ್ವವನ್ನು ಎಷ್ಟು ಮಾತ್ರವೂ ತಿಳಿಸುವದಿಲ್ಲ. ನೀವು ಪ್ರತ್ಯಕ್ಷ ವ್ಯವಹಾರದಲ್ಲಿ ಬೇರಿ ಅಸಹಾಯಶೂರರಾಗಿ ನಿಮ್ಮ ಉದ್ಯೋಗವನ್ನು ಕೈಕೊಳ್ಳುವವರೆಗೆ ನಿಜವಾದ ಶಿಕ್ಷಣಕ್ಕೆ ಆರಂಭವೇ ಆಗುವದಿಲ್ಲೆಂದು ತಿಳುಕೊಳ್ಳಿರಿ. ವ್ಯವಹಾರಿಕ ಜಗಳು ನೀರಸವಾವದೂ ಕಠೋರವಾದವೂ ಇರುತ್ತದೆ. ಅಲ್ಲಿ ಆರಂಭಕ್ಕೆ ನಿಮ್ಮ ಕಲ್ಪನಾಸೃಷ್ಟ ಮನೋರಥಗಳು ಭಗ್ನವಾಗುವವು ಮತ್ತು ಮನಸಿನಲ್ಲಿ ಮಾಡಿದ ಹಂಚಿಕೆಗಳು ಹಾಳಾಗುವವು; ಅವರೆ ಇಷ್ಟಕ್ಕೇ ನೀವು ಪತಾಸರಾಗಿ ಕಂಗೆಡಬೇಡಿರಿ. ನೀವು ಧೈರ್ಯದಿಂದ ವ್ಯವಹಾರವನ್ನು ಸಾಗಿಸಿದರೆ, ಇಲ್ಲಿ ಸಂಪಾದಿಸಿದ ಮಾನಸಿಕ, ನೈತಿಕ, ಶಾರೀರಿಕ ಶಿಕ್ಷಣಗಳು ನಿಮ್ಮ ಕೆಲಸಕ್ಕೆ ಬರುವವು. ಸಾರಾಂಶ ವ್ಯವಹಾರವೇ ಶಿಕ್ಷಣದ ಬೆಲೆಗಲ್ಲು; ವ್ಯವಹಾರಜಾತುರ್ಯವೇ ಶಿಕ್ಷಣದ ಪೂರ್ಣತ್ವದ ಕುರುಹು.

ಭಾವೀ ಆಯುಷ್ಯಕ್ರಮವು—ಬರಬರುತ್ತ ಹೆಚ್ಚಾಗುತ್ತ ನಡೆದಿರುವ ಈ ವಿದ್ಯಾರ್ಥಿ ಸಮೂಹದ ಗತಿಯು ಮುಂದೆ ಪ್ಯಾಗಾಗುವದೆಂಬ ಮಹತ್ವದ ಪ್ರಶ್ನವು ವಿಚಾರಣೀಯವಾಗಿರುತ್ತದೆ. ಅನೇಕ ಬಡ ವಿದ್ಯಾರ್ಥಿಗಳು ತಮ್ಮ ಚರಿತಾರ್ಥವು ಸಾಗಬೇಕೆಂದು ಯಾವದೊಂದು ಸರಕಾರೀ ಉದ್ಯೋಗವನ್ನು ಸ್ವೀಕರಿಸಬೇಕಾಗುತ್ತದೆಂಬ ಮಾತು ಸುಳ್ಳೆ

ಲ್ಲ. ಅದರೆ ಅವರೆಲ್ಲರಿಗೂ ಸಾಕಾಗುವಷ್ಟು ಉದ್ಯೋಗಗಳು ಎಲ್ಲಿಂದ ಬರಬೇಕು!! ಸರಕಾರದವರು ಈ ವಿಷಯದಲ್ಲಿ ತ ಮ್ಮಿಂದಾವಷ್ಟು ಸಹಾಯ ಮಾಡಲಿಕ್ಕೆ ಸಿದ್ಧರೇ ಇದ್ದಾರೆ. ಕೈಗಾರಿಕೆಯ ವಿಷ್ಣಣಕ್ಕೆ ಸರಕಾರದವರು ಉತ್ತೇಜನ ಕೊ ಟ್ಟರೆ ಈ ತೊಂದರೆಯು ಬಹಳ ಮಟ್ಟಿಗೆ ಪರಿಹಾರವಾಗುವದೆಂದು ಅನೇ ಕರ ಅಭಿಪ್ರಾಯವಿದೆ. ಅದರಿಂದ ಸರಕಾರದವರು ಈ ವಿ ಷಯಕ್ಕೆ ಲಕ್ಷ್ಯ ಪೂರೈಸಿ ಅವರ ಅಭಿಪ್ರಾಯವು ಎಷ್ಟರ ಮಟ್ಟಿಗೆ ದಿಟವಿರುತ್ತದೆಂಬುದನ್ನು ಮನಗಾಣುವದು ಅವಶ್ಯ ವಿದೆ. ಪೊಲೀಸ ಖಾತೆಯಲ್ಲಿ ಸುಧಾರಣೆಯು ಬೇಗನೇ ಆ ಗತಕ್ಕದ್ದುಂಟು. ಅದರಿಂದಲೂ ಅನೇಕ ಜನರಿಗೆ ಉದ್ಯೋ ಗ ದೊರೆಯುವದು. ಪೊಲೀಸ ಖಾತೆಯು ವ್ಯವಸ್ಥೆಯನ್ನು ಸರಿಸಿ ಸಾಮಾನ್ಯ ಪ್ರಜೆಗಳ ಮನಸಿನಲ್ಲಿ ಸರಕಾರದವರ ವಿ ಷಯವಾಗಿ ಸಂತೋಷಾಸಂತೋಷಗಳು ಉಂಟಾಗುತ್ತಾ ಇ ರುತ್ತವೆ. ಅದರಿಂದ ಪೊಲೀಸ ಖಾತೆಯಲ್ಲಿ ಸುಶಿಕ್ಷಿತ ಜನ ರು ಹೆಚ್ಚಾ ದಂತೆ ಅಶಿಕ್ಷಿತ ಪೊಲೀಸ ಜನರಿಂದ ಸರಕಾರದ ವರ ಬಗ್ಗೆ ಹುಟ್ಟುವ ಅಪ್ರೀತಿಯು ಕಡಿಮೆಯಾಗುವದು. ಅವರೆ ಏನು ಮಾಡಿದಾಗ್ಯೂ ಸರಕಾರದವರಿಂದಲೇ ಈ ಮಾ ತು ಗೊತ್ತಿಗೆಹತ್ತುವಂತೆ ಇಲ್ಲ. ಈ ವಿಷಯದಲ್ಲಿ ಸರಕಾರದ ವರಿಗೆ ಕುಂದು ಹಚ್ಚುವವಕ್ಕಿಂತ ಹೊಗಳಲು, ಇಂಗ್ಲಿಷ ಸರಕಾ ರದ ಸ್ಥಳದಲ್ಲಿ ಮತ್ತೊಂದು ಸರಕಾರವಿದ್ದರೆ ಅದರಿಂದಾದರೂ ಎಲ್ಲರಿಗೂ ಸರಕಾರೀ ಉದ್ಯೋಗಗಳನ್ನು ಕೊಡುವದು ಸಾ ಧ್ಯವಾಗುತ್ತಿತ್ತೋ ಎಂಬದನ್ನು ಜನರು ವಿಚಾರ ಮಾಡತಕ್ಕದ್ದು. ಇದು ಕೇವಲ ಸರಕಾರದವರಿಂದ ಬಗೆ ಹರಿಯುವಂ ಥ ಕೆಲಸವಲ್ಲ; ಇದರಲ್ಲಿ ತಕ್ಕ ಮಟ್ಟಿಗೆ ಜನರೂ ಸಹಾಯ ಮಾಡಲಿಕ್ಕೆಬೇಕು. ತಮ್ಮ ದೇಶಬಾಂಧವರಿಗೆ ಸ್ವಭಾಷೆಯ

ದ್ವಾರದಿಂದ ಪಾಶ್ಚಾತ್ಯ ಜ್ಞಾನವನ್ನು ಮಾಡಿಕೊಡುವ ಕೆಲಸವನ್ನು ತರುಣ ವಿದ್ವಾಂಸರು ಯಾಕೆ ಮಾಡುವದಿಲ್ಲೆಂಬದು ನಮಗೆ ತಿಳಿಯುವದಿಲ್ಲ. ಅದೇ ಮೇರೆಗೆ ಸವ್ಯ ಸ್ಥಿತಿಯನ್ನು ನೋಡಲಾಗಿ ಏತದ್ದೇಶಿಯ ವರ್ತಮಾನ ಪತ್ರಕರ್ತರ ಉದ್ಯೋಗವು ಸಹ ಬರ ಬರುತ್ತಾ ಬಳ್ಳೀ ಯೋಗ್ಯತೆಯನ್ನೈದುವಂತೆಯೂ ಅದರಿಂದ ಶಿಕ್ಷಿತ ಜನರಿಗೆ ಬಂದು ಚರಿತಾರ್ಥವ ಹೋರೆ ದೊರೆಯುವಂತೆಯೂ ತೋರುತ್ತದೆ.

ಪತ್ರಕರ್ತರಿಗೆ ಸೂಚನೆ—ನಿಮ್ಮಲ್ಲಿ ಯಾರಾವರೂ ಪತ್ರಕರ್ತರ ಕೆಲಸವನ್ನು ಕೈಕೊಳ್ಳುವವಕ್ಕೆ ಅಪೇಕ್ಷಿಸಿದರೆ, ಅವರು ಇಂಗ್ಲಿಷ ರಾಜ್ಯದಲ್ಲಿ ವಿತ್ತ ಜೀವಿತಗಳ ರಕ್ಷಣೆಯೂ ಭಾಷಣ ಸ್ವಾತಂತ್ರ್ಯ ಕ್ರಿಯಾ ಸ್ವಾತಂತ್ರ್ಯಗಳೆಂಬ ಮನುಷ್ಯನ ಸಹಜವಾದ ಹಕ್ಕುಗಳ ರಕ್ಷಣೆಯು ಅದಂತೆ ಅನ್ಯ ಯಾವ ರಾಜ್ಯವಲ್ಲಿಯಾದರೂ ಆಗುವದಿಲ್ಲೆಂಬ ಮಾತು ಮರೆಯಲಾಗದು. ಅದವರಿಂದ ಸರಕಾರದವರ ಅಥವಾ ಯಾವ ನೊಬ್ಬ ಸರಕಾರೀ ಉದ್ಯೋಗಸ್ಥನ ನಡತೆಯನ್ನು ಕುರಿತು ಬರೆಯುವಾಗ್ಗೆ ಅದನ್ನು ಬಹು ಶಾಂತತೆಯಿಂದಲೂ ಎಚ್ಚರದಿಂದಲೂ ಮಿತಿಯಿಂದಲೂ ನಿಷ್ಪಕ್ಷಪಾತದಿಂದಲೂ ಬರೆಯಲಿಕ್ಕೆ ಬೇಕು. ಮುಖ್ಯವಾಗಿ ನೀವು ಬರೆಯುವಂಥ ವಿಷಯದ ಬಗ್ಗೆ ನಿಜವಾದ ಮಾಹಿತಿಯನ್ನು ಅವಶ್ಯ ಸಂಗ್ರಹಿಸಿ ಸತ್ಯವನ್ನು ಸ್ಮರಿಸಿ ಬಳ್ಳೀ ವಿಚಾರದಿಂದ ಬರೆಯುತ್ತಾ ಹೋಗಬೇಕು.

ಕಟ್ಟಕಡೆಯಲ್ಲಿ ಸ್ಟ್ರೋಟ ಫೊರೆಗಳು ಲಘು ಲೇಖನ ಪದ್ಧತಿಯ ವಿಷಯವನ್ನು ಕಲಿತು ಅದರಲ್ಲಿ ಗತಿಯನ್ನು ಪಡೆದರೆ ಅವರಿಂದಲೂ ಅನೇಕರಿಗೆ ಉದ್ಯೋಗ ದೊರೆಯುವ ಸಂಭವ ಉಂಟೆಂದು ಸೂಚಿಸಿದರು.

METHODS OF TEACHING.
ಕಲಿಸುವ ಪದ್ಧತಿಗಳು.
READING.
ವಾಚನ.

(೪೦ನೇ ಪುಟವಿಂದ ಮುಂದೆ ಸಾಗಿದ್ದು.)

ಬಾಲ್ಯದಲ್ಲಿ ಹುಡುಗರ ಬುದ್ಧಿ (ಮಿದುಳು) ಗಿಂತ ಅವರ ಇತರ ಜ್ಞಾನೇಂದ್ರಿಯಗಳು ತೀಕ್ಷ್ಣವಾಗಿರುತ್ತವೆ. ಆದುದರಿಂದ ಅವರ ವಿಚಾರಸಾಮರ್ಥ್ಯವನ್ನು ಬೆಳಸುವದಕ್ಕೆ ಬದಲಾಗಿ ಕಣ್ಣು ಕಿವಿಗಳ ಮಾರ್ಗದಿಂದ ಅಧ್ಯಾಪನವನ್ನು ಕೊಡುವದು ವಿಹಿತವಾವದ್ದೆಂಬದು ನಿರ್ವಿವಾದವಾದ ಮಾತು. ಆ ಕಾಲಕ್ಕೆ ಅವರ ಕಣ್ಣು ಕಿವಿ ಬೆರಳುಗಳನ್ನು ಸರಿಯಾಗಿ ಉಪಯೋಗಿಸಲಿಕ್ಕೆ ಕಲಿಸಿದರೆ ಅದರಿಂದ ಅವರಿಗೆ ಬಳ್ಳಿ ಹಿತವಾಗುವದು. ಪದಾರ್ಥಗಳ ರಂಗ, ರೂಪ, ಮಹತ್ವಗಳನ್ನು ಚನ್ನಾಗಿ ನೋಡಲಿಕ್ಕೆ ಕಲಿತ ಹುಡುಗನು ಶೋಧಕ ಬುದ್ಧಿಯುವನೂ ಸೃಷ್ಟಿಚಾತುರ್ಯ ಕಲಿಯುವ ಮನಸ್ಸುಳ್ಳವನೂ ಆಗುವನೆಂಬವಕ್ಕೆ ಸಂಶಯವಿಲ್ಲ. ಉತ್ತಮ ಚಿತ್ರಗಳನ್ನೂ ಸೃಷ್ಟಿಯ ಸೌಂದರ್ಯವನ್ನೂ ನೋಡಿ ಅವನು ಶೂನ್ಯದೃಷ್ಟಿಯಿಂದ ಸುತ್ತಲಿನ ಪದಾರ್ಥಗಳನ್ನು ನೋಡುವ ಹುಡುಗನಿಗಿಂತ ಹೆಚ್ಚು ಆನಂದಪಡುವದಲ್ಲದೆ ದೊಡ್ಡ ಮನಸಿನವನಾಗುವನು. ಧ್ವನಿಯ ಸ್ವರಾಪಸ್ವರಗಳನ್ನೂ ಮಾಧುರ್ಯ ಕಾರ್ಕಶ್ಯಗಳನ್ನೂ ಅರಿಯುವ ಬಾಲಕನು ಈ ಸಾಮರ್ಥ್ಯದಿಂದ ಪಾಠಾವಸ್ತೆಯಲ್ಲಿ ರಸಿಕತೆಯನ್ನೂ ವಾಕ್ಚಾತುರ್ಯವನ್ನೂ ಪಡೆಯುವನು. ಬೆರಳುಗಳನ್ನು ಸ್ಥಿರವಾಗಿಯೂ ಸರಿಯಾಗಿಯೂ ಉಪಯೋಗಿಸಲಿಕ್ಕೆ ಬಲ್ಲಂಥ ವಿದ್ಯಾರ್ಥಿಯು ಚಿತ್ರ ಕರ್ಮದಲ್ಲಿಯೂ ವಾದನ ಕಲೆಯಲ್ಲಿಯೂ ಪ್ರವೀಣನಾಗುವದು ಸಹಜವು.

ಈ ತತ್ವವನ್ನನುಸರಿಸಿ ವಿದ್ಯಾರ್ಥಿಗಳಿಗೆ ಅಕ್ಷರಾಂಕಿಗ

ಳನ್ನು ಕಲಿಸಬೇಕೆಂದು ಅಂಕಲಿಪಿಯಲ್ಲಿ ಸೂಚಿಸಿರುತ್ತೇವೆ. ಚಿಕ್ಕ ಬಾಲಕರಲ್ಲಿ ಪದಾರ್ಥಗಳನ್ನು ನೋಡುವದೂ, ಕೂಡಿದರೆ ಅವುಗಳನ್ನು ಕೈಯಲ್ಲಿ ತಕ್ಕೊಂಡು ಆಡುವದೂ, ಅವುಗಳ ರಂಗ ರೂಪ ನಾದಗಳನ್ನು ತಿಳುಕೊಳ್ಳುವದೂ ಓಡಾಡುವದೂ, ಇವೇ ಮೊದಲಾದ ವ್ಯಾಪಾರಗಳು ಮುಖ್ಯವಾಗಿರುತ್ತವೆ. ಈ ವ್ಯಾಪಾರಗಳನ್ನು ಕೈಕೊಂಡು ಅಧ್ಯಾಪನವನ್ನು ಕೊಡುವದೇ ಫ್ರೀಬೆಲನ ಶಿಕ್ಷಣದ ಪದ್ಧತಿಯು ಮರ್ಮವು.

ಪಾಚನವನ್ನು ಕಲಿಸುವ ಒಂದು ಪದ್ಧತಿಯನ್ನು ಅಂಕಲಿಪಿಯಲ್ಲಿ ಸೂಚಿಸಿರುತ್ತೇವೆ. ಅದು ಏಕೀಕರಣ ಪದ್ಧತಿಯು; ಅಂದರೆ ಮೊದಲು ಅಕ್ಷರಗಳನ್ನು ತರುವಾಯ ಎರಡು ಮೂರು ಅಕ್ಷರಗಳುಳ್ಳ ಶಬ್ದಗಳನ್ನು ಅನಂತರ ವಾಕ್ಯಗಳನ್ನು ಕಲಿಸುವ ಪದ್ಧತಿಯು. ಚಿಕ್ಕ ಹುಡುಗರಿಗೆ ಓದಲಿಕ್ಕೆ ಕಲಿಸುವ ಮತ್ತೊಂದು ಪದ್ಧತಿಯುಂಟು. ಅದಕ್ಕೆ ಪೃಥಕ್ಕರಣ ಪದ್ಧತಿ ಎಂಬ ಹೆಸರು. ಅದು ಹ್ಯಾಗಂದರೆ,—ಇಡೀ ಶಬ್ದವನ್ನು ಕರೆ ಪಲಿಗೆಯ ಮೇಲೆ ಬರೆದು ಆ ಮಾರ್ಗವಾಗಿ ಶಬ್ದಜ್ಞಾನವನ್ನೂ ಶಬ್ದವಯವಜ್ಞಾನವನ್ನೂ ಮಾಡಿಕೊಡುವದು. ಚಿತ್ರಬೋಧದಂಥ ಪುಸ್ತಕಗಳು ಈ ಪದ್ಧತಿಯನ್ನನುಸರಿಸಿ ರಚಿಸಲ್ಪಟ್ಟಿರುತ್ತವೆ. ಈ ಪದ್ಧತಿಯು ಸ್ವಲ್ಪ ಕಠಿಣವಾದದ್ದು. ಆದರೆ ಶಿಕ್ಷಕರು ತಮ್ಮ ಅನುಕೂಲತೆಯ ಮೇರೆಗೆ ಯೋಗ್ಯವೆನ್ನಿಸಿದ ಯಾವುದೊಂದು ಪದ್ಧತಿಯನ್ನು ಅನುಸರಿಸತಕ್ಕದ್ದು.

ಚಿಕ್ಕ ಬಾಲಕರ ಕೈಯಲ್ಲಿ ಕೊಡತಕ್ಕ ಪುಸ್ತಕಗಳು ಬಹಳ ವಿಚಾರದಿಂದ ರಚಿಸಿದಂಥವು ಇರಬೇಕು. ಕೈಗೆ ಬಂದಂಥ ಪುಸ್ತಕಗಳನ್ನು ಉಪಯೋಗಿಸುವದು ಸರಿಯಲ್ಲ. ಚಿಕ್ಕ ಬಾಲಕರಿಗಾಗಿ ರಚಿಸಿದ ಪುಸ್ತಕಗಳಲ್ಲಿ ಇರತಕ್ಕ ಗುಣಗಳು ಯಾವವೆಂದರೆ:—

(೧) ಅಕ್ಷರಗಳು ಅಂದವಾದಂಥವೂ ದೊಡ್ಡವೂ ಇರಬೇಕು. ಅಚ್ಚಿನ ಸಂಬಂಧವ ದೋಷಗಳು ಸ್ವಲ್ಪವೂ ಇರಬಾರದು. ಕಾಗದ, ರಟ್ಟು ಮುಂತಾದವು ಚಲೋವು ಇರಬೇಕು.

(೨) ಪಾಠಗಳು ಮನೋಹರವಾಗಿಯೂ ಮನೋರಂಜಕವಾಗಿಯೂ ಇರುವದಲ್ಲದೆ ಅವುಗಳನ್ನು ವಿವರಿಸುವಂಥ ಚಿತ್ರಗಳು ತಕ್ಕಷ್ಟು ಇರಬೇಕು.

(೩.) ಪಾಠಾನುಕ್ರಮವು ವಿಷಯಗಳ ಮತ್ತು ಶಬ್ದಗಳ ಕಾಠಿಣ್ಯವನ್ನನುಸರಿಸಿರಬೇಕು; ವಾಕ್ಯಗಳ ಮತ್ತು ಶಬ್ದಗಳ ಸಂಖ್ಯೆಯನ್ನನುಸರಿಸಿ ಇರಬಾರದು.

(೪.) ಆರಂಭದ ಕೆಲವು ಪಾಠಗಳು ಬಹು ಸುಲಭವಿರಬೇಕು. ಮುಂದಿನ ಪ್ರತಿಯೊಂದು ಪಾಠದಲ್ಲಿ ಎರಡು ಮೂರು ಕಠಿಣ ಶಬ್ದಗಳೂ, ಆ ಶಬ್ದಗಳಿಂದಾದ ವಾಕ್ಯಗಳೂ ಇರಬೇಕು.

(೫.) ಕಥೆಗಳೂ ಸಂಭಾಷಣೆಯ ಪಾಠಗಳೂ ಹೆಚ್ಚಿರಬೇಕು; ಅಂದರೆ ಓದುವಾಗ ಸ್ವರವನ್ನು ಬದಲಿಸುವ ಪ್ರಸಂಗವು ಮೇಲಿಂದಮೇಲೆ ಬರಗುವದರಿಂದ ಬಂದೇ ಸ್ವರದಿಂದ ಓದುವ ದೋಷವು ತಪ್ಪುವದು.

(೬.) ಪ್ರತಿಯೊಂದು ಪಾಠದಲ್ಲಿ ಕನಿಷ್ಠಪಕ್ಷಕ್ಕೆ ಎರಡು ಮೂರು ಹೊಸ ಶಬ್ದಗಳು ಇರಲಿಕ್ಕೆಬೇಕು; ಅಂದರೆ ವಿದ್ಯಾರ್ಥಿಯ ಭಾಷಾಜ್ಞಾನ ಬೆಳೆಯಲಿಕ್ಕೆ ಅನುಕೂಲವಾಗುವದು. ಹೊಸ ಶಬ್ದಗಳಿಲ್ಲದಂಥ ಪ್ರಶ್ನೆಗಳನ್ನು ಹುಡಿಗಲಿಕ್ಕೆ ಬರದಂಥ ಪಾಠಗಳಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವದಿಲ್ಲ.

ಸಾರಾಂಶ ವಾಚನದ ಉದ್ದೇಶವು ಹೊಸ ಸಂಗತಿಗಳನ್ನು ತಿಳಿಸುವದೂ ಮನಸಿನ ಲಿಪ್ತತ್ವವನ್ನು ಕಳೆದು ಅವ

ನ್ನು ತಿದ್ದುವದೂ ಇರುತ್ತದೆ. ಆದರೆ ಆರಂಭದಲ್ಲಿ ಈ ಉದ್ದೇಶಕ್ಕಿಂತ ವಾಚನ ಕಲಿಸುವ ಉದ್ದೇಶವೇ ಪ್ರಧಾನವಾಗಿರುವದು. ಆದದರಿಂದ ಆರಂಭದ ಪುಸ್ತಕಗಳಲ್ಲಿ ವಾಚನಕ್ಕೆ ಮನಸು ಎಳೆಯುವಂಥ ಸಂಗತಿಗಳು ಜಾಸ್ತಿ ಇದ್ದಷ್ಟು ಬಳ್ಳೀದು. ಹೊಸ ಸಂಗತಿಗಳನ್ನು ತಿಳುಹಿಸುವ ವಾಕ್ಯಗಳೇ ಇರಬೇಕೆಂಬ ನೇಮವಿಲ್ಲ.

ಈ ಗುಣಗಳುಳ್ಳ ಪುಸ್ತಕಗಳನ್ನು ದೊರಕಿಸಿದ ಮೇಲೆ ಶಿಕ್ಷಕರು ವಾಚನಾಭ್ಯಾಸವನ್ನು ಹ್ಯಾಗೆ ಸಾಗಿಸಬೇಕೆಂಬದು ವಿಚಾರಣೀಯವಾದ ಎರಡನೆಯ ಸಂಗತಿಯು. ಇದನ್ನು ನಡಿಸುವ ಕ್ರಮವು ಹ್ಯಾಗಂದರೆ:—

(೧.) ಪುಸ್ತಕಗಳನ್ನು ವಿದ್ಯಾರ್ಥಿಗಳ ಕೈಯಲ್ಲಿ ಕೊಟ್ಟು ಅವುಗಳನ್ನು ತೆರೆದು ಕಣ್ಣುಮುಂದೆ ತಕ್ಕಷ್ಟು ಅಂತರದ ಮೇಲೆ ಹಿಡಿಸಿ, ಶಿಕ್ಷಕನು ತಕ್ಕ ಸ್ವರದಿಂದ ಸರಳವಾಗಿ ಬಂದೊಂದು ವಾಕ್ಯವನ್ನು ಓದಿ ತೋರಿಸಬೇಕು. ಶಿಕ್ಷಕನು ಶಬ್ದಗಳನ್ನು ಓದಿದ ಹಾಗೆ ವಿದ್ಯಾರ್ಥಿಗಳು ಆಯಾ ಶಬ್ದಗಳಮೇಲೆ ಬೊಟ್ಟಿಡಬೇಕು.

(೨.) ಶಿಕ್ಷಕನು ಸಾವಕಾಶವಾಗಿ ಇಡೀ ಪಾಠವನ್ನು ಮತ್ತೊಮ್ಮೆ ಓದಿ ತೋರಿಸಿ, ತಿರುಗಿ ಅದನ್ನು ತನ್ನ ಕೂಡ ಸರಳವಾಗಿಯೂ ಘಟ್ಟಿಯಾಗಿಯೂ ಸ್ಪಷ್ಟವಾಗಿಯೂ ಎಲ್ಲರಿಂದ ಓದಿಸಬೇಕು.

(೩.) ಎಲ್ಲ ವಿದ್ಯಾರ್ಥಿಗಳಿಗೆ ಆ ಪಾಠವನ್ನು ಕೂಡಿ ಓದಲಿಕ್ಕೆ ಹೇಳಿ ಶಿಕ್ಷಕನು ಅವರು ಹ್ಯಾಗೆ ಓದುತ್ತಾರೇಂಬದನ್ನು ಎಚ್ಚರದಿಂದ ನೋಡಬೇಕು.

(೪.) ಪುರುಪು ಹುಟ್ಟುವಂತೆ ಆ ಪಾಠದೊಳಗಿನ ಬೇಕಾದ ವಾಕ್ಯಗಳನ್ನು ಬಿಬ್ಬೊಬ್ಬ ವಿದ್ಯಾರ್ಥಿಯಿಂದ ಒಪ್ಪಿಸಿಕೊಳ್ಳಬೇಕು.

(೫.)ಪುಸ್ತಕಗಳನ್ನು ಮುಚ್ಚಿಸಿ ಕಠಿಣ ಶಬ್ದಗಳನ್ನು ತಿಳಿಸಿ ಆ ಪಾಠದೊಳಗಿನ ವಾಕ್ಯಗಳನ್ನು ಬೇರೆ ಶಬ್ದಗಳಿಂದ ಅವರಿಂದ ಹೇಳಿಸಬೇಕು.

ಇದೇ ಉತ್ತಮ ವಾಚನದ ನೆಲೆಗಟ್ಟು; ಇವರ ಮೇಲಿನ ಇವೂರತನ್ನಾದರೂ ಎಚ್ಚರದಿಂದ ರಚಿಸಲಿಕ್ಕೆಬೇಕು. ಆ ಕಾರಣ ಹೆಚ್ಚಿನ ವಾಚನಾಭ್ಯಾಸವನ್ನು ಕುರಿತು ಆಲೋಚಿಸುವೆ.

ಮಾತು, ಬರಹ, ಗಾಯನಗಳಂತೆ ವಾಚನವು ಸಹ ಅನುಕರಣದಿಂದ ಬರತಕ್ಕ ಕಲೆ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ವಾಚನದ ಪ್ರಸಾವವು ಶಿಕ್ಷಕರಿಂದಲೇ ಬೀರಿಯತಕ್ಕದ್ದು. ಉತ್ತಮ ವಾಚನವು ಮುಖ್ಯವಾಗಿ ಮೂರು ಸಂಗತಿಗಳನ್ನು ಅವಲಂಬಿಸಿರುತ್ತದೆ. ಅವು ಯಾವವಂದರೆ:—

೧. ಶಿಕ್ಷಕನ ವಾಚನನೈಪುಣ್ಯವು. ೨. ತನ್ನ ವಿದ್ಯಾರ್ಥಿಗಳನ್ನು ತನ್ನಂತೆ ಅಗ್ರಹ ಪೂರ್ವಕವಾಗಿ ಓದಲಿಕ್ಕೆ ಹಚ್ಚುವವರಲ್ಲಿ ಶಿಕ್ಷಕನ ಆದರವು. ೩. ವಿದ್ಯಾರ್ಥಿಗಳಿಗೆ ಮಾಡಿಸುವ ವಾಚನದ ರೂಢಿಯು.

ವಾಚನದಲ್ಲಿ ನೈಪುಣ್ಯವನ್ನು ಪಡೆಯುವದು ಎಲ್ಲ ಶಿಕ್ಷಕರ ಕೈಯೊಳಗಿನ ಮಾತಲ್ಲ. ಬಹುಶಃ ಕೆಲವು ಅಪರಿಹಾರ್ಯ ಅಡಚಣಿಗಳ ಮೂಲಕವಾಗಿ ಈ ನೈಪುಣ್ಯವನ್ನು ಪಡೆಯುವದು ಬಹುಜನ ಮಾಸ್ತರರಿಗೆ ದುಸ್ತರವಾಗುತ್ತದೆ. ಆದರೆ ಆಸ್ಥೆಯಿಂದ ಶ್ರಮಬಡುವ ಶಿಕ್ಷಕನಿಗೆ ಸರಳವಾಗಿಯೂ ಸ್ಪಷ್ಟವಾಗಿಯೂ ಕೇಳುವವರಿಗೆ ತಿಳಿಯುವಂತೆಯೂ ಓದುವ ಸಾಮರ್ಥ್ಯವನ್ನು ಪಡೆಯುವದು ಸುಸಾಧ್ಯವಾಗಿರುತ್ತದೆ.

ವಾಚನದಲ್ಲಿ ನೈಪುಣ್ಯವನ್ನು ಹೊಂದಬೇಕಾದರೆ ಶಿಕ್ಷಕ

ದು ಘಟ್ಟಯಾಗಿ ಓದುವ ರೂಢಿಯನ್ನು ಇಡಬೇಕು. ಅವರು ದಿನಂಪ್ರತಿ ಕನಿಷ್ಠಪಕ್ಷಕ್ಕೆ ಅರ್ಧತಾಸನ್ನು ಈ ಗೌರವದ ಕೆಲಸದಲ್ಲಿ ಕಳೆಯಬೇಕು. ಶಿಕ್ಷಕನ ವಾಚನದ ನೈಪುಣ್ಯವನ್ನನುಸರಿಸಿಯೇ ಅವನ ವಿದ್ಯಾರ್ಥಿಗಳ ವಾಚನವಟುತ್ವವಿರುತ್ತದೆಂದು ನಾವು ಆರಂಭದಲ್ಲಿಯೇ ಪ್ರಸ್ತಾಪಿಸಿರುತ್ತೇವೆ. ಇವನ್ನು ಶಿಕ್ಷಕರು ಮರೆಯಲಾಗದು, ಗಣಿತಶಾಸ್ತ್ರದಲ್ಲಿ ಹೆಚ್ಚಿಗೆ ಗತಿ ಇಲ್ಲದಂಥ ಮಾಸ್ತರನು ತನ್ನ ವಿದ್ಯಾರ್ಥಿಗಳನ್ನು ಗಣಿತ ಶಾಸ್ತ್ರದಲ್ಲಿ ಪ್ರವೀಣರನ್ನು ಮಾಡಬಹುದು; ತನ್ನ ಅಕ್ಷರಗಳು ನೆಟ್ಟಗಿಲ್ಲದಿದ್ದರೂ ಕೈತ್ತಿಗಳ ಸಹಾಯದಿಂದ ಉತ್ತಮ ಅಕ್ಷರ ಬರೆಯಲಿಕ್ಕೆ ಕಲಿಸಬಹುದು; ಅದರೆಚನ್ನಾಗಿ ಓದಲಿಕ್ಕೆ ಅರಿಯದಂಥ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ಆ ಕಲೆಯಲ್ಲಿ ನಿಪುಣರನ್ನು ಮಾಡಲಾರನು.

ವಾಚನಪಾಠ ನಡೆದಾಗ್ಗೆ ಶಿಕ್ಷಕನು ಆಗಾಗ್ಗೆ ಬಂದು ಆಥವಾ ಹೆಚ್ಚು ವಾಕ್ಯಗಳನ್ನು ಹುಡುಗರಿಗೆ ಮುದರಿಗಾಗಿ ಓದಿತೋರಿಸಬೇಕು. ಈ ವಾಕ್ಯವನ್ನು ಬಹು ಸಾವಕಾಶವಾಗಿಯೂ ಅವರಲ್ಲಿಯ ಪ್ರತಿಯೊಂದು ಅಕ್ಷರವನ್ನು ಘಟ್ಟಿಯಾಗಿಯೂ ಸ್ಪಷ್ಟವಾಗಿಯೂ ಉಚ್ಚರಿಸುತ್ತ ಓದಬೇಕು. ಅದೇ ಮೊದಲು ಓದಲಿಕ್ಕೆ ಕಲಿಯುವ ವರ್ಗಕ್ಕೆ ಅವಶ್ಯವಾದ ಸಾವಕಾಶವಾಗಿ ಓದಿ ಹೇಳುವದು ಲೇಸು. ಈ ಕೆಲಸಕ್ಕೆ ಬಂದು ಸಣ್ಣ ವಾಕ್ಯವನ್ನು ಅರಿಸಿಕೊಳ್ಳತಕ್ಕದ್ದು. ಶಿಕ್ಷಕನು ಆ ವಾಕ್ಯವನ್ನು ಓದಿದ ಕೂಡಲೆ ವಿದ್ಯಾರ್ಥಿಯು ಅದನ್ನು ಅವರ ಮುಂದಿನ ವಾಕ್ಯಗಳನ್ನು ಶಿಕ್ಷಕನು ಓದಿ ತೋರಿಸಿದಂತೆ ತನ್ನಿಂದಾದಷ್ಟು ಸರಳವಾಗಿಯೂ, ಸ್ಪಷ್ಟವಾಗಿಯೂ, ಸಾವಕಾಶವಾಗಿಯೂ, ಅರ್ಥ ತಿಳಿಯುವಂತೆಯೂ ಓದಬೇಕು.

ಉಪಶಿಕ್ಷಕರಾದವರೂ ಈ ಕಲೆಯಲ್ಲಿ ಅವಶ್ಯ ನಿಪುಣರಾಗಿರುವದು ಅವಶ್ಯವಾದ ಸಂಗತಿಯು. ಇದನ್ನು ಮುಖ್ಯ ಶಿಕ್ಷ

ಕರು ಮರೆಯಲಾಗದು. ಅವರಲ್ಲಿ ಏನಾದರೂ ಕೊರತೆ ಇದ್ದರೆ ಆ ಉಪಶಿಕ್ಷಕರನ್ನು ಕೈಯಲ್ಲಿ ತೆಗೆದುಕೊಂಡು ಆ ಕೊರತೆಯನ್ನು ಪೂರೈಸಬೇಕು, ಮತ್ತು ಮೇಲೆ ಹೇಳಿದಂತೆ ಅವರು ತಮ್ಮ ವರ್ಗಗಳಿಗೆ ವಾಚನಾಭ್ಯಾಸ ಮಾಡಿಸುತ್ತಾರೋ ಇಲ್ಲವೋ ಎಂಬುದನ್ನು ಲಕ್ಷ್ಯಪೂರ್ವಕವಾಗಿ ನೋಡಬೇಕು. ಇದರಿಂದ ವಿದ್ಯಾರ್ಥಿಗಳು ವಾಚನದಲ್ಲಿ ಪ್ರವೀಣರಾಗುವರೆಂಬದಕ್ಕೆ ಸಂಶಯವಿಲ್ಲ.

(ಮುಂದಕ್ಕೆ ಸಾಗುವದು.)

DEPARTMENTAL NOTICE.

ಸರಕ್ಯೂಲರ ನಂಬರು $\frac{೮}{೪೫೯೯}$.

ದಕ್ಷಿಣಭಾಗದೊಳಗಿನ ಯಾವತ್ತು ಸ್ಕೂಲವಾಸ್ತರರಿಗೆ—

ನಾವು ನೋಡಿದ ಎಷ್ಟೋ ಸಾಲೆಗಳಲ್ಲಿ ಹೆಡ್ಡ ಮಾಸ್ತರರು ಅಸಿಸ್ಟಂಟರ ಕೆಲಸದ ಕಡೆಗೆ ಚನ್ನಾಗಿ ಲಕ್ಷ್ಯ ಪೂರೈಸಿದ್ದು ಕಂಡುಬರಲಿಲ್ಲ; ಕಾರಣ ಈ ಸರಕ್ಯೂಲರದಿಂದ ತಿಳಿಸುವದೇನಂದರೆ:—ಇನ್ನು ಮುಂದೆ ಹೆಡ್ಡ ಮಾಸ್ತರರು ತಿಂಗಳಿಗೊಮ್ಮೆ ಎಲ್ಲ ಅಸಿಸ್ಟಂಟರ ವರ್ಗಗಳ ಪರೀಕ್ಷೆ ತೆಗೆದುಕೊಂಡು ತಮಗೆ ಕಂಡುಬಂದ ನ್ಯೂನತೆಗಳನ್ನು ತಿದ್ದುವ ಬಗ್ಗೆ ಅಸಿಸ್ಟಂಟರಿಗೆ ಚನ್ನಾಗಿ ತಿಳಿಸಿ ಹೇಳಬೇಕು. ಅಸಿಸ್ಟಂಟರಲ್ಲಿ ಕೆಲವರು ತಕ್ಕಮಟ್ಟಿಗೆ ಜಾಣರಿದ್ದರೂ ತಂತಮ್ಮ ವರ್ಗಗಳಿಗೆ ಕಲಿಸತಕ್ಕ ಯಾವತ್ತು ವಿಷಯಗಳನ್ನು ಹುಡುಗರಿಗೆ ಚನ್ನಾಗಿ ತಿಳಿಸಿಕೊಡುವ ಚಾತುರ್ಯವು ಅವರಲ್ಲಿ ಇರುವದಿಲ್ಲ. ಕೆಲವರಿಗೆ ಕಲಿಸುವ ವಿಷಯಗಳೇ ಬರುತ್ತಿರುವದಿಲ್ಲ; ಆವವರಿಂದ ಹೆಡ್ಡ ಮಾಸ್ತರರೂ ಅಸಿಸ್ಟಂಟರೂ ನಿಮಾನ ೧೫ ದಿವಸಕ್ಕೊಮ್ಮೆ ಬತ್ತಾಟ್ಟಿಗೆ ಕೂಡಿ, ಶುದ್ಧ ಉಚ್ಚಾರ, ಉತ್ಕೃಷ್ಟ ಅಕ್ಷರ ಬರಿಯೋಣ, ಪದ್ಧತಿಯಂತೆ

ಬಹುಬೇಗ ಲೆಕ್ಕ ಮಾಡೋಣ, ಭಾಷಾವಿಷಯ, ವ್ಯಾಕರಣ ಮುಂತಾದ ಕಲಿಸತಕ್ಕ ಯಾವತ್ತು ವಿಷಯಗಳ ಬಗ್ಗೆ ಚರ್ಚೆ ನಡಿಸಬೇಕು; ಮತ್ತು ಅಸಿಸ್ಟಂಟರಿಗೆ ತಿಳಿಯದ ವಿಷಯಗಳನ್ನು ಹೆಡ್ಡ ಮಾಸ್ತರರು ಚನ್ನಾಗಿ ತಿಳಿಸಿಕೊಟ್ಟು ಅವರನ್ನು ತಿದ್ದಿ ಸುಧಾರಿಸಬೇಕು. ತಾವು ಹೇಳಿದಂತೆ ಅಸಿಸ್ಟಂಟರು ಕಲಿಸುತ್ತಾರೋ ಇಲ್ಲವೋ ಎಂಬವನ್ನು ಹೆಡ್ಡ ಮಾಸ್ತರರು ಆಗಾಗ್ಗೆ ನೋಡುತ್ತಿರಬೇಕು. ಅಸಿಸ್ಟಂಟರು ಹೇಳುವ ವಿಷಯವು ಹುಡುಗರಿಗೆ ಚನ್ನಾಗಿ ತಿಳಿಯದೆ ಇದ್ದಪಕ್ಷಕ್ಕೆ ಹೆಡ್ಡ ಮಾಸ್ತರರು ಸ್ವತಃ ಅವರ ವರ್ಗಗಳಿಗೆ ಆ ವಿಷಯವನ್ನು ಆಗಾಗ್ಗೆ ಕಲಿಸಿ ತೋರಿಸಬೇಕು. ಹೆಡ್ಡ ಮಾಸ್ತರರು ಬಿನ್ ಇಯತ್ತೆಯ ಮತ್ತು ಒನೇ ಇಯತ್ತೆಯ ವರ್ಗಗಳಿಗೆ ಪ್ರತಿದಿವಸ ಬಂದು ತಾಸಾದರೂ ಹೋಗಿ ಸ್ವತಃ ಕಲಿಸಲಿಕ್ಕೆ ಬೇಕೆಂದು ಈ ಪೂರ್ವದಲ್ಲಿಯೇ ತಿಳಿಸಿರುತ್ತೇವೆ. ಅದರಂತೆ ತಪ್ಪದೆ ನಡೆಯಬೇಕು. ಸಾರಾಂಶ ಹೆಡ್ಡ ಮಾಸ್ತರರೂ ಅಸಿಸ್ಟಂಟರೂ ಏಕಮನಸಿನಿಂದ ಒಬ್ಬರಿಗೊಬ್ಬರು ಸಹಾಯ ಮಾಡಿ ಶಾಲೆಯನ್ನು ಚನ್ನಾಗಿ ಸುಧಾರಿಸಬೇಕು; ಅಂದರೆ ಆರಂಭದಿಂದ ಶಿಕ್ಷಣವು ಮಾಯಾ ಚನ್ನಾಗಿ ಬಿದ್ದು, ಮಾಸ್ತರರಿಗೆ ತೊಂದರೆಯಾಗದೆ ಅವರು ಕೈಕೊಂಡ ಕೆಲಸವು ಸುಸೂತ್ರ ಸಾಗುವದು.

೨. ಹೆಡ್ಡ ಮಾಸ್ತರರು ಬಂದು ಶರಾ ಪುಸ್ತಕವನ್ನು ಮಾಡಿ, ಅದರಲ್ಲಿ ತಿಂಗಳಿಗೊಮ್ಮೆ ಮಾಡಿದ ತಪಾಸಣೆಯಲ್ಲಿ ಕಂಡು ಬಂದ ನ್ಯೂನತೆಗಳನ್ನು ಬರೆದಿಡಬೇಕು, ಮತ್ತು ಅವುಗಳನ್ನು ಸುಧಾರಿಸುವ ವಿಷಯದಲ್ಲಿ ಏನು ತಜವೀಜು ಮಾಡಲ್ಪಟ್ಟಿತು ಎಂಬವನ್ನು ಸಹ ವಿವರಿಸಬೇಕು. ಈ ಶರಾ ಪುಸ್ತಕವನ್ನು ಆಯಾ ಜಿಲ್ಲೆಗಳ ಡಿ. ಎ. ಇನಸ್ಪೆಕ್ಟರರು ವಾರ್ಷಿಕ ಪರೀಕ್ಷೆಗೆ ಬಂದ ಕಾಲಕ್ಕೆ ಅವರಿಗೆ ತೋರಿಸಬೇಕು.

ಹೆಡ್ಡ ಮಾಸ್ತರರು ೫ನೇ ೬ನೇ ತಯತ್ತೆಗಳನ್ನು ಕಲಿಯುವ ಹುಡುಗರಿಗೆ ತಿಂಗಳಿಗೊಮ್ಮೆ ಪ್ರಶ್ನೆಗಳನ್ನು ಹಾಕಿ, ಉತ್ತರಗಳನ್ನು ಕಾಗದದ ಮೇಲೆ ಬರಿಸುವ ರೂಢಿ ಇಡಬೇಕು. ಹೀಗೆ ಬರಿಸಿ ತಿದ್ದಿದ ಕಾಗದಗಳನ್ನು ಡಿ. ಎ. ಇನಸ್ಪೆಕ್ಟರರಿಗೆ ವಾರ್ಷಿಕ ಪರೀಕ್ಷೆಯ ಕಾಲಕ್ಕೆ ತೋರಿಸಬೇಕು.

೪. ಮೇಲೆ ಬರೆದಂತೆ ಅಸಿಸ್ಟಂಟರ ಕೆಲಸದ ವಿಷಯದಲ್ಲಿ ಲಕ್ಷ್ಯ ಪೂರೈಸಿದಂತೆಯೂ ಕಾಲೆಯ ವ್ಯವಸ್ಥೆಯನ್ನು ಚನ್ನಾಗಿ ಕಾಯ್ದುಕೊಂಡಂತೆಯೂ ಯಾವ ಮಾಸ್ತರರ ಶಿಫಾರಸಾಗುವದೋ ಅವರಿಗೆ ತಕ್ಕ ಫಲ ದೊರೆಯುವದು.

ಧಾರವಾಡ,
ತಾ॥ ೫ನೇ ಫೆಬ್ರುವರಿ ೧೮೯೬

(Sd.) S. V. Patwardhan.
ಎಜ್ಯುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

EXCURSION TO KOLHAPUR.

ಕೊಲ್ಹಾಪುರದ ಪ್ರವಾಸವು.

ಬಟ್ಟೆಗಳನ್ನು ಬಗೆಯುವದೂ, ಸ್ನಾನ ಮಾಡುವದೂ, ಅಡಿಗೆ ಪಾತ್ರೆಗಳನ್ನು ತೊಳೆಯುವದೂ ಇಲ್ಲೇ, ಇವುಗಳಿಗೆ ತಕ್ಕಂತೆ ಅಲ್ಲಲ್ಲಿಗೆ ಕಲ್ಲುಗಳನ್ನು ಹಾಕಿ ತಕ್ಕ ವ್ಯವಸ್ಥೆ ಮಾಡಿದರು. ಇದೇ ಮೇರೆಗೆ ಊರೊಳಗಿನ ಎಲ್ಲ ಹೆಂಗಸುಗಳ ಹತ್ತರ ವ್ಯವಸ್ಥೆ ಮಾಡಿರುತ್ತಾರೆ. ನಾವಿಳಿದ ಸ್ಥಳವಲ್ಯಂತೂ ಕೇಳತಕ್ಕದ್ದೇನು? ಜಗನ್ಮಾನ್ಯ ಗುರುಗಳಾದ ಶ್ರೀಂಗೇರಿ ಸ್ವಾಮಿಗಳ ಶಿವಾರ್ಚನಾರ್ಹವಾದ ರವ್ಯಸ್ಥಳವು. ಇದು ಅನೂನಸಾಧನಗಳುಳ್ಳದ್ದೇ. ಈ ಮಠದಲ್ಲಿ ಬಬ್ಬನಿಂದ ೧೦೦ ಮಂದಿಯ ವರೆಗೆ ಇಳಕೊಳ್ಳಲಿಕ್ಕೂ, ಊಟಉಡಿಗೆಗಳಿಗೂ ಬಳ್ಳೇ ಅನುಕೂಲವಿರುತ್ತದೆ. ಆಂದರೆ ನೀರು ನಿಡಿ, ಪ್ಯಾಟ ಕೋಟಿಗಳೂ, ಹಾಲು ಮೊಸರು

ಮೊರುವ ಗೋವಳಿಗರ ಮನಿಗಳೂ ಅತಿ ಸಮೀಪವಾಗಿರುತ್ತವೆ. ಇದಲ್ಲದೆ ಹೊಳೆಯು ಇಲ್ಲಿಂದ ಉತ್ತರಕ್ಕೆ ಸ್ವಲ್ಪ ಅಂತರದಮೇಲೆ ಇರುತ್ತದೆ. ಇದಂತೂ ಧರ್ಮನಿರತರಾದ ಸತ್ಪುರುಷರಿಗೆ ಹೆಚ್ಚು ಪ್ರಯೋಜನಕರವಾಗಿರುತ್ತದೆ.

ನಮ್ಮ ಮಿತ್ರರು ಈ ಜಲಸಂಚಯವನ್ನು ನೋಡಿ ಯಾವಾಗಲೂ ಅಲ್ಲೇ ಇರುವರು. ಕೆಲವರು ಗೋಮುಖಿಯ ಕೀಲಿಯನ್ನು ತಿರುವಿ ಅದರ ಬಾಯಿಯನ್ನು ಎಡಗೈಯಿಂದ ಗಟ್ಟಿಯಾಗಿ ಬತ್ತುವರು. ಆದರೂ ಎಡಬಲಕ್ಕೆ ಇರುವ ಪೊಳ್ಳುಗಳಿಂದ ಸಣ್ಣ ತುಷಾರಗಳು ಹೊರಬೀಳುತ್ತಿದ್ದವು. ಈ ತುಷಾರಗತ ಇಂದ್ರಧನುಷ್ಯವಂತೂ ಬಲು ಸರಸಾಗಿ ಕಾಣುತ್ತಿತ್ತು. ಪುನಃ ಕೈ ತೆಗೆದು ಬಾಯಿಯ ಕೆಳಗೆ ತಲೆ ಇಟ್ಟು ೪ | ೧೦ ಮಿನಿಟುಗಳ ವರೆಗೆ ಸುಮ್ಮನೆ ಕೂಡುವರು. ಕೆಲವರು ನೆರೆಯಲ್ಲಿರುವ ಪಂಚಗಂಗೆಯಲ್ಲಿ ಮಿಂಯುವರು. ಹಲವರು ಹೊತ್ತೇರಿ ಎದ್ದು ಹೊಳೆಗೆ ಯಾರು ಹೋಗಬೇಕೆಂದು ಆಲಸ್ಯದಿಂದ ಹತ್ತರವಲ್ಲಿದ್ದ ಹೌದಿನ ಬುಡಕ್ಕೆ ಜಳಕ ಮಾಡುವರು. ಬಹಳ ಮಾಡಿ ಇಲ್ಲಿಯ ಪದ್ಧತಿಯಂತೆ ಮುಂಜಾನೆ ಜಳಕ ಮಾಡುವವರೇ ಬಹಳ, ಸ್ನಾನಾನಂತರ ಮಹಾಲಕ್ಷ್ಮೀ ದರ್ಶನ ತೆಗೆದುಕೊಳ್ಳುತ್ತಿದ್ದರು. ಮುಂದೆ ರಾಜಾರಾಮರ ವಿದ್ಯಾಮಂದಿರಕ್ಕೆ ಸುಮಾರು ೪ ಬಡಿಯುವದಕ್ಕೆ ಹೋಗುತ್ತಿದ್ದೆವು. ೧೦ ಬಡಿಯೋಣ ಮನೆಗೆ ಬಂದು ಪುನಃ ಜಿಸಿಲು ಆಗಿದೆಂದು ಮತ್ತೊಮ್ಮೆ ಸ್ನಾನ ಮಾಡುವೆವು. ಈ ಪ್ರಕಾರ ಮನಬಂದಂತೆ ಜಲಕ್ರೀಡೆಯನ್ನಾಡಿದರೂ ಇಲ್ಲಿ ಹವೆಯು ಸಾಧಾರಣವಿದ್ದರೂ, ತಕ್ಕ ವೇಳೆಗೆ ಹಿತಕರವಾದ ಊಟ ಉಡಿಗೆ ವ್ಯವಸ್ಥೆಗಳಿಂದ ಶರೀರ ಸಂಪತ್ತಿಗೆ ಬಬ್ಬನಿಗಾಪರೂ ಕುಂದು ತಟ್ಟಲಿಲ್ಲ. ಮುಖ್ಯವಾಗಿ ಸಮಯನಿಷ್ಠತೆ, ನಿಯಮಿತಜನಗಳನ್ನು ಕಾಯ್ದುಕೊಂಡದ್ದೇ ಇವರ ಮೂಲ ಕಾರಣವು.

"ಈ ಊರು ನೀರಮೇಲೆ ತೇಲುತ್ತದೆ" ಎಂಬ ಗಾದೆಯಂತೆ ಪತ್ತನವ ಸುತ್ತಲೂ ಎತ್ತ ನೋಡಿದರೂ ನೀರೇ. ಊರಹೊರಗೆ ಕಾತ್ಯಾಯನಿ ಎಂಬ ಅದ್ಭುತವಾದ ಕೆರೆಯುದೆ. ಈ ಕೆರೆಯ ನೀರನ್ನೇ ಊರೊಳಗೆ ನಳಗಳಿಂದ ತಂದಿರುತ್ತಾರೆಂದು ಹೇಳುತ್ತಾರೆ. ಇಂಥ ಕೆರೆಯು ನಮ್ಮ ತಂಜಾವೂರಿನಲ್ಲಿದ್ದರೆ ಇಲ್ಲಿಯ ಮುನಿಸಿಪಾಲಿಟಿಯವರು ನಾವು ದಾರ ಗವ್ವರನರ ಸಾ|| ಬ|| ರವರ ಮುಂದೆ ಈ ನೀರಿನ ದೆಖೆಯಿಂದ ಅರಿಕೆ ಮಾಡಿಕೊಳ್ಳುವದು ಏನು ಕಾರಣ ಬೇಳುತ್ತಿತ್ತು? ನೀರಿನ ವಿಷಯವಾಗಿ ಈ ಊರ ಹೆಸರು ನೆನಿಸಿದರೆ ಮನಸ್ಸಿಗೆ ವ್ಯಸನವಾಗುತ್ತದೆ. ಇದೆಲ್ಲ ತೆಗೆದುಕೊಂಡು ಏನು ಮಾಡತಕ್ಕದ್ದು? ನಮ್ಮ ವೃತ್ತವನ್ನು ಮುಗಿಸುವ ಕಡೆಗೆ ಲಕ್ಷ್ಯ ಕೊಡುವ. ತಾ|| ೭೯ | ೧೦ | ೯೦ ದಿವಸ ಹಿಂದು ಜನರ ಪವಿತ್ರದೇವಿಯಾದ ಲಕ್ಷ್ಮಿಯ ಆರಾಧನೆಯನ್ನು ಮಾಡುವ ಗೊತ್ತು ಮಾಡಿದರು. ಆ ದಿವಸ ಮುಂಜಾನೆ ಎಲ್ಲರೂ ಸ್ನಾನ ಮಾಡಿ, ದೇವಾರ್ಚನೆಯು ಸಕಲ ಸನ್ನಾಹಗಳಿಂದ ಮಹಾಲಕ್ಷ್ಮಿಯ ಗುಡಿಗೆ ಹೋಗಿ ವಿಧಿಪ್ರಕಾರ ಪೂಜೆಯನ್ನು ಮಾಡಿಸಿ ಬಹು ಸರ್ವ ನೈವೇದ್ಯಗಳನ್ನು ದೇವಿಗೆ ಅರ್ಪಿಸಿ ಬಲವಂದು ಪ್ರಾರ್ಥಿಸಿ ಪ್ರಸಾದ ಕುಂಕಮಗಳನ್ನು ತೆಗೆದುಕೊಂಡು ಶ್ರೀಗಳವರ ಮಠಕ್ಕೆ ಬಂದೆವು. ಇದೇದಿವಸ ಫಾರವಾಡಕ್ಕೆ ಹೊರಡುವದು ಗೊತ್ತಾಯಿತು. ಇವತ್ತ ರಾ|| ಸಾ|| ಪಾಂಡುರಂಗರಾವ ಸೊಂಡೂರ ಇವರು ನಮಗೆ ಭೋಜನ ಸಮಾರಂಭವನ್ನು ಮಾಡಿಸಿದ್ದರು. ಇವರು ನಮ್ಮ ಜಾತಿಯವರಲ್ಲ. ನಮ್ಮ ಜಿಲ್ಲೆಯಲ್ಲಿ ಕೆಲಸ ಮಾಡುವವರಲ್ಲ. ನಮಗೂ ಅವರಿಗೂ ಗುರ್ತು ಸಹ ಇಲ್ಲ. ಗುರುವರ್ಯರಿಗೂ ರಾ|| ಸಾ|| ರಿಗೂ ಇರುವ ಪರಿಚಯವು ನಮಗೆ ಇಷ್ಟು ಲಾಭವನ್ನುಂಟು ಮಾಡಿತಲ್ಲವೇ. ಆಹಹ!!! ಪರ

ದೇಶಪ್ರವಾಸದಿಂದ ಆಗುವ ಆನಂದವು ಇಷ್ಟೆಂದು ವರ್ಣಿಸಕೂಡದು. ಅದರಲ್ಲಿ ನಾವಂತೂ ಸಂಸ್ಥಾನಿಕರು ಸಕಲ ಪರಿವಾರ ಸಹಿತ ಗುರುಗಳೆಂಬ ಮಹದಾಶ್ರಯದೊಡನೆ ಹೋದವರು ಎಷ್ಟೋಚಿತ ಮರ್ಯಾದೆಯು ಸಿಗತಕ್ಕದ್ದೇ ವಾಸ್ತವಿಕ. ಈ ಪ್ರವಾಸದಿಂದ " ಜಾರು ಮಿಲಕರ ಬಾಟ ಚಲನಾ " ಎಂಬ ಗಾದೆಯ ಸದಭಿಪ್ರಾಯವು ವ್ಯಕ್ತವಾಯಿತು. ಹಾದಿ ನಡೆಯಲಿಕ್ಕೆ ಹೆಚ್ಚು ಮಂದಿ ಇದ್ದಷ್ಟು ಬಳ್ಳೀದು.

ಇದೇ ದಿವಸ ಪ್ರಾತಃಕಾಲಕ್ಕೆ ಇಲ್ಲಿ ಕಾಲೇಜಿನ ಕೆಲವು ಮುಖ್ಯ ವಿದ್ಯಾರ್ಥಿಗಳು ಅಪ್ರತಿಮ ಕಸರತ್ತು ಮಾಡಿ ತೋರಿಸಿದರು. ಕಸರತ್ತಿನ ಮಾಸ್ತರರು ನಾಳೆ ನಮ್ಮ ವಿದ್ಯಾರ್ಥಿಗಳ ಕಸರತ ನೋಡಲಿಕ್ಕೆ ಬರಬೇಕೆಂದು ಆಮಂತ್ರಣ ಕೊಟ್ಟಿದ್ದರು ಈ ಕಸರತ್ತು ಶ್ರೀಮಹಾರಾಜರ ಮನೇನಂಬರ ಬಂಗಲೆಯ ಹತ್ತರ ಇರುವ ದೊಡ್ಡ ಪಟಾಂಗಣದಲ್ಲಿ ಆಯಿತು. ಈ ಅಂಗಣದ ತುಂಬ ಮೊಳಕಾಲಮಟ ಉಸುಕು ಹಾಕಿದ್ದರು. ನಮ್ಮ ವಿದ್ಯಾಲಯದಲ್ಲಿದ್ದಂತೆ ಅಲ್ಲಿಯೂ ಎಲ್ಲ ಗರಡೀ ಸಾಧನಗಳೂ ಇದ್ದವು. ಈ ಕಾಲೇಜಿನ ಪ್ರಮುಖ ವಿದ್ಯಾರ್ಥಿಗಳು ಕೆಲವು ಕಸರತ್ತಿನ ವರ್ಶನೀಯ ಚಮತ್ಕಾರಗಳನ್ನು ತೋರಿಸಿದರು. ಅವರ ನುಣ್ಣ ಶರೀರವನ್ನು ಕಸರತ್ತು ಮಾಡುವಾಗ್ಗೆ ಕಾಣುವ ಅವಯವಗಳ ಲಾಘವಗಳನ್ನು ಚಲ್ಲಣವನ್ನು ನೋಡಿ ಜಟ್ಟಿಗಳನ್ನು ಕಂಡಂತೆ ಆಯಿತು. ಇದನ್ನು ನೋಡಿ ನಮ್ಮ ಮಿತ್ರರಲ್ಲಿ ಕೆಲವರು ಕೆಲವು ಹೊಸ ಬಗೆಗಳನ್ನು ಮಾಡಿ ತೋರಿಸಿದರು. ಮುಲಕಂಬದ ಮೇಲಿನ ಪೀಚುಗಳು ನಮ್ಮ ಮಿತ್ರರಿಗೆ ಚನ್ನಾಗಿ ಬರುತ್ತವೆಂದು ಅಲ್ಲಿಯ ವಸ್ತಾದರು ಅಂದರು.

(ಮುಂದಕ್ಕೆ ಸಾಗುವದು.)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸಗಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಏಪ್ರಿಲ ೧೮೫೨. [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನೇಕ ನಾಮುದಾರ ಲಾರ್ಡ ಲ್ಯಾನ್ಸ್ಡೌನ ದೊರೆಗಳು ತಮ್ಮ ವಿಲಾಯತಿಗೆ ತೆರಳುವ ಪತ್ನಿಯರನ್ನು ಕಳುಹಿಸಲಿಕ್ಕೆ ಹೋದ ತಿಂಗಳ ೩ನೇ ತಾರೀಜಿಗೆ ಮುಂಬಯಿಗೆ ಬಂದರು. ಮೂರನೇ ದಿವಸ ಮುಂಬಯಿಯ ಮ್ಯುನಿಸಿಪಾಲಿಟಿಯವರು ನಾಮುದಾರ ಸಾಹೇಬರವರ ವರವ ಹಸ್ತದಿಂದ ಟಾನ್ಸಾಕೆರೆಯಿಂದ ತಂದ ನೀರನ್ನು ಊರಲ್ಲಿ ಬಿಡುವ ಉತ್ಸವವನ್ನು ಬಹು ಸಮಾರಂಭದಿಂದ ಮಾಡಿಸಿದರು. ಈ ಉತ್ಸವವ ಸಲುವಾಗಿ ೬೦೦೦೦ ರೂಪಾಯಿ ಖೆಚ್ಚವನ್ನು ಮಂಜೂರ ಮಾಡಿದರು. ಇವಲ್ಲದೆ ಊರೊಳಗಿನ ಕೆಲವರು ದೊಡ್ಡ ಗೃಹಸ್ಥರು ಆ ಕಾಲಕ್ಕೆ ೪।೧೦ ಸಾವಿರ ರೂಪಾಯಿಯಷ್ಟು ಮಾಡಿ ಸುಟ್ಟರು. ಒಟ್ಟಿಗೆ ಸಮಾರಂಭವು ಪ್ರೇಕ್ಷಣೀಯವಾಗಿ ಟಾನ್ಸಾ ಕೆರೆಯ ಭವ್ಯ ಕಾಮುಗಾರಿಗೆ ಅನುರೂಪವಾಗಿ ಅವಂತೆ ತಿಳಿಯುತ್ತದೆ.

ಬ್ರಿಟಿಶ ರಾಜ್ಯಕ್ಕೆ ಸೇರಿದ ಹಿಂದುಸ್ತಾನದ ಯಾವತ್ತು ಭಾಗಗಳೊಳಗಿನ ವಿದ್ಯಾಖಾತೆಗಳ ರಿಪೋರ್ಟುಗಳನ್ನು ಒಟ್ಟುಗೂಡಿಸಿ ತಮ್ಮ ಅಭಿಪ್ರಾಯ ಸಹಿತವಾಗಿ ಇಂಡಿಯಾ ಸರಕಾರದವರು ಛಾಪಿಸಿದ ರಿಪೋರ್ಟು ತಾ॥ ೯ನೇ ಫೆಬ್ರುವಾರಿ ೧೮೫೨ನೇ ಇಸವಿಯು ಹೊರಬಿದ್ದದೆ. ಅದರಿಂದ ತಿಳಿಯುವ ಸಂಗತಿಗಳು ಯಾವವೆಂದರೆ:—

(೨) ಪಟ್ಟಿ: ಹಂಚಿಯುಬೆಂಳಿಗಿನ ಬಯಾನಸ್ಸು ಮತ್ತು ಕಾರಣ ನಿಮಿತ್ತ ಉಯುಗಳ ಮುಂಚು ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ ಮೊತ್ತ.

ಯಜಮಾನ ಮತ್ತು ಕಾರಣ ನಿಮಿತ್ತ ಉಯುಗಳು.		ನಿಜವಾದ ಖರ್ಚುಗಳ ಸಂಖ್ಯೆ.			ನಿಜವಾದ ಖರ್ಚಿನ ಮೊತ್ತ.		
		೧೯೨೯-೩೦	೧೯೩೦-೩೧	೧೯೩೧-೩೨	೧೯೨೯-೩೦	೧೯೩೦-೩೧	೧೯೩೧-೩೨
* ಸರ್ಕಾರಿ ಖರ್ಚುಗಳು	ಗೆದ್ದು	೪೯೯,೫೬೦	೫೦೫,೫೫೦	೫೨೫,೫೫೦	೪೯೯,೫೬೦	೫೦೫,೫೫೦	೫೨೫,೫೫೦
	ಜೀಪಾ	೫೫೦	೫೫೦	೫೫೦	೫೫೦	೫೫೦	೫೫೦
ಒಂದು...		೫೦೦	೫೦೦	೫೦೦	೫೦೦	೫೦೦	೫೦೦
+ ಖಾಸಗಿ	ಗೆಂದು	೫೫೫,೫೫೫	೫೫೫,೫೫೫	೫೫೫,೫೫೫	೫೫೫,೫೫೫	೫೫೫,೫೫೫	೫೫೫,೫೫೫
	ಜೀಪಾ	೫೫೫	೫೫೫	೫೫೫	೫೫೫	೫೫೫	೫೫೫
ಒಂದು...		೫೫೫	೫೫೫	೫೫೫	೫೫೫	೫೫೫	೫೫೫
ಒಟ್ಟು ಖರ್ಚುಗಳು...		೫೫೫,೫೫೫	೫೫೫,೫೫೫	೫೫೫,೫೫೫	೫೫೫,೫೫೫	೫೫೫,೫೫೫	೫೫೫,೫೫೫
ಸಭಾದಿಂದ ಖರ್ಚಿಗೆ ಬರುವ.							
ಹಿಂದಿನಿಂದ ಸಾಗಿಸಿದ್ದು		೫೫೫	೫೫೫	೫೫೫	೫೫೫	೫೫೫	೫೫೫
ಪ್ರಸಕ್ತ ಸಾಲಿನ ಪಟ್ಟಿಯ ಮೇರೆಗೆ ಬರಬೇಕಾದ್ದು		೫೫೫	೫೫೫	೫೫೫	೫೫೫	೫೫೫	೫೫೫
ಕೊರತೆ ಪಟ್ಟಿಯ ಮೇರೆಗೆ ಬರಬೇಕಾದ್ದು		೫೫೫	೫೫೫	೫೫೫	೫೫೫	೫೫೫	೫೫೫
ಹೆಚ್ಚಿಗೆ ಸಿಕ್ಕಿದ್ದು		೫೫೫	೫೫೫	೫೫೫	೫೫೫	೫೫೫	೫೫೫
ಮುಂದಿನ ಸಾಲಿಗೆ ಸಾಗಿಸಿದ್ದು		೫೫೫	೫೫೫	೫೫೫	೫೫೫	೫೫೫	೫೫೫

* ಸರ್ಕಾರಿ ಖರ್ಚುಗಳಲ್ಲಿ ಸಂಬಳ, ಪಿಂಚಣಿ, ಪ್ರಯಾಣ ಭತ್ಯೆ, ಪ್ರಯಾಣದ ಖರ್ಚು, ಮೋಟಾರು ಖರ್ಚು, ಪೀಠೋಪಕರಣ, ಪ್ರಿಂಟಿಂಗ್ ಮತ್ತು ಸ್ಟೇಷನರಿ, ಪೋಸ್ಟೇಜ್ ಮತ್ತು ತಂತಿ, ಬಾಡಿಗೆ, ಕಟ್ಟಡ ಮತ್ತು ರಿಪೇರಿ, ಕಟ್ಟಡ ಮತ್ತು ಭೂಮಿಯ ಮೇಲಿನ ಕರ, ಕಾಲಕಾಲಕ್ಕೆ ಆಗುವ ಖರ್ಚುಗಳು, ಕಾಲಕಾಲಕ್ಕೆ ಆಗುವ ಕೆಲಸಗಳು ಮತ್ತು ಇತರ ಖರ್ಚುಗಳು ಸೇರಿವೆ.

+ ಖಾಸಗಿ ಖರ್ಚುಗಳು:—ಆದಾಯ, ಸ್ಟಾಂಪ್, ಸಂಸ್ಥಾನ ಮತ್ತು ಖಾಸಗಿ ಪ್ರಯಾಣ ಭತ್ಯೆಗಳು, ಕಛೇರಿ ಖರ್ಚು, ಪೀಠೋಪಕರಣ, ಪ್ರಿಂಟಿಂಗ್ ಮತ್ತು ಸ್ಟೇಷನರಿ, ಪೋಸ್ಟೇಜ್ ಮತ್ತು ತಂತಿ, ಬಾಡಿಗೆ, ಕಟ್ಟಡ ಮತ್ತು ರಿಪೇರಿ, ಕಟ್ಟಡ ಮತ್ತು ಭೂಮಿಯ ಮೇಲಿನ ಕರ, ಕಾಲಕಾಲಕ್ಕೆ ಆಗುವ ಖರ್ಚುಗಳು, ಕಾಲಕಾಲಕ್ಕೆ ಆಗುವ ಕೆಲಸಗಳು ಮತ್ತು ಇತರ ಖರ್ಚುಗಳು ಸೇರಿವೆ.

ಬ್ರಿಟಿಶ ಇಂಡಿಯದೊಳಗೆ, ೧೧೬,೦೫೪,೪೪೩ ಜನ ಗಂಡಸರೂ, ೧೧೨,೧೪೨,೪೪೪ ಜನ ಹೆಂಗಸರೂ, ಕೂಡಿ ಬಟ್ಟಿಗೆ ೨೨೪,೧೧೧,೪೩೫ ಜನಸಂಖ್ಯೆಯುಂಟು. ಇನ್ನು ಜನಸಂಖ್ಯೆ ನೂರು ಇದ್ದರೆ, ಅದರಲ್ಲಿ ಸಾಧಾರಣವಾಗಿ ಹದಿನೈದು ಮಂದಿ ಸಾಲೆಗೆ ಹೋಗುವ ವಯಸ್ಸಿನವರಿರುತ್ತಾರೆಂದು ಗೊತ್ತು ಮಾಡಲ್ಪಟ್ಟಿದೆ. ಈ ಲೆಕ್ಕದಿಂದ ನೋಡಿದರೆ ಸಾಲಿಗೆ ಹೋಗುವ ವಯಸ್ಸಿನ ಒಟ್ಟು ಗಂಡು ಹುಡುಗರಲ್ಲಿ ನೂರಕ್ಕೆ ೧೯.೩ ಹುಡುಗರು ಸಾಲೆಯಲ್ಲಿ ಅಭ್ಯಾಸ ಮಾಡುತ್ತಾರೆಂದು ತಿಳಿಯುತ್ತದೆ. ಹೆಣ್ಣು ಹುಡುಗರ ಸಂಬಂಧದಿಂದ ಈ ಪ್ರಮಾಣವು ನೂರಕ್ಕೆ ೧.೪ ಮಾತ್ರ ಹೊರಡುತ್ತದೆ. ಇದರಿಂದ ಸ್ತ್ರೀ ಶಿಕ್ಷಣವು ನಮ್ಮ ದೇಶದಲ್ಲಿ ಎಷ್ಟು ಹಿಂದೆ ಇರುತ್ತದೆಂಬದು ವ್ಯಕ್ತವಾಗುತ್ತದೆ. ಗಂಡು ಹೆಣ್ಣು ಹುಡುಗರ ಸಂಖ್ಯೆಗಳನ್ನು ಕೂಡಿಸಿ ಒಟ್ಟಿಗೆ ಸರಾಸರಿ ತೆಗೆದರೆ, ಈ ಪ್ರಮಾಣವು ನೂರಕ್ಕೆ ೧೦.೭ ಹೊರಡುತ್ತದೆ. ಇದರಿಂದ ನೂರು ಹುಡುಗರಲ್ಲಿ ೧೦ ಹುಡುಗರೇ ಓದು ಬರಹ ಕಲಿಯುವರು ೯೦ ಹುಡುಗರು ಅಕ್ಷರ ಶೂನ್ಯರು ಎಂದು ಸ್ಪಷ್ಟವಾಗುತ್ತದೆ.

ನಮ್ಮದೇಶದೊಳಗೆ ಶಾಲೆಗೆ ಹೋಗುವ ಒಟ್ಟು ವಿದ್ಯಾರ್ಥಿಗಳ ಜಾತಿ ಧರ್ಮವನ್ನು ಅನುಲಕ್ಷಿಸಿ ವರ್ಗೀಕರಣ ಮಾಡಿದರೆ, ಹಿಂದೂ ಜಾತಿಯ ವಿದ್ಯಾರ್ಥಿಗಳು ೨,೪೧೨,೯೧೭ ಮುಸಲ್ಮಾನರು ೪೩೬,೩೯೯ ಯುರೋಪಿಯನ್ನರು ಮತ್ತು ಯುರೇಜಿಯನ್ನರು ೨೪೪೬೪ ನೇಟಿವ್ ಕ್ರಿಸ್ತಿಯನ್ನರು ೪೬,೩೧೪ ಇತರ ಧರ್ಮದವರು ೨೨೧,೪೨೦ ಇರುತ್ತಾರೆ.

ಇದರಿಂದ ಯುರೋಪಿಯನ್ನ ಯುರೇಜಿಯನ್ನರು ವಿದ್ಯೆಯಲ್ಲಿ ಮುಂದರಿಸಿರುತ್ತಾರೆಂತಲೂ, ಅವರ ತರುವಾಯ ಮುಸಲ್ಮಾನ ಜನರ ಸಂಖ್ಯೆಯು ಹೆಚ್ಚಿರುತ್ತದೆಂತಲೂ ಉಳಿದ ಹಿಂ

ಮು ಮುಂತಾದ ಜಾತಿಯವರು ವಿದ್ಯೆಯ ಕೆಲಸವಲ್ಲಿ ಜನಸಂಖ್ಯೆಯು ಮೂನೆದಿಂದ ಹಿಂದೆ ಇರುತ್ತಾರೆಂತಲೂ ಸ್ಪಷ್ಟವಾಗಿ ತೋರುತ್ತದೆ. ಹಿಂದು ಎಂಬ ಹೆಸರಿಗೆ ಸರಿಯಾಗಿ ನಮ್ಮ ಜನರು ಹಿಂದೆ ಉಳಿದದ್ದು ಆಶ್ಚರ್ಯವೇ?

ಬ್ರಿಟಿಶ್ ಇಂಡಿಯದೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚಿನ ವಿವರ:—

ಹೆಸರು.	೧೯೪೯-೫೦	೧೯೫೦-೫೧
	ರೂಪಾಯಿ.	ರೂಪಾಯಿ.
ಪ್ರತ್ಯಕ್ಷ ವಿದ್ಯಾಭ್ಯಾಸಕ್ಕೆ ...	೨,೨೧,೪೨,೪೪೦	೨,೨೪,೬೪,೯೬೦
ಪ್ರೊಫೆಸನಲ್ ಕಾಲೇಜುಗಳಿಗೆ ...	೬,೯೧,೩೬೬	೭,೪೫,೧೬೦
ಆರ್ಟ್ಸ್ ಕಾಲೇಜುಗಳಿಗೆ ...	೧೯,೭೩,೫೫೫	೧೯,೬೧,೬೧೦
ಮಧ್ಯಮ ರೀತಿಯ ಶಾಲೆಗಳಿಗೆ...	೯೨,೪೯,೪೭೮	೯೮,೦೨,೭೨೦
ಕನಿಷ್ಠ ಪ್ರತಿಯ ಶಾಲೆಗಳಿಗೆ ...	೪೬,೭೬೯೯೬	೯೧,೪೫,೬೭೭
ಟ್ರೇನಿಂಗ ಸ್ಕೂಲುಗಳಿಗೆ ...	೫,೯೪,೫೦	೬,೨೪,೭೭೭
ವಿಶೇಷ ಪ್ರತಿಯ ಶಾಲೆಗಳಿಗೆ ...	೯,೫೭,೯೧೧	೯,೭೨,೬೭೪
ಇತರ ಖರ್ಚು ...	೫೪,೭೪,೯೧೯	೫೯,೪೭,೭೭೧
ಒಟ್ಟು ಖರ್ಚು ರೂಪಾಯಿ ...	೨೭೬೫೪೪೯೬೭	೨,೪೪,೪೧,೯೬೭

ಮೇಲಿನ ಕೋಷ್ಟಕದೊಳಗೆ ತೋರಿಸಿದಂತೆ ಹಿಂದುಸ್ತಾನವಲ್ಲಿ ವಿದ್ಯಾಖಾತೆಯ ಒಟ್ಟು ಖರ್ಚು ೨,೪೪,೪೧,೯೬೭ ರೂಪಾಯಿ ಇರುತ್ತದೆ. ಇವರೊಳಗೆ ಖುದ್ದ ಸರಕಾರಕ್ಕೆ ಸುಮಾರು ೪೧,೬೧,೭೬೧ ರೂಪಾಯಿ ಮಾತ್ರ ಖರ್ಚು ಬೀಳುತ್ತದೆ. ನಮ್ಮ ದೇಶದ ಒಟ್ಟು ಕಂದಾಯವು ಸುಮಾರು ಎಂಭತ್ತೆಂಟು ಕೋಟಿ ರೂಪಾಯಿ ಇರುತ್ತದೆ. ಆದರೆ ಕಂದಾಯದ ಸುಮಾರು $\frac{1}{200}$ ನೇ ಪಾಲು ವಿದ್ಯಕ್ಕೆ ಖರ್ಚು ಮಾಡಿದಂತೆ ಆಯಿತು! ಆದರೆ ಇಂಗ್ಲಂಡದಲ್ಲಿ ಕಂದಾಯದ $\frac{1}{20}$ ನೇ ಪಾಲು ವಿದ್ಯಕ್ಕೆ ಖರ್ಚು ಆಗುತ್ತದೆ.

ವಿದ್ಯಾಖಾತೆಯು ಯಾವತ್ತು ಖರ್ಚಿನೊಳಗಿಂದ ಫೀ ಜಣ ೪೫,೪೫,೬೪೬ ರೂಪಾಯಿ ವರ್ಗಣಿ ಮುಂತಾದ ಬಾಬುಗಳಿಂದ ಆಗುವ ಉತ್ಪನ್ನ ೪೯,೭೪,೦೬೩ ರೂಪಾಯಿ ಸರಕಾರದವರು ಕೊಟ್ಟ ೪೧,೬೧,೩೯೧ ರೂಪಾಯಿ, ವಜಾ ಹೋಗಲಾಗಿ ಲೋಕಲಫಂಡಿಗೆ ೪೧,೪೧,೩೧೪ ರೂಪಾಯಿ, ಮ್ಯುನಿಸಿಪಾಲಿಟಿಗಳಿಗೆ ೧೩,೩೬,೩೪೧ ರೂಪಾಯಿ ಖರ್ಚು ಬಿದ್ದಿರುತ್ತದೆ. ಇವರಿಂದ ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡಗಳು ಪ್ರಾಥಮಿಕ ಶಿಕ್ಷಣದ ಬಗ್ಗೆ ತಕ್ಕಷ್ಟು ಹಣ ಖರ್ಚ ಮಾಡುವದಿಲ್ಲೆಂದು ಗವ್ಹರ್ನರ ಜನರಲ್ ಸಾಹೇಬರು ತಮ್ಮ ಅಭಿಪ್ರಾಯವನ್ನು ಬರೆದಿರುತ್ತಾರೆ. ಮ್ಯುನಿಸಿಪಾಲಿಟಿಯವರು ಬಹುತರವಾಗಿ ಈ ಅಭಿಪ್ರಾಯವನ್ನು ಲಕ್ಷ್ಯಕ್ಕೆ ತಂದು ಹೆಚ್ಚು ಹಣವನ್ನು ಸ್ಕೂಲಫಂಡಿಗೆ ಕೊಟ್ಟು ಪ್ರಾಥಮಿಕ ಶಿಕ್ಷಣದ ಮಾಸ್ತರರ ಸ್ಥಿತಿಯನ್ನು ತೀವ್ರವೇ ಸುಧಾರಿಸುವದೆಂದು ನೆನಸುತ್ತೇವೆ.

ಮುಂಬಯಿಯಲ್ಲಿಯ ವಿಕ್ಟೋರಿಯಾ ಜ್ಯುಬಿಲಿ ಇನಸ್ಟಿಟ್ಯೂಟ ವಿದ್ಯಾಲಯದ ಪೊವಲನೇ ವಾರ್ಷಿಕ ಬಕ್ಷಿಸಸಮಾರಂಭವು ತಾ॥ ೨೮ನೇ ಫೆಬ್ರುವರಿದಿವಸ ಆಯಿತು. ಅಧ್ಯಕ್ಷ ಸ್ಥಾನವನ್ನು ನಮ್ಮ ಇಲಾಖಾಧಿಪತಿಗಳಾದ ಲಾರ್ಡ ಹ್ಯಾರೀಸ ಫೊರೆಗಳವರು ಸ್ವೀಕರಿಸಿದ್ದರು. ಅವರು ಆ ಕಾಲಕ್ಕೆ ಮಾಡಿದ ಭಾಷಣದೊಳಗಿನ ಅತಿ ಗೌರವದ ಬಂದು ಸೂಚನೆಯನ್ನು ನಾವು ಇಲ್ಲಿ ಹೇಳದೆ ಇರಲಾರೆವು, ಅದು ಯಾವದೆಂದರೆ:—

"ಈ ಪರೀಕ್ಷೆಯಲ್ಲಿ ಪಾಸಾದ ಜನರು ತಮ್ಮ ಪ್ರಾಂತವಲ್ಲಿಯೇ ಆಗಲೀ ಬೇರೆ ಕಡಿಗೆಯಾಗಲೀ ಉದ್ಯೋಗಗಳು ಸಿಕ್ಕ ಸ್ಥಳಕ್ಕೆ ಹೋಗಲಿಕ್ಕೆ ಹಿಂದೆ ಮುಂದೆ ನೋಡಬಾ

ರವು; ಅಂದರೆ ಅವರು ಕೈಕೊಂಡ ಕೆಲಸಕ್ಕೆ ತಕ್ಕವರಾಗುವರು. ಕೊಂಕಣಪಟ್ಟಿಯು ಉಪೇಂದ್ರವಾರನು ಘಟ್ಟದಮೇಲೆ ಕೆಲಸ ಮಾಡಲಿಕ್ಕೂ ದಕ್ಷಿಣ ಹಿಂದುಸ್ತಾನದವನು ಸಿಂಧ ಪ್ರಾಂತದಲ್ಲಿ ಕೆಲಸ ಮಾಡಲಿಕ್ಕೂ ಹಿಂಜರಿಯುವದು ತಕ್ಕದಿಲ್ಲ. ಕೆಲಸ ಸಿಕ್ಕಲ್ಲಿಗೆ ಹೋಗಲಿಕ್ಕೆ ಸಿದ್ಧವಿರಬೇಕು. ಇಂಗ್ಲಿಷರಾದ ನಮ್ಮನ್ನು ನೋಡಿರಿ. ಪರದೇಶವಾದ ಹಿಂದುಸ್ತಾನದಲ್ಲಿ ಕೆಲಸ ಮಾಡಲಿಕ್ಕೆ ಹಿಂಜರಿದಿದ್ದರೆ ನಾವು ಈ ದೇಶಕ್ಕೆ ಬರುತ್ತಿದ್ದಿಲ್ಲ." ಈ ಸೂಚನೆಯು ಎಲ್ಲರೂ ಲಕ್ಷದಲ್ಲಿಡಲಿಕ್ಕೆ ತಕ್ಕದ್ದಾಗಿದೆ.

ಮುಂಬಯಿ ವಿದ್ಯಾಪೀಠದ ಸಭಿಕರು ಸರ ರೇಮಂಡ ವೆಸ್ಟ ಸಾಹೇಬರಿಗೆ ಎಲ್. ಎಲ್. ಡಿ. ಎಂಬ ಗೌರವದ ಬಿರುದನ್ನು ಕೊಡುವ ಮನಸು ಮಾಡಿ ಆ ಮೇರೆಗೆ ಪದವೀದಾನ ಸಮಾರಂಭವನ್ನು ಎರಿನೇ ಮಾರ್ಚಕ್ಕೆ ನಿರೆವೇರಿಸಿದರು. ಇವರು ಮುಂಬಯಿ ವಿದ್ಯಾಪೀಠದ ಮೂರನೇ ಎಲ್ ಎಲ್ ಡಿ ಗಳು. ರಿಪನ್ ದೊರೆಗಳು ಮೊದಲನೆಯವರು. ಪಟ್ಟವರ್ಧನ ದೊರೆಗಳು ಎರಡನೆಯವರು. ವೆಸ್ಟ ಸಾಹೇಬರು ಈ ಬಹುಮಾನಕ್ಕೆ ತಕ್ಕವರೆಂಬದಕ್ಕೆ ಏನೂ ಸಂಶಯವಿಲ್ಲ. ಆದರೆ ಈ ಬಹುಮಾನದಿಂದ ವಿದ್ಯಾಪೀಠಕ್ಕೇ ಭೂಷಣ ಹೊರತು ಸಲ್ಲುವದು.

ಆಸಿಯಾ ಖಂಡದ ಮಧ್ಯಪ್ರದೇಶದಲ್ಲಿ ರಸಿಯನ್ನ ಜನರು ಭೂಮಿಯನ್ನು ಅಗೆಯುತ್ತಿರುವಾಗ್ಗೆ ಅವರಲ್ಲಿ ಬಂದು ದೊಡ್ಡ ಪಟ್ಟಣವು ಸಿಕ್ಕಿರುತ್ತದಂತೆ. ಅದು ಆಮುದಾರಿಯಾ ಎಂಬ ನದಿಯ ದಂಡಿಗೆ ಇರುತ್ತದೆ. ಅದು ಕ್ರಿ. ಮು. ಸುಮಾರು ಎರಡು ನೂರು ವರ್ಷಗಳ ಪೂರ್ವದಲ್ಲಿ ಕಟ್ಟಲ್ಪಟ್ಟಂತೆ ತೋರುತ್ತದೆ. ಅವರಲ್ಲಿ ದೊಡ್ಡ ದೊಡ್ಡ ಚಮತ್ಕಾರಗಳೂ

ತರತರದ ನಾಣ್ಯಗಳೂ, ಬೇರೆ ಬೇರೆ ತರದ ಪಾತ್ರೆಗಳೂ ಸಿಕ್ಕುತ್ತವೆ, ಮತ್ತು ಬೇರೆ ವಸ್ತುಗಳ ಅವಶೇಷಗಳು ಸಹ ಹೇರಳವಾಗಿರುತ್ತವೆ. ಇವುಗಳಿಂದ ಆ ಪಟ್ಟಣವನ್ನು ಕಟ್ಟಿದ ಜನರು ಬಳ್ಳಿ ಬುದ್ಧಿವಂತರೂ ಕೈಗಾರಿಕೆಯಲ್ಲಿ ಕುಶಲರೂ ದೂರದೃಷ್ಟಿಯುಳ್ಳವರೂ ವಿಚಾರವಂತರೂ ಆಗಿದ್ದರೆಂದು ತಿಳಿಯುತ್ತದೆ. ಆ ಪಟ್ಟಣದ ಸಂಪನ್ನರೂ ಆಗಿದ್ದರೆಂದು ತಿಳಿಯುತ್ತದೆ. ಆ ಪಟ್ಟಣದ ಈಗಿನ ಮಾರ್ಗಗಳೂ ಪೇಟೆ ಕೋಟೆಗಳೂ ಈಗಿನ ಅತ್ಯುತ್ತಮ ಪಟ್ಟಣಗಳಲ್ಲಿ ಇರುವಂಥವುಗಳನ್ನು ಹೋಲುತ್ತವೆ.

ಒಬ್ಬ ಅಮೇರಿಕದ ಗೃಹಸ್ಥನು ಬಂದು ಬಂಟಗಾಲಿಯ ವಾಹನವನ್ನು ರಚಿಸಿದ್ದಾನೆ. ಗಾಲಿಯು ಬಹು ದೊಡ್ಡದಿದ್ದು ಅದರ ಮಧ್ಯವಲ್ಲಿಯೇ ಮನುಷ್ಯನು ಕೂಡ್ರಲಿಕ್ಕೆ ಸ್ಥಳವುಂಟು. ಮನುಷ್ಯನು ಈ ಬಂಡಿಯಿಂದ ತಾಸಿಗೆ ೪ ಮೈಲು ಹೋಗುವನಂತೆ.

METHODS OF TEACHING.

ಕಲಿಸುವ ಪದ್ಧತಿಗಳು.

(೬೭ನೇ ಪುಟದಿಂದ ಮುಂದೆ ಸಾಗಿದ್ದು.)

ವಿದ್ಯಾರ್ಥಿಗಳ ವಾಚನದಲ್ಲಿ ಅಸ್ಪಷ್ಟತೆಯು ಮತ್ತು ತ್ವರೆಯು ದೋಷಗಳು ಮುಖ್ಯವಾಗಿರುತ್ತವೆ. ನಮ್ಮ ಜನರು ವಾಡಿಕೆಯಾಗಿ ಕೆಲವು ಅಕ್ಷರಗಳನ್ನು ಸರಿಯಾಗಿ ಉಚ್ಚರಿಸುವದಿಲ್ಲ, ನ, ಣ, ಚ, ಜ, ಶ, ಷ, ಸ, ಗಳ ಉಚ್ಚಾರವನ್ನು ಸರಿಯಾಗಿ ಮಾಡದಿರುವದೂ ಮಹಾಪ್ರಾಣವನ್ನು ಅಲ್ಪಪ್ರಾಣದಂತೆ, ಅಲ್ಪಪ್ರಾಣವನ್ನು ಮಹಾಪ್ರಾಣದಂತೆ ಉಚ್ಚರಿಸುವದೂ ಎಲ್ಲರಿಗೆ ಗೊತ್ತುಂಟು. ಆ ಕಾರಣ ಈ ದೋಷವು ವಿದ್ಯಾರ್ಥಿಗಳಲ್ಲಿ ಸಹಜವಾಗಿಯೇ ಹುಟ್ಟುತ್ತದೆ. ಇದನ್ನು ತಿದ್ದಿ ತಕ್ಕ

ಮಟ್ಟಿಗೆ ಸ್ಪಷ್ಟವಾದ ಉಚ್ಚಾರವನ್ನು ವಿದ್ಯಾರ್ಥಿಗಳಲ್ಲಿ
ನೆಲೆಗೊಳಿಸುವದು ಶಿಕ್ಷಕರು ಮೊದಲು ಎದುರ್ಕೊಳ್ಳುವ
ಕಷ್ಟದ ಕೆಲಸವು. ವರ್ಣಗಳ ಸ್ಪಷ್ಟೋಚ್ಚಾರವು ಕೆಲವು
ಇಂದ್ರಿಯಗಳ ಅಂದರೆ ಗಂಟ್ಲು, ಅಂಗಳು, ನಾಲಿಗೆ, ಹಲ್ಲು,
ತುಟಿಗಳ ವ್ಯಾಪಾರದಿಂದ ಹುಟ್ಟುತ್ತವೆ. ಈ ವ್ಯಾಪಾರ
ವು ಸ್ಥಿರವಾಗಿ ಆಗದಿದ್ದರೆ ಉಚ್ಚಾರವು ಸ್ಪಷ್ಟವಾಗುವದಿಲ್ಲ.
ಈ ದೋಷವನ್ನು ತಿದ್ದಬೇಕಾದರೆ ಅನುಕರಣವೇ ಮು
ಖ್ಯ ಸಾಧನವು. ಶಿಕ್ಷಕನು ಶುದ್ಧವಾಗಿಯೂ ಸ್ಪಷ್ಟವಾಗಿ
ಯೂ ಅಕ್ಷರಗಳನ್ನು ಉಚ್ಚರಿಸಿ ವಿದ್ಯಾರ್ಥಿಗಳಿಗೆ ಸರಿಯಾ
ದ ಉಚ್ಚಾರಗಳನ್ನು ಕಲಿಸಬೇಕು. ಈ ದೋಷವನ್ನು ತಿ
ದ್ದುವ ಸಲುವಾಗಿ ಶಿಕ್ಷಕನು ಶಬ್ದಗಳನ್ನೂ ವಾಕ್ಯಖಂಡಗಳ
ನ್ನೂ ಸ್ಪಷ್ಟವಾಗಿ ಓದಿ ತೋರಿಸಿ ಅದರಂತೆ ವಿದ್ಯಾರ್ಥಿಗಳಿಂ
ದ ಓದಿಸುವದು ಅವಶ್ಯವಾದದ್ದು. ವಿದ್ಯಾರ್ಥಿಗಳು ಶಾಲೆ
ಯಲ್ಲಿರುವ ಮಟ್ಟಿಗೂ ಈ ಕ್ರಮ ನಡೆಯತಕ್ಕದ್ದು. ಆದ
ರೆ ಇದನ್ನು ತೀವ್ರ ಕೈಕೊಂಡಷ್ಟು ಒಳ್ಳೇದು. ಶಿಕ್ಷಕ
ರು ಬಿನ್ನ ಇಯತ್ತೆ ಮತ್ತು ಮೊವಲನೇ ಇಯತ್ತೆಗಳ ವಿ
ದ್ಯಾರ್ಥಿಗಳ ಸ್ಪಷ್ಟೋಚ್ಚಾರವ ಸಲುವಾಗಿ ಬಹಳ ಎಚ್ಚರ
ಪಡತಕ್ಕದ್ದು. ಈ ವರ್ಗಗಳ ವಿದ್ಯಾರ್ಥಿಗಳಿಗೆ ಬಮ್ಮ
ನೆಟ್ಟಗೆ ಓದಲಿಕ್ಕೆ ಬರಹತ್ತಿದರೆ ಮುಂದಿನ ವರ್ಗದ ಕೆಲಸ
ವು ಹಗುರಾಗುವದು.

ವಿದ್ಯಾರ್ಥಿಗಳು ಪಾಡಿಕೆಯಾಗಿ ಶಬ್ದದ ಅಂತ್ಯವರ್ಣಗಳ
ನ್ನು ಸ್ಪಷ್ಟವಾಗಿ ಉಚ್ಚರಿಸುವದಿಲ್ಲ. ಹ್ರಸ್ವ ದೀರ್ಘಗಳಿಗೆ
ಸರಿಯಾಗಿ ಲಕ್ಷ್ಯ ಕೊಡುವದಿಲ್ಲ. ಅದವರಿಂದ ಈ ದೋಷ
ಗಳನ್ನು ಶಿಕ್ಷಕರು ಅಗ್ರಹಪೂರ್ವಕವಾಗಿ ದೂರ ಮಾಡಲಿ
ಕ್ಕೆ ಬೇಕು. ತಮ್ಮ ಶ್ರಮವನ್ನು ಲಕ್ಷಿಸದೆ ಮೇಲಿಂದಮೇಲೆ

ತಾವು ಶಬ್ದಗಳನ್ನು ಸಾವಕಾಶವಾಗಿ ಉಚ್ಚರಿಸಿ ಅದರಂತೆಯೇ ಅವರಿಗೂ ಉಚ್ಚರಿಸಲಿಕ್ಕೆ ಹಚ್ಚಬೇಕು. ಈ ಉಪಾಯವೇ ಈ ದೋಷಕ್ಕೆ ಮದ್ದು.

ಅಶಿಕ್ಷಿತ ಜನರು ವಾಡಿಕೆಯಾಗಿ ಅಸ್ಪಷ್ಟ ಉಚ್ಚಾರ ಮಾಡುವವರಿಂದ ಈ ದೋಷವು ವಿದ್ಯಾರ್ಥಿಗಳಲ್ಲಿ ಹುಟ್ಟುತ್ತದೆಂದು ಹಿಂದೆ ಹೇಳಿದ್ದೇವೆ. ಮನೆಯಲ್ಲಿ ಹತ್ತುವ ಈ ದೋಷವಲ್ಲದೆ ಶಾಲೆಯಲ್ಲಿ ಮತ್ತೊಂದು ಪ್ರಕಾರದ ದೋಷವು ಸಂಭವಿಸುತ್ತದೆ. ಅದು ಯಾವದಂದರೆ:—ವಾಚನದ ತ್ವರೆಯು; ಸಣ್ಣ ಅಕ್ಷರವು ಲೇಖನಕೌಶಲ್ಯದ ಕುರುಹೆಂದು ವಿದ್ಯಾರ್ಥಿಗಳು ತಿಳುಕೊಂಡಂತೆ ಅವಸರದಿಂದ ಹಾಗೂ ಹೀಗೂ ಓದುವದು ವಾಚನಪಟುತ್ವವನ್ನು ವ್ಯಕ್ತ ಪಡಿಸುತ್ತದೆಂದು ವಿದ್ಯಾರ್ಥಿಗಳ ಗ್ರಹಿಕೆ ಇರುವಂತೆ ತೋರುತ್ತದೆ. ಆ ಕಾರಣ ಈ ದೋಷವು ಎಚ್ಚರದಿಂದ ತಿದ್ದಲ್ಪಡದೆ ಹಾಗೆ ಉಳಿದಿರುವ ಶಾಲೆಯೊಳಗಿನ ಹುಡುಗರು ಬಮ್ಮೆ ಓದಲಿಕ್ಕೆ ಪ್ರಾರಂಭಿಸಿದರೆ ಬಂದರಹಿಂದೊಂದು ವಾಕ್ಯಗಳನ್ನು ಎಡೆಬಿಡದೆ ಅವಸರದಿಂದ, ತಿಳಿಯಲಿ ತಿಳಿಯದೆ ಇರಲಿ, ಓದಿ ಬಿಡುತ್ತಾರೆ. ಸಾಕು, ಸಾಕು, ಎಂದು ಎಷ್ಟು ನಿಲ್ಲಿಸಿದರೂ ಅವರು ಹತ್ತೆಂಟು ಶಬ್ದಗಳನ್ನಾದರೂ ಓದದೆ ನಿಲ್ಲುವದಿಲ್ಲ; ಪಾಠವನ್ನು ಓದಿ ಬಿಡುವದೇ ತಮ್ಮ ಕೆಲಸವು ಎಂದು ತಿಳಿದು ಅದನ್ನು ಹ್ಯಾಗಾದರೂ ತೀರಿಸುವದಕ್ಕೆ ಅವರು ಆತುರ ಪಡುವಂತೆ ತೋರುತ್ತದೆ. ಈ ದೋಷವುಳ್ಳ ವಿದ್ಯಾರ್ಥಿಗಳು ಅಪರಿಚಿತ ಶಬ್ದಗಳನ್ನು ಎಚ್ಚರದಿಂದ ತಿಳುಕೊಂಡು ಓದುವ ಹವ್ಯಾಸಕ್ಕೆ ಬೀಳದೆ ಮನಸಿಗೆ ಬಂದಂತೆ ಅದನ್ನು ಓದಿ ಬಿಡುತ್ತಾರೆ. ಕೆಲವು ಶಬ್ದಗಳನ್ನು ಪೂರ್ಣವಾಗಿ ಉಚ್ಚರಿಸುವದೇ ಇಲ್ಲ. ಸಣ್ಣ ಸಣ್ಣ ಶಬ್ದಗಳನ್ನೆಂ

ಹೊ ಬಿಟ್ಟೇಬಿಡುತ್ತಾರೆ. "ಗುಡಿಯೊಳಗೆ ಅಚಾಯ್ರ್ಯದ ಪುರಾಣವು ಆಗುತ್ತದೆ. ಎಲ್ಲರೂ ಹೋಗಿ ಕೂತಿರುತ್ತಾರೆ. ನೀವೂ ಹೋಗಿ ಕೂತುಕೊಳ್ಳಿರಿ" ಎಂಬ ವಾಕ್ಯವನ್ನು ಕೆಲವರು ಗಡಬಿಡಿಯಿಂದ ಹ್ಯಾಗೆ ನುಡಿಯುತ್ತಾರೆಂಬದು ಎಲ್ಲರಿಗೂ ಗೊತ್ತುಂಟು. ಕೆಟ್ಟ ಸಾಲೆಯ ಅನುಭವವಿದ್ದವರು ಅದು ಅತಿಶಯೋಕ್ತಿ ಎಂದು ತಿಳಿಯಲಿಕ್ಕಿಲ್ಲ.

ತ್ವರೆಯು ಮತ್ತು ಅಸ್ಪಷ್ಟತೆಯು ದೋಷಗಳನ್ನು ತಿದ್ದಿ ವಿಚಾರಪೂರ್ವಕವಾಗಿ ಹುಡುಗರನ್ನು ಓದಲಿಕ್ಕೆ ಹಚ್ಚುವದು, ಪ್ರತಿಯೊಂದು ಅಕ್ಷರವನ್ನು ಸ್ಫುಟವೂ ಸ್ಪಷ್ಟವೂ ಆದ ಉಚ್ಚಾರದೊಡನೆ ಓದಲಿಕ್ಕೆ ಕಲಿಸುವದು ಶಿಕ್ಷಕರ ಗೌರವದ ಕೆಲಸವು. ಇದನ್ನು ಅವರು ತಮ್ಮ ಸಾಮರ್ಥ್ಯವನ್ನೂ ಜಾಣತನವನ್ನೂ ಪಣಕ್ಕಿಟ್ಟು ಮಾಡಿ ಸಾಧಿಸತಕ್ಕದ್ದು. ಅವರ (ವಾಚನ ವಿಷಯದಲ್ಲಿ) ಯಶಸ್ಸನ್ನು ಈ ಕೆಲಸವನ್ನೇ ಅವಲಂಬಿಸಿರುತ್ತದೆ. ಇದು ಅಸಾಧ್ಯವಾದದ್ದಲ್ಲ. ತೀರ ಅಸಾಧ್ಯವಾದದ್ದೂ ಅಲ್ಲ. ಆದರೆ ಪ್ರೀತಿಯೆಂಬ ಎಚ್ಚರಿಕೆಯುಳ್ಳ ಮಾಸ್ತರನಿಗೆ ಇದು ಸುಸಾಧ್ಯವಾದದ್ದು.

ಓದಲಿಕ್ಕೆ ಬಲ್ಲವನು ತನ್ನ ಸಾಮರ್ಥ್ಯವನ್ನು ಇಬ್ಬಗೆಯಾಗಿ ಉಪಯೋಗಿಸುವನು. ತನ್ನ ಪೂರ್ತಿ ಓದುವದು ಒಂದು, ಎರಡನೆಯವರ ಸಲುವಾಗಿ ಓದುವದು ಮತ್ತೊಂದು. ತನ್ನ ದೆಸೆಯಿಂದ ಓದುವಾಗ ಅವನು ಶ್ರೋತ್ರೇಂದ್ರಿಯಕ್ಕಿಂತ ನೇತ್ರೇಂದ್ರಿಯದ ಉಪಯೋಗವನ್ನು ಹೆಚ್ಚಿಗೆ ಮಾಡುತ್ತಾನೆ. ಕಾರಣ ಬಳ್ಳೀ ವಾಚನದ ನಿಯಮಗಳನ್ನು ಲಕ್ಷ್ಯಕ್ಕೆ ತಾರದೆ ಓದಿದರೂ ಒಂದು ಪಕ್ಷಕ್ಕೆ ಫಟ್ಟಿಸಿ ಓದ

* ಗಡ್ಯಾಗ ಆಚಾರ ಪ್ರಾಣ ಹೋಗೆದ, ಎಲ್ಲರು ಹೊಯಿಕೊಂತಾರ, ನೀವು ಹೊಯಿಕೊಳ್ಳಿರಿ.

ವಿದ್ದರೂ ಪಾಠ್ಯಗಳ ಅಭಿಪ್ರಾಯವನ್ನು ತಿಳುಕೊಳ್ಳಬಹು
ದು. ಅವಕ್ಕೆ ಖಂಡನೆಯುವರ ಸಲುವಾಗಿ ಓದುವವನ ಕೆಲಸವು
ತೀರ ಭಿನ್ನವಾವದಿರುತ್ತದೆ. ಕೇಳುವವರು ತಮ್ಮ ಶ್ರೋ
ತ್ರೇಂದ್ರಿಯವನ್ನೇ ಮುಖ್ಯವಾಗಿ ಉಪಯೋಗಿಸುವರು.
ಇಂಥ ಪ್ರಸಕ್ತಿಯಲ್ಲಿ ಓದಿದ್ದನ್ನು ತಿಳುಕೊಳ್ಳುವದಕ್ಕೆ ಉತ್ತ
ಮ ಪಾಠಕನವ ಹೊರ್ತು ಬೇರೆ ಸಾಧನವೇನೂ ಇರುವದಿಲ್ಲ.
ಕಾರಣ ಓದುವವನು, ತಾನು ಓದಿದ್ದನ್ನು ಸ್ವತಃ ತಿಳುಕೊ
ಳ್ಳುವದು ಬಂದು, ಕೇಳುವವರಿಗೆ ತಿಳಿಯುವಂತೆ ಓದುವದು
ಹುತ್ತೊಂದು ಈ ಮೇರೆಗೆ ಎರಡು ಕಾರ್ಯಗಳನ್ನು ಮಾ
ಡಬೇಕಾಗುತ್ತದೆ.

ಇವೆರಡರೊಳಗಿನ ಭೇದಕ್ಕೆ ಶಿಕ್ಷಕರು ಬಹುತರ ತಕ್ಕ
ಷ್ಟು ಲಕ್ಷ್ಯ ಕೊಡುವದಿಲ್ಲೆಂಬಂತೆ ತೋರುತ್ತದೆ. ಕೆಲವು
ವಿದ್ಯಾರ್ಥಿಗಳು, ಕೇಳುವವರು ಯಾರೂ ಇಲ್ಲದೆ ತಮ್ಮ
ಪಾಠ್ಯ ಓದುತ್ತಾರೆಂಬಂತೆ, ಪುಸ್ತಕವನ್ನು ಎತ್ತಿ ಹಿಡಿದು
ತಲೆ ಬೊಗ್ಗಿಸಿ ಅವರ ಎಡಬಲಕ್ಕೆ ನಿಂತಂಥವರಿಗೂ ಕೇಳಿಸ
ದಂತೆ ಪಿಲ್ಲಸಿ ಗುಣುಗುಟ್ಟುತ್ತ ಅವಸರದಿಂದ ಓದುತ್ತಾರೆ.
ವರ್ಗದೊಳಗಿನ ಬಬ್ಬ ಹುಡುಗನಿಗೆ ಓದಲಿಕ್ಕೆ ಹೇಳಿ,
ಮಿಕ್ಕವರಿಗೆ ತಮ್ಮ ತಮ್ಮ ಪುಸ್ತಕಗಳನ್ನು ಮುಚ್ಚಿ ಅವ
ನು ಓದಿದ್ದನ್ನು ಕೇಳುತ್ತ ಕೂಡ್ರಿಸುವದೂ ನಡುನಡುವೆ
ತಮಗೆ ತಿಳಿಯದ ವಾಕ್ಯವನ್ನು ಓದುವವನಿಂದ ಪುನಃ ಓದಿ
ಸುವದೂ ವಾಚನ ಸುಧಾರಣೆಗೆ ಬಹು ಪ್ರಯೋಜನಕರವಾ
ದ ಸಂಗತಿಗಳು. ಇವಲ್ಲದೆ ಓದುವವನನ್ನು ನೀಟಾಗಿ ನಿಲ್ಲಿ
ಸುವದು ವಾಚನ ಪುಸ್ತಕವನ್ನು ಕಣ್ಣಿನಿಂದ ತಕ್ಕಷ್ಟು
ಅಂತರದ ಮೇಲೆ ಹಿಡಿಸುವದು, ಕೇಳುವವರಿಗೆ ಅನುಕೂ
ಲವಾದ ಎಲ್ಲ ವ್ಯವಸ್ಥೆಗಳನ್ನು ಮಾಡಿಸುವದು ಇವೇ ಮೊ
ದಲಾದ ಸಂಗತಿಗಳಿಗೆ ಶಿಕ್ಷಕನು ಲಕ್ಷ್ಯ ಕೊಡತಕ್ಕದ್ದು.

ವರ್ಗದಲ್ಲಿ ಮೊದಲನೇ ಹುಡುಗನಿಂದ ಕಡೆಯವನತನಕ ಕ್ರಮದಿಂದ ಓದಿಸುತ್ತ ಹೋಗದೆ ನಡುನಡುವೆ ಬೇಕಾದವನಿಗೆ ಓದಲಿಕ್ಕೆ ಹೇಳಬೇಕು. ಇದರಿಂದ ಪ್ರತಿಯೊಬ್ಬ ಹುಡುಗನಿಗೆ ತನ್ನ ಸರ್ತಿಯು ಯಾವಾಗ್ಗೆ ಬರುವದೆಂಬ ನಿಯಮವಿಲ್ಲದ್ದರಿಂದ ಅವರೆಲ್ಲರೂ ಪಾಠದ ಕಡೆಗೆ ಲಕ್ಷ್ಯ ಕೊಟ್ಟು ಎಚ್ಚರದಿಂದ ಕೂಡುವರು. ಶಿಕ್ಷಕನು ಸಾಕಂದು ಹೇಳಿದ ವಿನಹಾ ಓದುವವನು ನಿಲ್ಲಕೂಡದೆಂಬ ನಿರ್ಬಂಧವನ್ನು ಮಾಡಿಡಬೇಕು. ಪ್ರತಿಯೊಬ್ಬನಿಂದ ಕೆಲವು ವಾಕ್ಯಗಳನ್ನಾಗಲಿ, ಅರ್ಧ ಪುಟವನ್ನಾಗಲಿ ಅವಕಾಶವಿದ್ದಮೇರೆಗೆ ಓದಿಸಬೇಕು.

ವಾಚನರೂಢಿಯು ವಾಚನಸೈಪುಣ್ಯಕ್ಕೆ ಅನುಕೂಲವಾದ ಮೂರನೇ ಸಂಗತಿಯು. ಶಿಕ್ಷಕನು ದೋಷಗಳನ್ನು ಎಚ್ಚರದಿಂದ ತಿದ್ದಿದರೆ ವಿದ್ಯಾರ್ಥಿಗಳ ಉಚ್ಚಾರಗಳು ಶುದ್ಧವಾಗಬಹುದು; ಆದರೆ ಅದರಿಂದ ಸರಳವಾಗಿ ಓದಲಿಕ್ಕೆ ಬರುವದು ಅಪರೂಪ. ಸರಳ ವಾಚನವು ರೂಢಿಯಿಂದಲೇ ಬರುವದು. ಎಷ್ಟೋ ಶಿಕ್ಷಕರು ಇದನ್ನು ಲಕ್ಷ್ಯಕ್ಕೆ ತಾರದೆ ಆಗಾಗ್ಗೆ ತಪ್ಪುಗಳನ್ನು ತಿದ್ದುತ್ತಾ ಅಲ್ಪ ದೋಷಗಳನ್ನು ಬಾರಿಬಾರಿಗೆ ವಿವರಿಸುತ್ತ ವಾಚನದ ಕೆಲಸವನ್ನು ಸಾಗಿಸುವರು. ಅದರಿಂದ ಶುದ್ಧ ವಾಚನದ ಕೆಲಸ ಮಾತ್ರ ಆಗುವದು; ಸರಳ ವಾಚನದ ಕೆಲಸವು ಆಗದು. ಸರಳ ವಾಚನವು ಸಾಧ್ಯವಾಗಬೇಕಾದರೆ ಎಷ್ಟು ಹೆಚ್ಚು ಓದಿಸುವರೋ ಅಷ್ಟು ಹಿತವಾಗುವದು. ಆ ಕಾರಣ ಹೆಚ್ಚು ಓದಿಸಿದಷ್ಟು ಒಳ್ಳೇದು. ಅವರಿಗೆ ಕೂಡಿವಾಗ ಓದಲಿಕ್ಕೆ ಹೇಳಬೇಕು; ಅಂದರೆ ವಿದ್ಯಾರ್ಥಿಗಳಿಗೆ ಶುದ್ಧವಾಗಿಯೂ ಸರಳವಾಗಿಯೂ ಓದಲಿಕ್ಕೆ ಬರುವದೆಂದು ನಿಷ್ಕರ್ಷವಾಗಿ ಹೇಳಬಹುದು.

NOTES ON GRAMMAR
ವ್ಯಾಕರಣದ ಟಿಪ್ಪಣಿಗಳು.

ನಾಲ್ಕನೇ ಪುಸ್ತಕದ ಪುಟ ೬೬ ಪಂಕ್ತಿ ೫

"ಮೂಡಲಿನಲ್ಲಿರುವವರಿಗೆ ಅಸ್ತಮಾನವಾಗುವ ಕಾಲಕ್ಕೆ ಪಡುವಣದವರಿಗೆ ಇನ್ನೂ ಸೂರ್ಯನು ಕಾಣಿಸುತ್ತಿರುತ್ತಾನೆ"

೧೧ನೆಯ ಪಂಕ್ತಿ.

"ತೆಂಕಣಕ್ಕೆ ಬಂದಹಾಗೆ ಕೆಳಗೆ ಇಳಿದಂತೆ ಕಾಣುತ್ತದೆ", ಮೇಲಿನ ವಾಕ್ಯಗಳಲ್ಲಿ ದಿಗ್ವಾಚಕ ಶಬ್ದಗಳ ವಿಭಕ್ತಿರೂಪಗಳು ತಪ್ಪಿರುತ್ತವೆ. ಮತ್ತೂ ಇಂಥ ತಪ್ಪುಗಳು ಈಗ ಎಲ್ಲರಿಂದಲೂ ಆಗುತ್ತವೆ. ಅದರಿಂದ ಈ ದಿಗ್ವಾಚಕ ಶಬ್ದಗಳ ವಿಭಕ್ತಿರೂಪಗಳ ವಿಷಯವಲ್ಲಿ ಶಬ್ದಾನುಶಾಸನವೆಂಬ ಪ್ರಾಚೀನ ವ್ಯಾಕರಣದೊಳಗೆ ಹೇಳುವ ನಿಯಮಗಳನ್ನು ಇಲ್ಲಿ ಬರೆಯುತ್ತೇವೆ—

ಶಬ್ದಾನುಶಾಸನ ಸೂತ್ರವು ೬೬೫

ಸೂತ್ರವು—ಕಣ್ ದಿಕ್ಶಬ್ದಸ್ಯ.

ಅರ್ಥ—ದಿಗ್ವಾಚಕಾನಾಂ ಶಬ್ದಾನಾಂ ಕಣಾಗಮೋಭವತಿ ಇಮಾದೌ ಸುಪಿಪರೇ.

ಕನ್ನಡದಲ್ಲಿ ಅರ್ಥವು—ದಿಗ್ವಾಚಕಗಳಾದ ಶಬ್ದಗಳಿಗೆ ತೃತೀಯಾ, ಚತುರ್ಥೀ, ಪಂಚಮೀ, ಷಷ್ಠೀ ವಿಭಕ್ತಿಗಳಲ್ಲಿ ಅಣ್ ಆಗಮವಾಗುತ್ತದೆ.

ಉದಾ—ಮೂಡಣಿಂ, ಮೂಡಣ್ಗೆ, ಮೂಡಣ, ತೆಂಕಣಿಂ, ತೆಂಕಣ್ಗೆ, ತೆಂಕಣ, ಬಡಗಣಿಂ, ಬಡಗಣ್ಗೆ, ಬಡಗಣ, ಮುಂತಾದವು.

ಸೂತ್ರ-ಒಳ್ಮಶ್ಚಾತೋದಿಗರ್ಥಾಚ್ಚಲ್ಚ ೬೬೦

ವ್ಯಾಖ್ಯೆ— ಅಕಾರಾಂತಾದ್ದಿಗ್ವಾಚಿನಃ ಪರಸ್ಯ ಬಳೋಮೋ ಮಶ್ಚ ಕಲಾವೇ ಶೋಭವತಿ ॥ ಚಕಾರಾಚ್ಚಲ್ಚ ।

ಕಂನೆಪಅರ್ಥ—ಅಕಾರಾಂತ ದಿಗ್ವಾಚಕ ಶಬ್ದಗಳ ಪ್ರಥಮಾ ದ್ವಿತೀಯಾ ಸಪ್ತಮಿ ವಿಭಕ್ತಿಗಳಿಗೆ ಆಲ್ ಪ್ರತ್ಯಯವಾಗುವದು ಅಥವಾ ಈ ಪ್ರತ್ಯಯಕ್ಕೆ ಲೋಪಬರುವದು.

ಉದಾಹರಣೆಗಳು.

ಮೂಡಲ್, ಮೂಡ.

ಪ್ರಥಮೆಗೆ—ಮೂಡಲೊಪ್ಪಿದುದು. ಮೂಡಲ್ ನೋಡಿದಂ, ಮೂಡಲ್ ಸೂರ್ಯನುದಯಿಸಿದಂ ಮುಂತಾದವು.

ಈ ಮೇಲಿನ ವಿವರದಿಂದ "ಮೂಡಲಿನಲ್ಲಿ" ಎಂಬರೂಪವು ತಪ್ಪಿನದೆಂದು ಸ್ಪಷ್ಟವಾಗುತ್ತದೆ. ಈ ರೂಪದ ಮೂಲಶಬ್ದವು ಮೂಡಎಂಬದು, ಮೂಡಲು ಎಂಬದಲ್ಲ. "ಮೂಡಲಿನಲ್ಲಿ" ಎಂಬದರ ಸ್ಥಳದಲ್ಲಿ "ಮೂಡಲು" ಅಥವಾ "ಮೂಡದಿಕ್ಕಿನಲ್ಲಿ" ಎಂಬ ಪದವಿರಬೇಕು.

"ಪಡುವಣವ" ಮತ್ತು ತೆಂಕಣಕ್ಕೆ" ಎಂಬರೂಪಗಳ ಮೂಲಶಬ್ದಗಳು ಪಡುವ, ತೆಂಕ ಎಂಬವಿರುತ್ತವೆ. ಪಡುವಣ ತೆಂಕಣ ಎಂಬವಲ್ಲ. "ಪಡುವಣವ" ಮತ್ತು "ತೆಂಕಣಕ್ಕೆ" ಎಂಬರೂಪಗಳ ಸ್ಥಳದಲ್ಲಿ "ಪಡುವಣ" ಮತ್ತು "ತೆಂಕಣಿಗೆ" ಎಂಬ ಶುದ್ಧರೂಪಗಳಿರತಕ್ಕದ್ದು.

ಈಗ ಎಲ್ಲರೂ ಮೂಡಣ, ತೆಂಕಣ, ಪಡುವಣ, ಬಡಗಣ ಶಬ್ದಗಳೇ ಪೂರ್ವಾದಿ ದಿಕ್ಕುಗಳ ಕನ್ನಡ ಪರ್ಯಾಯಗಳೆಂದು ತಿಳಿದಿದ್ದಾರೆ. ಅವರೆ ಈ ಗ್ರಹಿಕೆ ತಪ್ಪಿನದಿರುತ್ತದೆ. ಇವುಗಳ ಮೂಲರೂಪಗಳು ಮೂಡ, ತೆಂಕ, ಪಡುವ, ಬಡಗ ಎಂಬ ಶಬ್ದಗಳಿರುತ್ತವೆ. ಇವುಗಳ ವಿಭಕ್ತಿರೂಪಗಳ ವಿಷಯದ ನಿಯಮಗಳನ್ನು ಮೇಲೆ ಬರೆದಿದ್ದೇವೆ.

ಇನ್ನು ಮೂಡಣ, ತೆಂಕಣ, ಪಡುವಣ, ಬಡಗಣ ಎಂಬ ಶಬ್ದಗಳಾವರೂ ರೂಢಿಯಲ್ಲಿ ಅವೆ. ಅವರೆ ಇವು ದಿಗ್ವಾ

ಚಕಿ ನಾಮಗಳಲ್ಲ "ಆಲಿ ದಿಕ್ಕಿನಲ್ಲಿ ಹುಟ್ಟಿದ ಅಥವಾ ಆದ"
ಎಂಬರ್ಥದ ವಿಶೇಷಣಗಳಾಗಿವೆ. ಈ ವಿಷಯದ ಶಬ್ದಾನು
ಶಾಸನದ ಸೂತ್ರವು:—

ಸೂತ್ರ ॥ ದಿಕ್ಶಬ್ದಾದಣಾಃ ॥ ೪-೩೧

ವ್ಯಾಖ್ಯೆ—ತತ್ರೇತಿ ಸಪ್ತಮೀ ಸಮರ್ಥಾದ್ದಿಕ್ ಶಬ್ದಾದ್ಭ
ವಾರ್ಥೇಜಾತಾರ್ಥೇಚ ಅಣ ಪ್ರತ್ಯಯೋವಾಭವತಿ ॥

ಉದಾಹರಣೆಗಳು.

ಮೂಡಲಾದಂ ಪುಟ್ಟಿದಂ ಮೇಣ್ ಮೂಡಣಂ ॥ ಏವಂ
ತೆಂಕಣಂ, ಪಡುವಣಂ, ಬಡಗಣಂ, ನಡುವಣಂ, ಕಡೆಯು
ಣಂ, ಅತ್ತಣಂ, ಇತ್ತಣಂ, ಇತ್ಯಾದಿಃ ॥

ಕಂನಡದರ್ಥವು ಮೇಲೆ ಹೇಳಲ್ಪಟ್ಟಿದೆ.

ಈ ಎಲ್ಲ ನಿಯಮಗಳಂತೆ ಮೇಲಿನ ವಾಕ್ಯಗಳನ್ನು ಶು
ದ್ಧಮಾಡಿ ಬರೆಯೋಣ—

" ಮೂಡಲಿರುವವರಿಗೆ (ಮೂಡದಿಕ್ಕಿಗೆ ಇರುವವರಿಗೆ)
ಅಸ್ತಮಾನವಾಗುವ ಕಾಲಕ್ಕೆ ಪಡುವಣವರಿಗೆ ಇನ್ನೂ
ಸೂರ್ಯನು ಕಾಣಿಸುತ್ತಿರುತ್ತಾನೆ "

"ತೆಂಕಣಿಗೆ ಬಂದಹಾಗೆ ಕಳಗೆ ಇಳಿದಂತೆ ಕಾಣುತ್ತದೆ"

ಒನ್ನೇ ಪುಸ್ತಕ ಪುಟ ೯೯

" ಈ ಭಿನ್ನತ್ವವು ಕಾಲಚಕ್ರಕ್ಕೊಳಗಾಗಿ ತನ್ನಿಂದ
" ತಾನೇ ಉಂಟಾಯಿತೋ, ಅನ್ಯರೀತಿಯಿಂದ ಉಂಟಾಯಿ
" ತೋ ಎಂಬುವದು ಸಂಶಯಾಸ್ಪದವೇ ಸರಿ"

ಈ ವಾಕ್ಯದಲ್ಲಿ "ಎಂಬುವದು ಸಂಶಯಾಸ್ಪದವೆ" ಈ
ವಾಕ್ಯದ ಅರ್ಥವನ್ನು ನೋಡಿದರೆ " ಈ ಭಿನ್ನತ್ವವು ಕಾ
ಲಚಕ್ರಕ್ಕೆ ಒಳಗಾಗಿ ತನ್ನಿಂದತಾನೇ ಉಂಟಾಯಿತೋ,
ಅನ್ಯರೀತಿಯಿಂದ ಉಂಟಾಯಿತೋ" ಎಂದು ಅನ್ನುವದೇ
ಸಂಶಯವೆಂಬ ಅಭಿಪ್ರಾಯವು ಹೊರಡುತ್ತದೆ. ಆದರೆ ಗ್ರಂ

ಫಕರ್ತರ ಅಭಿಪ್ರಾಯವು ಹಾಗಿಲ್ಲ. "ಎಂಬುದನ್ನು ನಿಶ್ಚಯಿಸುವದು ಸಂಶಯಾಸ್ಪದವು" ಎಂದುಂಟು. ಅದರಿಂದ "ಎಂಬುವದು" ಈ ಪದವನ್ನು ತೆಗೆದು ಅದರ ಸ್ಥಳದಲ್ಲಿ "ಎಂಬದನ್ನು ನಿಶ್ಚಯಿಸುವದು" ಎಂಬ ಎರಡು ಪದಗಳನ್ನಿಡಬೇಕು. ಹ್ಯಾಗಂದರೆ "ಈ ಭಿನ್ನತ್ವವು ಕಾಲಚಕ್ರಕ್ಕೆ ಬಳಿಗಾಗಿ ತನ್ನಿಂದ ತಾನೇ ಉಂಟಾಯಿತೋ ಅನ್ಯರೀತಿಯಿಂದ ಉಂಟಾಯಿತೋ ಎಂಬುದನ್ನು ನಿಶ್ಚಯಿಸುವದು ಸಂಶಯಾಸ್ಪದವೇ ಸರಿ."

ಇವಲ್ಲದೆ "ಎಂಬುವದು" ಈ ಪದವು ತಪ್ಪಿನ ರೂಪವಿರುತ್ತದೆ. ಹ್ಯಾಗಂದರೆ—ಎನ್ನು ಧಾತುವಿನ ವರ್ತಮಾನ ಕೃದ್ವಾಚಕರೂಪವನ್ನು ಸಿದ್ಧ ಮಾಡಬೇಕಾದರೆ ಆ ಧಾತುವಿಗೆ ಉವಪ್ರತ್ಯಯ ಹಚ್ಚಿದರೆ "ಎನ್ನುವ" ಎಂಬ ರೂಪವು ಸಿದ್ಧವಾಗುತ್ತದೆ.

ಇದಲ್ಲದೆ ಹಳಗನ್ನಡ ನಿಯಮದ ಪ್ರಕಾರ ಅನ್, ಎನ್, ಲೆನ್, ಉಣ್, ಕೊಳ್, ಕಾಣ್ ಧಾತುಗಳಿಗೆ ವರ್ತಮಾನ ಕೃದ್ವಾಚಕ ಪ್ರತ್ಯಯವು "ವ" ಪರವಾದರೆ ಪ್ರತ್ಯಯದ ವಕಾರಕ್ಕೆ ಬಕಾರಾದೇಶವಾಗುತ್ತದೆ. ಅದರಿಂದ ಅಂಬ, ಎಂಬ, ತಿಂಬ, ಉಂಬ, ಕೊಂಬ, ಕಾಂಬ, ಎಂಬ ರೂಪಗಳುಂಟಾಗುವವು. ಅಂತೂ ಹೊಸಗನ್ನಡದಂತೆ ನೋಡಿದರೆ ಎನ್ನುವ, ಹಳೆಗನ್ನಡದಂತೆ ನೋಡಿದರೆ ಎಂಬ, ಈ ಎರಡರಲ್ಲಿ ಯಾವದಾದರೊಂದು ರೂಪವಿರಬೇಕೇ ಹೊರ್ತು "ಎಂಬುವ" ಈ ರೂಪವು ಸಿದ್ಧವಾಗುವದಿಲ್ಲ. ಅದರಿಂದ "ಎಂಬುವದು" ಈ ರೂಪವ ಸ್ಥಳದಲ್ಲಿ ಎಂಬುದು ಅಥವಾ ಎನ್ನುವದು ಎಂಬರೂಪವನ್ನು ಇಡಲಿಕ್ಕೆ ಬೇಕು.

ಈ ವಿಷಯದಲ್ಲಿ ಶಬ್ದಾನುಶಾಸನದ ಆಧಾರವು.

ಸೂತ್ರ—ನಾನೇನ್ತಿನೋಬಃ ॥ ೫೧೭ ॥

ವೃತ್ತಿ—ನಾನ್, ಎನ್, ತಿನ್ ಧಾತುಭ್ಯಃಪರಸ್ಯ ಮಕಾರಸ್ಯ ಬಕಾರಾದೇಶೋಭವತಿ—

ಪ್ರಯೋಗಃ—ನಾನ್ಬಂ, ನಾನ್ಬಿನಂ, ನಾನ್ಬನ್ನಂ, ತಿನ್ಬಂ, ತಿನ್ಬಿನಂ, ತಿನ್ಬನ್ನಂ, ಎನ್ಬಂ, ಎನ್ಬಿನಂ, ಎನ್ಬನ್ನಂ, ಇನ್ನು ಎನ್ಬಂ ಎಂಬ ರೂಪದಲ್ಲಿರುವ ನಕಾರಾಕ್ಕೆ ಅನುಸ್ವಾದೇಶವು ಸಂಧಿಯಿಂದ ಬರುತ್ತದೆ.

DEPARTMENTAL NOTICE.

ಸರಕ್ಯೂಲರ ನಂಬರು. ೨೬೬

ದಕ್ಷಿಣ ಭಾಗದೊಳಗಿನ ಪೋಸ್ಟಿನ ಕೆಲಸ ನೋಡುತ್ತಿರುವ ಯಾವತ್ತು ಸ್ಕೂಲ ಮಾಸ್ತರರಿಗೆ—

ಮಾಸ್ತರ ಕೋಡಿನ ಮೊದಲನೇ ಭಾಗದ ೧ನೇ ನಿಯಮದ ಅಪವಾದವನ್ನನುಸರಿಸಿ ಪೋಸ್ಟಿನ ಕೆಲಸ ನೋಡುತ್ತಿರುವಂಥ ಮಾಸ್ತರರು ಆ ನಿಯಮಕ್ಕೆ ವಿರುದ್ಧವಾಗಿ ಚಾಲೆಯು ವೇಳೆಯಲ್ಲಿಯೇ ಆ ಕೆಲಸವನ್ನು ಮಾಡುತ್ತಿರುತ್ತಾರೆಂದು ನಮಗೆ ತಿಳಿಯುತ್ತದೆ. ಆವರೆ ಅದು ಸರಿಯಲ್ಲ. ಪೋಸ್ಟಿನ ಕೆಲಸವನ್ನು ಕೈಕೊಂಡ ಮಾಸ್ತರರು ಚಾಲೆ ನಡೆಯುವ ವೇಳೆಯು ಹೊರ್ತು ಉಳಿದ ವೇಳೆಯಲ್ಲಿ ಆ ಕೆಲಸವನ್ನು ಮಾಡಬೇಕೇ ಹೊರ್ತು ಚಾಲೆಯು ಹೊತ್ತಿನಲ್ಲಿ ಮಾಡಕೂಡದೆಂದು ಮಿ. ಡಾಯರೆಕ್ಟರ ಸಾಹೇಬ ಬಹಾದ್ದೂರವರು ವಿಧಿಸಿರುತ್ತಾ*ರೆ. ಇನ್ನು ಮುಂದೆ ಈ ನಿಯಮದ ವಿರುದ್ಧವಾಗಿ ಯಾರೂ ನಡೆಯಬಾರದೆಂದು ಈ ಸರಕ್ಯೂಲರದಿಂದ ತಿಳಿಸುತ್ತೇವೆ. ಯಾರಾದರೂ ನಡೆದರೆ ಅವರ ಬಗ್ಗೆ ಕೂಡ್ಲ ಆಯಾ ಜಿಲ್ಲೆಯ ಡಿಪ್ಯೂಟಿ

* ಸರಕ್ಯೂಲರ ನಂಬರು ೬೫೫೫ ತಾ॥ ೨೫ ಸಪ್ಟಂಬರ ೧೮೬೯.

ಎಜ್ಯುಕೇಶನಲ್ ಇನಸ್ಪೆಕ್ಟರರು ನಮ್ಮ ಕಡಿಗೆ ರಿಪೋರ್ಟು ಮಾಡಬೇಕು. ಮುಖ್ಯವಾಗಿ ಸೂಲೆಯ ಕೆಲಸವನ್ನು ಬಳ್ಳೇ ರೀತಿಯಿಂದ ಸಾಗಿಸುವದು ಸ್ಕೂಲಮಾಸ್ತರರ ಕರ್ತವ್ಯವಿರುತ್ತದೆ. ಇದನ್ನು ಅವರು ಬಳ್ಳೇ ಜಾಗ್ರತೆಯಿಂದ ಮಾಡಿ ಪ್ರಶಂಸೆಯನ್ನು ಪಡಿಯಬೇಕು.

ಧಾರವಾಡ,
ತಾ॥ ೧೩ ಫೆಬ್ರುವರಿ ೧೮೯೦

S. V. PATWARDHAN.
ಎಜ್ಯುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

EXCURSION TO KOLHAPUR.

ಕೊಲ್ಹಾಪುರದ ಪ್ರವಾಸವು.

(ಹಿನೇ ಪುಟದಿಂದ ಮುಂದೆ ಸಾಗಿದ್ದು.)

ಈ ವಸ್ತುದರು ಪರ್ವಿಯನ್ನರು; ಇವರಿಗೆ ಪ್ರತಿ ತಿಂಗಳಿಗೆ ೬೦ ರು॥ ಸಂಬಳ ಉಂಟು. ಸುಮಾರು ೪೦ ವರ್ಷದ ಪ್ರಾಯದವರು ಅವರೂ ಅವರ ಮೈಯು ಬಳ್ಳಿಯಂತೆ ಮಣಿಸಿದತ್ತ ಮಣಿಯುವದು. ಕಸರತ್ತು ಅಂತೂ ಬಹಳ ಉತ್ತಮ ಮಾಡುತ್ತಾರೆ. ಇವರ ಗುಣಶೀಲಂಗಳು ಗ್ರಾಹ್ಯಗಳೇ; ಇವರು ನಮಗೆ "ಲೂಟಬೈನ" ಗಳ ಕೆಲವು ಹೊಸ ಮಾದರಿಗಳನ್ನೂ ಲೋಹದ ತಿರಪುವ ಹಲವು ಚೀರೆ ತರಗಳನ್ನೂ ತೋರಿಸಿದರು. ಪಾರಿಯಮೇಲಿನ ಹೊಸ ಹೊಸ ಫೀಚುಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಬಹಳ ತೋರಿಸಿದರು. ಕೈಲಾಸವಾಸಿಗಳಾದ ಬಾಪೂರಾವ ತಾಲಿಂ ಮಾಸ್ತರ ಇವರು ಕೊಲಾಪುರದ ವಸ್ತುದರು ತೋರಿಸಿದ ಹೊಸ ಕೃತಿಗಳನ್ನು ಕಲಿಯುವದಕ್ಕೆ ನಮಗೆ ದಿನಾಲು ಮುಂಬಾಲ ಬಿದ್ದಿದ್ದರು. ಆ ಕೃತಿಗಳನ್ನು ಮಾಡುವದು (ದೇಹದ) ವಿಶೇಷಗುರುತ್ವದ ಮೂಲಕವಾಗಿ ಅವರಿಗೆ ಅನಾದಳವಾದಾಗ್ಯೂ ಹೀಗೆ ಹೀಗೆ

ಪಾಡಿರಿ ಎಂದು ಯಾವಾಗಲು ಬೆನ್ನು ಹತ್ತುವರು. ಅವರ ತ್ಯಾಯದಿಂದ ಪೊಳಿಕೆಯ ಸ್ವರೂಪವಲ್ಲಿದ್ದ ಹೊಸಕೃತಿಳು ಅವರಸ್ಥಾನಾಪನ್ನರಾದ ಕರವೀರಪುರದ ವಸ್ತ್ರಿಯರ ವಿದ್ಯಾರ್ಥಿಗಳಾದ "ಮಾಧವ ರಾಮಚಂದ್ರ ಖಾಂಡೇಕರ" ಇವರು ತೋರಿಸುವ ಪ್ರಯೋಜನಗಳಿಂದಲೂ, ಪ್ರತ್ಯಕ್ಷ ಕೂಡಿ ತೋರಿಸುವ ಕೃತಿಗಳಿಂದಲೂ ವೃಕ್ಷರೂಪವನ್ನು ಸರಿಸಿರುತ್ತವೆ. ಇನ್ನು ಸ್ವಲ್ಪ ದಿವಸದಲ್ಲಿ ಫಲಪುಷ್ಪಗಳಿಂದ ಭರಿತವಾಗಬಹುದು.

ಕೊಲ್ಹಾಪುರದ ವಿದ್ಯಾರ್ಥಿಗಳ ತಾಲಿಮು ನೋಡಿ ಮಹಾರಾಜರ ಹೊಸವಾಗಿ ಕಟ್ಟಿದ ಸುಂದರವಾದ ಮಂದಿರಕ್ಕೆ ಕರೆಳಿದೆವು. ಇವರ ಕಟ್ಟಣೆಯೂ, ಶೋಭೆಯೂ, ಚಿತ್ರಗಳೂ, ನೆಲದ ಬಗೆಬಗೆಯ ಬಣ್ಣಗಳೂ, ಅಲ್ಲಿಯ ದ್ವಾರಗಳ ಕನ್ನಡಿಗಳ ಮೇಲೆ ಮಹಾರಾಷ್ಟ್ರ ಮನೆತನದ ಕೂರ ಪುರುಷರ ಚಿತ್ರಗಳೂ ಬಹಳ ದರ್ಶನೀಯಗಳೇ ಸರಿ. ಈ ಮಹಾಲಯದ ಭಿತ್ತಿಗಳು ಸಂಗಮರವರೀ ಕಲ್ಲಿನವೇ ಬಾಗಿಲುಗಳೂ, ಕಿಟಕಿಗಳೂ, ಗೋಡೆಗಳೂ, ಚಿತ್ರದಿಂದ ಯುಕ್ತವಾಗಿದ್ದವು. ಮೇಲ್ಛಾವಣಿಯಲ್ಲಿ ತಿಳಿಗಚ್ಚಿನಿಂದ ಮಾಡಿದ ಎಳೆಬಳ್ಳಿಗಳು ತುಂಬಿದ್ದವು. ಬಳಿಗೆ ಹೋಗಿ ಅತ್ತಿತ್ತ ನೋಡಿದ ಕೂಡಲೆ ಎಲ್ಲಕಡೆಗೂ ಕನಡಿಗಳಿಂದ ಅಚ್ಛಾದಿಸಿರುವಂತೆ ತೋರುತ್ತದೆ. ಗಚ್ಚಿನ ಗೋಡೆ ನೆಲಗಳನ್ನು ನುಣುಪು ಮಾಡಿದ್ದರಿಂದ ಆ ನೆಲದಲ್ಲಿ ನಡೆಯುವವರ, ಕೂತವರ, ನಿಂತವರ, ಮಲಗಿವವರ ಪ್ರತಿಬಿಂಬಗಳು ಕಾಣುತ್ತಿದ್ದವು. ಈ ಘನ ಮಂದಿರದ ಭವ್ಯತೆಯನ್ನು ಕೀಳಪಳ್ಳಿಯ ಬಿಬ್ಬ ಮನುಷ್ಯನು ನೋಡಿದರೆ ಫಕ್ಕಾಗಬಹುದು. ಈ ಗೃಹದ ಎಲ್ಲ ಅಂತಸ್ತುಗಳನ್ನು ನೋಡಿ ಕಡೆಯ ಅಂತಸ್ತಿನ ಮೇಲಿರುವ ಆಶ್ಚರ್ಯಕರವಾದ ಕಾಲಮಾಪಕ ಯಂತ್ರವನ್ನು ನೋಡಹೋದೆ

ವು. ಅದು ನಾಲ್ಕು ದಿಕ್ಕಿನಲ್ಲಿ ಸಂಚರಿಸುವವರಿಗೆ ಕಾಣು ತ್ತದೆ ಅಂದರೆ ಅದಕ್ಕೆ ನಾಲ್ಕು ದಿಕ್ಕಿಗೆ ನಾಲ್ಕು ತಗಡಗಳು ಮುಳ್ಳುಗಳೂ ಕೂರಿಸಲ್ಪಟ್ಟಿರುತ್ತವೆ. ಅದು ಧಾರವಾಡದ ಈ ಡಿಟ ಆಫಿಸಿನ ಗಡಿಯಾಲದಂತೆ ಇದ್ದು ಅದರ ಬಹಿರ್ಭಾಗದ ವ್ಯಾಸವು ೧೬ ಮೊಳವದೆ, ಅದರ ಆಂದೋಲಕವು ಸುಮಾರು ೪/೧೦ ಮಣಪಾದೀತು. ಇಂಥ ೪ ಆಂದೋಲಕಗಳಿರುತ್ತವೆ. ಅದು ಕಾಲುತಾಸಿಗೊಮ್ಮೆ ಬಾರಿಸುತ್ತದೆ. ಅದರ ಬಳಿಗಿನ ಚಕ್ರಗಳು ಚಕ್ಕಡಿಯ ಗಾಲಿಗಳಂತೆ ಇರುತ್ತವೆ. ಈ ಚಕ್ರಗಳ ರಚನೆಯು ಸುಭಗತ್ವವೂ, ಕೌಶಲ್ಯವೂ ಬಹಳ ಸೋಜಿಗವಾವವುಗಳು. ಅದರ ಗಂಟೆಯ ನಾದವು ಸುಮಾರು ೨ ಮೈಲು ಕೇಳುವದೆಂದು ಹೇಳುತ್ತಾರೆ.

ಈ ಮಂದಿರದ ಮಧ್ಯಭಾಗದಲ್ಲಿ ೩ನೇ ಅಂತಸ್ತಿನ ಮೇಲೆ ಮಹಾರಾಜರ ದರ್ಬಾರವಾಗುತ್ತದೆ. ಅಲ್ಲಿ ನಾಲ್ಕು ದಿಕ್ಕಿನ ಗೋಡೆಗಳಿಗೆ ಇಳಿಬಿಟ್ಟ ಶೂರಪುರುಷರ ಚಿತ್ರಗಳೂ ಪರಿಪರಿಯ ಚಿತ್ರವಿಚಿತ್ರ ಬಟ್ಟೆಗಳೂ ರಮ್ಯವಾಗಿರುತ್ತವೆ. ಸಿಡಿಲನ್ನು ಕೆರೆ ಹಿಡಿದು ಯಾತಕ್ಕೂ ಅಪಾಯವಾಗದಂತೆ ನೆಲಕ್ಕೆ ಮುಟ್ಟಿಸುವ ಕಬ್ಬಿಣದ ಕಳಿಕೆಯನ್ನು ನಿಲ್ಲಿಸಿರುತ್ತಾರೆ. ಅದರ ತುದಿಯು ಕಡೇ ಗುಮ್ಮಟದ ಮೇಲೆ ೧೦/೪ ಮೊಳ ಹೋಗಿರುತ್ತದೆ. ಈ ರಾಜಮಂದಿರದೆಲ್ಲ ಭಾಗವನ್ನು ನೋಡಿ ಊರಿಗೆ ಬಂದೆವು. ಊರಲ್ಲಿ ನಗರಮಂದಿರ, ವೈದ್ಯಶಾಲೆಗಳನ್ನು ನೋಡಿದೆವು. ಅನಂತರ ಎಲ್ಲಪರಿಚಿತ ಸಭ್ಯಗೃಹಸ್ಥರ ಭೇಟ್ಟಿತೆಗೆದುಕೊಂಡು ಸಂಜೆ ೪ ಬಡಿಯುವ ಸುಮಾರಕ್ಕೆ ಹೊರಟೆವು. ಬರುವಾಗ್ಗೆ ಹಾತಕಲ್ಲಂಗಡಿ ಎಂಬ ಗ್ರಾಮದಲ್ಲಿ ವಸ್ತಿಮಾಡಿ ೩೦ನೇ ತಾರೀಖಿನ ದಿವಸ ಮಿರ್ಜಿಯಲ್ಲಿದ್ದೆವು. ೧ನೇ ತಾರೀಖಿನ ರಾತ್ರಿ ೩ ಬಡಿಯುವ ಸುಮಾರಕ್ಕೆ ತಂತುವುರವಾಸಸ್ಥರಾದೆವು. ಈ ಪ್ರವಾಸವು ಅನಾಯಾಸವಾಗಿ

ನಮಗೆ ಘಟಿಸಿತು. ೩/೪ ಮಂದಿಹಿಗಲಿಗೆ ಗಂಟು ಹಾಕಿಕೊಂ
ತು ಯಾತ್ರಸ್ಥರಂತೆ ಹೋಗಿ ಬರುವವಕ್ಕೂ ಸಮೂಹಗೊಂ
ತು ಸಂಸ್ಥಾನಿಕರಂತೆ ಹೋಗುವದಕ್ಕೂ ಎಷ್ಟು ವ್ಯತ್ಯಾಸವಿ
ದೆಂಬುವದು ಈಉದಾಹರಣೆಯಿಂದ ವ್ಯಕ್ತವಾಗುತ್ತದೆ. ಬಂ
ದುವೇಳೆ ಸಂಘ ಗಟ್ಟಿಕೊಂಡು ಬರಯ ವಿದ್ಯಾರ್ಥಿಗಳೇ
ಹೋದರೆ ಇಂಥ ಲನೆಂದ ಜನಕ ವಸ್ತುಜಾತಗಳನ್ನು ನೋ
ಡುವದು ಮರ್ಲಭ. ಈ ಪ್ರವಾಸಕ್ಕೆ ಮುಖ್ಯ ಕಾರಣವು
ಹರವೀರಪುರವ ಪ್ರದರ್ಶನವೇ. ಇದು ಶಾಸ್ತ್ರೀಯ ವಿಷಯು
ಗಳಿಗೆ ಸಂಬಂಧವಾದದ್ದು. ಶಾಸ್ತ್ರೀಯ ವಿಷಯಗಳು ನಮ್ಮ
ಕಾಲೇಜದಲ್ಲಿ ಕಲಿಸಲ್ಪಡುತ್ತಿರುವದರಿಂದ ಅಲ್ಲಿಗೆ ಹೋಗು
ವದು ಅವಶ್ಯವಾಯಿತು. ಮೊದಲು ಗುರುವರ್ಯರು ಕೊ
ಲ್ಲಾಪುರದಲ್ಲಿ ಶಾಸ್ತ್ರೀಯ ವಿಷಯಗಳ ಪ್ರದರ್ಶನವಾಗು
ತ್ತದಂತೆ; ಹೋಗಬೇಕು ಎಂದು ಅಂದಿದ್ದರು. ಆದೇ ಮುಂ
ದೆ ನಿಶ್ಚಯವಾಯಿತು. "ಮನಸ್ಸಿನ್ದಲ್ಲಿ ಮಾರ್ಗವಿರುತ್ತ
ದೆ" ಎಂಬ ಗಾದೆಯ ನಿಜಸ್ಥಿತಿಯನ್ನು ಈ ಆಲೋಚ
ನೆಯಿಂದ ಮನಗಂಡೆವು. ಸೃಷ್ಟಿಯೆಂಬ ಪುಸ್ತಕದೊಳಗಿ
ನ ಪಾಲಿಗಳನ್ನು ಎಷ್ಟು ವರ್ಣಿಸಿದರೂ ತೀರದು. ಅದ
ರಿಂದ ನೋಡಿದ ಚಮತ್ಕಾರಗಳನ್ನು ತಿಳಿದಷ್ಟು ಹೊರಗೆ ಹಾ
ಕುವದು ಉತ್ತಮವಾದದ್ದು, ಈ ಬ್ರಹ್ಮಾಂಡ ಕಟಾಹದೊಳ
ಗಿನ ಜನರೆಲ್ಲರು ಸಕಲ ಜೀವಾಜೀವ ಚರಾಚರ ವಸ್ತುಗಳ
ಬಗ್ಗೆ ತಿಳಿದಷ್ಟು ಶೋಧಿಸುತ್ತಿರಬೇಕು. ಶೋಧವೃತ್ತಿಗ್ರಂ
ಥಾವಲೋಕನಗಳು ಬುದ್ಧಿ ಪ್ರಾಚುರ್ಯಕ್ಕೆ ಬಲವಾದ ಕಾ
ರಣಗಳು. ವಿಚಾರ ಶಕ್ತಿಯೆಂಬ ಅಪ್ರತಿಹತವಾದ ಶಕ್ತಿಯ
ನ್ನು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ. ಸೃಷ್ಟಿಕರ್ತನ
ಸುಷ್ಟುಚಾತುರ್ಯವನ್ನು ಅರಿಯದೆ ತಮ್ಮ ವಿಚಾರ ಶಕ್ತಿ
ಯನ್ನು ನಷ್ಟಪಡಿಸುವ ಭ್ರಷ್ಟರು ಇಷ್ಟಾರ್ಥವನ್ನು ಹೊಂ
ದದೆ ಕಷ್ಟಪಡುವರೆಂಬದಕ್ಕೇನೂ ಸಂದೇಹವಿಲ್ಲ. ಜಗದಾ

ನ್ಮನ ಕೃಪೆಯ ಭಾಗವು ತನಗೆ ದೊರೆತಪ್ಪು ಘೋಷಿಸಿ ನಮ್ರವಿಯಾಗಿ ಇರುವದೇ ಪ್ರಾಣಿಗಳ ಮುಖ್ಯ ಕರ್ತವ್ಯವು ಪ್ರಾಣಿಗಳಲ್ಲಿ ಮನುಷ್ಯರೇ ಶ್ರೇಷ್ಠನು. ಅಂತಹೀಲೆ ಅವನ ಕರ್ತವ್ಯವು ಎಷ್ಟು ಗಾಂಭೀರವುಳ್ಳದ್ದಿಂಬದು ಬರಿಯಲಿಕ್ಕೆ ಜೇಡ.

ಈ ಪ್ರಯಾಸದ ಬಗ್ಗೆ ಮನಸಿನಲ್ಲಿ ವಿಚಾರ ಹೊರಟಮೇಲೆ ನಲಿಕ್ಕಂಡು ಕೊಲ್ಹಾಪುರಕ್ಕೆ ಹೋಗಿ ಪುನಃ ಧಾರವಾಡಕ್ಕೆ ಮುಟ್ಟುವವರೆಗೆ ಆದ ಯಾವತ್ತು ಸಂಗತಿಗಳು ಕ್ರಮದಿಂದ ನಿರೂಪಿಸಲ್ಪಟ್ಟಿವು. ಪ್ರಧಾನಕಾರ್ಯವಾದರೂ ತಕ್ಕಮಟ್ಟಿಗೆ ಉಲ್ಲೇಖಿಸಲ್ಪಟ್ಟಿತು. ನೋಡಿ, ತಿಳಿಮಾಡಿಕೊಂಡ ಯಾವತ್ತು ಸಂಗತಿಗಳನ್ನು ಬರೆದಿಡುವದು ಹೆಚ್ಚು ಪ್ರಯೋಜನಕರವಾಗಿರುತ್ತದೆ. ಯಾಕಂದರೆ, ಬಾಯಿಂದ ಬಹಳ ಹೊತ್ತು ವ್ಯಾಖ್ಯಾನ ಪದ್ಧತಿಯಿಂದ ಕಲಿಸಿದ ಯಾವದೊಂದು ವಿಷಯದ ಸಾರವನ್ನು ಬರೆಯಲು, ಅದು ಬೇಕಾದಾಗ ಓದಲಿಕ್ಕೆ ಸಿಗುವದು. ನೋಡಿದ್ದು, ಕೇಳಿದ್ದು, ಸ್ವತಃ ಕೃತಿಯಾಡಿದ್ದು ಮುಂತಾದೂ ಪುಸ್ತಕದಲ್ಲಿ ಇಲ್ಲದ ಕಾಗದದಲ್ಲಿ ಬರೆದಿಟ್ಟ ಸಂಗತಿಗಳು ಎಂದೂ ಮಾಜವು. ವಾಸ್ತ್ರೀಯ ಪ್ರದರ್ಶನವನ್ನು ನೋಡಲಿಕ್ಕೆ ವಾಸ್ತ್ರೀಯ ವಿಷಯದಲ್ಲಿ ತೇರ್ಗಡಿಹೊಂದಿ "ಎಂಜಿನಿಯರಿಂಗ ಕಾಲೇಜದಲ್ಲಿ" ಪಾಸಾದ ವಾಸ್ತ್ರಜ್ಞ ಗುರುಗಳು ನಮ್ಮೊಡನೆ ಬಂದಿದ್ದರು. ಇದಲ್ಲದೆ ಸಕಲ ವಿಷಯಜ್ಞರಾದ ಗುರುಗಳು ಯಾವ ವಿಷಯವನ್ನೂ ತೊಂದರೆ ತಟ್ಟುವಂತೆ ಮಾಡುತ್ತಿದ್ದಿಲ್ಲ. ಮೇಲಿಂದ ಮೇಲೆ ಈ ಯಂತ್ರಗಳನ್ನು ವ್ಯವಹಾರದಲ್ಲಿ ಯಾವ ಕೆಲಸಕ್ಕೆ ಉಪಯೋಗಿಸುತ್ತಾರೆ? ಯಾವ ದೇಶದಲ್ಲಿ? ಮುಂತಾದ ಸಂಗತಿಗಳನ್ನು ವಿನಾಲು ಕೇಳುವರು. ಕೂಡಲೆ ತಿಳಿಯದವರಿಗೆ ಹೇಳುವರು.

ಈ ಪ್ರಕಾರ ಸುಸನ್ನಾಹದೊಡನೆ ಇರುವೆ ನಾವು ಅರಿತ
ಗತಿಯನ್ನು ವ್ಯಕ್ತಪಡಿಸುವದು ಅತ್ಯವಶ್ಯಕವಾದದ್ದೆಂದು
ನಿವು ನಿರೂಪಿಸಿರುತ್ತೇವೆ.

ಈ ವೃತ್ತವನ್ನು ಬರೆಯುವವರಲ್ಲಿ ವಿಷಯಾಂತರ, ವಿಷ
ಐಕ್ಯವು, ವಿಷಯ ವಿವರಣೆಯ ನ್ಯೂನತೆ, ಮುಂತಾದ
ದೋಷಗಳೂ, ಭಾಷೆ ಸಂಬಂಧವ ತಪ್ಪುಗಳೂ ಕಂಡುಬಂದ
ಕ್ಷಮಿಸಬೇಕೆಂದು ಕೋರುತ್ತೇವೆ.

DHARWAR TRAINING COLLEGE CERTIFICATE EXAMINATION. 1890.

ಧಾರವಾಡ ಟ್ರೇನಿಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು. ೧೮೯೦.

ಸಿದ್ಧಾಂತ ಮತ್ತು ಮಹತ್ವ ಮೂಪನ.

ಎನೇ ವರ್ಷ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಮೊದಲನೇ ಪುಸ್ತಕದಲ್ಲಿ, ಎರಡು ತ್ರಿಕೋಣಗಳಲ್ಲಿ ೧೦
ಅಥವಾ ಸಮಾಂತರ ಭೂಜ ಚೌಕೋನಗಳಲ್ಲಿ (೧) ಸಮಾ
ನ ಪಾದಗಳೂ (೨) ಸಮಾನ ಎತ್ತರವೂ (೩) ಸಮಾನ ಕ್ಷೇ
ತ್ರವೂ, ಇವುಗಳಲ್ಲಿಯು ಯಾವವಾದರೂ ಎರಡು ಗುಣಗಳಿ
ದ್ದಲ್ಲಿ ನೂರನೇದು ಇರುತ್ತದೆಂದು ತೋರಿಸುವ ಸಿದ್ಧಾಂ
ತಗಳು ಯಾವವು? ಅವುಗಳ ಪ್ರತಿಜ್ಞೆಗಳನ್ನು ಬರೆಯಿರಿ.

೨. (ಅ) ಸಿದ್ಧಾಂತದ ಎನೇ ಪುಸ್ತಕದ ಮುಖ್ಯ ವಿಷಯ
ವು ಯಾವದು?

(ಬ) ಎನೇ ಪುಸ್ತಕದಲ್ಲಿ ಕೃತ್ಯ ಸಿದ್ಧಾಂತಗಳು ಯಾ ೧೦
ವವು? ಅವುಗಳಲ್ಲಿ ಏನು ಸಿದ್ಧ ಮಾಡತಕ್ಕದ್ದಿ
ರುತ್ತದೆ? ಮತ್ತು ಅವುಗಳ ಸಿದ್ಧತೆಗೋಸ್ಕ
ರ ಮೊದಲನೇ ಪುಸ್ತಕದ ಯಾವ್ಯಾವ ಸಿದ್ಧಾಂ
ತಗಳ ಸಹಾಯ ಬೇಕಾಗುತ್ತದೆ.

೫. ೨ನೇ ಪುಸ್ತಕದ ೧೦ನೇ ಸಿದ್ಧಾಂತದ ಪ್ರತಿಜ್ಞೆ ಬರೆ ೧೦
ದು ಅದನ್ನು ಸಿದ್ಧ ಮಾಡಿರಿ.

೮. ೧ನೇ ಪುಸ್ತಕದ ೩ನೇ ಸಿದ್ಧಾಂತದ ರಚನೆ ಬರಿಯು ೪
ದೆ ಸಿದ್ಧತೆಯನ್ನಷ್ಟೇ ಬರಿಯಿರಿ.

೫. ೧ನೇ ಪುಸ್ತಕದ ೫ನೇ ಸಿದ್ಧಾಂತದ ಎರಡೂ ಉಪಸಿ ೪
ದ್ಧಾಂತಗಳನ್ನು ಸಿದ್ಧ ಮಾಡಿರಿ.

೬. ಒಂದು ನಿಚ್ಚಣಿಕೆ ೪೦ ಫೂಟ ಎತ್ತರವಿದ್ದು ಅದ ೧೦
ನ್ನು ಒಂದು ಮಾರ್ಗದಲ್ಲಿಟ್ಟು ಒಂದು ಮುಗ್ಗಲಿಗಿರುವ ಗು
ನೆಗೆ ಹಚ್ಚಿದರೆ, ತಳದಿಂದ ೩೦ ಫೂಟು ಎತ್ತರದ ಮೇಲಿರು
ವ ಖಿಡಕಿಗೆ ಮುಟ್ಟುತ್ತದೆ. ಆ ಗುಟಿಯು ಎದುರಿಗಿರುವ
ಗುನೆಗೆ ಹಚ್ಚಿದರೆ ತಳದಿಂದ ೪೦ ಫೂಟು ಎತ್ತರದ ಮೇಲಿ
ರುವ ಖಿಡಿಕಿಗೆ ಬಂದು ಹತ್ತುತ್ತದೆ. ಅದರೆ ಆ ಮಾರ್ಗವು
ಎಷ್ಟು ಅಗಲುಂಟು?

೭. ಎರಡು ಚೌರಸುಗಳ ಕರ್ಣಗಳ ಬೀರೀಜು ೪೦ ೯
ಇಂಚುಗಳು ಮತ್ತು ನಜಾಬಾಕಿ ೭ ಇಂಚುಗಳು ಇದ್ದರೆ
ಆ ಚೌರಸುಗಳ ಬಾಹುಗಳ ಅಗಲವೆಷ್ಟು?

೮. ಒಂದು ನೀರಿನ ಕೊಳಗ ೨೦ ಫೂಟು ೪ ಇಂಚು ಎ ೪
ತ್ತರ, ೫ ಫೂಟು ೧೦ ಇಂಚು ವ್ಯಾಸ ಉಳ್ಳದ್ದು ಇರುತ್ತದೆ
ಅದರ ಎರಡಷ್ಟು ನೀರು ಹಿಡಿಯುವಂಥಾದ್ದಿನ್ನೊಂದು
ಕೊಳಗ ೫ ಫೂಟು ಎತ್ತರ ಮಾಡತಕ್ಕದ್ದಿದೆ; ಅದರ ವ್ಯಾಸ
ವೆಷ್ಟಿರಬೇಕು?

೯. ಒಂದು ಕಬ್ಬಿಣದ ಕೊಳವೆಯು ೪ ಫೂಟು ಉದ್ದವಿ ೧೦
ದ್ದು ಅದರ ಹೊರಗಿನ ವ್ಯಾಸವು ೦ ಫೂಟು ಇರುತ್ತದೆ.
ಮತ್ತು ಕಬ್ಬಿಣದ ತಗಡು ೬ ಇಂಚು ದಪ್ಪವಿರುತ್ತದೆ. ಅದ
ರ ಅದರ ಘನ ಫಲವೆಷ್ಟು?

೧೦. ಕೆಳಗೆ ಬರೆದ ನರ್ತುಳದ ಪರಿಘದ ಭಾಗವು ೧೫೬ ೪
ಫೂಟ ಇರುತ್ತದೆ, ಅದರ ಜ್ಯಾ ೧೦೦ ಫೂಟು ಮತ್ತು ಶರ
೧೦ ಫೂಟು ಇರುತ್ತದೆ. ಅದರೆ ಅದರ ಕ್ಷೇತ್ರವೆಷ್ಟು?

ಶಾಲಾಪತ್ರಿಕೆ.

ಪದ್ಯಂ.

ಪ್ರಯುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿಪಾಸದಾದಿಗೊಲವಿಂವೀಶತ್ರಮಂ ಮುಬ್ರಿಸಿ ॥
ನಯದಿಂದಿತ್ತಪೆಪ್ಪೋದುವಗೆ ನಗಣಂ ತೋರಲ್ಕೆಯ್ಕೊಂಬುದೈ ।
ವಯೆ ಯಿಂದೋಷನತಿದ್ವನೇಳ್ವುದುಬುಧರ್ಜ್ಞಾನಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಜೂನ ೧೮೯೯-ಅ. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ವಿದ್ಯಾಭ್ಯಾಸಕ್ಕಾಗಿ ಹಿಂದುಸ್ತಾನದಿಂದ ವಿಲಾಯತಿಗೆ ಹೋದಂಥ ವಿದ್ಯಾರ್ಥಿಗಳ ಮುಂಬೆ ಟ್ರೇನಿಂಗಕಾಲೇಜಗಳ ಇನಸ್ಪೆಕ್ಟರರಾದ ಮಿ. ಫಿಚ್ ರವರೆಗಳು ಕೆಲವು ದಿವಸಗ ಳ ಕೆಳಗೆ ಬಂದು ವ್ಯಾಖ್ಯಾನವನ್ನು ಕೊಟ್ಟರು. ಅದರಲ್ಲಿ ಪ್ರಾಥಮಿಕ ಶಿಕ್ಷಣದ ಸಂಬಂಧವಾಗಿ ಆಗುವ ವಿಚಾರವನ್ನು ನಿವರಿಸಿದ್ದು ಹ್ಯಾಗಂದರೆ:—

	ಪೌಂದು.	ರೂಪಾಯಿ.
ಸ್ಕೂಲಬೋರ್ಡುಗಳಿಂದ ಆದಖಿಲ್ಲು	೧೩,೦೦,೪೪೩	= ೧,೯೪,೦೬,೪೩೦
ಜನರ ವರ್ಗಣೆಯಿಂದ ಆದಖಿಲ್ಲು	೫,೫೪,೬೫೦	= ೧,೧೫,೪೦,೦೫೦
ಫೀ	೧೯,೪೦,೫೪೬	= ೨,೯೧,೦೪,೧೯೦
ಸರಕಾರದಿಂದ	೫೩,೭೬,೧೫೬	= ೪,೯೪,೯೦,೬೫೦
ಅಂತೂ.	೯೬,೪೫,೪೪೦	= ೧೧,೦೧,೪೪,೦೦೦

ಈ ಪ್ರಕಾರ ೧೧ ಕೋಟಿ ರೂಪಾಯಿಗಳು ಇಂಗ್ಲಂಡವ ಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚಾಗುತ್ತವೆ. ಅವುಗಳಲ್ಲಿ ೫ ಕೋಟಿ ರೂಪಾಯಿಗಳನ್ನು ಸರಕಾರದವರು ಕೊಡುತ್ತಾರೆ. ಹೀಗಿರಲಿಕ್ಕೆ, ಪ್ರಾಥಮಿಕ ಶಿಕ್ಷಣವು ಪ್ರಜೆಗಳಿಗೆ ಖರ್ಚು ಬಿಲ್ಲದೆಸಿಗಬೇಕೆಂಬ ಕಾಯದೆಯು ಹಾಸುವದ್ದರಿಂದ, ಸುಮಾ

ರು ೩ ಕೋಟಿ ರೂಪಾಯಿಗಳನ್ನು ಸರಕಾರದವರು ಹೆಚ್ಚಿಗೆ ಕೊಡುವದು ಗೊತ್ತಾಗಿದೆ. ಇದರಿಂದ ಇಂಗ್ಲಂಡದಲ್ಲಿ ಪ್ರಾಥಮಿಕ ಶಿಕ್ಷಣದ ಸಲುವಾಗಿ ೮ ಕೋಟಿ ರೂಪಾಯಿಗಳನ್ನು ಸರಕಾರದವರು ಮೆಚ್ಚಿ ಮಾಡುತ್ತಾರೆಂದು ತಿಳಿಯುತ್ತದೆ. ಇದರ ಹೊರತು ಶಾಲೆಗಳ ಇಮಾರತಿಗಾಗಿ ಸರಕಾರದವರಿಂದ ಸಿಗುವ ಹಣವು ಬೇರೆ.

ಕೆಲವು ದಿವಸಗಳ ಕೆಳಗೆ ಸ್ಕೂಲರಶಿಪ್ಪಗಳ ಸಂಬಂಧದಿಂದ ಸರಕಾರದವರು ಹೊಸ ನಿಯಮಗಳನ್ನು ಪ್ರಕಟಿಸಿದ್ದಾರೆ. ಅವುಗಳಿಂದ ಎಲ್ಲ ಜಾತಿಯ ವಿದ್ಯಾರ್ಥಿಗಳಿಗೆ ಬಂದು, ಮುಸಲ್ಮಾನರಿಗೆ ಬಂದು, ವಿದ್ಯವಲ್ಲಿ ಹಿಂದೆ ಬಿದ್ದಂಥ ಹಿಂದೂ ಜಾತಿಗಳಿಗೆ ಬಂದು ಈ ಪ್ರಕಾರ ಪ್ರತಿಯೊಂದು ಜಿಲ್ಲೆಗೆ ಮೂರು ಹೈಸ್ಕೂಲ ಸ್ಕಾಲರಶಿಪ್ಪಗಳೂ ಮೂರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪಗಳೂ ಗೊತ್ತಾಗಿವೆ. ಈ ತತ್ವವನ್ನನುಸರಿಸಿ ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಲ್ ಸ್ಕೂಲರಶಿಪ್ಪಗಳನ್ನೂ ನಾದಾರ ವಿದ್ಯಾರ್ಥಿಗಳ ಸ್ಥಳಗಳನ್ನೂ ಕೊಡಬೇಕೆಂದು ಮಿ. ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ರೂಲೆಗಳು ವಿಧಿಸಿದ್ದಾರೆ. ಇದರಿಂದ ಪ್ರತಿಯೊಂದು ಶಾಲೆಯಲ್ಲಿ ನಾದಾರ ವಿದ್ಯಾರ್ಥಿಗಳ ಸ್ಥಳಗಳೂ, ಮೂರರಲ್ಲಿ ಒಂದು ಪಾಲು ಎಲ್ಲ ಜಾತಿಯ ವಿದ್ಯಾರ್ಥಿಗಳಿಗೆ, ಒಂದು ಪಾಲು ಮುಸಲ್ಮಾನರಿಗೆ, ಒಂದು ಪಾಲು ವಿದ್ಯವಲ್ಲಿ ಹಿಂದೆ ಬಿದ್ದ ಹಿಂದೂ ವಿದ್ಯಾರ್ಥಿಗಳಿಗೆ, ಸಿಗುವವು.

ಮ್ಯುನಿಸಿಪಾಲಿಟಿಯ ಹದ್ದಿನೊಳಗಿನ ಶಾಲೆಗಳನ್ನು ಮ್ಯುನಿಸಿಪಾಲಿಟಿಯು ವಶಕ್ಕೆ ಕೊಟ್ಟು ಈಗ್ಗೆ ೬।೭ ವರ್ಷಗಳಾದವು. ಶಿಕ್ಷಣದ ಸಂಬಂಧದಿಂದ ಮ್ಯುನಿಸಿಪಾಲಿಟಿಯವರ ಕ

ರ್ಕವ್ಯವನ್ನೂ, ಮ್ಯೂನಿಸಿಪಾಲಿಟಿಗೂ ಸರಕಾರದ ಇ
ಖಾತೆಗೂ ಇರತಕ್ಕ ಸಂಬಂಧವನ್ನೂ, ಸರಕಾರದವರು
ಮ್ಯೂನಿಸಿಪಲ ಅಕ್ಟಿನ ೨೪ನೇ ಕಲಮಿನ ಆಧಾರದಿಂದ ಸ
ಿಂಗಿರಲ್ಲಿ ಕೆಲವು ನಿಯಮಗಳನ್ನು ಮಾಡಿ ಪ್ರಕಟಿಸಿ,
ಕೊತ್ತು ಮಾಡಿದರು. ಈಗ ಆ ನಿಯಮಗಳಲ್ಲಿ ೫ ವರ್ಷದ ಅ
ನುಭವದಿಂದ ಏನೇನು ಹೆಚ್ಚು ಕಡಿಮೆ ಮಾಡತಕ್ಕದ್ದಿರುತ್ತದೆ
ಎಂಬದನ್ನು ತಮ್ಮ ತಮ್ಮ ಭಾಗದೊಳಗಿನ ಕಮಿಟಿಯವರಿ
ಗೆ ಬರೆದು, ಕೂಡಿದಲ್ಲಿ ಆಯಾ ಊರುಗಳಿಗೆ ಸ್ವತಃ ಹೋಗಿ,
ಕಮಿಟಿಯವರ ಅಭಿಪ್ರಾಯಗಳನ್ನು ಇನಸ್ಪೆಕ್ಟರರು ತಿಳು
ಕೊಳ್ಳುತ್ತಾ ಇದ್ದಾರೆ. ಕಮಿಟಿಯವರು ಮಾಡಿದ ಸೂಚ
ನೆಗಳನ್ನು ತಿಳುಕೊಂಡು ಅಗಷ್ಟ ಅಥವಾ ಸಪ್ಟಂಬರ ತಿಂಗ
ಳಲ್ಲಿ ಮುಂಬಯಿ ಇಲಾಖೆಯ ಎಲ್ಲ ಇನಸ್ಪೆಕ್ಟರರು ಸಭೆಗೂ
ಡಿ ಮಿ. ಡೈರೆಕ್ಟರ ಸಾಹೇಬರವರ ಎದುರಿಗೆ ಅವುಗಳನ್ನು
ಕುರಿತು ಚರ್ಚಿಸಿ ಹೊಸ ನಿಯಮಗಳನ್ನು ಮಾಡತಕ್ಕವ
ರಿದ್ದಾರೆಂದು ತಿಳಿಯುತ್ತದೆ.

ವರ್ಷಾಪ್ತ ಪ್ರಾಂತದ ೧೯೧೫ನೇ ಇಸವಿಯ ಶಾಳಾ
ಖಾತೆಯ ರಿಪೋರ್ಟು ಪ್ರಸಿದ್ಧವಾಗಿರುತ್ತದೆ. ಅದರಲ್ಲಿ ಕ
ಮಿಶನರರಾದ ಕರ್ನಲ ಕೆ, ಜೆ, ಎಲ್, ಮ್ಯೂಕೆಂಜೀ ಹೊರೆ
ಯ ಸರಕಾರೀ ಶಾಲೆಗಳೊಳಗಿನ ಕೀಳಜಾತಿಯ ವಿದ್ಯಾ
ರ್ಥಿಗಳ ವಿಷಯವಾಗಿಯೂ ಆ ಶಾಲೆಗಳ ಶಿಕ್ಷಕರ ವಿಷಯ
ವಾಗಿಯೂ ವ್ಯಕ್ತಪಡಿಸಿದ ಅಭಿಪ್ರಾಯವೇನೆಂದರೆ:—

"ಹಿಂದುಸ್ತಾನದಲ್ಲಿ ಬಹು ಕಾಲದಿಂದ ನಡೆಯುತ್ತ ಬಂ
ದಿರುವ ಜಾತಿಭೇದವು ಬಹಳೇ ಹಾನಿಕರವಾದದ್ದಿರುತ್ತದೆ. ಆ
ದರಿಂದ ವೇಕಸುಧಾರಣೆಗೂ ದೇಶದ ಊರ್ಜಿತ ಸ್ಥಿತಿಗೂ
ಬಹಳ ಅವಶ್ಯವಾಗುತ್ತದೆ. ಇದನ್ನು ಹಿಂಬಾಲಿಸಿ ನಡೆಯು

ವದು ಮೂರ್ಖತನವಿರುತ್ತದೆ. ಕಾರಣ ಜನರಿಗೆ ಬೇರೆ ಬೇರೆ ಬಗೆಗಳಿಂದ ತಿಳಿಸಿ ಹೇಳಿ, ಪ್ರತ್ಯಕ್ಷ ಉದಾಹರಣೆಗಳನ್ನು ತೋರಿಸಿ, ಅವರನ್ನು ತಿದ್ದುವದು ನಮ್ಮ ಕರ್ತವ್ಯವಾಗಿರುತ್ತದೆ. ಬಂದು ಹೇಳಿ ಸರಕಾರೀ ಶಾಲೆಗಳು ಎಲ್ಲ ಜಾತಿಯ ಹುಡುಗರ ಸಲುವಾಗಿ ಸ್ಥಾಪಿಸಲ್ಪಟ್ಟಿರುತ್ತವೆಂದು ಖಂಡಿತವಾಗಿ ಹೇಳಿದರೆ ಇದಕ್ಕೆ ಮನಃಪೂರ್ವಕವಾಗಿ ಯಾರೂ ಅಡ್ಡಿ ಮಾಡಲಿಕ್ಕಿಲ್ಲವೆಂದು ನಾವು ನೆನಿಸುತ್ತೇವೆ. ಕೀಳಜಾತಿಯ ಹುಡುಗರ ಸಂಸರ್ಗ ಮಾಡಲಿಕ್ಕೆ ಯಾರಾದರೂ ಅನುಮತಿಸದಿದ್ದರೆ ಅವರು ಪ್ರತ್ಯೇಕವಾಗಿ ಕೂಡ್ರಬಹುದು. ಧರ್ಮನಿಷ್ಠರಾದ ಬ್ರಾಹ್ಮಣರು, ಯುರೋಪಿಯನ್ನರನ್ನು ಕೀಳ ಜಾತಿಯವರಲ್ಲಿ ಎಣಿಸುತ್ತಾರೆ; ಹೀಗಿದ್ದಾಗ್ಯೂ ಅವರು ನಮ್ಮನ್ನು ಮುಟ್ಟಲಿಕ್ಕೆ ಹಿಂದೆಮುಂದೆ ನೋಡುವದಿಲ್ಲ. ಬಂದು ಪಕ್ಷಕ್ಕೆ ಇದಕ್ಕೆ ವಿಪರೀತ ನಡತೆಯುಳ್ಳವರು ಹಲಕೆಲವರು ಇರಬಹುದು. ಇಷ್ಟರಿಂದಲೇ ಇಡೀ ಉಚ್ಚ ಜಾತಿಯ ಹಿಂದೂ ಸಮಾಜವು ಅಂಥಾದ್ದೇ ಎಂದು ಹೇಳಲಿಕ್ಕೆ ಬರುವದಿಲ್ಲ. ಅದರೆ ಜಾತಿಸಂಬಂಧದಿಂದ 'ಕಡ್ಡಿ ಬಯ್ದು ಗುಡ್ಡಾ' ಮಾಡುವವರು ಸವ್ಯಕ್ಕೆ ನಮ್ಮ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವಂಥ ಕೆಲವು ತಿಳಿಗೇಡಿ ವಿಪ್ರಕ ಜನರೇ ಇರುತ್ತಾರೆಂದು ನಾವು ಹೇಳುತ್ತೇವೆ.

ಈ ಮಾತಿನ ಪುಷ್ಟೀಕರಣಾರ್ಥವಾಗಿ ಬಂದು ಉದಾಹರಣೆಯನ್ನು ಇಲ್ಲಿ ಹೇಳಿದರೆ ಅದು ಅಪ್ರಾಸಂಗಿಕವಾಗಲಾರದೆಂದು ನಾವು ನೆನಿಸುತ್ತೇವೆ. ಕೆಲವು ವರ್ಷಗಳ ಹಿಂದೆ ನಾವು ಅಕೋಲಾದ ಡಿಪ್ಯೂಟಿ ಕಮಿಶನರಾಗಿದ್ದೆವು. ಕೊಲ್ಹಾಪುರದ ಪೋಲಿಟಿಕಲ್ ಏಜಂಟರಾದ ಕರ್ನಲ್ ಉಹ ಹೌಸ ಬೊರೆಗಳು ಖಾಮಗಾವ ಜಿಲ್ಲೆಯ ಅಸಿಸ್ಟಂಟ ಕಮಿಶನರ

ರಾಗಿದ್ದರು. ಅವರ ಕೈಕೆಳಗೆ ಹಲವು ಉತ್ತಮೋತ್ತಮ
ಶಾಲೆಗಳಿದ್ದವು. ಅವುಗಳಲ್ಲೊಂದು ಮೇಲಾದ ಶಾಲೆಯಲ್ಲಿ
ಎಷ್ಟೋ ಕೀಳ ಜಾತಿಯ ವಿದ್ಯಾರ್ಥಿಗಳಿದ್ದರು. ಅವರು ಆ
ಶಾಲೆಯ ಮುಂದಿನ ಬಂಕದಲ್ಲಿ ಬುತ್ತಿಟ್ಟಿಗೆ ಕೂಡುತ್ತಿದ್ದ
ರು. ಆ ವಿದ್ಯಾರ್ಥಿಗಳ ತೊಂದರೆಯನ್ನು ಕಂಡು ಅವರನ್ನು
ವರ್ಗದ ಶಾಲೆಗಳಲ್ಲಿಯೇ ಕೂಡಿಸಬೇಕೆಂದು ಹುಕು
ಮು ಕೊಡಲ್ಪಟ್ಟಿತು. ಕೂಡಲೇ ಬಂದು ದೊಡ್ಡ ಗೊಂದಲವೆ
ದ್ದಿತು. ಈ ಹುಕುಮನ್ನು ತೀವ್ರವಾಗಿ ರದ್ದು ಮಾಡದಿದ್ದರೆ
ನಮ್ಮ ಮಕ್ಕಳನ್ನು ಶಾಲೆ ಬಿಡಿಸುತ್ತೇವೆಂದು ಉಚ್ಚ ಜಾತಿ
ಯು ಹಿಂದೂ ವಿದ್ಯಾರ್ಥಿಗಳ ತಾಯಿತಂದೆಗಳೂ, ಮಿಕ್ಕಾದ
ವರೂ ತೆರಪಿಲ್ಲದೆ ಅರ್ಜಿಗಳನ್ನು ಕಳುಹಿಸಿದರು. ಆದರೂ
ಈ ಅರ್ಜಿಗಳಿಗೆ ಉತ್ತರಗಳು ದೊರೆಯಲಿಕ್ಕೆ ಹತ್ತಿದ ಅವ
ಕಾಶದಲ್ಲಿ ಬಬ್ಬರೂ ತಮ್ಮ ಮಕ್ಕಳನ್ನು ಶಾಲೆ ಬಿಡಿಸಲಿಲ್ಲ.
ನಾವು ಆ ಹುಕುಮನ್ನು ರದ್ದು ಮಾಡುವದಿಲ್ಲೆಂದು ನಿಶ್ಚಯ
ವಾಗಿ ತಿಳಿದ ಮೇಲೆ ಆ ಶಾಲೆಯಲ್ಲಿದ್ದ ಎಲ್ಲ ಉಚ್ಚ ಜಾತಿಯ
ಒಂದೂ ವಿದ್ಯಾರ್ಥಿಗಳು ಬಂದು ದಿನ ಬೆಳಗ್ಗೆ ಶಾಲೆಯನ್ನು
ತಿಟ್ಟು ಹೋದರೆಂತಲೂ, ಶಾಲೆಯಲ್ಲಿ ತುಸು ಕೀಳಜಾತಿಯ
ಹುಡುಗರು ಮಾತ್ರ ಉಳಿದಿರುತ್ತವೆಂತಲೂ ಕ್ಯಾಪ್ತನ್ ಉ
ಕ್ಡಿ ಹೌಸ ದೊರೆಗಳು ನಮಗೆ ರಿಪೋರ್ಟು ಮಾಡಿ ತಿಳಿಸಿ
ದರು. ನಾವು ಖಾಸಗಾವಕ್ಕೆ ಹೋಗಿ ಆ ಹುಡುಗರ ತಾ
ಯಿತಂದೆಗಳನ್ನೂ ಊರೊಳಗಿನ ಸದ್ಗೃಹಸ್ಥರನ್ನೂ ಕರಿಸಿ
ವಿಚಾರಿಸಿದೆವು. ಜನರು ತಿಳಿಗೇಡಿಗಳಾಗಿದ್ದಾರೆಂದು ತಿಳಿದು
ಬಂದರೂ ಆ ಗೊಂದಲವೇಳಲಿಕ್ಕೆ ಜನಸಮೂಹಕ್ಕಿಂತ ಶಾ
ಲೆಯೊಳಗಿನ ಶಿಕ್ಷಕ ಜನರೇ ಹೆಚ್ಚು ಕಾರಣವಾಗಿದ್ದಾರೆಂ
ದು ನಾವು ಕಂಡುಕೊಂಡೆವು. ಆ ಮೇಲೆ ಶಿಕ್ಷಕರಿಗೆ,
ನೀವು ಈ ಜನರಿಗೆ ಚನ್ನಾಗಿ ತಿಳಿಹೇಳಿ ಬಂದು ವಾರದೊಳ

ಗೆ ಹುಡುಗರನ್ನು ಬರಮಾಡಿಕೊಳ್ಳಬೇಕೆಂದು ಅಪ್ಪಣೆ ಕೊ
ಟ್ಟು ತಿರುಗಿ ಬಂದೆವು. ಆ ವಾರದ ಕೊನೆಗೆ ಹುಡುಗರು
ಕೂಡಲಿಲ್ಲ ಸಾಲೆಯ ಸ್ಥಿತಿಯು ಸುಧಾರಿಸಲಿಲ್ಲ. ನಾವು
ಕ್ಯಾಪ್ತನ್ ಉಡ್‌ಹೌಸ ದೊರೆಗಳೂ ಕೂಡಿ ವಿಚಾರ ಮಾಡಿ
ನೀವು ತೀವ್ರವಾಗಿ ಸಾಲೆಯ ಸ್ಥಿತಿಯನ್ನು ಇಂತಿಷ್ಟು ಅ
ಧಿಯಲ್ಲಿ ಸುಧಾರಿಸಿದರೆ ನೆಟ್ಟಗಾಯಿತು; ಇಲ್ಲದಿದ್ದರೆ ಕೆಲಸ
ಶಿಕ್ಷಕರನ್ನು ಕಡಿಮೆ ಮಾಡಬೇಕಾಗುವದು ಎಂದು ಅವ
ಗೆ ತಿಳುಹಿಸಿದೆವು. ಆಶ್ಚರ್ಯದ ಸಂಗತಿ ಏನಂದರೆ:—ನೇ
ಮಿಸಿದ ವೇಳೆಯು ಬರುವವರೊಳಗಾಗಿಯೇ ಆ ಶಾಲೆಯು
ತನ್ನ ಪೂರ್ವದ ಸ್ಥಿತಿಯನ್ನು ಹೊಂದಿ ಮೊದಲಿಗಿಂತ ಹೆಚ್ಚು
ಭರಭರಿಯಿಂದ ನಡೆಯಹತ್ತಿತು !! ”

ಮೇಲಿನ ಉದಾಹರಣೆಯಲ್ಲಿ ನಮ್ಮ ಶಿಕ್ಷಕ ಜನರು ಗ
ಹಿಸತಕ್ಕಂಥ ಅಂಶವು ಬಹಳವಿರುತ್ತದೆ. ವರಿಷ್ಠರು ಯಾ
ದೊಂದು ಅಪ್ಪಣೆಯನ್ನು ಕೊಟ್ಟರೆ, ಅದಕ್ಕೆ ಅವರಿಂದಾ
ಷ್ಟು ತೊಂದರೆಯು ಬೇರೆ ಜನರಿಂದ ಆಗುವದಿಲ್ಲ. ಅ
ರು ಹಾಗೆ ಮಾಡದೆ ಆ ಅಪ್ಪಣೆಯ ಉದ್ದೇಶವನ್ನು ಲಕ್ಷಕ್ಕೆ
ತಂದು ಅದಕ್ಕನುಸಾರವಾಗಿ ನಡೆಯಲಿಕ್ಕೆ ಅದರಪೂರ್ವ
ವಾಗಿ ಯತ್ನ ಮಾಡಬೇಕು; ಮತ್ತು ಆದ ಪರಿಣಾಮವನ್ನು
ಬುದ್ಧಿದಾಕ್ಷಿಣ್ಯಕ್ಕೊಳಗಾಗದೆ ಯಥಾಪ್ರಕಾರವಾಗಿ ವರಿಷ್ಠರ
ಮುಂದೆ ಇಡಬೇಕು, ಅಂದರೆ ಅವರ ಪಾಲಿಗೆ ಕೀರ್ತಿ ಬಾ
ರದೆ ಇರಲಿಕ್ಕಿಲ್ಲ.

ಗಾಯಕವಾಡ ಮಹಾರಾಜರು ತಮ್ಮ ಸಂಸ್ಥಾನದಲ್ಲಿ
ರೈತರಿಗೆ ಸುಖಪ್ರದವಾದ ಕೆಲಸಗಳನ್ನು ಎಡೆಬಿಡದೆ ಮಾಡಿ
ತ್ತಿರುವದನ್ನು ನೋಡಿದರೆ, ಅಲ್ಲಿಯ ಪ್ರಜೆಗಳ ರಾಜನಿಷ್ಠೆ
ಯು ಉತ್ತರೋತ್ತರ ಬೆಳೆಯುತ್ತ ಸಾಗುವದೆಂದು ಹೇಳ

ಕ್ಕೆ ಏನೂ ಅಡ್ಡಿಯಿಲ್ಲ. ಎಲ್ಲ ಪ್ರಜೆಗಳು ಸರಿಯೆಂದೆಣಿಸಿ, ಅವರೆಲ್ಲರಿಗೂ ಸುಖಸಾಧನವ ಮಾರ್ಗಗಳನ್ನು ತೆರಿದಿಡುವ ದು ರಾಜನೀತಿಗಳಲ್ಲಿ ಹೆಚ್ಚಿನವು. ಈ ಗೌರವದ ಸಂಗತಿ ಯನ್ನು ಮಹಾರಾಜರು ಪೂರ್ಣವಾಗಿ ಅರಿತುಕೊಂಡಿರುವ ರೆಂದು ಅವರ ವರ್ತನದಿಂದ ತಿಳಿದು ಬರುತ್ತದೆ. ಕೀಳಜಾತಿ ಯವರು ಶಿಕ್ಷಣ ಹೊಂದಲಿಕ್ಕೆ ತಕ್ಕ ಅನುಕೂಲತೆ ಇಲ್ಲದ್ದ ರಿಂದ, ಮಹಾರಾಜರು ಅವರ ಸಲುವಾಗಿ ಪತ್ತು ಬೋರ್ಡಿಂ ಗ (ಊಟ ಷಾಕಿ ಕಲಿಸುವ) ಶಾಲೆಗಳನ್ನು ಸ್ಥಾಪಿಸುವ ವಿ ಚಾರ ನಡಿಸಿದ್ದಾರೆ. ಆ ಶಾಲೆಗಳು ಬಂದೆರಡು ತಿಂಗಳಲ್ಲಿ ಯೇ ಆರಂಭವಾಗತಕ್ಕವು ಇರುತ್ತವೆ. ವಿದ್ಯಾಪ್ರಸಾರವು ಎಲ್ಲ ಸುಧಾರಣೆಗಳ ಮೂಲಾಧಾರವೆಂಬ ಮಾತನ್ನು ತಿಳಿ ದು ಅದನ್ನು ಆದಷ್ಟು ಬೆಳಿಸುವದಕ್ಕೆ ಮಹಾರಾಜರು ಮಾ ಡುವ ಪ್ರಯತ್ನವು ಶ್ಲಾಘನೀಯವಾದದ್ದು. ಅವರೆ ಈ ಹೊತ್ತಿನ ವರೆಗೆ ಯಾರೂ ಲಕ್ಷ್ಯಗೊಡದೆ ಮೂಲಿಗೆ ಬಿದ್ದ ಷ ಟ ಬಡ ಅನಾಥ ಪ್ರಾಣಿಗಳಿಗೆ ವಿದ್ಯಾಮೃತವನ್ನುಣಿಸಿ, ಅವರನ್ನು ಬೆಳಕಿಗೆ ತರುವ ಈ ಪ್ರಯತ್ನವು ಅದಕ್ಕೂ ಹೆ ಚ್ಚು ಶ್ಲಾಘನೀಯವಾದದ್ದೆಂದು ನಾವು ಎಣಿಸುತ್ತೇವೆ.

ಬೇರೆ ಬೇರೆ ದೇಶಗಳಲ್ಲಿರುವ ಪಾರ್ಲಮೆಂಟಿನ ಸ ಭಾಸದರಿಗೆ ಎಷ್ಟೆಷ್ಟು ಸಂಬಳ ದೊರೆಯುತ್ತದೆಂಬವನ್ನು ಕೆಳಗೆ ಕೊಟ್ಟಿರುತ್ತೇವೆ:—

ನ್ಯೂಸೌಲಂಡದಲ್ಲಿ ೯೦೦ ಪೌಂಡು, ಜೆಲ್ಜಿಯಮ್, ನೆದರಲಂ ಡ, ದಕ್ಷಿಣ ಆಸ್ಟ್ರೇಲಿಯ ಇವುಗಳಲ್ಲಿಯ ಪ್ರತಿಯೊಬ್ಬನಿ ಗೆ ೩೦೦ ಪೌಂಡು, ವಿಕ್ಟೋರಿಯಾ ಪ್ರಾಂತವಲ್ಲಿ ೫೦೦ ಪೌಂಡು, ಪ್ರಾನ್ಸದಲ್ಲಿ ೬೫೦ ಪೌಂಡು, ಸಂಯುಕ್ತ ಸಂ ಸ್ಥಾನಗಳಲ್ಲಿ ೧೦೦೦ ಪೌಂಡು; ಕೆಲವು ದೇಶಗಳಲ್ಲಿ ಈ ಸಂ ಬಳವ ಹೊತ್ತು ಹೊಸಿಬರುವ ಖರ್ಚನ್ನು ಸಹ ಕೊಡು

ತ್ತಾರೆ. ಕಲಕತ್ತೆಯ ಕಾಯದೆ ಕೌನ್ಸಿಲಿನ ಪ್ರತಿಯೊಬ್ಬ ಮೆಂಬರನಿಗೆ ಮತ್ತು ಮುಂಬಯಿ ಮದ್ರಾಸಗಳಲ್ಲಿ, ನೇಮಿಸಲ್ಪಟ್ಟ ಪ್ರತಿಯೊಬ್ಬನಿಗೆ ವರ್ಷಕ್ಕೆ ೧೦,೦೦೦ ರೂಪಾಯಿಗಳು ದೊರೆಯುತ್ತವೆ. ಇಂಗ್ಲಿಷ ಪಾರ್ಲಮೆಂಟಿನ ಸಭಾಸದರಿಗೆ ಮಾತ್ರ ಸಂಬಳ ಸಿಗುವದಿಲ್ಲ.

ಈಗ ಶುಕ್ರನು ಸೂರ್ಯಾಸ್ತದ ತರುವಾಯ ಪಶ್ಚಿಮ ದಿಕ್ಕಿನಲ್ಲಿ ಹೆಚ್ಚು ಕಾಂತಿಯಿಂದ ಪ್ರಕಾಶಿಸುತ್ತಾನೆ. ಚಂದ್ರನನ್ನು ಬಿಟ್ಟರೆ ಈಗ ಇವನಷ್ಟು ತೇಜಃಪುಂಜವಾದ ತಾರೆಯು ಆಕಾಶದಲ್ಲಿ ಮತ್ತೊಂದಿಲ್ಲ. ಇವನ ವಕ್ರತ್ವವು ಎಪ್ರಿಲ್ ೧೯ನೇ ತಾರೀಖಿನ ದಿವಸ ಪರಮಾವಧಿಯಾಗಿತ್ತು. ಆ ದಿವಸ ಅವನು ಕ್ಷಿತಿಜವಮೇಲೆ ಬಹಳ ಹೊತ್ತು ಇದ್ದನು. ಇವನಿಗೂ ಚಂದ್ರನಂತೆ ಕಳೆಗಳು ಇರುತ್ತವೆ. ಈಗ ಅವನನ್ನು ದುರ್ಬೀನಿನಿಂದ ನೋಡಿದರೆ ಪೂರ್ಣಚಂದ್ರನಂತೆ ಕಾಣುತ್ತಾನೆ. ಇನ್ನು ಮುಂದೆ ಅವನ ಕಳೆಗಳೂ ಕಾಂತಿಯೂ ಕಡಿಮೆ ಕಡಿಮೆಯಾಗುತ್ತಾ ಹೋಗಿ ಜುಲ್ಯೆ ೯ನೇ ತಾರೀಖಿಗೆ, ಅವನು ಅದೃಶ್ಯನಾಗುವನು.

BARODA WATER WORKS

H.H. Maharajah Sayajirao's Speech.

ಬಡೋದಾ ಪಟ್ಟಣಕ್ಕೆ ಹೊಸನೀರಿನ ಪೂರ್ಯೆಕೆಯು; ಮಹಾರಾಜರ ಭಾಷಣವು.

ಬ್ರಿಟಿಷ ಸಾಮ್ರಾಜ್ಯದ ಮೂಲಕವಾಗಿ ನಮ್ಮ ದೇಶದಲ್ಲಿ ಸುಖಶಾಂತಿಗಳು ನೆಲೆಗೊಂಡಿರುತ್ತವೆ. ಪ್ರಜಾಕಲ್ಯಾಣದ ಅನೇಕ ಕೆಲಸಗಳನ್ನು ನಮ್ಮ ಇಂಗ್ಲಿಷ ಸರಕಾರದವರೂ

ಸಂಸ್ಥಾನಿಕರೂ ಮಾಡಿಕೊಡುತ್ತಿರುತ್ತಾರೆ. ಪ್ರಜೆಗಳ ಸೌಖ್ಯಕ್ಕೆ ಮೂಲ ಕಾರಣವಾದ ಶುದ್ಧಜಲ, ಸ್ವಚ್ಛನೀರು ಮುಂತಾದ ಸಂಗತಿಗಳಿಗೆ ದಿನದಿನಕ್ಕೆ ಹೆಚ್ಚು ಲಕ್ಷ್ಯ ಕೊಡಲ್ಪಡುತ್ತಿದೆ. ಸ್ವಲ್ಪದಿವಸಗಳ ಕೆಳಗೆ ಹಿಂದುಸ್ತಾನದಲ್ಲಿ ಮುಂದರಿಸಿದ ಮುಂಬಯಿ ಪಟ್ಟಣ ನಿವಾಸಿಗಳ ನೀರಿನ ಕೊರತೆಯು ದೂರವಾದ ಸಂಗತಿಯನ್ನು ನಾವು ತಿಳಿಸಿರುತ್ತೇವೆ. ಅದೇ ಸುಮಾರಿಗೆ ಗುಜರಾಥ ಪ್ರಾಂತದೊಳಗಿನ ದೊಡ್ಡ ಸಂಸ್ಥಾನದ ಮುಖ್ಯ ಪಟ್ಟಣವಾದ ಬಡೋದೆಯ ನಿವಾಸಿಗಳು ನೀರಿನ ಸಲುವಾಗಿ ಪಡುತ್ತಿರುವ ಕಷ್ಟಗಳನ್ನು, ವರ್ಷ ಪ್ರತಿಪದೆಯ ಸುಮುಹೂರ್ತದಲ್ಲಿ ಅಲ್ಲಿಯ ಮಹಾರಾಜರು ದೂರಮಾಡಿದರೆಂದು ವರ್ತಮಾನ ಪತ್ರಗಳಿಂದ ತಿಳಿಯುತ್ತದೆ ಆ ಸಮಾರಂಭದ ವೃತ್ತಾಂತವು ತಿಳಿದುಕೊಳ್ಳಲಿಕ್ಕೆ ಕುತೂಹಲವುಳ್ಳದ್ದಾಗಿರುವದರಿಂದ ಯಥಾವಕಾಶವಾಗಿ ಅದನ್ನು ಇದರಲ್ಲಿಯೇ ಕೊಡುತ್ತೇವೆ.

ಈ ಜಲಾನಯನದ ಸಮಾರಂಭವು ಬಡೋದೆಯಲ್ಲಿರುವ ಹೊಸಮಾರ್ಕೆಟಿನ ವಿಶಾಲವಾದ ಪ್ರದೇಶದಲ್ಲಿ ಹೋದ ಮಾರ್ಚಿ ತಿಂಗಳ ೨೮ನೇ ತಾರೀಖಿಗೆ ಏರ್ಪಟ್ಟಿತು. ಆ ಸ್ಥಳದಲ್ಲಿ ಬಂದು ಕಾರಂಜಿಯನ್ನು ನಿಲ್ಲಿಸಿದ್ದರು. ಅದರ ಸುತ್ತಲೆ ಅರ್ಧ ವರ್ತುಲಾಕಾರವಾಗಿ ಸರದಾರರೂ ಸೆಟ್ಟಿಸಾವಕಾರರೂ ಕೂಡ್ಲಿಕ್ಕೆ ಅನುಕೂಲ ಮಾಡಿದ್ದರು. ಸಂಜೆಯ ೪॥ ಘಂಟೆಯ ಸುಮಾರಕ್ಕೆ ಎಲ್ಲ ಸರದಾರರೂ ಮಾನಕರಿಗಳೂ ಬೇರೆ ಜನರೂ ಬರುವಷ್ಟರಲ್ಲಿಯೇ ಗಾಯಕ್ವಾಡ ಮಹಾರಾಜರು ವಿಜಯಮಾಡಲು, ದಿವಾಣರು ಅವರನ್ನು ಎದುರುಗೊಂಡು ಸುಯೋಗ್ಯತೆಯಿಂದ ಸತ್ಕರಿಸಿ, ಅವರಿಗಾಗಿ ನಿರ್ಮಿಸಿದ ಮಹಾರ್ಹಾಸನವನ್ನು ಅಲಂಕರಿಸಬೇಕೆಂದು ವಿಜ್ಞಾಪಿಸಿದರು. ತರುವಾಯ ಚೀಫ ಇಂಜಿನಿಯರರು ಸಮಾರಂ

ಭವನ ಉದ್ದೇಶವನ್ನೂ ಆ ಸಂಬಂಧದ ವೃತ್ತಾಂತವನ್ನೂ ಯ
ಥೋಚಿತವಾಗಿ ವಿವರಿಸಿದರು. ಬಡೋದೆಯ ಜನರು ನೀ
ರಿನ ಸಂಬಂಧದಿಂದ ಪಡುತ್ತಿರುವ ಕಷ್ಟಗಳನ್ನು ದೂ
ಮಾಡಬೇಕೆಂಬ ಉದ್ದೇಶದಿಂದ ೧೮೬೬ ರಲ್ಲಿ ಖಂಡೇರಾವ
ಮಹಾರಾಜರು ಪ್ರಯತ್ನ ಮಾಡಿದರು. ಸರ್. ಟಿ. ಮಾಧವ
ರಾಯರ ಕಾಲಕ್ಕೂ ಈ ವಿಷಯದಲ್ಲಿ ವಿಚಾರ ನಡೆದು ಇದು
ದುಸ್ಸಾಧ್ಯವಾಗಿ ತೋರಿದ್ದರಿಂದ, ಅಷ್ಟಕ್ಕೆ ನಿಂತಿತು. ಈಗಿ
ನ ಮಹಾರಾಜರು ಪಟ್ಟಕ್ಕೇರಿದ ಮೊದಲನೇ ವರ್ಷವೇ ಈ
ಮಹತ್ವದ ಆಲೋಚನೆಯನ್ನು ಕೈಕೊಂಡು ಮೂವ್ಯಳದ
ಕೆರೆಯ ಮುಂದೆ ಬಡ್ಡಿ ಹಾಕಿ ಅದರಿಂದ ನೀರನ್ನು ಬಡೋ
ದೆಗೆ ತರಬಹುದೋ ಹ್ಯಾಗೆ ಎಂಬ ಮಾತಿನ ನಿಷ್ಕರ್ಷ
ಮಾಡಲಿಕ್ಕೆ ಸಂಸ್ಥಾನದ ಎಗ್ಸಿಕ್ಯುಟೀವ್ಹ ಇಂಜಿನಿಯರ
ರಾದ ರಾ. ಜಗನ್ನಾಥ ಸದಾಶಿವ ಇವರಿಗೆ ಆಜ್ಞಾಪಿಸಿದರು.
ಅವರು ಮೊಜಣೀ ಮಾಡುವ ಕಾಲಕ್ಕೆ ಬಡೋದೆ ಸಂಸ್ಥಾ
ನದಲ್ಲಿಯೇ ಕೆರೆಯನ್ನು ಮಾಡಿದರೆ ಬಳ್ಳೀದೆಂದು ಯೋಚ
ಸಿ, ಸೂರ್ಯಾ ಹೊಳೆಗೆ ಬಡ್ಡಿ ಹಾಕಲು ಮಹಾರಾಜರ
ಕೋರಿಕೆಯು ಕೈಗೂಡುವದೆಂದು ಮನಗಂಡು ಅದೇ ಪ್ರಕಾ
ರ ಬಿನ್ನವಿಸಿದರು ಈ ಆಲೋಚನೆಯು ಸರ್ವ ಸಮ್ಮತವಾ
ಗಿ, ಕೆಲಸಕ್ಕೆ ೧೮೮೫ ರಲ್ಲಿ ಆರಂಭವಾಯಿತು. ಕಾಮಗಾರಿ
ಯು ೫॥ ವರ್ಷ ನಡೆದು ಜೂನ ೧೮೯೦ನೇ ಇಸವಿಯಲ್ಲಿ
ಪೂರ್ಣವಾಯಿತು. ಈ ಕೆರೆಯ ಕ್ಷೇತ್ರವು ೫ ಚಚಿಜಿಕ
ಮೈಲು ಇರುತ್ತದೆ; ಮತ್ತು ಸುತ್ತಲು ೫೬ ಚಚಿಜಿಕ ಮೈ
ಲಿನಲ್ಲಿ ಬಿದ್ದ ನೀರೆಲ್ಲ ಇದಕ್ಕೆ ಪರಿದು ಬರುತ್ತದೆ. ಈ ಕೆಲ
ಸಕ್ಕೆ ೫೦ ಲಕ್ಷ ರೂಪಾಯಿ ಖರ್ಚಾಗಿದೆ. ಈ ಕೆರೆಯು
ಬಸ್ಮೆ ತುಂಬಿದರೆ ಆ ನೀರು ಬಡೋದೆಯ ಜನರಿಗೆ ೮
ವರ್ಷ ಸಾಕಾಗುವಂತೆ ತೋರುತ್ತದೆ. ಇಷ್ಟು ಸಂಗತಿಗಳ

ನ್ನು ಹೀಫ಼ ಇಂಜಿನಿಯರರು ಹೇಳಿದ ಬಳಿಕ ದಿವಾಣರು ಬೆ
ಕೋದೆಯ ಪ್ರಜೆಗಳು ಮಾಡಿದ ಅರ್ಜಿಯನ್ನು ಓದಿದರು.
ಆ ಅರ್ಜಿಯಲ್ಲಿ ಜನರು ತಮ್ಮ ಕೃತಜ್ಞತೆಯನ್ನು ತೋರಿ
ದ್ದಲ್ಲದೆ ಮಹಾರಾಜರ ಪ್ರಜಾಪಾಲನಾಔತ್ಸುಕ್ಯದ ಸ್ಮಾರಕ
ವಾಗಿ ಆ ಕೆರೆಗೆ 'ಸಯಾಜೀ ಸರೋವರ' ಎಂಬ ಹೆಸ
ರನ್ನು ಕೊಡಬೇಕೆಂಬ ತಮ್ಮ ಕೋರಿಕೆಯನ್ನು ವ್ಯಕ್ತಪಡಿ
ಸಿದರು. ತರುವಾಯ ಮಹಾರಾಜರು ಈ ಪ್ರಸಂಗವನ್ನು
ತೆಗೆದುಕೊಂಡು ತಮ್ಮ ರಾಜ್ಯವನ್ನಾಳುವ ಧೋರಣೆಯನ್ನು ಮು
ಮ್ಮು ತಾವು ಬಯಸುವ ಸುಧಾರಣೆಗಳನ್ನೂ ಕುರಿತು ನಾ
ಲ್ಕು ಮಾತುಗಳನ್ನಾಡಿದರು, ಹ್ಯಾಗಂದರೆ:—

ರಾಜ್ಯಭಾರವನ್ನು ಪಡಿಸಿದ ಕೂಡಲೆ ನಾವು ಅತ್ಯಂತ
ಕೊಟ್ಟ ಗೌರವದ ಕೆಲಸವು ಇದೇ ಮೊದಲನೇದೆಂದು ಇಂ
ಜಿನಿಯರರು ತಿಳಿಸುತ್ತಾರೆ. ಆ ಮಾತು ನಿಜವು; ಆದರೆ ಕೇ
ವಲ ಕಾಲಾನುಕ್ರಮದಿಂದ ನೋಡಲಾಗಿ ಲೋಹಮಾರ್ಗ
ವು ನಾವು ಚಿಂತಿಸಿದ ಮೊದಲನೇ ಕಾರ್ಯವು, ಸದ್ಯಕ್ಕೆ ನ
ಮ್ಮ ಸಂಸ್ಥಾನದಲ್ಲಿ ೧೧೮ ಮೈಲು ಲೋಹಮಾರ್ಗವು ಸಿದ್ಧ
ವಾಗಿದೆ, ಮತ್ತು ಅದು ಬೇಗನೆ ಹೆಚ್ಚಾಗುವಂತೆ ತೋರು
ತ್ತದೆ. ಈ ಲೋಹಮಾರ್ಗದಿಂದ ವ್ಯಾಪಾರಸ್ಥರಿಗೂ ಮಿ
ಕ್ಕ ಜನರಿಗೂ ಸೋಯಿಯಾದದ್ದಲ್ಲದೆ ನಮ್ಮ ಸಂಸ್ಥಾನ
ದೊಳಗಿನ ದೂರದೂರದ ಪಟ್ಟಣಗಳು ಜೋಡಿಸಲ್ಪಟ್ಟು ರಾ
ಜ್ಯಾದಾಡಳಿತದ ತಿದ್ದುಪಾಟಿಗೂ ಅನುಕೂಲವಾಗಿರುತ್ತದೆ.
ಆದರೆ ಈ ಹೊತ್ತು ನಿಮ್ಮೆಲ್ಲರ ಮುಖ ಮುದ್ರೆಯನ್ನು
ನೋಡಿ ಲೋಹಮಾರ್ಗದ ಆಲೋಚನೆಗಿಂತ ಈ ಜಲಾನ
ಯನದ ಆಲೋಚನೆಯು ಬಹು ಮಹತ್ವದ್ದೆಂತಲೂ ನಮ್ಮ
ಕಾಲಕ್ಕೆ ಪ್ರಾರಂಭವಾಗಿ ಮುಗಿದ ಕೆಲಸಗಳಲ್ಲಿ ಇದೇ ಗಣ
ನೆವಪ್ಪುಳ್ಳದ್ದೆಂತಲೂ, ನಾವು ಬಹು ಅನಂದದಿಂದ ಒಪ್ಪಿಕೊ

ಸ್ತೆತ್ತೇವೆ, ಮತ್ತು ಇದಕ್ಕೆ ನಿಮ್ಮ ಕೋರಿಕೆಯ ಮೇರೆಗೆ 'ಸಸಯಾಜೀ ಸರೋವರ' ಎಂಬ ಹೆಸರನ್ನು ಕೊಡಲಿಕ್ಕೆ ಸಮ್ಮತಿಸುತ್ತೇವೆ. ಲಕ್ಷ್ಮೀವಿಲಾಸ ಮಂದಿರಕ್ಕೆ ಹೆಚ್ಚು ಖರ್ಚು ಹತ್ತಿರುತ್ತದೆ. ಅದಕ್ಕೂ ಹೆಚ್ಚು ಮುಕರಪುರಾದೊಳಗಿನ ಮಂದಿರಕ್ಕೆ ಹತ್ತಿರುತ್ತದೆ. ಮುಕರಪುರಾದ ಮಂದಿರವು ತನ್ನ ಸುತ್ತಲಿನ ರಮಣೀಯವಾದ ತೋಟದಿಂದ ಬಹು ಮನೋಹರವಾಗಿರುತ್ತದೆ. ಆದಾಗ್ಯೂ ಅವೆರಡೂ ಇದರ ಮುಂದೆ ಏನೂ ಅಲ್ಲ. ಸರ್ವರಿಗೂ ಪ್ರಯೋಜನಕರವಾದ ಈ ಸರೋವರದ ಕೆಲಸವನ್ನು ಮಾಡಿಸಿದ್ದರಿಂದ ನಮಗೆ ಅದಷ್ಟು ಸಂತೋಷವು ಅವುಗಳಿಂದ ಆಗಲಾರದು. ದೊಡ್ಡ ಗುಮ್ಮಟದೊಡನೆ ಮೆರೆಯುವ ಕಾಲೇಜವೂ ಪರೋಪಕಾರದಿಂದ ಮನಮೆಚ್ಚಿಸುವ ದಫರಿನ್ ಆಸ್ಪಿಟಲವೂ ಇಲ್ಲಿಂದ ಕಂಗೊಳಿಸುತ್ತಿರುವ ಶಾಲಾಗೃಹವೂ ನಾವು ಕೂಡಿರುವ ಸ್ಥಳದಲ್ಲಿ ನವ್ಯಾಕ್ಕೆ ಆಗತಕ್ಕ ಮೂರ್ಕೇಟವೂ ಪಬ್ಲಿಕ ಪಾರ್ಕದೊಳಗಿನ ಕೌತುಕಾಲಯವೂ ಜೇರೆ ಸಾರ್ವಜನಿಕ ಕೆಲಸಗಳೂ ಈ ಕೆಲಸವನ್ನು ಸರಿಗಟ್ಟಲಾರವು. ಆರೋಗ್ಯಕ್ಕೆ ಬೇಕಾದ ಸಾಧನಗಳಲ್ಲಿ ಇದೇ ಮೊದಲನೇದು. ನಮ್ಮ ಪ್ರಜೆಗಳಿಗೆ ಇದನ್ನು ವಿಪುಲವಾಗಿ ಪೂರೈಸಬೇಕೆಂಬ ಹಂಬಲವು ನಮಗುಂಟು. ನಮ್ಮ ಸಂಸ್ಥಾನದಲ್ಲಿ ಪಟ್ಟಣಗಳೂ ಹಳ್ಳಿಗಳೂ ಕೂಡಿ ೩೫೦೦ ಇರುತ್ತವೆ. ಇವುಗಳಲ್ಲಿ ಚಲೋ ಬಾವಿಗಳನ್ನು ತೋಡುವ ಕೆಲಸವು ತಕ್ಕ ಮಟ್ಟಿಗೆ ನಡೆದಿರುತ್ತದೆ. ನೀರು ಬೇಗನೆ ಜೀಳುವಂಥ ಮತ್ತು ಸಿಹಿಯಾಪವಲ್ಲಿಯೇ ಹೊಳೆ ಹಳ್ಳಗಳು ಇರುವಂಥ ಗ್ರಾಮಗಳನ್ನು ಬಿಟ್ಟು ಮಿಕ್ಕ ಎಲ್ಲ ಗ್ರಾಮಗಳಲ್ಲಿ ಅಲ್ಲಿಯ ಜನಸಂಖ್ಯೆಯ ಮಾನದಿಂದ ಶೇಕಡಾ ೬ ರಿಂದ ೪ ರೂಪಾಯಿಗಳವರೆಗೆ ಪೈಚ್ಚ ಮಾಡಿದಿನ ಬಂದಕ್ಕೆ ಬೆಳಗ್ಗೆಯೂ ಸಂಜೆಗೂ

ಬಾವಿಗಳಿಂದ ನೀರನ್ನು ಸೇದಿ ದನಕರಗಳಿಗೂ ಪಾಂಥಸ್ಥರಿ
ಗೂ ಹಣಿಸುವದಕ್ಕೆ ಅಳುಗಳು ನೇಮಿಸಲ್ಪಟ್ಟಿರುತ್ತವೆ. ಆ
ರೋಗ್ಯ ರಕ್ಷಣವ ವಿಷಯಲ್ಲಿಯಾದರೂ ಬೇಗನೆ ತಿದ್ದು ಪಾ
ಟು ಆಗುವದು. ನಮ್ಮಲ್ಲಿ ಹಲಾಲಖೋರರು ಇರತಕ್ಕ
ಷ್ಟು ಇಲ್ಲ, ಅವರನ್ನು ಬೇರೆ ಸ್ಥಳಗಳಿಂದ ತರಿಸಿ, ಅವರಿಗೆ
ಅವರ ಕೆಲಸಗಳನ್ನು ಕಲಿಸಿಜಾಣರನ್ನು ಮಾಡುವ ಆ
ಲೋಚನೆಯು ನಡೆದದೆ. ಇದಕ್ಕೆ ಎಲ್ಲ ಹಳ್ಳಿಹಳ್ಳಿಗಳಲ್ಲಿ ಜ
ನಸಂಖ್ಯೆಯ ಮಾನದಿಂದ ಶೇಕಡಾ ೮ ರೂಪಾಯಿ ಮತ್ತು
ಸಂತೆ ಪೇಟೆಗಳು ನೆರೆಯುವಂಥ ದೊಡ್ಡ ದೊಡ್ಡ ಪಟ್ಟಣಗ
ಳಲ್ಲಿ ಈ ಹಣವ ಇಮ್ಮಡಿ ಹಣ ವೆಚ್ಚ ಮಾಡಲಾಗುವದು.
ಊರೊಳಗಿನ ಪಂಚರೂ, ಸಿವಿಲ್ ಸರ್ಜನ್ನರೂ, ಹೊಸದಾ
ಗಿ ನೇಮಿಸಲ್ಪಟ್ಟ ಸಾನಿಟರಿ ಕಮಿಶನರರೂ ನೇಮಗಳಿಗೆ ಸ
ರಿಯಾಗಿ ಈ ಹಣವ ವಿನಿಯೋಗವು ತಕ್ಕರೀತಿಯಿಂದ ಆ
ಗುತ್ತದೋ ಇಲ್ಲೋ ಎಂಬದನ್ನು ವಿಚಾರಿಸುವರು.
ಆರೋಗ್ಯ ರಕ್ಷಣವ ನಿಯಮಗಳನ್ನು ನಮ್ಮ ಪ್ರಜೆಗ
ಳು ಬೇಗನೆ ಅರಿತುಕೊಂಡು ಈ ಕೆಲಸಕ್ಕೆ ತ್ರಿಕರಣ ಪೂ
ರ್ವಕವಾಗಿ ನೆರವಾಗುವರೆಂದು ನಾವು ಬಯಸುತ್ತೇವೆ. ಪ್ರ
ಜೆಗಳ ಅನುಮತಿಯಿಂದಲೂ, ಸಹಾಯದಿಂದಲೂ ರಾಜ್ಯಭಾ
ರವನ್ನು ನಿರ್ವಹಿಸಲಿಕ್ಕೆ ನಾವು ಕೋರುತ್ತಿರುವದರಿಂದ ಸ
ರಕಾರದವರು ಮಾಡುವ ಕಾಯದೆಗಳನ್ನೂ ಕಾನೂನುಗಳ
ನ್ನೂ ನೇಮಣೂಕುಗಳನ್ನೂ ಜನರು ತಿಳುಕೊಂಡುತಮ್ಮ
ಅಭಿಪ್ರಾಯಗಳನ್ನು ತಿಳಿಸಲಿಕ್ಕೆ ಅನುಕೂಲವಾಗಬೇಕೆಂ
ದು ಅವನ್ನೆಲ್ಲ ಛಾಪಿಸಿ ಪ್ರಸಿದ್ಧಮಾಡುತ್ತೇವೆ; ಅದರೆ ಆ ಛಾ
ಪಿಸಿವ ಸಂಗತಿಗಳನ್ನು ತಿಳುಕೊಂಡು ತಕ್ಕ ಸಹಾಯವ
ನ್ನು ಜನರು ಕೊಟ್ಟರೆ ಸರಿ. ಈ ಮಾದರಿಯ ಸಹಾಯ
ವು ಸ್ವಲ್ಪ ಕಾಲದಲ್ಲಿಸಿ ಕ್ಷೇತೆಂದು ನಾವು ನಂಬುತ್ತೇವೆ. ಈ

ಪಟ್ಟಣವಲ್ಲಿ ಮತ್ತು ಬೇರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ
ಶಾಲೆಗಳುಸ್ಥಾಪನೆಮಾಡಿರುತ್ತವೆ. ಹಲವು ಶಾಲೆಗಳಲ್ಲಿ ಮೇ
ಲ್ತರದ ಅಭ್ಯಾಸವು ನಡೆಯುತ್ತದೆ. ನಮ್ಮ ಬಡೋದೆಯ
ಕಾಲೇಜವಲ್ಲಿ ೧೯೦೯ ಬಿ. ಎ. ಮತ್ತು ಬಿ. ಎಸ್. ಸಿ. ಪ
ರೀಕ್ಷೆಗಳವರೆಗೆ ಅಭ್ಯಾಸವು ನಡೆಯುತ್ತದೆ. ಪಟ್ಟಣದಲ್ಲಿ ಬಂ
ದು ಹೈಸ್ಕೂಲು ಸ್ಥಾಪಿಸಲ್ಪಟ್ಟಿರುತ್ತವೆ. ಕಲಾಕೌಶಲ್ಯ, ಕ
ಷಿಕರ್ಮ, ಕಾಯದೆ, ಗಾಯನ ಮುಂತಾದ ಉಪಯುಕ್ತ
ಷಯಗಳನ್ನು ಕಲಿಸುವ ಶಾಲೆಗಳೂ ಸ್ಥಾಪನೆಮಾಡಿರುತ್ತ
ವೆ. ಈ ವಿಷಯಗಳ ಮೇಲೆ ಹೊಸ ಹೊಸ ಪುಸ್ತಕಗ
ನ್ನು ರಚಿಸುವ ಮತ್ತು ಅನ್ಯ ಭಾಷೆಯಲ್ಲಿ ಬರೆದವುಗ
ನ್ನು ದೇಶಭಾಷೆಯಲ್ಲಿ ಭಾಷಾಂತರಿಸುವ ಕ್ರಮವು ಸ
ಡೆದಿವೆ. ನಾವು ಸಂಖ್ಯೆಯ ಕಡೆಗೆ ಲಕ್ಷ ಕೊಟ್ಟಷ್ಟೆ
ಪ್ರಯೋಜಕತ್ವದ ಕಡೆಗೂ ಲಕ್ಷ ಕೊಡುತ್ತೇವೆ. ನಾಳ
ಲಾಗ್ಗೆ ಚುರುಕು ಬುದ್ಧಿಯ ಕೆಲವು ವಿದ್ಯಾರ್ಥಿಗಳನ್ನು
ಆರಿಸಿ ವಿಲಾಯತಿಗೆ ಅಭ್ಯಾಸ ಮಾಡುವದಕ್ಕೆ ಕಳ
ಹಿಸುವ ಪ್ರಯತ್ನವೇ ಇದಕ್ಕೆ ಸಾಕ್ಷಿಯು. ಪ್ರಾಥಮಿಕ
ಶಿಕ್ಷಣವನ್ನು ಬಕ್ಕಲಿಗರಲ್ಲಿಯೂ ವಿದ್ಯವಲ್ಲಿ ಹಿಂದೆ ಬ
ದ್ದ ಎಲ್ಲ ಕೀಳ ಜಾತಿಗಳಲ್ಲಿಯೂ ಇನಾಮು ಪ್ರಕಂಸೆಗಳ
ಮುಖಾಂತರವಾಗಿಯಾವರೂ ಅಡಪ್ಪು ಮಟ್ಟಿಗೆ ಹಬ್ಬಿಸಬೇ
ಕೆಂಬ ನಮ್ಮ ಅಭಿಲಾಷೆಯುಂಟು. ದಿನವ ಸರಾಸರಿ ಹಾ
ಜರಿ ೧೬ ಇರುವಂಥ ಎಲ್ಲ ಹಳ್ಳಿಶಾಲೆಯ ಮಾಸ್ತರರಿಗೆ ಮುದ್ರಿ
ನ ಸಹಾಯವನ್ನೂ ವಿದ್ಯಾರ್ಥಿಗಳಿಗೆ ಪುಸ್ತಕ, ಪಾಟ ಮುಂ
ಶಾದವುಗಳನ್ನು ಕೊಡುವೆವೆಂದು ತಿಳಿಸಿರುತ್ತೇವೆ. ಈ ಸ
ಹಾಯವಿಂದ ಪ್ರಯೋಜನ ಮಾಡಿಕೊಳ್ಳತಕ್ಕ ಕೆಲಸವು
ನಮ್ಮ ಪ್ರಜೆಗಳ ಕಡೆಗಿರುತ್ತವೆ. ಕಳೆದ ಎರಡು ತಿಂಗಳ
ಳಲ್ಲಿ ೧೨೮ ಶಾಲೆಗಳು ಹೊಸದಾಗಿ ಸ್ಥಾಪಿಸಲ್ಪಟ್ಟಿರುತ್ತವೆ.

ನ್ನು ಈ ಸಂಖ್ಯೆಯು ಜೀಗನೆ ಹೆಚ್ಚಾಗುವ ಸಂಭವ
ೀರುತ್ತದೆ. ಈ ನಿಯಮವಾಗಿ ಸ್ವಲ್ಪ ದಿವಸವಾಗಿನ್ನ ರೂ
ನರು ಕಾಲೆಗಳನ್ನು ಜೀಡಹತ್ತಿದ್ದಾರೆ. ಪ್ರತಿಯೊಂದು
ೂರಶ್ಚಿ ವಿದ್ಯೆಯ ಮೂಲ ತತ್ವಗಳನ್ನಾದರೂ ಕಲಿಯಲಿಕ್ಕೆ
ನುಕೂಲವಿರಬೇಕೆಂದು ನಮ್ಮ ಅಪೇಕ್ಷೆಯುಂಟು. ಯಾ
ಂದರೆ ವಿದ್ಯೆ ಕಲಿಯುವದರಿಂದ ಜನರಿಗೆ ಬಳಿತು ಹೀನಗ
ು ತಿಳಿದು ಸ್ವಾವಲಂಬನ ಸ್ವಾಭಿಮಾನಗಳು ಬೆಳೆಯುತ್ತವೆ.
್ವಾವಲಂಬನವ ಮೇಲಾದ ಗುಣವು ನಮ್ಮ ಪ್ರಜೆಗಳಲ್ಲಿ ಬ
ಯಬೇಕೆಂಬ ಉದ್ದೇಶದಿಂದ ಗ್ರಾಮಸ್ಥರಿಗೂ ಇತರ ಸ
್ಯ ಗೃಹಸ್ಥರಿಗೂ ಊರ ಕೆಲಸಗಳನ್ನು ಸಾಗಿಸಲಿಕ್ಕೆ ಉ
ೀಮ ಬರುವಂತೆ ಹುಕುಮು ಕೊಟ್ಟಿರುತ್ತೇವೆ. ಎಲ್ಲ
ಾಡರ ಸಂಬಳಗಳನ್ನು ಸರಿಯಾಗಿ ಹೆಚ್ಚಿಸಿದ್ದಲ್ಲದೆ ಪ್ರತಿ
ೊಂದು ಗ್ರಾಮದವರು ಸರಕಾರಕ್ಕೆ ಕೊಡುವ ತೆರಿಗೆಯ
ಟ್ಟು ಹಣವ ್ಷ ಅಂಶ ಹಣವು ಪ್ರಜೆಗಳ ವಿತ್ತಜೀವಿತ
ಕ್ಷಣ ಮಾಡುವಂಥ ಪೋಲೀಸರ ಸಲುವಾಗಿ ವೆಚ್ಚ ಮಾಡ
ಡುತ್ತದೆ. ಇವೇ ಮೊದಲಾದ ಉಪಾಯಗಳಿಂದ ನುರಿತ
ವಜ್ಯದಾತೆಳಿತವೂ, ಸುರಕ್ಷಿತತೆಯೂ ಜನರ ಅಭಿವೃದ್ಧಿ
ುೂ ಪ್ರವರ್ತಿಸುವವು. ಆದರೆ ಈ ಎಲ್ಲ ಕೆಲಸಗಳು ಸ
ಕಾರದವರಿಂದಲೇ ಆಗಲಾರವು. ಸರಕಾರದವರು ಕೊಡು
ಿ ಸಹಾಯದಿಂದ ಪ್ರಯೋಜನವನ್ನು ಮಾಡಿಕೊಳ್ಳುವದು
ಮ್ಮ ಕೈಯಲ್ಲಿ ಇರುತ್ತದೆಂಬ ಮಾತನ್ನು ಮರೆಯಲಾಗ
ು. ಅಸತ್ಯವಾದ ಕರಗಳಿಂದ ಪ್ರಜೆಗಳು ಹೇಜಾಡು
ರುವವರೆಗೆ ಐರೀತಿಕ ಮಾನಸಿಕ ಸುಧಾರಣೆಗಳೂ ತಿ
ದ್ಧಿಗಳೂ ಆಗಲಾರವೆಂಬ ಮಾತನ್ನು ನಾವು ಬಲ್ಲೆವು.
ದಪ್ಪರಿಂದ ಸರಕಾರವು ಕಮಾಯಿಯ ಭಾರವನ್ನು ಕಮಿ
ಮಾಡಲಿಕ್ಕೂ ಅವನ್ನು ಎಲ್ಲರ ಮೇಲೆ ಸರಿಯಾಗಿ ಹಂಚಿ

ಹಾಕುವವರಿಗೂ ಕೊರಗಳ ಸ್ವರೂಪವನ್ನು ಎಲ್ಲರಿಗೆ ತಿಳಿಸ
ಲಿಕ್ಕೂ ನಾವು ಯತ್ನಿಸುತ್ತೇವೆ. ಇದೇ ಕಾರಣದಿಂದ ಕ
ಲವು ಕಡೆಯಲ್ಲಿ ಸರಕಾರದ ತೆರಿಗೆಯನ್ನು ಶೇಕಡಾ ೧೦ ರಿ
ದ ೫೦ ರ ವರೆಗೆ ಕಡಿಮೆ ಮಾಡಿರುತ್ತೇವೆ. ಇವಲ್ಲದೆ ಬೆ
ಸಾಯ ಮಾಡಿದ ಜನರು ಸರಕಾರಕ್ಕೆ ಇಂತಿಷ್ಟು ಹಣ ಕೊ
ಡಬೇಕೆಂದು ಕಟ್ಟು ಮಾಡಿದ್ದೇವೆ. ಎಷ್ಟೋ ವರ್ಷಗಳಿಂ
ದ ಕೊಳೆಯುತ್ತ ಬಿದ್ದ ವ್ಯಾಜ್ಯಗಳನ್ನೆಲ್ಲ ತೀರಿಸಿ ಒಟ್ಟಿಗೆ ೨೦
ಲಕ್ಷ ರೂಪಾಯಿಗಳನ್ನು ಸೂಟು ಬಿಟ್ಟಿರುತ್ತೇವೆ. ಈಗ
ಹಿಂದಿನ ಗೊಂದಲವೇನೂ ಉಳಿದಿರುವದಿಲ್ಲ. ಗೊತ್ತು ಮಾ
ದಷ್ಟು ಹಣವನ್ನು ಜನರು ಪ್ರತಿವರ್ಷ ಕೊಟ್ಟರೆ ತೀರಿತು

ಪ್ರಜೆಗಳ ಅನುಮತಿಯಿಂದ ರಾಜ್ಯವಾಳಬೇಕೆಂಬ ಆ
ಪೇಕ್ಷೆ ನಮಗಿರುತ್ತದೆಂದು ಮತ್ತೊಮ್ಮೆ ತಿಳಿಸುತ್ತೇವೆ
ಮತ್ತು ಪ್ರಜೆಗಳು ದಾಕ್ಷಿಣ್ಯವಿಲ್ಲದೆ ತಮ್ಮ ಕೊರತೆಗಳನ್ನೂ
ತಮಗಾಗುವ ತೊಂದರೆಗಳನ್ನೂ ತಿಳಿಸಬೇಕೆಂದು ಸೂಚಿ
ಸುತ್ತೇವೆ. ಸವ್ಯಕ್ಕೆ ಆದ ಸುಧಾರಣೆಗಳಿಂದ ತುಸು ತೊಂದರೆ
ಯಾಗಬಹುದು. ಆದರೆ ಕೆಲವು ದಿವಸಗಳ ಮೇಲೆ ಎಲ್ಲರಿಗೂ
ಸುಖವಾಗುವದೆಂದು ನಮಗೆ ತೋರುತ್ತದೆ. ನಮ್ಮ ಪ್ರಜೆಗಳ
ಅಭಿವೃದ್ಧಿಯನ್ನೇ ಬಯಸಿ ನಮ್ಮ ಆಡಳಿತವನ್ನು ಸುಧಾರಿ
ಸಿಕ್ಕೆ ನಮ್ಮ ಸಾಮರ್ಥ್ಯವನ್ನೆಲ್ಲ ವೆಚ್ಚ ಮಾಡುವೆವು. ಕೇ
ವು ದಿವಸಗಳ ಕೆಳಗೆ ಹೊರಗೆ ಹೋಗುವ ಸರಕುಗಳ ಮೇ
ಲಿನ ಜಕಾತಿಗಳನ್ನೆಲ್ಲ ತೆಗೆಮಹಾಕಿದ್ದಲ್ಲದೆ ಒಳಗೆ ಬರುವ
ಸರಕುಗಳ ಮೇಲಿನ ಜಕಾತಿಯನ್ನಾದರೂ ಕಡಿಮೆ ಮಾಡಿ
ರುತ್ತೇವೆ. ಅದೇ ಉದ್ದೇಶದಿಂದ ಸರಕಾರೀ ಬ್ಯಾಂಕನ್ನೂ
ತಗಾವಿ ಪದ್ಧತಿಯನ್ನೂ ಸ್ಥಾಪಿಸಿರುತ್ತೇವೆ. ನಿಮ್ಮ ಅ
ಭಿವೃದ್ಧಿಯ ಸಲುವಾಗಿ ಕಾಲಿವೆಯ ಕೆಲಸಗಳನ್ನೂ ಜೇಸಾ
ಯದ ಸುಧಾರಣೆಯನ್ನೂ, ಅರಣ್ಯ ರಕ್ಷಣೆಯನ್ನೂ ಖನಿಜಗ

ಕೋಧವನ್ನೂ ನಡಿಸಿರುತ್ತೇವೆ. ಇದಲ್ಲದೆ ದಿವಾಣೀ
ಜದಾರೀ ಮುಲ್ಕೀ ಕೆಲಸಗಳನ್ನು ಬೇರೆ ಬೇರೆ ಮಾಡಿ
ಲಸವು ತೀವ್ರವಾಗುವಂತೆ ವ್ಯವಸ್ಥೆಯನ್ನು ಮಾಡಿರುತ್ತೇ
ನಮ್ಮಲ್ಲಿ ಸುಧಾರಣೆಯು ಮಷ್ಟಕ್ಕೆ ಸುರು ಆಗಿರುತ್ತ
. ಎಲ್ಲ ಪ್ರಕಾರದ ಸುಧಾರಣೆಗಳಿಗೆ ಮೂಲವಾದ ಜಿಮಾ
ಂದಿಯು ಸುಧಾರಣೆಯನ್ನಾದರೂ ನಡಿಸಿರುತ್ತೇವೆ. ಆಲ
ವನ್ನು ತೊರೆದು ಧೈರ್ಯದಿಂದಲೂ ವ್ಯವಸ್ಥೆಯಿಂದಲೂ
ಸಾಮಾಜಿಕ ಹಿತವನ್ನು ಮುಂದಿಟ್ಟು ಪ್ರಮಾಣಿಕತನದಿಂದ
ತ್ನಿಸಿದರೆ ನಮ್ಮ ಘನತೆಯ ಪ್ರವಾಹವು ಈಸರೋವರದ
ರಿನಂತೆ ಅವ್ಯಾಹತವಾಗಿಯೂ ನಿರ್ಮಲವಾಗಿಯೂ ಹರಿ
ುವದು."

ಭಾಷಣವು ಮುಗಿದ ಬಳಿಕ ಗಾಯಕವಾಡೆ ಮಹಾರಾಜ
ಾರಂಜಿಯ ಕೀಲಿಯನ್ನು ತಿರುವಿ ನೀರನ್ನು ಹರಿಬಿ
ಟ್ಟ ಊರವರ ನಯನಜಲತಪ್ಪುವಂತೆ ಜಲಾನಯನದ
ಾರಂಭವನ್ನು ನೆರವೇರಿಸಿದರು. ಕಟ್ಟಕಡೆಗೆ ಈ ಕೆ
ಸವಲ್ಲಿ ಪರಿಶ್ರಮಗೊಂಡ ರಾ. ಜಗನ್ನಾಥ ಸದಾಶಿವ ಇವ
ಗೆ ಬಂದು ವಜ್ರದ ಉಂಗುರವನ್ನೂ ಬಂದು ಶಾಲನ್ನೂ ಮಾ
ತೋಷಿಕವಾಗಿ ಕೊಟ್ಟರು.

METHODS OF TEACHING.

ಕಲಿಸುವ ಪದ್ಧತಿಗಳು.

(೪೫೬ನೇ ಪುಟದಿಂದ ಮುಂದೆ ನಾಗರ್ಕ.)

ವಕ್ತೃತ್ವದ ನಿಯಮಗಳನ್ನು ತಿಳಿಸಿಕೊಟ್ಟರೆ, ವಿದ್ಯಾ
ಗಳು ನಾಚನೆಯಲ್ಲಿ ಪ್ರವೀಣತೆಯನ್ನು ಹೊಂದುವರೆಂತ
ತಮ್ಮ ತೊಂದರೆಯು ತಪ್ಪುವದೆಂತಲೂ ಕೆಲವು ವಿಷ್ಣ
ಜನರು ನೆನಿಸುವರು, ಆದರೆ ಸ್ವಲ್ಪ ವಿಚಾರ ಮಾಡಿದರೆ

ಈ ಅಭಿಪ್ರಾಯವು ಭ್ರಾಂತಿ ಮೂಲಕವಾದದ್ದೆಂಬ ಮಾ
ತು ಬೈಲಿಗೆ ಬರುವದು. ಬರೀ ನಿಯಮಗಳ ಜ್ಞಾನದಿಂ
ದಾ ಜಾಣರಾಗುವದು ಅಪರೂಪ. ಇನ್ನಲ್ಲದೆ ಆ ನಿಯಮಗಳನ್ನು
ತಿಳಿಸಿಕೊಡುವದರಲ್ಲಿ ಹೊತ್ತು ಗಳೆಯುವದಕ್ಕಿಂತ ತಾವೇ
ಆ ನಿಯಮಗಳನ್ನು ಚನ್ನಾಗಿ ತಿಳುಕೊಂಡು ವಿದ್ಯಾರ್ಥಿಗ
ಳಿಗೆ ಪಾಠಗಳನ್ನು ಓದಿ ತೋರಿಸಿ ಅವರ ವಾಚನವನ್ನು
ತಿದ್ದುವದಕ್ಕೆ ಶ್ರಮ ಪಟ್ಟರೆ ಅವರು ಬಯಸಿದ ಫಲವು ಸು
ಲಭವಾಗಿಯೂ ನಿಶ್ಚಯವಾಗಿಯೂ ಕೈಗೂಡುವದು. ವಾಚ
ನದ ಸಂಬಂಧದಿಂದ ಶಿಕ್ಷಕ ಜನರು ತಿಳಿದುಕೊಳ್ಳತಕ್ಕಂಥ
ಮುಖ್ಯವಾದ ನಿಯಮಗಳು ಮೂರು ಇರುತ್ತವೆ. ಅವು
ಯಾವುವೆಂದರೆ:—

೧ 'ಸ್ಪಷ್ಟೋಚ್ಚಾರ' ಅಂದರೆ ಪ್ರತಿಯೊಂದು ಅಕ್ಷರವ
ನ್ನು ಸ್ಪಷ್ಟವಾಗಿ ನುಡಿಯುವ ಸಾಮರ್ಥ್ಯವು. ಈ ಸಾಮ
ರ್ಥ್ಯವನ್ನು ಎಚ್ಚರದಿಂದ ಪಡೆಯಲಿಕ್ಕೆ ಬೇಕು. "ಘನತ
ಯ ಸಲುವಾಗಿ ಕೊಡಬೇಕಾಯಿತು" ಈ ವಾಕ್ಯದಲ್ಲಿ ಕೆ
ಳಗೆ ಗೆರೆಕೊರೆವ ಯ, ಯಿ, ಅಕ್ಷರಗಳನ್ನು ಲಕ್ಷಪೂರ್ವಕ
ವಾಗಿ ನುಡಿಯಬೇಕಾಗುತ್ತದೆಂಬ ಮಾತು ಸ್ಪಷ್ಟವದೆ. ವಾ
ಡಿಕೆಯಾಗಿ ಈ ಅಕ್ಷರಗಳನ್ನು ವಿದ್ಯಾರ್ಥಿಗಳು ಸ್ಪಷ್ಟವಾಗಿ
ಉಚ್ಚರಿಸುವದಿಲ್ಲ. ಈ ತರದ ಅಸ್ಪಷ್ಟೋಚ್ಚಾರದ ದೋ
ಷಗಳನ್ನು ತೀವ್ರ ಗೊತ್ತು ಹಿಡಿದು ಜಾಗ್ರತೆಯಿಂದ ಮಾ
ಸ್ತರರು ತಿದ್ದುತ್ತಾ ಹೋಗಲಿಕ್ಕೆ ಬೇಕು. ಸ್ವಲ್ಪ ಮುರ್ಲಕ್ಷ
ಮಾಡಿದರೆ ಈ ದೋಷವು ನೆಲೆಗೊಳ್ಳುವದು. "ಅಂತ್ಯ ವ
ರ್ಣಗಳನ್ನೂ ಉಚ್ಚಾರಸಾಮ್ಯದ ಅಕ್ಷರಗಳನ್ನೂ ಕೂ
ರಿತು ಎಚ್ಚರಿಕೆಯಿಂದ ಇರಿ" ಎಂದು ಒಬ್ಬ ವಾಚನ ಕಲಾ
ನಿಪುಣನಾದ ಗೃಹಸ್ಥನು ತಿಳಿಸುತ್ತಾನೆ.

೨ "ವಿರಾಮ" ಉತ್ತಮರೀತಿಯಿಂದ ಓದಲಿಕ್ಕೆ ಬರಬೇ

ಾದರೆ ಆರಂಭದಲ್ಲಿ ಬಹಳ ಸಾವಕಾಶವಾಗಿ ಓದಲಿಕ್ಕೆ ಬೇ
ು, ಹಾಗು ವಿರಾಮ ಚಿನ್ಹೆಗಳು ಇದ್ದಷ್ಟಕ್ಕಿಂತ ಹೆಚ್ಚು ಸ್ಥಳ
ಗಳಲ್ಲಿ ನಿಲ್ಲಲಿಕ್ಕೆ ಬೇಕು. ಈ ಗರ್ಭಿತವಾದ ವಿರಾಮದ
ಳಿಗಳು, ವಾಕ್ಯವಿಭಾಗಸೆಯನ್ನು ಅಂದರೆ ಅಖ್ಯಾಲ
ಖ್ಯಾತಗಳನ್ನೂ ಅವುಗಳ ವಿಶೇಷಣಗಳನ್ನು ವಿಂಗಡಿಸಲಿಕ್ಕೆ
ಿಲ್ಲಂಥ ಜನರಿಗೆ, ಸಹಜವಾಗಿ ತಿಳಿಯುವವು. ಹ್ಯಾಗಂದ
ೆ-ಒಬ್ಬ ಬ್ರಾಹ್ಮಣನು' ಬಿಸಿಲಿಂಳಗೆ ದಾರೀ ನಡೆದು'
ತಿದು' ನೀರಡಿಸಿ,' ಬಂದು ಈಚಲ ಮರದ ನೆರಳಿಗೆ
ೋಗಿ' ಕುಳಿತುಕೊಂಡನು. ಈ ವಾಕ್ಯವಲ್ಲಿ ವ್ಯಕ್ತ ವಿ
ಾಮ ಚಿಹ್ನೆಗಳು ಎರಡು ಇದ್ದಾಗ್ಯೂ ಗರ್ಭಿತವಿರಾಮಗ
ು (1) ಈ ಚಿಹ್ನದಿಂದ ತೋರಿಸಿದಂತೆ ಹೆಚ್ಚು ಇದ್ದದ್ದು
ಿಳಿಯುವದು. ಗರ್ಭಿತ ಮತ್ತು ವ್ಯಕ್ತ ವಿರಾಮ ಚಿಹ್ನಗ
ಳನ್ನು ಲಕ್ಷಿಸಿ ಸಾವಕಾಶವಾಗಿ ಓದುವ ಚಟವು ಬಹಳ ಪ್ರ
ತೋಜನಕರವಾದದ್ದು.

೩. ತಕ್ಕ ಸ್ವರ ಮತ್ತು (ಶಬ್ದಗಳ) ಉಚ್ಚರಣ-ಅಭಿಪ್ರಾ
ಯವು ಅಪೂರ್ಣವಿದ್ದಹಾಗೆ ಸ್ವರವನ್ನು ಏರಿಸುವದೂ ಪೂ
ರ್ಣವಾದ ಹಾಗೆ ಅದನ್ನು ಇಳಿಸುವದೂ ತಿಳಿಯದೆ, ಚಿಕ್ಕ
ಾಲಕರು ವಾಕ್ಯಗಳನ್ನು ಬಂದೇ ಸ್ವರದಿಂದ ಓದುವರು.
ಈ ದೋಷವನ್ನು ತೆಗೆದು ಹಾಕಲಿಕ್ಕೆ ಸ್ವಲ್ಪ ಆಲಸ್ಯವಾದರೆ
ಶಿಷ್ಟಕರ ಕೆಲಸವು ಮುಂದೆ ಬಹಳ ಬಿಗಿಯಾಗುವದು. ಕಾ
ಣ ಆರಂಭದಿಂದಲೇ ಮಾತಾಡಿದಂತೆ ಓದಿಸುವ ಪದ್ಧತಿ
ಯನ್ನಿಡಬೇಕು. ಈ ಪದ್ಧತಿಯು ನೆಲೆಗೊಳ್ಳಬೇಕಾದರೆ,
ಶಿಷ್ಟಕರು ಬೇರೆ ಬೇರೆ ತರದ ವಾಕ್ಯಗಳನ್ನು ಆರಿಸಿ ಅವು
ಗಳನ್ನು ತಕ್ಕಸ್ವರದಿಂದ ಓದಿಸುತ್ತಲೂ, ಇಂತೀ ವಾಕ್ಯಕ್ಕೆ
ುವ ಪ್ರತಿಯೊಂದು ಶಬ್ದದ ಸಂಬಂಧವು ಮನನವಾಗಿ, ಕೇ

ಳುವವನಿಗೆ ಓದಿದ್ದರೆ ಅರ್ಥವು ಸರಿಯಾಗಿ ತಿಳಿಯುವಂತೆ, ಆ
ಕಬ್ದವನ್ನು ನುಡಿಯುಲಿಕ್ಕೆ ಅನುಕೂಲವಾಗುವಹಾಗೆ ಅದ
ರ ಮುಂದಿನ ಪತ್ತಿಂಟು ಕಬ್ದಗಳ ಮೇಲಿಂದ ವೃಷ್ಟಿಯು
ಹಾಯುವಂತೆ ಮಾಡುತ್ತಲೂ, ಇರಬೇಕು.

ವಾಚನ—ಕಲೆಗೆ ಮೂತಾಡುವ ಸಾಮರ್ಥ್ಯದಿಂದಲೂ ಬ
ಹಳಸಹಾಯವಾಗುತ್ತದೆ. ಸ್ಪಷ್ಟವಾಗಿಯೂ ಸರಿಯಾಗಿಯೂ
ತನ್ನ ಅಭಿಪ್ರಾಯಗಳನ್ನು ತಿಳಿಸಲಿಕ್ಕೆ ಬಲ್ಲಂಥ ಹುಡುಗರು
ವಾಚನ ಕಲೆಯಲ್ಲಿ ತೀವ್ರವೇ ನೈಪುಣ್ಯವನ್ನು ಹೊಂದಬ
ಹುದು. ಈ ಸಾಮರ್ಥ್ಯವನ್ನುಂಟು ಮಾಡಲಿಕ್ಕೆ ಮಾಸ್ತರ
ಜನರು ತಕ್ಕಷ್ಟ ಲಕ್ಷಕೊಡುವದಿಲ್ಲ. ವಿದ್ಯಾರ್ಥಿಗಳು
ಕಲಿತದ್ದನ್ನು ಪುಸ್ತಕದಲ್ಲಿದ್ದ ಹಾಗೆ ಹೇಳಿದರೆ ಅಥವಾ ತಾ
ವು ಕೇಳಿದ ಪ್ರಶ್ನಕ್ಕೆ ಹಾಗೂ ಹೀಗೂ ಉತ್ತರವನ್ನು ಕೊ
ಟ್ಟರೆ ಸಾಕೆಂದು ಅವರು ಭಾವಿಸುತ್ತಾರೆ. ಇದುಬಳ್ಳೀದಲ್ಲ.
ಇವಕ್ಕೆ ಬದಲಾಗಿ ಪಾಠ ಮುಗಿದ ಬಳಿಕ, ನೀವು ಕಲಿತದ
ನ್ನು ಹೇಳಿರಿ, ನಾನು ಈಗ ಹೇಳಿದ ಕಥೆಯ ಸಾರಾಂಶವ
ನ್ನು ನಿಮ್ಮ ಕಬ್ದಗಳಿಂದಲೇ ತಿಳಿಸಿರಿ, ಎಂಬ ಪ್ರಶ್ನೆಗಳನ್ನು
ಕೇಳಿ ಪೂರ್ಣ ಉತ್ತರಗಳನ್ನು ತೆಗೆದುಕೊಂಡರೆ, ಅದರಿಂದ
ಬಹಳ ಹಿತವಾಗುವದು. ಈ ಪದ್ಧತಿಯಿಂದ ವಿದ್ಯಾರ್ಥಿಗಳಿ
ಗೆ ವಿಚಾರಾನುಕ್ರಮದ ಅಂದರೆ ವಾಕ್ಯ ಪರಂಪರೆಯ ಬೋ
ಧವಾಗುವವಲ್ಲದೆ ಕಬ್ದಗಳ ಸಾಮರ್ಥ್ಯವೂ ಪ್ರಯೋಜನ
ವೂ ತಿಳಿದು ತಕ್ಕ ಕಬ್ದವನ್ನು ತಕ್ಕ ಸ್ಥಳವಲ್ಲಿ ಸೇರಿಸುವ
ಜ್ಞಾನವಾಗುವದು. ಈ ಜ್ಞಾನವು ಕ್ಲುಪ್ತ ಪ್ರಶ್ನೋತ್ತರಗ
ಳಿಂದ ಎಂದೂ ಆಗಲಾರದು. ಈ ಪದ್ಧತಿಯು ಆರಂಭಕ್ಕೆ
ಬಿಗಿಯನಿಸುವದು. ವಿದ್ಯಾರ್ಥಿಗಳಾದರೂ ನಾಚಿಕೆಯಿಂದ
ಉತ್ತರಕೊಡದೆ ಸುಮ್ಮನಿರುವರು. ಅವರಿ ಸ್ವಲ್ಪ ಶ್ರಮಪ

ಸ್ಪಷ್ಟ ರೂಢಿ ಮಾಡಿಸಲಾಗಿ ಅವರ ಕಾರ್ಯಕ್ಷಮತೆಯು ನಷ್ಟವಾಗುವ
ದು. ವಿದ್ಯಾರ್ಥಿಗಳಲ್ಲಿ ಧೈರ್ಯವುಟ್ಟಿ ಅವರು ಸರಳವಾಗಿ
ಉತ್ತರ ಕೊಡುವರು. ವಿದ್ಯಾರ್ಥಿಗಳಿಗೆ ಸರಳವಾಗಿಯೂ
ಪ್ರಭಾವಿಕವಾಗಿಯೂ ಉತ್ತರಗಳನ್ನು ನುಡಿಯುವ ಚಟ
ವು ಹತ್ತಲಾಗಿ ಅವರ ವಾಚನದಲ್ಲಿ ಫಲಿತಾಂಶ ಸಹಜವೇ
ಗುವದು.

ಆದೇಶದ ಸಂವಾದವನ್ನಾಗಲಿ, ನಾಟಕದ ಒಂದು ಪ್ರ
ವೇಶವನ್ನಾಗಲಿ ಉತ್ತಮವಾಗಿ ಓದುವ ವಿದ್ಯಾರ್ಥಿಗಳಿಗೆ
ಕೊಟ್ಟು, ಅವನ್ನು ಅವರು ಸಿದ್ಧಮಾಡಿಕೊಂಡು
ದಮೇಲೆ ಇಡೀವರ್ಗದಮುಂದೆ ಓದುವದಕ್ಕೆ ತಾಸು ಕೊ
ಟ್ಟನ್ನು ಅನುಕೂಲತೆಯ ಪ್ರಕಾರ ಗೊತ್ತು ಮಾಡಿದಬೇ
ಕು. ಕೆಲವು ಮನೋಹರವಾದ ಗದ್ಯಗಳನ್ನೂ ಪದ್ಯಗಳ
ನ್ನು ಬಾಯಿಪಾಠ ಮಾಡಿಸಿ, ಅರ್ಥ ಜ್ಞಾನಕ್ಕೆ ತೊಂ
ದರೆ ಬರದಂತೆ ಸ್ಪಷ್ಟವಾಗಿಯೂ ಶುದ್ಧವಾಗಿಯೂ ಉ
ಚ್ಚರಿಸಬೇಕು. ಒಂದು ಪದ್ಯವನ್ನಾಗಲಿ ಒಂದು ಗದ್ಯವ
ನ್ನಾಗಲಿ ಶಿಕ್ಷಕರು ಸ್ವತಃ ಓದಿ ತೋರಿಸುವವರೆಲ್ಲಿ ವಾರ
ಕ್ಕೊಮ್ಮೆ ಅರ್ಧ ತಾಸು ವೆಚ್ಚ ಮಾಡಬೇಕು. ಲಕ್ಷವನ್ನು
ಳಕೊಳ್ಳುವಷ್ಟು ಮನೋಹರವಾದ ಭಾಗವನ್ನು ಆರಿಸಿ
ಗೆದು, ಕೇಳುವ ವಿದ್ಯಾರ್ಥಿಗಳಿಗೆ ಆನಂದವಾಗುವಂತೆ ಅ
ನ್ನು ಓದಿದರೆ, ವಾಚನದ ಮಾಧುರಿಯನ್ನು ಅವರಿಗೆ ತೋ
ರಿಸಿದಂತೆ ಆಗುವದಷ್ಟೇ ಅಲ್ಲ; ವಾಚನ ಕಲೆಯು ಆನಂ
ದ ಪಡೆವ ಮತ್ತು ಪಡಿಸುವ ಒಂದು ಮೇಲಾದ ಉಪಾಯ
ವೇ ಎಂದು ತಿಳಿದು, ಅದಕ್ಕೆ ಅವರು ಮೆಚ್ಚುವರು.

ಇದುವರೆಗೆ ಬರೆದದ್ದನ್ನು ವಿಚಾರದಿಂದ ತಿಳಿದುಕೊಂ
ಡು ಕೆಲವು ಜನ ಶಿಕ್ಷಕರು ಕೆಲಸಮಾಡಲು, ಅವರ ವಿದ್ಯಾ

ಳುವವನಿಗೆ ಓದಿದ್ದರ ಅರ್ಥವು ಸರಿಯಾಗಿ ತಿಳಿಯುವಂತೆ, ಆ
ಶಬ್ದವನ್ನು ನುಡಿಯಲಿಕ್ಕೆ ಅನುಕೂಲವಾಗುವಹಾಗೆ ಅವ
ರ ಮುಂದಿನ ಹತ್ತೆಂಟು ಶಬ್ದಗಳ ಮೇಲಿಂದ ದೃಷ್ಟಿಯು
ಹಾಯುವಂತೆ ಮಾಡುತ್ತಲೂ, ಇರಬೇಕು.

ವಾಚನ—ಕಲಿಗೆ ಮೂತಾಡುವ ಸಾಮರ್ಥ್ಯದಿಂದಲೂ ಬ
ಹಳಸಹಾಯವಾಗುತ್ತದೆ. ಸ್ಪಷ್ಟವಾಗಿಯೂ ಸರಿಯಾಗಿಯೂ
ತಮ್ಮ ಅಭಿಪ್ರಾಯಗಳನ್ನು ತಿಳಿಸಲಿಕ್ಕೆ ಬಲ್ಲಂಥ ಹುಡುಗರು
ವಾಚನ ಕಲೆಯಲ್ಲಿ ತೀವ್ರವೇ ನೈಪುಣ್ಯವನ್ನು ಹೊಂದಬ
ಹುದು. ಈ ಸಾಮರ್ಥ್ಯವನ್ನುಂಟು ಮಾಡಲಿಕ್ಕೆ ಮಾಸ್ತರ
ಜನರು ತಕ್ಕಷ್ಟು ಲಕ್ಷಕೊಡುವದಿಲ್ಲ. ವಿದ್ಯಾರ್ಥಿಗಳು
ಕಲಿತದ್ದನ್ನು ಪುಸ್ತಕದಲ್ಲಿದ್ದ ಹಾಗೆ ಹೇಳಿದರೆ ಅಥವಾ ತಾ
ವು ಕೇಳಿದ ಪ್ರಶ್ನೆಕ್ಕೆ ಹಾಗೂ ಹೀಗೂ ಉತ್ತರವನ್ನು ಕೊ
ಟ್ಟರೆ ಸಾಕೆಂದು ಅವರು ಭಾವಿಸುತ್ತಾರೆ. ಇದುಬಳ್ಳೀದಲ್ಲ.
ಇವಕ್ಕೆ ಬದಲಾಗಿ ಪಾಠ ಮುಗಿದ ಬಳಿಕ, ನೀವು ಕಲಿತದ
ನ್ನುಹೇಳಿರಿ, ನಾನು ಈಗ ಹೇಳಿದ ಕಥೆಯ ಸಾರಾಂಶವನ್ನು
ನಿಮ್ಮ ಶಬ್ದಗಳಿಂದಲೇ ತಿಳಿಸಿರಿ, ಎಂಬ ಪ್ರಶ್ನೆಗಳನ್ನು
ಕೇಳಿ ಪೂರ್ಣ ಉತ್ತರಗಳನ್ನು ತೆಗೆದುಕೊಂಡರೆ, ಅದರಿಂದ
ಬಹಳ ಹಿತವಾಗುವದು. ಈ ಪದ್ಧತಿಯಿಂದ ವಿದ್ಯಾರ್ಥಿಗಳಿ
ಗೆ ವಿಚಾರಾನುಕ್ರಮದ ಅಂದರೆ ವಾಕ್ಯ ಪರಂಪರೆಯ ಬೋ
ಧವಾಗುವದಲ್ಲದೆ ಶಬ್ದಗಳ ಸಾಮರ್ಥ್ಯವೂ ಪ್ರಯೋಜನ
ವೂ ತಿಳಿದು ತಕ್ಕ ಶಬ್ದವನ್ನು ತಕ್ಕ ಸ್ಥಳವಲ್ಲಿ ಸೇರಿಸುವ
ಜ್ಞಾನವಾಗುವದು. ಈ ಜ್ಞಾನವು ಕ್ಲುಪ್ತ ಪ್ರಶ್ನೋತ್ತರಗ
ಳಿಂದ ಎಂದೂ ಆಗಲಾರದು. ಈ ಪದ್ಧತಿಯು ಆರಂಭಕ್ಕೆ
ಬಿಗಿಯೆನಿಸುವದು. ವಿದ್ಯಾರ್ಥಿಗಳಾದರೂ ನಾಚಿಕೆಯಿಂದ
ಉತ್ತರಕೊಡದೆ ಸುಮ್ಮನಿರುವರು. ಅವರಿಗೆ ಸ್ವಲ್ಪ ಶ್ರಮಪ

ಪ್ಪ ರೂಢಿ ಮಾಡಿಸಲಾಗಿ ಅವರ ಕಾರ್ಯವು ಸಫಲವಾಗುವ
ು. ವಿದ್ಯಾರ್ಥಿಗಳಲ್ಲಿ ಧೈರ್ಯವುಟ್ಟಿ ಅವರು ಸರಳವಾಗಿ
ಉತ್ತರ ಕೊಡುವರು. ವಿದ್ಯಾರ್ಥಿಗಳಿಗೆ ಸರಳವಾಗಿಯೂ
ಸ್ವಾಭಾವಿಕವಾಗಿಯೂ ಉತ್ತರಗಳನ್ನು ನುಡಿಯುವ ಚಟ
ವು ಹತ್ತಲಾಗಿ ಅವರ ವಾಚನದಲ್ಲಿ ಉಪಾರ್ಜವು ಸಹಜವೇ
ಆಗುವದು.

ಉಪದೇಶವ ಸಂವಾದವನ್ನಾಗಲಿ, ನಾಟಿಕವ ಬಂದು ಪ್ರ
ಸಂಗವನ್ನಾಗಲಿ ಉತ್ತಮವಾಗಿ ಓದುವ ವಿದ್ಯಾರ್ಥಿಗಳಿಗೆ
ಕೊಡಿಸಿಕೊಟ್ಟು, ಅವನ್ನು ಅವರು ಸಿದ್ಧಮಾಡಿಕೊಂಡು
ಎಂದಮೇಲೆ ಇಡೀವರ್ಗದಮುಂದೆ ಓದುವದಕ್ಕೆ ತಮ್ಮ ಹೊ
ಚ್ಚನ್ನು ಅನುಕೂಲತೆಯ ಮೇರೆಗೆ ಗೊತ್ತು ಮಾಡಿಡಬೇ
ಕು. ಕೆಲವು ಮನೋಹರವಾದ ಗದ್ಯಗಳನ್ನೂ ಪದ್ಯಗಳ
ನ್ನೂ ಬಾಯಿಪಾಠ ಮಾಡಿಸಿ, ಅರ್ಥ ಜ್ಞಾನಕ್ಕೆ ತೊಂ
ದರೆ ಬರಮಾತೆ ಸ್ಪಷ್ಟವಾಗಿಯೂ ಶುದ್ಧವಾಗಿಯೂ ಅ
ನಿಸುತ್ತಿರಬೇಕು. ಬಂದು ಪದ್ಯವನ್ನಾಗಲಿ ಬಂದು ಗದ್ಯವ
ನ್ನಾಗಲಿ ಶಿಕ್ಷಕರು ಸ್ವತಃ ಓದಿ ತೋರಿಸುವದರಲ್ಲಿ ಬಾರ
ಕೊಟ್ಟೂ ಅರ್ಥ ತಾನು ಬೆಚ್ಚ ಮಾಡಬೇಕು. ಲಕ್ಷವನ್ನು
ಎಳಕೊಳ್ಳುವಷ್ಟು ಮನೋಹರವಾದ ಭಾಗವನ್ನು ಆರಿಸಿ
ತೆಗೆದು, ಕೇಳುವ ವಿದ್ಯಾರ್ಥಿಗಳಿಗೆ ಆನಂದವಾಗುವಂತೆ ಅ
ದನ್ನು ಓದಿದರೆ, ವಾಚನದ ಮಾಧುರಿಯನ್ನು ಅವರಿಗೆ ತೋ
ರಿಸಿದಂತೆ ಆಗುವದಿಷ್ಟೇ ಅಲ್ಲ ವಾಚನ ಕಲೆಯು ಆನಂ
ದ ಪಡುವ ಮತ್ತು ಪಡಿಸುವ ಬೂದು ಮೇಲಾದ ಉಪಾಯು
ವೇ ಎಂದು ತಿಳಿದು, ಅದಕ್ಕೆ ಅವರು ಬೆಚ್ಚುವರು.

ಇದುವರೆಗೆ ಬರೆದದ್ದನ್ನು ವಿಚಾರದಿಂದ ತಿಳಿದುಕೊಂ
ಡು ಕೆಲವು ಜನ ಶಿಕ್ಷಕರು ಕೆಲಸಮಾಡಲು, ಅವರ ವಿದ್ಯಾ

ಥಿಗಳು ವಾಚನದಲ್ಲಿ ತಕ್ಕಮಟ್ಟಿಗೆ ನಿಪುಣರಾಗಿರುತ್ತಾ
ದು ಕಲ್ಪಿಸುವಾ. ಅವರು ಓದಲಿಕ್ಕೆ ಹೇಳಿದ ಕೂಡಲೇ
ಬಿಯೂಗದೆ ಅರ್ಥತಿಳುಕೊಂಡು ಸರಳವಾಗಿ ಓದುತ್ತಾ
ವೂ ಗೃಹಿಸುವಾ. ಇಷ್ಟಕ್ಕೆ ಶಿಕ್ಷಕರ ಕೆಲಸವಾಯಿತೋ?
ಲವು ಶಿಕ್ಷಕರು ಇಷ್ಟಕ್ಕೆ ತಮ್ಮ ಕೆಲಸ ಮುಗಿಯಿತೆಂದು ತ
ಯುತ್ತಾರೆ. ಹೆಚ್ಚಿನ ಜ್ಞಾನ ಸಂಪಾದನೆಯ ಸಾಧನವನ
ಅವರಿಗೆ ಮಾಡಿಕೊಟ್ಟರುತ್ತೇವೆಂತಲೂ, ಇನ್ನು ಅವರ ಸ
ಬಂಧವಾಗಿ ಮೂಡತಕ್ಕದ್ದೇನೂ ಉಳಿದಿಲ್ಲವೆಂತಲೂ ತರ್ಕಿಸ
ತ್ತಾರೆ; ಮತ್ತು ವಾಚನ ಕಲಿಗೀತ ಇತರ ಜ್ಞಾನ ಸಂಪ
ದನವು ಹೆಚ್ಚು ಮಹತ್ವದ್ದೆಂದು ತಿಳಿದು ಘಟ್ಟಿಯಾಗಿ ಓದ
ವ ರೂಢಿಯನ್ನೇ ಕಟ್ಟಿಬೆಳೆಸುತ್ತಾರೆ. ಅವರಿಗೆ ಈ ಕ್ರ
ಯ ಪ್ರಯೋಜನವನ್ನು ಅವರು ಸರಿಯಾಗಿ ತಿಳಿದುಕೊಂ
ಡರೆ ಹೀಗೆ ಎಂದೂ ಮಾಡಲಿಕ್ಕಿಲ್ಲ. ಹೊತ್ತಿನೊಳಗೆ ಸಾ
ಪ್ತ ಸಾಧಿಸಿ ಈ ಅಭ್ಯಾಸವನ್ನು ತಕ್ಕಮಟ್ಟಿಗೆ ಮಾಡಿಸ
ದೆ ಬಿಡಲಿಕ್ಕಿಲ್ಲ. ಉತ್ತಮ ರೀತಿಯಿಂದ ಓದಬಲ್ಲವನು ತ
ನ್ನ ಅಪ್ಪರಿಷ್ಟರ ಸುಖಸಂತೋಷಕ್ಕೂ ಜ್ಞಾನಾಭಿವೃದ್ಧಿಗೂ
ಕಾರಣವಾಗುತ್ತಾನೆ. ಅವರಿಂದ ವಾಚನ ನೈಪುಣ್ಯವನ್ನು
ಪಡೆವಂಥವನು ಬಾದು ಕುಟುಂಬದಲ್ಲಿ ಇರುವದು ಎಷ್ಟು
ಅವಶ್ಯಕವೆಂಬವನ್ನು ಬೇರೆ ಹೇಳಬೇಕಾಗಿಲ್ಲ.

ಉತ್ತಮ ವಾಚನವೆಂದರೆ ರಂಗಭೂಮಿಗೆ ಅನುರೂಪ
ವಾವ ಅಭಿನಯಗಳುಳ್ಳದ್ದಿರಬೇಕೆಂದು ನಮ್ಮ ಅಭಿಪ್ರಾ
ಯವಲ್ಲ, ಅದರಲ್ಲಿ ಅಮಿ ಸರಳವೂ ಸ್ಪಷ್ಟವೂ ಸ್ವಾಭಾವಿಕವೂ
ಇರುವದಲ್ಲದೆ ಕೇಳುವವರು ತಾವಾಗಿಟ್ಟಲೆ ಆನಂದದಿಂದ
ಕೇಳಲಿಕ್ಕೆ ತಕ್ಕದ್ದಾಗಿಯೂ ಗ್ರಂಥಕರ್ತನ ಅಭಿಪ್ರಾಯವ

ನ ಶ್ರೋತೃ ಸಮೂಹಕ್ಕೆ ಎಳ್ಳಷ್ಟು ಬಿಡದೆ ಯಥಾರ್ಥವಾ
ತಿಳಿಸುವಂಥಾದಾಗಿಯೂ ಇರತಕ್ಕದ್ದು.

ವಾಚನವು ಎರಡನೆಯವರ ಅಭಿಪ್ರಾಯಗಳನ್ನು ಪ್ರಕ
ಸುವಂಥ ಕೇವಲ ಗೌಣವಾದ ಕಲೆಯೆಂದು ನಾವು ಎಣಿ
ಕೂಡದು. ತಿಳುವಳಿಕೆಯನ್ನೂ ರಸಿಕತೆಯನ್ನೂ ಬೆಳೆ
ವವಕ್ಕೆ ಇದೊಂದು ಸಾಧನವೇ ಇರುತ್ತದೆ. ಕಲಿಸೋ
ವು ಕಲಿಯುವವರ ಬಾಯಿ ಅಂಗವಾಗಿರುತ್ತದೆಂಬುದು ಎಲ್ಲ
ಗೆ ಗೊತ್ತುಂಟು. ಅದೇಮೇರೆಗೆ ಘಟ್ಟಯಾಗಿ ಓದೋಣ
ಳು, ಪರರ ಸಲುವಾಗಿ ಓದೋಣವೂ ಕೇಳುವವರ ಜ್ಞಾನ

---

* ಉತ್ತಮವಾಚನದ ಲಕ್ಷಣಗಳು—ಸ್ಪಷ್ಟವಾಗಿಯೂ ಸು
ವಾಗಿಯೂ ಗ್ರಂಥಕರ್ತನ ಅಭಿಪ್ರಾಯವನ್ನು ಗ್ರಹಿಸಿ ಅವನ ಭಾವ
ನ್ನು ಪೂರ್ಣವಾಗಿ ತಿಳುಕೊಂಡು ತಲ್ಲೀನನಾಗಿ ಎರಡನೆಯವರಿಗೆ ತಿಳಿ
ುವಂತೆಯೂ ಕೇಳುವವರ ಮನಸಿನಲ್ಲಿ ಅದೇಭಾವವು ಹುಟ್ಟುವಂತೆ
ಯೂ ಓದುವದು ಉತ್ತಮವಾಚನವು. ಮಾಡಿಕೆಯಾಗಿ ಕೆಳಗೆ ಬರೆದ ದೋ
ಷಗಳು ಇಲ್ಲದಂಥ ವಾಚನವು ಚಲೋವಾಚನವೆಂದು ಎಣಿಸಲಾಗುವದು.
ದೋಷಗಳು ಯಾವವಂದರೆ ೧ ಕೂಗಾಟ, ಅಸ್ಪಷ್ಟೋಚ್ಚಾರ, ಪದ್ಯ
ನ್ನ ಬಂದರೊಳಗೊಂದು ಸೇರಿಸಿ ಗಡಬಿಡಿಯಿಂದ ಓದೋಣ; ೨
ಕ್ಯಖಂಡದ ಇಲ್ಲವೆ ವಾಕ್ಯವೆ ಇಲ್ಲವೆ ಕವಿತೆಯ ಚರಣದ ಅಂತ್ಯಕ್ಕೆ,
ರ್ಥವನ್ನು ಲಕ್ಷಕ್ಕೆ ತಾರದೆ ದನಿಯನ್ನ ಇಳಿಸುವದು ಅಥವಾ
ರಿಸುವದು ಪ್ರಾಣಾಸ್ಯವಿರಲಿ, ಇದೆ ಇರಲಿ ಅದನ್ನ ಲಕ್ಷಿಸದೆ ಕಡೆ
ದು ಪದ್ಯಗಳನ್ನು ಬತ್ತಿ ನಾಡಿಯೋಣ. ೪ ವ್ಯಕ್ತ ಮತ್ತು ಗರ್ಭಿ
ತ ಚಿಹ್ನಗಳಿಗೆ ಲಕ್ಷಕೊಡದೆ ಉದ್ದಕ್ಕೆ ಓದೋಣರ ನಿಲ್ಲಬಾರದಂಥ
ಸ್ಥಳಗಳಲ್ಲಿ ನಿಲ್ಲೋಣ. ೫ ಬಂದೇ ಸ್ವರದಿಂದ ಓದೋಣ. ೬ ವಾ
ಕ್ಯದ ಸ್ವರೂಪವನ್ನ ಭಾವವನ್ನೂ ಲಕ್ಷಿಸದೆ ಎಲ್ಲವಾಕ್ಯಗಳನ್ನು ಸಾ
ಧಾರಣವಾಕ್ಯದಂತೆ ಓದೋಣ, ಮತ್ತು ಅರ್ಥಕ್ಕೆ ಸರಿಯಾಗಿ ಸ್ಪಷ್ಟೋ
ಚ್ಚಾರಣವಲ್ಲಿ ಆಗುತ್ತಿರುವ ಹಿಚ್ಚುಕಡಿಮೆಗಳನ್ನ ಲಕ್ಷಕ್ಕೆ ತಾರದೆ ಹಾ
ಗೂ ಹೀಗೂ ಓದೋಣ ಮುಂತಾದವುಗಳು.

ಬೆಳಿಸುವಂತೆ, ಅವರನ್ನು ಆನಂದಗೊಳಿಸುವಂತೆ, ಹು
ದುಂಬಿಸುವಂತೆ ಓದೋಣವೂ, ತನ್ನ ಜ್ಞಾನಾಭಿವೃದ್ಧಿಯ
ನ್ನು ಮತ್ತು ಸುಖಸಂತೋಷಗಳನ್ನು ಉಂಟುಮಾಡುವ
ಬುದು ಮೇಲಾದ ಮಾರ್ಗವಾಗಿರುತ್ತದೆ. ಉತ್ತಮ ಗ್ರಂ
ಥಗಳನ್ನು ಉತ್ತಮವಾಗಿ ಓದಲಿಕ್ಕೆ ಅಥವಾ ಅನ್ನಲಿಕ್ಕೆ ಬಂ
ದರೆ ಮಾತ್ರ ನಮಗೆ ಅವುಗಳ ಪೂರ್ಣಜ್ಞಾನವಾಯಿತೆಂದು
ಹೇಳಬಹುದು. ಮನುಷ್ಯನ ಅಭಿಪ್ರಾಯಗಳನ್ನು ತಿಳಿಸಲಿ
ಕ್ಕೆ ಮನುಷ್ಯನ ಮಾತು ಮೇಲಾದ ಸಾಧನವಾಗಿರುತ್ತದೆ.
ಅದರಿಂದ ಮನುಷ್ಯನ ವಿಚಾರದ ಮತ್ತು ಮನಃ ಪ್ರವೃತ್ತಿ
ಗಳ ಯಥಾರ್ಥ ಜ್ಞಾನವಾಗುವಂತೆ ಬೇರೆ ಯಾವ ಸಾಧನ
ದಿಂದಲೂ ಆಗಲಾರದು. ಈ ಸಂಗತಿಯನ್ನು ಲಕ್ಷಕ್ಕೆ ತಂ
ದರೆ ಮನಸಿನ ವ್ಯಾಪಾರಕ್ಕೂ ನುಡಿಯುವ ಮಾತಿಗೂ ನಿ
ಕಟ ಸಂಬಂಧವಿರುತ್ತದೆಂತಲೂ ಶಿಕ್ಷಕ ಜನರು ತಮ್ಮ ವಿ
ದ್ಯಾರ್ಥಿಗಳ ಮಾತನ್ನು ಅರ್ಥಪುಷ್ಟವನ್ನೂ, ನಿರ್ದೋಷ
ವಾದವನ್ನೂ, ಅಚ್ಚುಕಟ್ಟಾದವನ್ನೂ, ಮನೋಹರವಾದವ
ನ್ನೂ ಮಾಡಲಿಕ್ಕೆ ಯತ್ನಿಸಿದರೆ, ಅದರಿಂದ ಅವರ ನೀತಿ
ಯೂ ಬುದ್ಧಿಯೂ ವಿಕಾಸ ಹೊಂದಲಿಕ್ಕೆ ಬಹಳ ಸಹಾಯವಾ
ಗುವದೆಂತಲೂ ತೋರುವದು.

ಈ ಕಲಿಯುಷ್ಟ ಪ್ರಯೋಜನಕರವಾದ ಕಲಿಯು ಯಾ
ವದೂ ಇಲ್ಲ. ಇದರ ಅವಶ್ಯಕತೆಯು ನಮಗೆ ಅಗಾಗ್ಗೆ ತೋ
ರುತ್ತದೆ. ಅವದ್ದರಿಂದ ಇದನ್ನು ಬೆಳಸಲಿಕ್ಕೆ ಶ್ರಮಪಟ್ಟಷ್ಟು
ಲಾಭವೇ ಆಗುವದು. ಮುಂಬಯಿ ಇಲಾಖೆಯ ಡಿಪ್ರೂಟಿ ಎ
ಜ್ಯುಕೇಶನಲ್ ಇನಸ್ಪೆಕ್ಟರರ ಸಲುವಾಗಿ ಮಾಡಿದ ಕಾಯದೆ
ಯು ತಿಳಿಸುವದೇನಂದರೆ—ಉತ್ತಮವಾಚನವು, ಕಾಲಿಯ
ಸುಸ್ಥಿಯು ಮತ್ತು ಮೇಲಾದ ಅಧ್ಯಾಪನದ ಕುರುಹು ಎಂದು
ಎಣಿಸಲಾಗುವದು.

ವರ್ಗಣೀ ವಸೂಲು.*

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ಧಾರವಾಡ ಡಿ. ಎ. ಇನಸ್ಪೆಕ್ಟರರ ಕಡಿಯಿಂದ ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಲೋಕಲ್‌ಬೋರ್ಡ್ ಸ್ಕೂಲುಗಳ ಬಗ್ಗೆ ಸನ ೧೯೨೦ನೇ ಇಸವಿಯ ಮಾರ್ಚ ತಿಂಗಳ ಬಾಬತು.	೦೬	೦	೯
ಧಾರವಾಡ ಕನ್ನಡ ೧ನೇ ನಂಬರ ಸಾಲಿಯ ಮಾಸ್ತರರ ಕಡೆಯಿಂದ ಧಾರವಾಡ ಮ್ಯುನಿಸಿಪಾಲಿಗಳ ಬಾ॥ ೯೦ನೇ ಸಾಲಿನ ೨ನೇ ತಿಮ್ಮಾಹಿಯ ಬಗ್ಗೆ.	೩	೦	೯

ವಿಜಾಪೂರ ಜಿಲ್ಲೆ.

ವಿಜಾಪೂರ ಡಿ. ಎ. ಇನಸ್ಪೆಕ್ಟರರ ಕಡಿಯಿಂದ ವಿಜಾಪೂರ ಜಿಲ್ಲೆಯೊಳಗಿನ ಯಾವತ್ತು ಲೋಕಲ್‌ಬೋರ್ಡ್ ಹಾಗು ಮುನಿಸಿಪಲ್ ಸ್ಕೂಲುಗಳ ಬಗ್ಗೆ ೧೯೨೦ನೇ ಇಸವಿಯ ಮಾರ್ಚ ಎಪ್ರಿಲ್ ತಿಂಗಳುಗಳ ಬಾಬತು.	೮೦	೨	೬

ಬೆಳಗಾವ ಜಿಲ್ಲೆ.

ಬೆಳಗಾವ ಡಿ. ಎ. ಇನಸ್ಪೆಕ್ಟರರ ಕಡಿಯಿಂದ ಬೆಳಗಾವ ಜಿಲ್ಲೆಯೊಳಗಿನ ಯಾವತ್ತು ಲೋಕಲ್‌ಬೋರ್ಡ್ ಸಾಲಿಗಳ ಬಗ್ಗೆ ಫೆಬ್ರುವಾರಿ, ಮಾರ್ಚ ಎಪ್ರಿಲ್ ತಿಂಗಳುಗಳ ಬಾಬತು.	೫೦	೦	೬

ಕಾರವಾರ ಜಿಲ್ಲೆ.

ಕಾರವಾರ ಡಿ. ಎ. ಇನಸ್ಪೆಕ್ಟರರ ಕಡಿಯಿಂದ ಕಾರವಾರ ಜಿಲ್ಲೆಯೊಳಗಿನ ಯಾವತ್ತು ಲೋಕಲ್‌ಬೋರ್ಡ್ ನುತ್ತು ಮ್ಯುನಿಸಿಪಾಲ ಸಾಲಿಗಳ ಬಾಬತು ಮಾರ್ಚ ೧೯೨೦ ಅಖೈರವರೆಗೆ.	೪೯	೧	೦

* ಇದರೊಳಗೇನಾದರೂ ತಪ್ಪು ಇದ್ದರೆ ಮಾಸ್ತರ ಜನರು ಅಗತ್ಯವಾಗಿ ತಿಳಿಸಬೇಕು.

DEPARTMENTAL NOTICE.

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೩ನೇ ತಾರೀಖಿನ ದಿವಸ (ಸೋಮವಾರ) ಕನ್ನಡ ೩ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೨ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ೨೦ ಸ್ಟೂಟಗಿಂತ ಎತ್ತರಿರುವವರೂ, ಹದಿನೇಳರಷ್ಟೀಲೆ ಇಪ್ಪತ್ತೆರಡರ ಬಳಗೆ ವಯಸ್ಸುಳ್ಳವರೂ ಇರಬೇಕು. ಕೆಳಗೆ ಕೊಟ್ಟ ನಮೂನೆಯಂತೆ ವಯಸ್ಸಿನ ದಾಖಲೆಯನ್ನೂ ಕ[illegible] ಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು [illegible] ಬರಕ್ಕೆ ಬಂದು ತಮ್ಮ ಹೆಸರುಗಳನ್ನು ದಾಖಲು ಮಾಡಿಸಬೇಕು. ಪರೀಕ್ಷೆಗೆ ಬರುವವರು ಅನಿಸ್ಸಟೇರೇ ಇರಲಿ ಉಪೀಡದಾರರೇ ಇರಲಿ ಅವರಲ್ಲಿ ಉತ್ತೀರ್ಣರಾಗಿಯುಂದ [illegible] ಜನರನ್ನು ಪಗಾರೀ ವಿದ್ಯಾರ್ಥಿಗಳಾ[illegible] ತೆಗೆದುಕೊಳ್ಳುವರು.

೨ ಈ ವರ್ಷದ ಮುಲ್ಕೀ ಪರೀಕ್ಷೆಯ ಪ್ರ[illegible] ನವಂಬರ ೩ನೇ ತಾರೀಖಿನ ಬಳಗಾಗಿ ಪ್ರಸಿದ್ಧ[illegible] ಗದಿಪಡಿಸಲ್ಪಟ್ಟಿದೆ; ಈ ಪರೀಕ್ಷೆಗೆ ಕೂತವರು ಸಹ ಪ್ರವೇಶ ಪರೀಕ್ಷೆಗೆ ಬಿದ್ದಿರಬಹುದು; ಆದರೆ ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಬಂದು ವೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ. ಇದಕ್ಕೆ ಒಪ್ಪಿಗೆ ಇದ್ದವರು ಮಾತ್ರ ಪ್ರವೇಶ ಪರೀಕ್ಷೆಗೆ ಬರಬಹುದು.

ಧಾರವಾಡ ಟ್ರೇ. ಕಾ.
ತಾ॥ ೧೧–೫–೯೨.

RAOJI B. KARANDIKAR.
ಪ್ರಿನ್ಸಿಪಾಲ.

ವಯಸ್ಸಿನ ದಾಖಲೆಯ ನಮೂನೆ.

ಇದರಮೇಲೆ ತಂದೆಯಾಗಲಿ ಪಾಲಕನಾಗಲಿ ಸಹಿ ಮಾಡತಕ್ಕದ್ದು.

ನಾನು ಸರ್ಟಿಫಿಕೇಟು ಕೊಡುವದೇನಂದರೆ,

ಇವನು ತಾ॥ ಮೂಹೆ ಸರ್ವೆ ೧೮ ಇಸವಿ ದಿವಸ ಹುಟ್ಟಿದನು. ಇವನ ವಯಸ್ಸು ಈವೊತ್ತಿನ ದಿವಸ ಬಳಗೊಂಡು ವರ್ಷ ತಿಂಗಳು ದಿವಸ ಇರುತ್ತ

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸುಶ್ಚಿಕ್ಷಣೋತ್ಕರ್ಷಮುಂ ।
ಭಯಸುತ್ತುಂ ಪ್ರತಿಮಾಸದಾವಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆಪ್ರೋದುದರ್ಗಿಸುಗುಣಂ ತೋರಲ್ಕೆಕ್ಕೊಂಬುದೈ ।
ಜಯಮಿಂದೋಷಧವತಿವ್ಯವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಜುಲ್ಯೆ ೧೮೯೯. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಈ ವರ್ಷದ ಮುಕ್ಕೀ ಪರೀಕ್ಷೆಯು ನಮ್ಮ ಇಲಾಖೆ ದೊಳಗಿನ ಲಿಯೂ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಮತ್ತಂ ದಿನ ಸಪ್ಟಂಬರ ೧೯ನೇ ತಾರೀಖಿಗೆ ಆಗುವದು. ಈ ಸಂಬಂಧದ ನಿಯೆಮಗಳು ೧೮೯೯ನೇ ಇಸವಿ ಎಪ್ರೀಲ ತಿಂಗಳ ೫ನೇ ತಾರೀಖಿನ ಸರಕಾರೀ ಗ್ಯಾಜೆಟಿನಲ್ಲಿ ಪ್ರಕಟಿಸಿರುತ್ತವೆ. ಅಪ್ಲಿಗಳ ಪ್ರತಿಗಳು ಆಯಾ ಜಿಲ್ಲೆಯ ಪರೀಕ್ಷಾಕಮಿಟಿಯ ಆಧ್ಯಕ್ಷರ ಕಡೆಗೆ ಸಿಗುವವು. ಈ ಪರೀಕ್ಷೆಗೆ ಕೂಡಲಪೇಕ್ಷಿಸುವವರು ಆಗಷ್ಟ ೧೫ನೇ ತಾರೀಖಿನ ಒಳಗಾಗಿ ಕಮಿಟಿಯ ಅಧ್ಯಕ್ಷರ ಕಡೆಗೆ ಅರ್ಜಿಗಳನ್ನು ಕಳಿಸ ತಕ್ಕದ್ದು. ಪರೀಕ್ಷೆಯ ಫೀಯನ್ನು ಹೆಸರು ಹಾಕುವ ದಿವಸವಾಗಲಿ, ಅದಕ್ಕಿಂತ ಪೂರ್ವವಲ್ಲಿಯಾಗಲಿ, ಕೊಡಬಹುದು. ಉಮೇದವಾರರು ತಾವು ಇರತಕ್ಕ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಪ್ರಲಿಕ್ಕೆ ಬೇಕು, ಮತ್ತೂ ತಾವು

DEPARTMENTAL NOTICE.

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೫ನೇ ತಾರೀಖಿನ ದಿವಸ (ಸೋಮವಾರ) ಕನ್ನಡ ೬ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೬ನೇ ಅಥವಾ ೫ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ೧೫ ಫೂಟಿಗಿಂತ ಎತ್ತರಿರುವವರೂ, ಹದಿನೇಳರಪ್ಪೋಳ ಇಪ್ಪತ್ತೆರಡರ ಒಳಗೆ ವಯಸ್ಸುಳ್ಳವರೂ ಇರಬೇಕು. ಕೆಳಗೆ ಕೊಟ್ಟ ನಮೂನೆಯಂತೆ ವಯಸ್ಸಿನ ದಾಖಲೆಯನ್ನೂ ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು ೫ನೇ ನವಂಬರಕ್ಕೆ ಬಂದು ತಮ್ಮ ಹೆಸರುಗಳನ್ನು ದಾಖಲು ಮಾಡಿಸಬೇಕು. ಪರೀಕ್ಷೆಗೆ ಬರುವವರು ಆಸಿಸ್ಟಂಟರೇ ಇರಲಿ ಉಮೇದವಾರರೇ ಇರಲಿ ಅವರಲ್ಲಿ ಉತ್ತೀರ್ಣರಾಗಿಯಂದ ಪಾಸಾದವರ ಜನರನ್ನು ಪಗಾರೀ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವರು.

೨ ಈ ವರ್ಷದ ಮುಲ್ಕೀ ಪರೀಕ್ಷೆಯು ನವಂಬರ ೫ನೇ ತಾರೀಖಿನ ಒಳಗಾಗಿ ಪ್ರಸಿದ್ಧ ಆಗದಿದ್ದಲ್ಲಿ, ಈ ಪರೀಕ್ಷೆಗೆ ಕೂತವರು ಸಹ ಪ್ರವೇಶ ಪರೀಕ್ಷೆಗೆ ಬರಬಹುದು; ಆದರೆ ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಬಂದು ಮೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ. ಇಷ್ಟಕ್ಕೆ ಮುಪ್ಪಾಗಿ ಇದ್ದವರು ಮಾತ್ರ ಪ್ರವೇಶ ಪರೀಕ್ಷೆಗೆ ಬರಬಹುದು.

ಧಾರವಾಡ ಟ್ರೇ. ಕಾ.
ತಾ॥ ೧೧–೫–೯೨. } RAOJI B. KARANDIKAR.
ಪ್ರಿನ್ಸಿಪಾಲ.

ವಯಸ್ಸಿನ ದಾಖಲೆಯ ನಮೂನೆ.

ಇದರಮೇಲೆ ತಂದೆಯಾಗಲಿ ಪಾಲಕನಾಗಲಿ ಸಹಿ ಮಾಡತಕ್ಕದ್ದು.

ನಾನು ಸರ್ಟಿಫಿಕೇಟು ಕೊಡುವದೇನಂದರೆ,
ಇವನು ತಾ॥ ಮಾಹೆ ಸನ ೧೮ ಇಸವಿ ದಿವಸ ಹುಟ್ಟಿದನು. ಇವನ ವಯಸ್ಸು ಈವೊತ್ತಿನ ದಿವಸ ಒಳಗೊಂಡು ವರ್ಷ ತಿಂಗಳು ದಿವಸ ಇರುತ್ತ

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆಪ್ರೋದ್ಯದರ್ಗಿಸುಗುಣಂ ತೋರಲ್ಕೆಕೊಂಬುದೈ ।
ಪಯಿಯಿಂದೋಷವತಿಪ್ಪ ನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಜುಲೈ ೧೮೯೯. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧವ ವೃತ್ತಾಂತಗಳು.

ಈ ವರ್ಷದ ಮುಲ್ಕೀ ಪರೀಕ್ಷೆಯು ನಮ್ಮ ಇಲಾಖೆ ಯೊಳಗಿನ ಆಯಾ ಜಿಲ್ಲೆಯ ಮುಖ್ಯ ಕಟ್ಟಣಗಳಲ್ಲಿ ಮುಂ ದಿನ ಸಪ್ಟಂಬರ ೧೯ನೇ ತಾರೀಖಿಗೆ ಆಗುವದು. ಈ ಸಂ ಬಂಧವ ನಿಯೆಮಗಳು ಸರ್ ೧೮೮೪ನೇ ಇಸವಿ ಎಪ್ರೀಲ ತಿಂಗಳ ೫ನೇ ತಾರೀಖಿನ ಸರಕಾರೀ ಗ್ಯಾಜೆಟಿನಲ್ಲಿ ಪ್ರಟ ಮಾಡಿ ಇರುತ್ತವೆ. ಅವುಗಳ ಪ್ರತಿಗಳು ಆಯಾ ಜಿಲ್ಲೆಯ ಪರೀ ಕ್ಷಾಕಮಿಟಿಯ ಅಧ್ಯಕ್ಷರ ಕಡೆಗೆ ಸಿಗುವವು. ಈ ಪರೀ ಕ್ಷೆಗೆ ಕೂಡಲಪೇಕ್ಷಿಸುವವರು ಆಗಷ್ಟ ೧೫ನೇ ತಾರೀಖಿನ ಒಳಗಾಗಿ ಕಮಿಟಿಯ ಅಧ್ಯಕ್ಷರ ಕಡೆಗೆ ಅರ್ಜಿಗಳನ್ನು ಕಳಿಸ ತಕ್ಕದ್ದು. ಪರೀಕ್ಷೆಯ ಫೀಯನ್ನು ಹೆಸರು ಹಾಕುವ ದಿವಸವಾಗಲಿ, ಅದಕ್ಕಿ ಪೂರ್ವದಲ್ಲಿಯಾಗಲಿ, ಕ ಟ್ಟಬೇಹುದು. ಉಪೇಕ್ಷವಾದರು ತಾವು ಇರತಕ್ಕ ಜಿಲೆ ಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಲಿಕ್ಕೆ ಬೇಕು, ಮತ್ತು

DEPARTMENTAL NOTICE.

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೭ನೇ ತಾರೀಖಿನ ದಿವಸ (ಸೋಮವಾರ) ಕನ್ನಡ ೭ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೬ನೇ ಅಥವಾ ೫ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ೨೦ ವರ್ಷಗಿಂತ ಎತ್ತರಿರುವವರೂ, ಹದಿನೇಳರಷ್ಟೀಲೆ ಇಪ್ಪತ್ತೆರಡರ ಒಳಗೆ ವಯಸ್ಸುಳ್ಳವರೂ ಇರಬೇಕು. ಶಾಳಾ ಕೊಟ್ಟ ನಮೂನೆಯಂತೆ ವಯಸ್ಸಿನ ದಾಖಲೆಯನ್ನೂ ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು ಈ ನವಂಬರಕ್ಕೆ ಬಂದು ತಮ್ಮ ಹೆಸರುಗಳನ್ನು ದಾಖಲು ಮಾಡಿಸಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಮೇದವಾರರೇ ಇರಲಿ ಅವರಲ್ಲಿ ಉತ್ತೀರ್ಣತೆಯಿಂದ ಪಾಸಾದವರಿಗಿಂತ ಜನರನ್ನು ಪಗಾರೀ ವಿದ್ಯಾರ್ಥಿಗಳನ್ನಾಗಿ ತೆಗೆದುಕೊಳ್ಳುವರು.

೨ ಈ ವರ್ಷದ ಮುಲ್ಕೀ ಪರೀಕ್ಷೆಯ್ಯದ ನಂತರ ಈ ನವಂಬರ ೫ನೇ ತಾರೀಖಿನ ಒಳಗಾಗಿ ಪ್ರಸಿದ್ಧಿಗದಿದ್ದರೆ, ಈ ಪರೀಕ್ಷೆಗೆ ಕೂತವರು ಸಹ ಪ್ರವೇಶ ಪರೀಕ್ಷೆಗೆ ಬರಬಹುದು; ಆದರೆ ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಬಂದು ಮೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜವಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ. ಇದಕ್ಕೆ ಒಪ್ಪಿಗೆ ಇದ್ದವರು ಮಾತ್ರ ಪ್ರವೇಶ ಪರೀಕ್ಷೆಗೆ ಬರಬಹುದು.

ಧಾರವಾಡ ಟ್ರೇ. ಕಾ.
ತಾ॥ ೧೧–೫–೯೦.

RAOJI B. KARANDIKAR.
ಪ್ರಿನ್ಸಿಪಾಲ.

ವಯಸ್ಸಿನ ದಾಖಲೆಯ ನಮೂನೆ.

ಇದರಮೇಲೆ ತಂದೆಯಾಗಲಿ ಪಾಲಕನಾಗಲಿ ಸಹಿ ಮಾಡತಕ್ಕದ್ದು.

ನಾನು ಸರ್ಟಿಫಿಕೇಟು ಕೊಡುವದೇನಂದರೆ,
ಇವನು ತಾ॥ ಮಾಹೆ ಸನ ೧೮ ಇಸವಿ ದಿವಸ ಹುಟ್ಟಿದನು. ಇವನ ವಯಸ್ಸು ಈವೊತ್ತಿನ ದಿವಸ ಒಳಗೊಂಡು ವರ್ಷ ತಿಂಗಳು ದಿವಸ ಇರುತ್ತ

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸುಶ್ಶಿಕ್ಷಣೋತ್ಕರ್ಷಮುಂ ।
ಭಯಸುತ್ತಂ ಪ್ರತಿಮಾನದಾವಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆಪ್ರೋದುವರ್ಗೆಸಗುಣಂ ತೋರಲ್ಕೆಕೊಂಬುದೈ ।
ಪಣಿಯಿಂದೋಷವತಿವ್ಯ ಸೇಳ್ವುದುಭುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಜುಲೈ ೧೮೮೯. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ವರ್ಷದ ಮುಕ್ಕೀ ಪರೀಕ್ಷೆಯು ನಮ್ಮ ಇಲಾಖೆ ಯೊಳಗಿನ ಲಿಯೂ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಮುಂ ದಿನ ಸಪ್ಟಂಬರ ೧೯ನೇ ತಾರೀಖಿಗೆ ಆಗುವದು. ಈ ಸಂ ಬಂಧದ ನಿಯಮಗಳು ಸರ್ ೧೮೮೮ನೇ ಇಸವಿ ಎಪ್ರೀಲ ತಿಂಗಳ ೫ನೇ ತಾರೀಖಿನ ಸರಕಾರೀ ಗ್ಯಾಜಿಟಿನಲ್ಲಿ ಪ್ರಕಟಿಸಿರುತ್ತವೆ. ಅವುಗಳ ಪ್ರತಿಗಳು ಆಯಾ ಜಿಲ್ಲೆಯ ಪರೀಕ್ಷಾಕಮಿಟಿಯ ಅಧ್ಯಕ್ಷರ ಕಡೆಗೆ ಸಿಗುವವು. ಈ ಪರೀಕ್ಷೆಗೆ ಕೂಡಲಪೇಕ್ಷಿಸುವವರು ಆಗಷ್ಟ ೧೫ನೇ ತಾರೀಖಿನ ಒಳಗಾಗಿ ಕಮಿಟಿಯ ಅಧ್ಯಕ್ಷರ ಕಡೆಗೆ ಅರ್ಜಿಗಳನ್ನು ಕಳಿಸ ತಕ್ಕದ್ದು. ಪರೀಕ್ಷೆಯು ಫೀಯನ್ನು ಹೆಸರು ಪಡೆ ದವ ದಿವಸವಾಗಲಿ, ಅದಕ್ಕಿ ಪೂರ್ವದಲ್ಲಿಯಾಗಲಿ, ಕೊ ಡಬಹುದು. ಉಮೇದವಾರರು ತಾವು ಇರತಕ್ಕ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಲಿಚ್ಛೆ ಬೇಕು, ಮತ್ತು ತಾವು

DEPARTMENTAL NOTICE.

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೭ನೇ ತಾರೀಖಿನ ದಿವಸ (ಸೋಮವಾರ) ಕನ್ನಡ ೮ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೬ನೇ ಅಥವಾ ೫ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ೧೮ ವರ್ಷ ಪೂರ್ತಿಗಿಂತ ಎತ್ತರಿರುವವರೂ, ಹದಿನೇಳರಷ್ಟೀಲೆ ಇಪ್ಪತ್ತೈದರ ಒಳಗೆ ವಯಸ್ಸುಳ್ಳವರೂ ಇರಬೇಕು. ತಮ್ಮ ಕೊಟ್ಟ ನಮೂನೆಯಂತೆ ವಯಸ್ಸಿನ ದಾಖಲೆಯನ್ನೂ ಕ[illegible] ಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು [illegible] ನವಂ ಬರಕ್ಕೆ ಬಂದು ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊ. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಮೇದವಾರರೇ ಇರಲಿ ಅವರಲ್ಲಿ ಉತ್ತೀರ್ಣರಾಗಿಯುಂದ ಪಾಸಾದವರಿ ಜನರನ್ನು ಪಗಾರೀ ವಿದ್ಯಾರ್ಥಿಗಳ[illegible] ತೆಗೆದುಕೊಳ್ಳುವಲ್ಲ.

೨ ಈ ವರ್ಷದ ಮುಲ್ಕೀ ಪರೀಕ್ಷೆಯನ್ನು ನವಂಬರ ೫ನೇ ತಾರೀಖಿನ ಒಳಗಾಗಿ ಪ್ರಸಿದ್ಧಿಗಡಿಸಲಾಗದು; ಈ ಪರೀಕ್ಷೆಗೆ ಕೂತವರು ಸಹ ಪ್ರವೇಶ ಪರೀಕ್ಷೆಗೆ ಬರಬಹುದು; ಆದರೆ ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಬಂದು ವೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ. ಇನಕ್ಕೂ ಒಪ್ಪಿಗೆ ಇದ್ದವರು ಮಾತ್ರ ಪ್ರವೇಶ ಪರೀಕ್ಷೆಗೆ ಬರಬಹುದು.

ಧಾರವಾಡ ಟ್ರೇ. ಕಾ.
ತಾ॥ ೧೧–೫–೯೨. } RAOJI B. KARANDIKAR.
ಪ್ರಿನ್ಸಿಪಾಲ.

ವಯಸ್ಸಿನ ದಾಖಲೆಯ ನಮೂನೆ.

ಇದರಮೇಲೆ ತಂದೆಯಾಗಲಿ ಪಾಲಕನಾಗಲಿ ಸಹಿ ಮಾಡತಕ್ಕದ್ದು.

ನಾನು ಸರ್ಟಿಫಿಕೇಟು ಕೊಡುವದೇನಂದರೆ,
ಇವನು ತಾ॥ ಮಾಹೆ ಸನ ೧೮ ಇಸವಿ ದಿವಸ ಹುಟ್ಟಿದನು. ಇವನ ವಯಸ್ಸು ಈವೊತ್ತಿನ ದಿವಸ ಒಳಗೊಂಡು ವರ್ಷ ತಿಂಗಳು ದಿವಸ ಇರುತ್ತ

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸುಶ್ಶಿಕ್ಷಣೋತ್ಕರ್ಷಮುಂ ।
ಜಯಸುತ್ತಂ ಪ್ರತಿಮಾನದಾವಿಗೊಲವಿಂವೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತಪೆಪೋದುವರ್ಗಸುಗುಣಂ ತೋರಲ್ಕೆಕ್ಕೊಂಬುದೈ ।
ಸಯದಿಂದೋಷವಹಿವ್ಯನೇಳ್ವುದುಬುಧರ್ಜ್ಞಾನಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭. | ಜುಲೈ ೧೮೮೯. | ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧವ ವೃತ್ತಾಂತಗಳು.

ಈ ವರ್ಷದ ಮುಲ್ಕೀ ಪರೀಕ್ಷೆಯು ನಮ್ಮ ಇಲಾಖೆಯೊಳಗಿನ ಲಿಯೂ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಮೂರಿನ ಸಪ್ಟಂಬರ ೧೯ನೇ ತಾರೀಖಿಗೆ ಆಗುವದು. ಈ ಸಂಬಂಧದ ನಿಯಮಗಳು ಸರ್ ೧೯೮೯ನೇ ಇನವರಿ ಎಪ್ರೀಲ ತಿಂಗಳ ೫ನೇ ತಾರೀಖಿನ ಸರಕಾರೀ ಗ್ಯಾಜೆಟಿನಲ್ಲಿ ಪ್ರಕಟಿಸಿದ್ದಾಯಿತು. ಅವುಗಳ ಪ್ರತಿಗಳು ಲಿಯೂ ಜಿಲ್ಲೆಯ ಪರೀಕ್ಷಾಕಮಿಟಿಯ ಅಧ್ಯಕ್ಷರ ಕಡೆಗೆ ಸಿಗುವವು. ಈ ಪರೀಕ್ಷೆಗೆ ಕೂಡಲಪೇಕ್ಷಿಸುವವರು ಅಗಷ್ಟ ೧೫ನೇ ತಾರೀಖಿನ ಒಳಗಾಗಿ ಕಮಿಟಿಯ ಅಧ್ಯಕ್ಷರ ಕಡೆಗೆ ಅರ್ಜಿಗಳನ್ನು ಕಳಿಸ ತಕ್ಕದ್ದು. ಪರೀಕ್ಷೆಯ ಫೀಯನ್ನು ಹೆಸರು ಪಟ್ಟಿಯ ದಿವಸವಾಗಲಿ, ಅದಕ್ಕೆ ಪೂರ್ವವಲ್ಲಿಯಾಗಲಿ, ಕೊಡಬಹುದು. ಉಪೋದ್ಘಾತರು ತಾವು ಇರತಕ್ಕ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಪ್ರರಿಕ್ಷೆ ಬೇಕು, ಮತ್ತು ತಾವು

ಅದೇ ಜಿಲ್ಲೆಯಲ್ಲಿ ಆರು ತಿಂಗಳುಗಳಿಂದ ಇದ್ದು ಬಗ್ಗೆ ಸ್ಕೂಲ್ ಮಾಸ್ತರರ ಅಥವಾ ಗೌಡರ ಸರ್ಟಿಫಿಕೇಟನ್ನು ಅರ್ಜಿಯ ಕೂಡ ಕಳುಹಿಸಲಿಕ್ಕೆ ಬೇಕು. ಆವರೆ ಧಾರವಾಡಜಿಲ್ಲೆಯಲ್ಲಿ ಇರತಕ್ಕ ಮರಾಠಿ ಉಪೋದವಾರರು ಬೆಳಗಾವಿಗೆ, ಕಾನಡಾ ಜಿಲ್ಲೆಯಲ್ಲಿ ಇರತಕ್ಕ ಮರಾಠಿ ಉಪೋದವಾರರು ಬೆಳಗಾವಿಗೆ ಅಥವಾ ರತ್ನಾಗಿರಿಗೆ, ವಿಜಾಪುರ ಜಿಲ್ಲೆಯಲ್ಲಿ ಇರತಕ್ಕಂಥ ಮರಾಠಿ ಉಪೋದವಾರರು ಬೆಳಗಾವಿಗೆ ಅಥವಾ ಸೊಲ್ಲಾಪುರಕ್ಕೆ ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆಕೊಂಡು ಹೋಗ ಬಹುದು. ಉಪೋದವಾರರು ಮಾಡುವ ಅರ್ಜಿಯಲ್ಲಿ, ತಮ್ಮ ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ಕಲಿಯುತ್ತಿರುವ ಶಾಲೆಯ ಹೆಸರು ಇವುಗಳನ್ನು ಪೂರ್ಣವಾಗಿ ಬರೆಯುವದಲ್ಲದೆ ಯಾವ ಪರೀಕ್ಷೆಗೆ ಕೂಡುವ ಮನಸುಂಟೋ ಆ ಪರೀಕ್ಷೆಯ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು.

ಕನ್ನಡ ಜಿಲ್ಲೆಗಳಲ್ಲಿ ಆಗುವ ಪರೀಕ್ಷೆಗಳಿಗೆ ನೇಮಿಸಿದ ಪುಸ್ತಕಗಳು ೧೪೯೦ನೇ ಜ್ಯಾನುಆರಿ ತಿಂಗಳ ಶಾಲಾ ಪತ್ರಿಕವಲ್ಲಿ ಪ್ರಸಿದ್ಧಿಸಲ್ಪಟ್ಟಿರುತ್ತವೆ.

---

* ತಂದೆಗೆ ಅಥವಾ ಪಾಲನ ಕರ್ತನಿಗೆ ವರ್ಗಾದವರಿಂದಾಗಲಿ, ಅಥವಾ ಅನ್ಯ ಕೆಲವು ಅಪರಿಹಾರ್ಯ ಆಡಚಣೆಗಳ ದೆಸೆಯಿಂದಾಗಲಿ ಬೇರೆ ಸ್ಥಳಕ್ಕೆ ಹೋಗುವ ಪ್ರಸಂಗ ಒದಗಿದ ಕಾರಣ ಈ ಸರ್ಟಿಫಿಕೇಟನ್ನು ಪಡೆಯುವದು ಅಸಾಧ್ಯವಾದರೆ, ಆಕಾರಣಗಳನ್ನು ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರಿಗೆ ಅರ್ಜಿಯ ಮುಖಾಂತರವಾಗಿ ತಿಳಿಸಿ ತಾವು ಹೋದ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆಯನ್ನು ಪಡೆಯಬಹುದು.

ಮುಂದಿನ ಮೇ ೧ನೇ ತಾರೀಖಿಗೆ 'ಚಿಕ್ಯಾಗೊ' ಪಟ್ಟಣದಲ್ಲಿ ಬಂದು ದೊಡ್ಡ ಪ್ರದರ್ಶನವಾಗುವದು. ಜಗತ್ತಿನಲ್ಲಿ ದೊರೆಯುವ ಉತ್ತಮೋತ್ತಮ ಪದಾರ್ಥಗಳನ್ನು ಅವರಲ್ಲಿ ಇಡುವರು. ಬ್ರಿಟಿಷ ಸರಕಾರದವರು ಈ ಪ್ರದರ್ಶನಕ್ಕೆ ನಾಲ್ಕು ಲಕ್ಷ ರುಪಾಯಿ ಕೊಟ್ಟಿರುತ್ತಾರೆ. ಇದೇ ಮೇರೆಗೆ ಬಹುತರ ಯೂರೋಪ್ಯ ಅರಸರು ಈ ಕೆಲಸಕ್ಕೆ ದ್ರವ್ಯದ ಸಹಾಯವನ್ನು ಕೊಟ್ಟಿರುವರು. ಹಿಂದುಸ್ತಾನ ಸರಕಾರದವರು ಇನ್ನೂ ಈ ಕೆಲಸಕ್ಕೆ ದ್ರವ್ಯವ್ಯಯ ಕೊಟ್ಟಂತೆ ತೋರುವದಿಲ್ಲ. ಸಂಸ್ಥಾನಿಕರಲ್ಲಿ ಗಾಯಕವಾಡದ ಮಹಾರಾಜರು ಮಾತ್ರ ದ್ರವ್ಯದ ಸಹಾಯ ಮಾಡಿರುವರಂತೆ. ಅವರ ಸಂಸ್ಥಾನದಿಂದ ಹತ್ತು ಸಾವಿರ ರೂಪಾಯಿಯ ಸಾಮಾನುಗಳು ಪ್ರದರ್ಶನಕ್ಕೆ ಹೋಗತಕ್ಕವಿರುತ್ತವೆಂದು ತಿಳಿಯುತ್ತದೆ. ದ್ರವ್ಯದ ಅನುಕೂಲತೆ ಇದ್ದವರು ಈ ಸಂಧಿಯನ್ನು ಕಳಕೊಳ್ಳಬಾರದು. ಇಲ್ಲಿ ಯಾವತ್ತು ಹೊಸ ಯಂತ್ರಗಳೂ ಕಾರಖಾನೆಗಳೂ ಕಣ್ಣಿಗೆ ಬೀಳುವವಲ್ಲದೆ ಇಡೀ ಪೃಥ್ವಿಯೊಳಗಿನ ಜನರನ್ನೂ ಅನೇಕ ಪಂಡಿತರನ್ನೂ ನೋಡಬಹುದು. ಈ ಪ್ರದರ್ಶನಕ್ಕೆ ೭೦೦ ಎಕರೆ ಭೂಮಿಯನ್ನು ಸಿದ್ಧ ಮಾಡಿರುತ್ತಾರೆ. ನಮ್ಮ ರಾಜ್ಞಿಯ ಜ್ಯೇಷ್ಠ ಪುತ್ರರಾದ 'ಪ್ರಿನ್ಸ ಆಫ್ ವೇಲ್ಸ' ದೊರೆಗಳು ಈ ಪ್ರದರ್ಶನದ ಕವಿಯಿಟಯ ಲಂಡನ ಸಭೆಯ ಅಧ್ಯಕ್ಷರಾಗಿರುತ್ತಾರೆ.

ಅಮೇರಿಕವು ತಿಮ್ಮಾಪಟನಲ್ಲಿ ಎಷ್ಟು ಬೇಗ ಮುಂದರಿಸುತ್ತಾ ಇದೆ ಎಂಬ ಮಾತಿಗೆ ಈ ಚಿಕ್ಯಾಗೊ ಪಟ್ಟಣವೇ ಸಾ

---

* ಇದು ಸಂಯುಕ್ತ ಸಂಸ್ಥಾನಗಳಲ್ಲಿ ಬಂದು ದೊಡ್ಡ ಪಟ್ಟಣವಿರುತ್ತದೆ. ಇದರ ಉತ್ತರ ಅಕ್ಷಾಂಶ ೪೨ ಮತ್ತು ಪಶ್ಚಿಮ ರೇಖಾಂಶ ೮೭.

ಷ್ಟಿಯಾಗಿದೆ. ೧೮೩೩ನೇ ವರ್ಷದಲ್ಲಿ ಈ ಪಟ್ಟಣವು ಕೇವಲ ಜನರು ಮಾತ್ರ ವಾಸವಾಗಿರುವಂಥ ಬಂದು ಸಣ್ಣ ಹಳ್ಳಿಯಾಗಿತ್ತು. ತರುವಾಯ ಐದು ವರುಷಗಳಲ್ಲಿಯೇ ಜನಸಂಖ್ಯೆಯು ೪೦೦೦ ಆಯಿತು. ಮುಂದೆ ಈ ಪಟ್ಟಣದಲ್ಲಿ ಕಾರ್ಖಾನೆಗಳು ಬೆಳೆದವರಿಂದ ಜನ ವಸ್ತಿಯು ಬಹಳವಾಗಿ ಬೆಳೆಯಿತು. ಆದರೆ ೧೮೩೦ನೇ ವರ್ಷ ಈ ಪಟ್ಟಣಕ್ಕೆ ಬೆಂಕಿ ಹತ್ತಿ ಸುಮಾರು ಮೂರು ಚಚ್ಚೌಕ ಮೈಲಿನ ಮೇಲಿರುವ ಅನೇಕ ಸುಂದರವಾದ ಇಮಾರತುಗಳು ಅಗ್ನಿಗೆ ಆಹುತಿಯಾದವ್ದಲ್ಲದೆ ೯೦,೦೦೦ ಜನರು ಪೂರಾ ನಿರಾಶ್ರಿತರಾದರು. ಮುಂದೆ ೬೦ ವರ್ಷಗಳಲ್ಲಿಯೇ ಇದು ಬಳ್ಳೀ ಭರದಿಂದ ಬೆಳೆದು ಸವ್ಯಕ್ಕೆ ಪೃಥ್ವಿಯೊಳಗಿನ ಪ್ರಸಿದ್ಧ ಪಟ್ಟಣಗಳನ್ನು ಸರಿಗಟ್ಟಲಿಕ್ಕೆ ನೋಡುತ್ತದೆ. ಈ ಪಟ್ಟಣದ ಜನಸಂಖ್ಯೆಯು ಈಗ್ಗೆ ೧೦,೦೦,೦೦೦ ಇರುವದಲ್ಲದೆ, ಜನರ ಸೋಯಿಗಾಗಿ ಪಟ್ಟಣವಲ್ಲಿಯೇ ಮಾಡಿದಂಥ ಹೊಗೆಬಂಡಿಗಳು ಓಡ್ಯಾಡುವಂಥ ಬೀದಿಗಳು ೬೦೦ ಮೈಲು ಮತ್ತು ಸುವರ್ಣ ಜನಿಕ ಇಮಾರತುಗಳು ೬೦೦೦ ಎಕರೆ ಭೂಮಿಯನ್ನು ವ್ಯಾಪಿಸಿರುತ್ತವೆ. ಈ ಪಟ್ಟಣವು ನದಿಯ ಎರಡೂ ಬದಿಗಳಲ್ಲಿ ಇರುವದರಿಂದ ಅಲ್ಲಲ್ಲಿಗೆ ಕಟ್ಟಿದಂಥ ಭವ್ಯವಾದ ಸೇತುವೆಗಳು ೬೧ ಇರುತ್ತವೆ,ಮತ್ತು ಪಟ್ಟಣದೊಳಗಿನ ಮುಖ್ಯ ಬೀದಿಯು ೧೪ ಮೈಲು ಉದ್ದವಾಗಿರುತ್ತದೆ. ಕಳೆದ ಬಂದೀ ವರ್ಷದಲ್ಲಿ ಕಟ್ಟಿದ ಮನೆಗಳಿಗೆ ೧೦ ಕೋಟಿ ರೂಪಾಯಿಗಳು ಖರ್ಚಾಗಿರುತ್ತವೆಂದು ತಿಳಿಯುತ್ತದೆ. ಇಷ್ಟೆಲ್ಲ ಸುಧಾರಣೆಯು ಕಳೆದ ೬೦ ವರ್ಷಗಳಲ್ಲಿಯೇ ಆದದ್ದು!! ಜನರ ಉದ್ಯೋಗ ರತಿ, ಸಾಹಸ, ಸ್ವಾತಂತ್ರ್ಯ ಪ್ರೀತಿಗಳೇ ಈ ಘನತೆಯ ಕಾರಣವು.

ಕಳೆದ ಮೇ ತಿಂಗಳ ಎನೇ ತಾರೀಖಿನ ದಿವಸ "ಮೆಡಿಕಲ್ ಸೊಸಾಯಿಟಿ ಆಫ್ ಲಂಡನ್" ಎಂಬ ಸಂಘದ ೧೦೪ನೇ ವಾರ್ಷಿಕ ಉತ್ಸವವಾಯಿತು. ಆ ಕಾಲಕ್ಕೆ ಸರ್ ಜೇಮ್ಸ್ ಬ್ಯಾನ ಎಮ್. ಡಿ, ಎಲ್. ಎಲ್. ಡಿ. ಎಫ್ಆರ್. ಎಸ್. ಎಂಬವರು "ವಿದ್ಯಾಭ್ಯಾಸಂಗವೂ ಸ್ತ್ರೀಪುರುಷರೂ" ಎಂಬ ವಿಷಯದ ಮೇಲೆ ವಾರ್ಷಿಕ ವ್ಯಾಖ್ಯಾನವನ್ನು ಕೊಟ್ಟರು. ಸ್ತ್ರೀಪುರುಷರ ಬುದ್ಧಿಯಲ್ಲಿ ಹೆಚ್ಚು ಕಡಿಮೆಯುಂಟೆಂಬ ಮಾತು ಕೇವಲ ಕಾಲ್ಪನಿಕವಾದದ್ದಲ್ಲ. ಅದು ನಿಜವಾಗಿರುತ್ತದೆಂಬವಕ್ಕೆ ಅವರವರ ಶರೀರ ರಚನೆಯೇ ಸಾಕ್ಷಿಯಾಗಿರವದು. ಸ್ತ್ರೀಪುರುಷರ ಮಿದುಳಿನ ಭಾರವೂ, ಮಿದುಳಿನ ಘಟಕಗಳಾದ ಊದೀ ಬಣ್ಣದ ಮತ್ತು ಬಿಳಿ ಬಣ್ಣದ ದ್ರವ್ಯಗಳ ವಿಶಿಷ್ಟ ಗುರುತ್ವವೂ, ಮಿದುಳಿನ ಬೇರೆ ಬೇರೆ ಭಾಗಗಳಿಗೆ ಹರಿಯುವ ರಕ್ತ ಪ್ರವಾಹಗಳೂ, ಈ ಮಾತನ್ನು ನಿಸ್ಸಂಶಯವಾಗಿ ಸ್ಥಾಪಿಸುತ್ತವೆಂದು ಅವರು ತಿಳಿಸಿದರು. ಸ್ತ್ರೀಯರ ಮಿದುಳು ಪುರುಷರ ಮಿದುಳಿಗಿಂತ ಹಗುರಿರುತ್ತದೆಂಬದಿಷ್ಟೇ ಅಲ್ಲ; ಪುರುಷರ ಇಡೀ ಶರೀರದ ನಿಲವು ಭಾರಗಳಿಗೂ ಅವರ ಮಿದುಳಿಗೂ ಇರುವ ಪ್ರಮಾಣವು ಸ್ತ್ರೀಯರ ಶರೀರದ ನಿಲವು ಭಾರಗಳಿಗೂ ಇರುವ ಪ್ರಮಾಣಕ್ಕಿಂತ ಹೆಚ್ಚಿರುತ್ತದೆಂಬವನ್ನೂ ಅವರ ಮಿದುಳಿನ ಬೇರೆ ಬೇರೆ ಘಟಕಗಳ ವಿಶಿಷ್ಟ ಗುರುತ್ವವು ಸ್ತ್ರೀಯರ ಮಿದುಳಿನ ಬೇರೆ ಬೇರೆ ಘಟಕಗಳ ವಿಶಿಷ್ಟಗುರುತ್ವಕ್ಕಿಂತ ಹೆಚ್ಚಿರುತ್ತದೆಂಬವನ್ನೂ, ಪುರುಷರ ಮಿದುಳುಗಳಲ್ಲಿ ರಕ್ತದ ಪ್ರವಾಹಗಳು, ಇಚ್ಛಾ, ಅಭಿಜ್ಞಾನ, ಭಾವೋತ್ಪತ್ತಿಗಳ ಸ್ಥಾನಗಳಲ್ಲಿ ಹರಿಯುತ್ತವೆಂಬದನ್ನೂ, ಸ್ತ್ರೀಯರಲ್ಲಿ ರಕ್ತ ಪ್ರವಾಹಗಳು ಕಾಮ ಕ್ರೋಧಾದಿ ವಿಕಾರಗಳ ಉತ್ಪತ್ತಿಯ ಸ್ಥಾನಗಳಲ್ಲಿ ಹರಿಯುತ್ತವೆಂಬದನ್ನೂ ಸಪ್ರಮಾಣವಾಗಿ ತೋರಿಸಿ, ಈ

ಭೇದವನ್ನು ಮುಂದಿಟ್ಟು ಸ್ತ್ರೀಪುರುಷರ ವಿದ್ಯಾವ್ಯಾಸಂಗದ ಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕೆ ಬೇಕೆಂದು ಪ್ರತಿ ವಾದಿಸಿದರು. ಸ್ತ್ರೀಪುರುಷರನ್ನು ಒಂದೇ ಪ್ರಕಾರದ ವಿದ್ಯಾವ್ಯಾಸಂಗಕ್ಕೆ ಹಚ್ಚಿದರೆ ಅದರಿಂದ ಲಾಭವಾಗುವದಕ್ಕೆ ಬದಲು ಹಾನಿಯೇ ಸಂಭವಿಸುವದೆಂದು ಸೂಚಿಸಿ, ಆ ಪ್ರಕಾರ ಅಭ್ಯಾಸವನ್ನು ಮಾಡಿಸುತ್ತಲಿರುವ ಬಂದು ಶಾಲೆಯ ೧೮೩ ವಿದ್ಯಾರ್ಥಿನಿಯರಲ್ಲಿ ೧೫೩ ವಿದ್ಯಾರ್ಥಿನಿಯರಿಗೆ ತಲೆಸೂಲಿ ಎದ್ದ ಸಂಗತಿಯು ತಮಗೆ ಗೊತ್ತಿರುತ್ತದೆಂದು ಹೇಳಿದರು.

ಈ ಅಭಿಪ್ರಾಯವು ವಿಚಾರಾರ್ಹವಾಗಿರುವದು. ಈ ಮಾದರಿಯ ಅಭಿಪ್ರಾಯವನ್ನೇ ನಮ್ಮ ಇಲಾಖೆಯ ಗವರ್ನರರಾದ ಲಾರ್ಡ ಹ್ಯಾರಿಸ್ ದೊರೆಗಳು ಸ್ವಲ್ಪ ದಿವಸಗಳ ಕೆಳಗೆ ವ್ಯಕ್ತಪಡಿಸಿರುವದರಿಂದ ಸ್ತ್ರೀ ಶಿಕ್ಷಣದಲ್ಲಿ ತಕ್ಕ ಏರ್ಪಾಡು ಬೇಗನೆ ಆದೀತೆಂದು ನೆನಸುತ್ತೇವೆ.

ಸ್ತ್ರೀ ಶಿಕ್ಷಣದ ಅಭಿಮಾನಿಗಳು, ಸ್ತ್ರೀಯರು ಬೇಕಾದಂಥ ದೊಡ್ಡ ದೊಡ್ಡ ಉದ್ಯೋಗಗಳನ್ನಾದರೂ ಗಂಡಸರಂತೆ ಸುಸೂತ್ರವಾಗಿ ಸಾಗಿಸಬಹುದೆಂದು ವಾದಿಸುವರು; ಆದರೆ ನಮ್ಮ ಇಲಾಖೆಯ ಹಿಂದಿನ ಗವರ್ನರರೂ ಇಂಗ್ಲಂದದ ಪೋಸ್ಟ್‌ಮಾಸ್ತರಜನರಲರೂ ಆದ ಸರ್ ಜೇಮ್ಸ್ ಫರ್ಗ್ಯೂಸನ್ ದೊರೆಗಳು ಪ್ರಸಿದ್ಧಿಸಿದ ಲೇಖವು ಇದಕ್ಕೆ ಪ್ರತಿಕೂಲವಾಗಿರುತ್ತದೆ. ಅದು ಹ್ಯಾಗಂದರೆ:—

ಪೋಸ್ಟ್ ಖಾತೆಯಲ್ಲಿ ಕೆಲಸ ಮಾಡುತ್ತಲಿರುವ ಅನೇಕ ತರುಣಿಯರು ತಮ್ಮ ಕೆಲಸವನ್ನು ಮನಮುಟ್ಟಿ ಮಾಡುವದಿಲ್ಲ. ಅವರಲ್ಲಿ ಪೋರಾಟಿಕಿ, ಫ್ಲುಲ್ಲಕತನಗಳು ಬಹಳ. ಯಾರಾದರೂ ಕೆಲಸಕ್ಕಾಗಿ ಅವರ ಕಡೆಗೆ ಬಂದರೆ, ತಮ್ಮ ತಮ್ಮಲ್ಲಿಗೆ ನಡೆದಿರುವ ಹರಟೆಯಾಗಲಿಕ್ಕೆ ಕೊಂಡ ಹೊಲಿ

ಯು ಕೆಲಸವಾಗಲಿ ಮುಗಿಯುವ ತನಕ ಅವರು ಬಂದವರ
ಲಸಕ್ಕೆ ಲಕ್ಷ ಕೊಡುವದೇ ಇಲ್ಲ; ಕೊಟ್ಟರೂ ಬಂದು ದೊ
ಡ್ಡ ಉಪಕಾರ ಮಾಡಿದ ಭಾವವನ್ನು ತೋರಿಸುವರು. ತಾ
ರ್ಯ ಅವರ ಚಂಚಲ ಸ್ವಭಾವವೂ ಅಸಭ್ಯತನದ ನಡೆ
ಯೂ ಯಾರಿಗೂ ಸಮ್ಮತವಾಗಲಾರವು.

ಸರ್ ರಾಲಿಟ ದೊರೆಯು ಗಂಡಸರಂತೆ ಸ್ತ್ರೀಯರಿಗೂ
ಾರ್ಲಿಮೆಂಟ ಸಭಾಸದರನ್ನು ಆರಿಸುವ ಹಕ್ಕನ್ನು ಕೊಡ
ೀಕೆಂಬ ಅಭಿಪ್ರಾಯದ ಬಂದು ಕಾಯದೆಯ ವಸೂದೆಯ
ನ್ನು ಪಾರ್ಲಮೆಂಟ ಸಭೆಯಲ್ಲಿ ತಂದಿದ್ದನು. ಆದರೆ ಸಭೆಕ
ನರು ಅದಕ್ಕೆ ಸಮ್ಮತಿಸದೆ ಇದ್ದದ್ದರಿಂದ ಆ ಪ್ರಯತ್ನವು
ಿಷ್ಫಲವಾಯಿತು. ಗ್ಲ್ಯಾಡಸ್ಟನ ದೊರೆಗಳು ಆ ವಸೂ
ದೆಗೆ ತಾವು ಸಮ್ಮತಿಸದೆ ಇದ್ದದ್ದರ ಕಾರಣಗಳನ್ನು ಸವಿಸ್ತಾ
ರವಾಗಿ ಬಂದು ಪತ್ರದಲ್ಲಿ ತೋರಿಸಿರುತ್ತಾರೆ.

ಸಮುದ್ರ ಪರ್ಯಟನೆ— ವಿಲಾಯತಿಗೆ ಹೋಗುವವ
ರು ತಮ್ಮ ಧರ್ಮವನ್ನು ಪಾಲಿಸಿದರೆ ಅವರನ್ನು ತಿರಿಗಿ ತ
ಮ್ಮ ಜಾತಿಯೊಳಗೆ ತೆಗೆದು ಕೊಳ್ಳಲಿಕ್ಕೆ ಅಡ್ಡಿ ಇಲ್ಲವೆಂದು
ಕಲಕತ್ತೆಯ ಪಂಡಿತರು ನಿರ್ಣಯಿಸಿರುತ್ತಾರೆ. ಶ್ರೀ ಶೃಂ
ಗೇರಿ ಸ್ವಾಮಿಗಳವರೂ ಇದೇ ಶಾಸ್ತ್ರಾರ್ಥವನ್ನು ಮೈ
ಸೂರಿನ ಮಹಾರಾಜರಿಗೆ ತಿಳಿಸಿರುತ್ತಾರೆ. ನಮ್ಮ ದೇಶದ
ಅಡಳಿತವು ಇಂಗ್ಲೀಷ ಜನರ ಕೈಸೇರಿರುವದರಿಂದ ದೊಡ್ಡ
ದೊಡ್ಡ ಉದ್ಯೋಗಗಳನ್ನು ಬಯಸುವವರು ವಿಲಾಯತಿಗೆ
ಹೋದ ಹೊರ್ತು ನಿರ್ವಾಹವಿಲ್ಲ. ಇಂಥ ಸಮಯಕ್ಕೆ
ಪೂರ್ವಾಪರ ವಿಚಾರ ಮಾಡಿ ಈ ಮೇರೆಗೆ ನಿರ್ಣಯ ಮಾ
ಡಿದ್ದು ಬಹಳ ಆನಂದದ ಸಂಗತಿಯಾಗಿದೆ.

THE OUT-COME OF THE PUBLIC SERVICE COMMISSION.

ಪಬ್ಲಿಕ ಸರ್ವಿಸ ಕಮಿಶನದ ಫಲವು.

ನಮ್ಮ ದೇಶದ ಜನರಿಗೆ ಅವರವರ ಯೋಗ್ಯತೆಯ ಮೇರೆಗೆ ದೊಡ್ಡ ದೊಡ್ಡ ಸರಕಾರೀ ಉದ್ಯೋಗಗಳನ್ನು ಕೊಡುವದು ಉಚಿತವೂ ಆಡಳಿತಕ್ಕೆ ಶ್ರೇಯಸ್ಕರವೂ ಆಗಿರುತ್ತದೆಂದು ಕೆಲವು ದೀರ್ಘದರ್ಶಿಗಳಾದ ಇಂಗ್ಲಿಷ ಮುತ್ಸದ್ದಿಗಳು ಕಂಡು, ಈ ವಿಷಯವನ್ನು ೧೮೫೩ರಲ್ಲಿ ಪಾರ್ಲಿಮೆಂಟ ಸಭೆಯೊಳಗೆ ಚರ್ಚಿಸಿ, ಈ ದೇಶದ ಜನರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಡಬಹುದೆಂಬ ಕಾಯದೆಯನ್ನು ಮಾಡಿಸಿದರು. ಈ ಕಾಯದೆಯಿಂದ ಕೆಲವು ಅತಿ ದೊಡ್ಡ ಅಧಿಕಾರದ ಸ್ಥಳಗಳೂ ಲಷ್ಕರೀ ಖಾತೆಯ ಅಧಿಕಾರಸ್ಥರ ಸ್ಥಳಗಳೂ ಹೊರತಾಗಿ ಉಳಿದ ಯಾವತ್ತು ಉದ್ಯೋಗಗಳನ್ನು ನಮ್ಮ ದೇಶದ ಜನರಿಗೆ ಅವರವರ ಯೋಗ್ಯತೆಯ ಮೇರೆಗೆ ಕೊಡಬಹುದೆಂದು ಗೊತ್ತಾಯಿತು. ೧೮೫೮ರಲ್ಲಿ ವಿಕ್ಟೋರಿಯಾ ಮಹಾರಾಣಿಯವರು ಈ ದೇಶದ ಆಡಳಿತವನ್ನು ಕಂಪನಿಯವರಿಂದ ತಮ್ಮ ಕೈಯಲ್ಲಿ ತೆಗೆದುಕೊಂಡು ಬಂದು ಜಾಹೀರನಾಮೆಯನ್ನು ಪ್ರಕಟಿಸಿದರು. ಆ ಜಾಹೀರನಾಮೆಯಲ್ಲಿ ಈ ಮಾತಿನ ಉಲ್ಲೇಖ ಮಾಡಿರುತ್ತದೆ; ಪ್ಯಾಗಂದರೆ:—" ಹಿಂದುಸ್ತಾನದೊಳಗಿನ

---

* ಆಮಹಷ್ಟ್ರ ದೊರೆಯು ಹೋದಾಗ ಖಜಾನೆಯಲ್ಲಿ ೫ಲಕು ಇದ್ದಿಲ್ಲ. ತಿರಿಗಿ ಹಿಂದುಸ್ತಾನ ಸರಕಾರಕ್ಕೆ ೧ ಕೋಟಿ ರೂಪಾಯಿ ಸಾಲವಾಗಿತ್ತು. ಪೆಂಟಿಂಕ ದೊರೆಯು ಕೆಲವು ಏರ್ಪಾಡುಗಳನ್ನು ಮಾಡಿ ಈ ಸಾಲವನ್ನೆಲ್ಲ ತೀರಿಸಿ, ಖಜಾನೆಯಲ್ಲಿ ೨ ಕೋಟಿ ರೂಪಾಯಿಗಳನ್ನು ೫ಲಕು ಮಾಡಿ, ಹೆಸರು ಪಡೆದನು. ನಮ್ಮ ಜನರಿಗೆ ದೊಡ್ಡದೊಡ್ಡ ಉದ್ಯೋಗಗಳನ್ನ ಕೊಡುವದು ಈ ಏರ್ಪಾಡುಗಳಲ್ಲಿ ಬಂದಾಗಿತ್ತು.

ಸರಕಾರದ ಸಣ್ಣ ದೊಡ್ಡ ಉದ್ಯೋಗಗಳು ಜಾತಿಭೇದ ವರ್ಣಭೇದಗಳನ್ನೆಣಿಸದೆ ಯೋಗ್ಯರಾದ ಜನರಿಗೆ ಕೊಡಲ್ಪಡುವವು''—ಆದರೂ ಕೆಲಕಾಲದ ವರೆಗೆ ಈ ದೇಶದಿಂದ ಸಾಕಷ್ಟು ಜನರು ವಿಲಾಯತಿಗೆ ಹೋಗಿ ನಿಯಮಿತಪರೀಕ್ಷೆಯನ್ನು ಕೊಟ್ಟು ಹೆಚ್ಚಿನ ಉದ್ಯೋಗಗಳ ಹಕ್ಕನ್ನು ಪಡೆಯಲಿಲ್ಲ. ನಾಲ್ಕೈದು ಬಂಗಾಲೀ ಗೃಹಸ್ಥರಷ್ಟೇ ಪಾಸಾಗಿ ನಮ್ಮ ದೇಶಕ್ಕೆ ತೆರಳಿ ಬಂದರು. ಇಷ್ಟರಲ್ಲಿ ಕೆಲವು ಕಾರಣದಿಂದ ಪರೀಕ್ಷೆಯ ವಯಸ್ಸಿನಲ್ಲಿ ಹೆಚ್ಚು ಕಡಿಮೆಯಾಗಿ ಉಮೇದವಾರರು ೧೯ ವರ್ಷಕ್ಕಿಂತ ಹೆಚ್ಚಿನವರು ಇರಬಾರದೆಂಬ ನಿರ್ಬಂಧ ಮಾಡಲ್ಪಟ್ಟಿತು. ಪರಭಾಷೆ, ಪರದೇಶ, ಜಾತಿಭ್ರಷ್ಟರಾಗುವ ಭಯ, ಅಲ್ಪ ವಯಸ್ಸಿನ ಕಟ್ಟಳೆ, ಇವೇ ಮುಂತಾದ ಕಾರಣಗಳಿಂದ ಹಿಂದೂ ಜನರು ವಿಲಾಯತಿಗೆ ಹೋಗಿ ಪರೀಕ್ಷೆ ಕೊಡುವದು ಅಸಂಭವವಾಗಿ ತೋರಪತ್ತಿತು. ಆದದ್ದರಿಂದ ೧೮೭೦ನೇ ಇಸವಿಯಲ್ಲಿ ಹಿಂದುಸ್ತಾನ ಸರಕಾರದವರೇ ಪ್ರತಿವರ್ಷ ಯೋಗ್ಯರಾದ ಆರು ಜನ ತರುಣ ಗೃಹಸ್ಥರನ್ನು ಆರಿಸಿ ಅವರಿಗೆ ಹೆಚ್ಚಿನ ಉದ್ಯೋಗಗಳನ್ನು ಕೊಡಬೇಕೆಂದು ನಿರ್ಣಯವಾಯಿತು. ಆದರೆ ಈ ನಿರ್ಣಯಕ್ಕನುಸರಿಸಿ ಮಾಡಲ್ಪಟ್ಟ ನಿಯಮಗಳು ೧೮೭೮ರಲ್ಲಿ ಮುಂಜೂರಾಗಿ ಸ್ಟ್ಯಾಟ್ಯುಟರಿ ಸಿವಿಲ್ ಸರ್ವೆಂಟರು ನೇಮಿಸಲ್ಪಟ್ಟರು. ಈ ನಿಯಮದಿಂದ ನಮ್ಮ ದೇಶದೊಳಗಿನ ೯೦ ದೊಡ್ಡದೊಡ್ಡ ಜಾಗೆಗಳಲ್ಲಿ ೬ನೇ ಪಾಲು ಅಂದರೆ ೧೫ ಜಾಗೆಗಳು ಸ್ಟ್ಯಾಟ್ಯುಟರಿ ಸಿವಿಲ್ ಸರ್ವೆಂಟರಿಗಾಗಿಯೇ ಕಾಯ್ದಿಡಲಾಗುವದೆಂದು ಗೊತ್ತಾಯಿತು. ಈ ಹೊತ್ತಿಗೆ ಸ್ಟ್ಯಾಟ್ಯುಟರಿ ಸಿವಿಲ್ ಸರ್ವೆಂಟರ ಸಂಖ್ಯೆಯು ೬೦ಕ್ಕಿಂತ ಹೆಚ್ಚಿಲ್ಲ. ಸ್ಟ್ಯಾಟ್ಯುಟರಿ ಸಿವಿಲ್ ಸರ್ವೆಂಟರನ್ನು ನೇಮಿಸುವ ನಿಯಮಗಳಾದ ತುಸು ದಿನಗಳಲ್ಲಿಯೇ, ಸರಕಾ

ರದವರು ಮಾಡುವ ನೇಮಣೂಕುಗಳು ತಕ್ಕವುಗಳಾಗಿರು
ವದಿಲ್ಲ, ಈ ಆರಿಸುವ ಪದ್ಧತಿಯೇ ಸರಿಯಾಗಿಲ್ಲ, ನಮ್ಮ ದೇ
ಶದ ಜನರಿಗೆ ಸೂಕಷ್ಟ ದೊಡ್ಡ ನೌಕರಿಗಳು ಸಿಗುವದಿಲ್ಲ,
ಎಂದು ಜನರು ವರ್ತಮಾನ ಪತ್ರಗಳಲ್ಲಿ ಗದ್ದಲವೆಬ್ಬಿಸಿದ್ದ
ರಿಂದ ಗವರ್ನರ ಜನರಲರಾದ ಮೆ. ಡಫರಿನ್ ದೊರೆಗಳು
ಈ ಮಾತಿನ ವಿಚಾರಕ್ಕಾಗಿ ೧೮೮೬ರಲ್ಲಿ "ಪಬ್ಲಿಕ ಸರ್ವಿಸ
ಕಮಿಶನ" ಎಂಬ ಹೆಸರಿನ ಒಂದು ಕಮಿಟಿಯನ್ನು ನೇಮಿ
ಸಿದರು. ಆ ಕಮಿಟಿಯವರು ಹಿಂದುಸ್ತಾನವಲ್ಲೆಲ್ಲ ತಿರಿಗಿ
ಸಾಧಕ ಬಾಧಕ ಅಭಿಪ್ರಾಯಗಳನ್ನು ತಿಳುಕೊಂಡು ಸರ
ಕಾರಕ್ಕೆ ಒಂದು ರಿಪೋರ್ಟು ಮಾಡಿದರು. ಆ ಕಮಿಟಿಯು
ವರು ಸ್ಟ್ಯಾಟ್ಯುಟರಿ ಸಿವಿಲ್ ಸರ್ವಿಸ ಪದ್ಧತಿಯನ್ನು ಒಂ
ದುಮಾಡಬೇಕೆಂದು ಸೂಚಿಸಿದ್ದಲ್ಲದೆ ಸರಕಾರದ ಉದ್ಯೋ
ಗಗಳಲ್ಲಿ "ಇಂಪಿರಿಯಲ್ ಸರ್ವಿಸ" "ಪ್ರಾವಿನ್ಸಿಯಲ್ ಸ
ರ್ವಿಸ" ಎಂಬ ಎರಡು ವರ್ಗಗಳನ್ನು ಮಾಡಿ "ಇಂಪಿರಿ
ಯಲ್ ಸರ್ವಿಸದ ನೌಕರಿಗಳನ್ನೆಲ್ಲ ವಿಲಾಯತಿಯಲ್ಲಿ ಪಾ
ಸಾದ ಜನರಿಗೆ ಕೊಡಬೇಕೆಂತಲೂ ಪ್ರಾವಿನ್ಸಿಯಲ್ ಸರ್ವಿ
ಸದ ೧೦೦ ಜಾಗೆಗಳನ್ನು ಆಯಾ ಪ್ರಾಂತದ ಸರಕಾರದವ
ರು ತಮಗೆ ಯೋಗ್ಯ ಕಂಡಂಥ ಈ ದೇಶದ ಉದ್ಯೋಗಸ್ಥ
ರಿಗೆ ಕೊಡಬಹುದೆಂತಲೂ ಸೂಚಿಸಿದರು. ಈ ರಿಪೋರ್ಟ
ನ ವಿಚಾರಣೆಯನ್ನು ಮಾಡಿ ತಮ್ಮ ಅಭಿಪ್ರಾಯ ಸಹಿತವಾ
ಗಿ ಒಂದು ಪತ್ರವನ್ನು ಸೆಕ್ರೆಟರಿ ಆಫ್ ಸ್ಟೇಟರಾದ ಕಾಸ
ದೊರೆಗಳು ೧೮೮೭ನೇ ಇಸವಿಯ ಸಪ್ಟಂಬರದಲ್ಲಿ ಹಿಂದು
ಸ್ತಾನ ಸರಕಾರಕ್ಕೆ ಕಳುಹಿಸಿದರು. ಹಿಂದುಸ್ತಾನ ಸರಕಾರ
ದವರು ಆಯಾ ಪ್ರಾಂತದ ಸರಕಾರದವರ ಅಭಿಪ್ರಾಯಗಳ
ನ್ನು ಕೇಳಿ ತಮ್ಮ ನಿರ್ಣಯವನ್ನು ಸ್ವಲ್ಪ ದಿವಸಗಳ ಕೆಳ
ಗೆ ಪ್ರಸಿದ್ಧಿಸಿದರು. ಅದರಿಂದ ಇನ್ನು ಮುಂದೆ ೮೬ ದೊ

; ಜಾಗೆಗಳು ಮಾತ್ರ ನಮ್ಮ ದೇಶದವರಿಗೆ ಸಿಗುವವೆಂದು
ತಿಳಿಯುತ್ತದೆ. ಆ ೪೬ ಜಾಗೆಗಳ ವಿವರ ಹ್ಯಾಗೆಂದರೆ:—
ಮುಂಬಯಿ ಇಲಾಖೆಯಲ್ಲಿ ೧೪, ಮದ್ರಾಸ ಇಲಾಖೆಯಲ್ಲಿ
೫೫, ಬಂಗಾಲ ಇಲಾಖೆಯಲ್ಲಿ ೬೦, ವಾಯವ್ಯ ಪ್ರಾಂತದಲ್ಲಿ
೧೧, ಪಂಜಾಬದಲ್ಲಿ ೧೨, ಮಧ್ಯಪ್ರಾಂತದ ದೆಸೆಯಿಂದ
ಇನ್ನು ನಿರ್ಣಯವಾಗ ತಕ್ಕದ್ದಿರುತ್ತದೆ. ಈ ಜಾಗೆಗಳ ಪಗಾ
ರವು ೩೦೦ರಿಂದ ೧೬೦೦ ರೂಪಾಯಿಗಳ ವರೆಗೆ ಇರುವದು.
ಈ ತರಾವಿನಿಂದ ಕಲೆಕ್ಟರ, ಡಿಸ್ಟ್ರಿಕ್ಟ ಕಲೆಕ್ಟರ, ಡಿಸ್ಟ್ರಿಕ್ಟ
ಜಜ್ ಎಂಬೀ ಜಾಗೆಗಳಿಗಿಂತ ಹೆಚ್ಚಿನ ಯೋಗ್ಯತೆಯ ಜಾ
ಗೆಗಳು ನಮ್ಮ ಜನರಿಗೆ ಸಿಗಲಾರವೆಂದು ತೋರುತ್ತದೆ.
ಪಬ್ಲಿಕ ಸರ್ವೀಸ ಕಮಿಶನದವರು ಭಾಗದ ಕಮಿಶನರರ
ಜಾಗೆಗಳನ್ನು ಸಹ ದೇಶೀ ಜನರಿಗೆ ಕೊಡಬಹುದೆಂದು ಸಿ
ಫಾರಸು ಮಾಡಿರಲು, ಈ ಪ್ರಕಾರ ತರಾವಾದದ್ದನ್ನು ನೋಡಿ
ಅಸಮಾಧಾನವಾಗುವದು. ಆದರೆ ನಮ್ಮಲ್ಲಿ ಈ ದೊಡ್ಡ
ಜಾಗೆಗಳಿಗೆ ತಕ್ಕ ಜನರು ಇನ್ನೂ ಆಗಿಲ್ಲ. ಆದಕಾರಣ
ಈಗಲೇ ಈ ವಿಷಯದಲ್ಲಿ ವ್ಯಸನಗೊಳ್ಳುವ ಕಾರಣವಿಲ್ಲ.
ನಮ್ಮ ಜನರು ಆ ಕೆಲಸಗಳಿಗೆ ಯೋಗ್ಯರಾದ ಮೇಲೆ ಸರ
ಕಾರದವರು ಬಹುತರ ಈ ವಿಷಯದಲ್ಲಿ ತಕ್ಕ ಏರ್ಪಾಡುಗ
ಳನ್ನು ಮಾಡುವರೆಂಬ ನಂಬಿಕೆಯುಂಟು.

NOTES ON GRAMMAR

ವ್ಯಾಕರಣದ ಟಿಪ್ಪಣಿಗಳು.

ಆರನೇ ಪುಸ್ತಕ ಪುಟ ೩೩೫.

"ಊಳಿಗ ಮಾಡುವದರಿಂದ ಮಾನವೂ ಬೆಳದಿಂಗಳಿಂದ
ಕತ್ತಲೆಯೂ ವ್ಯಾಧಿಯಿಂದ ಚಲುವುತನವೂ ಹ್ಯಾಗೆ ನಶಿಸು

ವವೋ ಹಾಗೆಯೇ ಒಬ್ಬರನ್ನು ಯಾಚಿಸುವದರಿಂದ ಯಾ
ಕನ ಗುಣಗಳೆಲ್ಲ ನಶಿಸುವವು. ಈ ವಾಕ್ಯದಲ್ಲಿ ಅನ್ಯರನ್ನು
ಬೇಡೋಣವೆಂಬ ಕೆಟ್ಟ ಕೆಲಸದಿಂದ ಸದ್ಗುಣಗಳು ನಾ
ಹೊಂದುವವೆಂಬ ಮಾತಿಗೆ ಮೂರು ಉಪಮೆಗಳನ್ನು ಕೊ
ಟ್ಟಿದ್ದಾರೆ. ಅವುಗಳಲ್ಲಿ ಊಳಿಗ ಮಾಡುವದರಿಂದ ಮಾನ
ವೂ ವ್ಯಾಧಿಯಿಂದ ಚಲುವಿಕೆಯೂ ನಶಿಸುವವಂತೆ ಬೇಡು
ವವರಿಂದ ಸದ್ಗುಣಗಳು ನಶಿಸುವವು ಎಂಬ ಎರಡು ಸಾಮ್ಯ
ಗಳು ಸರಿಯಾಗಿವೆ. ಯಾಕಂದರೆ ಊಳಿಗ ಮಾಡುವದೂ ವ್ಯಾ
ಧಿಯೂ ಪರರನ್ನು ಬೇಡುವವೂ ಕೆಟ್ಟ ಸಂಗತಿಗಳೇ. ಅದ
ರಿಂದ ಇವೆಲ್ಲ ಬಂದನ್ನೊಂದು ಹೋಲುತ್ತವೆ. ಮತ್ತು ಮಾ
ನವು: ಚಲುವಿಕೆಯು, ಸುಗುಣಗಳು, ಇವೆಲ್ಲ ಉತ್ತಮ ಗು
ಣಗಳು. ಅದರಿಂದ ಇವಾದರೂ ಬಂದನ್ನೊಂದು ಹೋಲು
ತ್ತವೆ. ಆದರೆ ಬೆಳದಿಂಗಳಿಂದ ಕತ್ತಲೆ ಹೋಗುವಂತೆ ಯಾ
ಚನೆಯಿಂದ ಸುಗುಣಗಳು ಹೋಗುವವೆಂಬ ಉಪಮೆಯು
ಸರಿಯಾಗಿಲ್ಲ. ಯಾಕಂದರೆ ಯಾಚನೆಯು ಕೆಟ್ಟ ಕೆಲಸವು,
ಬೆಳದಿಂಗಳು ಬಳ್ಳೀ ಪದಾರ್ಥವು; ಇವುಗಳಲ್ಲಿ ಸಾಧಾರಣ
ಗುಣವಿಲ್ಲದ್ದರಿಂದ ಇವು ಬಂದನ್ನೊಂದು ಹೋಲಲಾರವು.

ಇದೇ ಪ್ರಕಾರ ಕತ್ತಲೆ ಕೆಟ್ಟದು, ಸದ್ಗುಣ ಬಳ್ಳೀದು,
ಇವೆರಡರಲ್ಲಿಯೂ ಸಾಧಾರಣಗುಣವಿಲ್ಲದ್ದರಿಂದ ಇವೂ ಬಂ
ದನ್ನೊಂದು ಹೋಲಲಾರವು. ಸರಿಯಿಲ್ಲದ ಎರಡು ಪದಾ
ರ್ಥಗಳನ್ನು ಹೋಲಿಸಿದರೆ ಹತೋಪಮತ್ವವೆಂಬ ದೋಷ
ವಾಗುತ್ತದೆ. ಅದರಿಂದ ಮೇಲಿನ ವಾಕ್ಯದೊಳಗಿಂದ ಈ
ಉಪಮೆಯನ್ನು ತೆಗೆದು ಹಾಕುವದು ಬಳ್ಳೀದು.

ಇದೆಲ್ಲದೆ ಈ ವಾಕ್ಯದಲ್ಲಿ " ಚಲುವುತನ " ವೆಂಬ ಪದ
ವು ಅಶುದ್ಧವಾಗಿದೆ. ಯಾಕಂದರೆ ಚಲುವು ಎಂಬದು ಭಾ

ವಾಚಕ ಶಬ್ದವು ಇದರಿಂದ ಸೌಂದರ್ಯವೆಂಬ ಅರ್ಥ ಹುಟ್ಟುತ್ತದೆ. ಹೀಗಿದ್ದು ಭಾವವಾಚಕ ಶಬ್ದಕ್ಕೆ ಪುನಃ 'ತನ" ಎಂಬ ಭಾವವಾಚಕ ಪ್ರತ್ಯಯವನ್ನು ಹಚ್ಚುವದು ಕ್ಲೇಷವಾಗುತ್ತದೆ. ಅದರಿಂದ ಅದರ ಅಂತ್ಯದ " ತನ " ಪ್ರತ್ಯಯವನ್ನು ತೆಗೆದು ಹಾಕಬೇಕು. ಮತ್ತು " ನಶಿಸು" ಎಂಬ ಧಾತು ಅಸಂಸ್ಕೃತವದೆ. ಯಾಕಂದರೆ ನಶ್, ಸ್ಪೃಶ್, ನಸ್, ಮುಂತಾದ ಕೆಲವು ಸಂಸ್ಕೃತ ಧಾತುಗಳಿಗೆ " ಇಸು " ಪ್ರತ್ಯಯ ಹಚ್ಚುವದಾದರೆ ಅವುಗಳ ಭಾವಾರ್ಥಕ ನಾಮಗಳನ್ನು ಸಿದ್ಧ ಮಾಡಿಕೊಂಡು ಅವುಗಳಿಗೆ ಹಚ್ಚಬೇಕು. ಇಂಥ ಮೂಲ ಧಾತುಗಳಿಗೇ ಇಸುವನ್ನು ಹಚ್ಚಿ ನಶಿಸು, ಸ್ಪೃಶಿಸು, ವಸಿಸು ಎಂಬ ರೂಪಗಳನ್ನು ಮಾಡುವದು ಅಸಂಗತವದೆ.

ಇವುಗಳ ಕ್ರಿಯಾನಾಮಗಳು ನಾಶ, ಸ್ಪರ್ಶ, ವಾಸ, ಎಂದಾಗುವವು. ಇವುಗಳಿಗೆ ಇಸುವನ್ನು ಹಚ್ಚಬೇಕು.

ಉದಾ—ನಾಶಿಸು, ಸ್ಪರ್ಶಿಸು, ವಾಸಿಸು ಮುಂತಾದವು

ನಾಲ್ಕನೇ ಪುಸ್ತಕ ಪುಟ ೧ ಪಂಕ್ತಿ ೧, ೨, ೩.

" ನೀವು ಚನ್ನಾಗಿ ಅಭ್ಯಾಸ ಮಾಡಿ ಮೂರನೇ ಪುಸ್ತಕವನ್ನು ಮುಗಿಸಿದಿರಿ " ಈ ವಾಕ್ಯದಲ್ಲಿ " ಚನ್ನಾಗಿ " ಎಂಬ ಶಬ್ದವು " ಚೆನ್ನಾಗಿ " ಎಂಬದಿರತಕ್ಕದ್ದು. ಯಾಕಂದರೆ— " ಕೆಚ್ಚನೆ " ಎಂಬ ಹಳೆಗನ್ನಡ ವಿಶೇಷಣಕ್ಕೆ " ಚೆಲ್ಮೆ " ಎಂಬ ಆದೇಶವಾಗಿ ಅದಕ್ಕೆ " ಅಗಿ " ಎಂಬದು ಹತ್ತಿ " ಚೆನ್ನಾಗಿ " ಎಂಬ ಅವ್ಯಯವಾಗಿದೆ. ಇದರಂತೆ " ಚೆಲ್ಮೆ " ಎಂಬ ವಿಶೇಷಣದಿಂದ ಹೊಸಗನ್ನಡದಲ್ಲಿ " ಚೆನ್ನ " ಚೆನ್ನಿಗ, ಚೆಂವ, ಚೆನ್ನೆಂಗಿ ಎಂಬ ಶಬ್ದಗಳು ಉಂಟಾಗಿರುತ್ತವೆ. " ಕೆಚ್ಚನೆ " ಅಂದರೆ ಕೆಂಪು ಬಣ್ಣವುಳ್ಳ ಎಂಬರ್ಥವು.

ವವೋ ಹಾಗೆಯೇ ಬಬ್ಬರನ್ನು ಯಾಚಿಸುವದರಿಂದ ಯಾಚ
ಕನ ಗುಣಗಳೆಲ್ಲ ನಶಿಸುವವು. ಈ ವಾಕ್ಯದಲ್ಲಿ ಅನ್ಯರನ್ನು
ಬೇಡೋಣವೆಂಬ ಕೆಟ್ಟಕೆಲಸದಿಂದ ಸದ್ಗುಣಗಳು ನಾಶ
ಹೊಂದುವವೆಂಬ ಮಾತಿಗೆ ಮೂರು ಉಪಮೆಗಳನ್ನು ಕೊ
ಟ್ಟದ್ದಾರೆ. ಅವುಗಳಲ್ಲಿ ಊಳಿಗ ಮಾಡುವದರಿಂದ ಮಾನ
ವೂ ವ್ಯಾಧಿಯಿಂದ ಚಲುವಿಕೆಯೂ ನಶಿಸುವವಂತೆ ಬೇಡು
ವದರಿಂದ ಸದ್ಗುಣಗಳು ನಶಿಸುವವು ಎಂಬ ಎರಡು ಸಾಮ್ಯ
ಗಳು ಸರಿಯಾಗಿವೆ. ಯಾಕಂದರೆ ಊಳಿಗ ಮಾಡುವದೂ ವ್ಯಾ
ಧಿಯೂ ಪರರನ್ನು ಬೇಡುವದೂ ಕೆಟ್ಟ ಸಂಗತಿಗಳೇ. ಅದ
ರಿಂದ ಇವೆಲ್ಲ ಬಂದನ್ನೊಂದು ಹೋಲುತ್ತವೆ. ಮತ್ತು ಮಾ
ನವು ಚಲುವಿಕೆಯು, ಸುಗುಣಗಳು, ಇವೆಲ್ಲ ಉತ್ತಮ ಗು
ಣಗಳು. ಅವರಿಂದ ಇವಾದರೂ ಬಂದನ್ನೊಂದು ಹೋಲು
ತ್ತವೆ. ಆದರೆ ಬೆಳದಿಂಗಳಿಂದ ಕತ್ತಲೆ ಹೋಗುವಂತೆ ಯಾ
ಚನೆಯಿಂದ ಸುಗುಣಗಳು ಹೋಗುವವೆಂಬ ಉಪಮೆಯು
ಸರಿಯಾಗಿಲ್ಲ. ಯಾಕಂದರೆ ಯಾಚನೆಯು ಕೆಟ್ಟ ಕೆಲಸವು,
ಬೆಳದಿಂಗಳು ಬಳ್ಳೀ ಪದಾರ್ಥವು; ಇವುಗಳಲ್ಲಿ ಸಾಧಾರಣ
ಗುಣವಿಲ್ಲದ್ದರಿಂದ ಇವು ಬಂದನ್ನೊಂದು ಹೋಲಲಾರವು.

ಇದೇ ಪ್ರಕಾರ ಕತ್ತಲೆ ಕೆಟ್ಟದ್ದು, ಸದ್ಗುಣ ಬಳ್ಳೀದು,
ಇವೆರಡರಲ್ಲಿಯೂ ಸಾಧಾರಣಗುಣವಿಲ್ಲದ್ದರಿಂದ ಇವೂ ಬಂ
ದನ್ನೊಂದು ಹೋಲಲಾರವು. ಸರಿಯಿಲ್ಲದ ಎರಡು ಪದಾ
ರ್ಥಗಳನ್ನು ಹೋಲಿಸಿದರೆ ಹತೋಪಮತ್ವವೆಂಬ ದೋಷ
ವಾಗುತ್ತದೆ. ಅದರಿಂದ ಮೇಲಿನ ವಾಕ್ಯದೊಳಗಿಂದ ಈ
ಉಪಮೆಯನ್ನು ತೆಗೆದು ಹಾಕುವದು ಬಳ್ಳೀದು.

ಇದಲ್ಲದೆ ಈ ವಾಕ್ಯದಲ್ಲಿ " ಚಲುವುತನ " ವೆಂಬ ಪದ
ವು ಅಶುದ್ಧವಾಗಿದೆ. ಯಾಕಂದರೆ ಚಲುವು ಎಂಬದು ಭಾ

ನವಾಚಕ ಶಬ್ದವು ಇದರಿಂದ ಸೌಂದರ್ಯವೆಂಬ ಅರ್ಥ ಹುಟ್ಟುತ್ತದೆ. ಹೀಗಿದ್ದು ಭಾವವಾಚಕ ಶಬ್ದಕ್ಕೆ ಪುನಃ 'ತನ" ಎಂಬ ಭಾವವಾಚಕ ಪ್ರತ್ಯಯವನ್ನು ಹಚ್ಚುವದು ಸೋಷವಾಗುತ್ತದೆ. ಅದರಿಂದ ಅದರ ಅಂತ್ಯದ " ತನ " ಪ್ರತ್ಯಯವನ್ನು ತೆಗೆದು ಹಾಕಬೇಕು. ಮತ್ತು " ನಶಿಸು" ಎಂಬ ಧಾತು ಅಸಂಸ್ಕೃತವದೆ. ಯಾಕಂದರೆ ನಶ್, ಸ್ಪೃಶ್, ವಸ, ಮುಂತಾದ ಕೆಲವು ಸಂಸ್ಕೃತ ಧಾತುಗಳಿಗೆ " ಇಸು " ಪ್ರತ್ಯಯ ಹಚ್ಚುವದಾದರೆ ಅವುಗಳ ಭಾವಾರ್ಥಕ ನಾಮಗಳನ್ನು ಸಿದ್ಧ ಮಾಡಿಕೊಂಡು ಅವುಗಳಿಗೆ ಹಚ್ಚಬೇಕು. ಇಂಥ ಮೂಲ ಧಾತುಗಳಿಗೇ ಇಸುವನ್ನು ಹಚ್ಚಿ ನಶಿಸು, ಸ್ಪೃಶಿಸು, ವಸಿಸು ಎಂಬ ರೂಪಗಳನ್ನು ಮಾಡುವದು ಅಸಂಗತವದೆ.

ಇವುಗಳ ಕ್ರಿಯಾನಾಮಗಳು ನಾಶ, ಸ್ಪರ್ಶ, ವಾಸ, ಎಂದಾಗುವವು. ಇವುಗಳಿಗೆ ಇಸುವನ್ನು ಹಚ್ಚಬೇಕು.

ಉದಾ—ನಾಶಿಸು, ಸ್ಪರ್ಶಿಸು, ವಾಸಿಸು ಮುಂತಾದವು

ನಾಲ್ಕನೇ ಪುಸ್ತಕ ಪುಟ ೧ ಪಂಕ್ತಿ ೧, ೨, ೩.

" ನೀವು ಚನ್ನಾಗಿ ಅಭ್ಯಾಸ ಮಾಡಿ ಮೂರನೇ ಪುಸ್ತಕವನ್ನು ಮುಗಿಸಿದಿರಿ " ಈ ವಾಕ್ಯದಲ್ಲಿ " ಚನ್ನಾಗಿ " ಎಂಬ ಶಬ್ದವು " ಚೆನ್ನಾಗಿ " ಎಂಬದಿರತಕ್ಕದ್ದು. ಯಾಕಂದರೆ— " ಕೆಚ್ಚನೆ " ಎಂಬ ಹಳೆಗನ್ನಡ ವಿಶೇಷಣಕ್ಕೆ " ಚೆ ನ್ನು " ಎಂಬ ಆದೇಶವಾಗಿ ಅದಕ್ಕೆ " ಆಗಿ " ಎಂಬುದು ಹತ್ತಿ " ಚೆನ್ನಾಗಿ " ಎಂಬ ಅವ್ಯಯವಾಗಿದೆ. ಇದರಂತೆ " ಚೆ ನ್ನು " ಎಂಬ ವಿಶೇಷಣದಿಂದ ಹೊಸಗನ್ನಡದಲ್ಲಿ " ಚೆನ್ನ " ಚೆನ್ನಿಗ, ಚೆಂದ, ಚೆನ್ನಂಗಿ ಎಂಬ ಶಬ್ದಗಳು ಉಂಟಾಗಿರುತ್ತವೆ. " ಕೆಚ್ಚನೆ " ಅಂದರೆ ಕೆಂಪು ಬಣ್ಣವುಳ್ಳ ಎಂಬರ್ಥವು.

ಅವರೆ ರೂಢಿಯಲ್ಲಿ " ಚೆನ್ನಾಗಿ " ಎಂಬದಕ್ಕೆ " ಬಳಿತಾಗಿ " ಎಂಬ ಲಾಕ್ಷಣಿಕ ಅರ್ಥ ಉಂಟಾಗಿದೆ. ಇದೇ ಪ್ರಕಾರ ಎಷ್ಟೋ ಶಬ್ದಗಳ ರೂಪವಲ್ಲಿ ಹೆಚ್ಚು ಕಡಿಮೆಯಾದರೆ ಅವುಗಳ ಅರ್ಥವೂ ಬದಲಾಗುವದು. ಹ್ಯಾಗಂದರೆ; ಚೆಲುವ=ಸುಂದರ ಆದರೆ ಚೆಲುವ ಶಬ್ದಕ್ಕೆ ವಿಕಾರವಾಗಿ " ಚೆಲೋ " ಎಂಬ ರೂಪ ಬಂದಾಗ ಮೂಲಾರ್ಥ ಹೋಗಿ " ಬಳ್ಳೀ " ಎಂಬರ್ಥ ಬರುತ್ತದೆ ಈ ಎರಡೂ ಅರ್ಥಗಳು " ಚೆಲುವ ಹುಡುಗಿ " ಚೆಲೋ ಹುಡುಗಿ ಎಂಬೆರಡು ಶಬ್ದಗಳಲ್ಲಿ ಕ್ರಮದಿಂದ ತೋರುತ್ತವೆ.

ನಾಲ್ಕನೇ ಪುಸ್ತಕದ ೧೧ನೇ ಪುಟದ ಕಡೆಯ ಪಂಕ್ತಿ.

" ಬಂದು ಜೀನ ಹುಟ್ಟಿದ ಹತ್ತರ "

ಈ ವಾಕ್ಯದಲ್ಲಿ " ಹುಟ್ಟಿದ " ಎಂಬ ಪದವು ಅಶುದ್ಧವಾಗಿದೆ. ಯಾಕಂದರೆ— " ಹುಟ್ಟು " ಅನಿತ್ಯ ಉಕಾರಾಂತ ಶಬ್ದವು ಪ್ರಸಿದ್ಧವಾಗಿದೆ " ಹುಟ್ಟ " ಎಂದು ಅಕಾರಾಂತ ಶಬ್ದವಿಲ್ಲ. ಅನಿತ್ಯ ಉಕಾರಾಂತ ಶಬ್ದಗಳಿಗೆ ಏಕವಚನದಲ್ಲಿ ೩,೪,೬,೭ ವಿಭಕ್ತಿಗಳಲ್ಲಿ " ಇನ್ " ಆಗಮ ಬರುವದು ಎಂಬ ನಿಯಮದಿಂದ ಹುಟ್ಟು ಶಬ್ದದ ಷಷ್ಟೀ ಏಕವಚನವು ಹುಟ್ಟಿನ ಎಂದು ಆಗುತ್ತದೆ.

ನಾಲ್ಕನೇ ಪುಸ್ತಕದ ೨೦ನೇ ಪಾಠದಲ್ಲಿ.

" ಆತನ ಹಿರಿ ಮಗನಾದ ನಾಲ್ಕನೇ ಜಾರ್ಜನಿಗೆ ಪಟ್ಟವಾಯಿತು " ಈ ವಾಕ್ಯದಲ್ಲಿ " ಹಿರಿ ಮಗನು " ಎಂಬ ಪದವು ಅಶುದ್ಧವಾಗಿದೆ. ಯಾಕಂದರೆ; ಹಿರಿದು ಶಬ್ದವು ಪುಲ್ಲಿಂಗಕ್ಕೆ ವಿಶೇಷಣವಾದರೆ ಅವಕ್ಕೆ " ಹಿರಿಯ " ಎಂಬ ರೂಪ ಬರುತ್ತದೆ. ಕಾರಣ ಹಿರಿಯ ಮಗನು ಎಂದಿರಬೇಕು.

ಮೂರನೇ ಪುಸ್ತಕ ಪುಟ ೮೨ ಪಂಕ್ತಿ ೭

" ಅವರಿಂದ ನಿನ್ನನ್ನು ತೋಟಕ್ಕೆ ಕರಕೊಂಡು ಹೋ

ಗುವದಿಲ್ಲ.” ಈ ವಾಕ್ಯವಲ್ಲಿ “ ಆವದರಿಂದ ” ಈ ತೃತೀಯೆಯ ಮೂಲಶಬ್ದವು “ ಅದದು ” ಎಂದು ತೋರುತ್ತದೆ. ಅದರೆ ಆಗು ಧಾತುವಿನಿಂದ “ ಆದದು ” ಎಂಬ ರೂಪವು ಸಿದ್ಧವಾಗುವದಿಲ್ಲ, ಆದ ಎಂಬ ಕೃದ್ವಾಚಕಕ್ಕೆ ಅದು ಎಂಬ ಕ್ರಿಯಾನಾಮದ ಪ್ರತ್ಯಯವನ್ನು ಹಚ್ಚಿದರೆ “ ಆದದ್ದು ” ಎಂಬ ರೂಪವು ಸಿದ್ಧವಾಗುತ್ತದೆ. ಇವರ ತೃತೀಯೆ ಆದದ್ದರಿಂದ ಎಂದಾಗುತ್ತದೆ. ಎಷ್ಟೋ ಜನರು ಈ ಸಂಬಂಧದ ವಿಚಾರ ಲೆಕ್ಕಿಸದೆ ಆದದರಿಂದ, ಹೋದದರಿಂದ, ಇದ್ದದರಿಂದ, ಎಂದು ಶಿಥಿಲವಾಗಿ ಬರೆಯುತ್ತಾರೆ. ಕಾರಣ ಈ ಸಂಬಂಧದ ನಿಯಮವನ್ನು ಇಲ್ಲಿ ಬರೆಯುತ್ತೇವೆ.

(೧) ತಾಲವ್ಯಾಂತ ಧಾತುಗಳ ಭೂತಕೃದ್ವಾಚಕಕ್ಕೂ ಎರಡು ಸ್ವರಗಳುಳ್ಳ ಭೂತಕೃದ್ವಾಚಕಕ್ಕೂ ಪರವಾದ ಶಬ್ದದ ಅಕಾರಕ್ಕೆ ದಕಾರಾವೇಶ ವಾಗುತ್ತದೆ.

ಉಳಿದ ಭೂತ ನಿಷೇಧ ಕೃದ್ವಾಚಕಗಳಿಗೆ ಪರವಾದ ಅದು ಶಬ್ದದ ಅಕಾರಕ್ಕೂ ಕೃದ್ವಾಚಕದ ಅಂತ್ಯ ಸ್ವರಕ್ಕೂ ಲೋಪವಾಗುತ್ತದೆ.

ಉದಾ —ಎರಡುಸ್ವರ– ಕೆಟ್ಟ + ಅದು=ಕೆಟ್ಟದ್ದು,
ತಾಲವ್ಯಾಂತಕ್ಕೆ – ನುಡಿದ + ಅದು=ನುಡಿದದ್ದು,
ಮೂರು ಸ್ವರದವು– ಮಾಡಿದ + ಅದು=ಮಾಡಿದ್ದು,
ನಿಷೇಧಕ್ಕೆ – ಕೆಡದ + ಅದು=ಕೆಡದ್ದು,

ಮೂರನೇ ಪುಸ್ತಕ ಲಕ್ಷಿನೇ ಪುಟ ಕಡೆಯ ಪಂಕ್ತಿ.

“ಕನ್ನಡೀ ಬಡಿವಳೆಂದು ನೀನು ಅಂಬುವದಿಲ್ಲವೇ”

ಈ ವಾಕ್ಯದಲ್ಲಿ “ಬಡಿವಳು” ಎಂಬ ಕ್ರಿಯಾಪದವು ಬಡೆವಳು ಎಂದು ಇರತಕ್ಕದ್ದು. ಯಾಕಂದರೆ, ಇದರ ಮೂಲ ಧಾತು “ಬಡೆ” ಎಂದು ಇರುತ್ತದೆ.

ಇವಲ್ಲದೆ "ಅಂಬುವಮು" ಎಂಬ ರೂಪವು ಅಶುದ್ಧವಾಗುತ್ತದೆ. ಯಾಕಂದರೆ, "ಅನ್ನು" ಧಾತುವಿನಿಂದ ಅಂಬುವಮು ಎಂಬ ರೂಪವು ಸಿದ್ಧವಾಗುವದಿಲ್ಲ. ಅನ್ನುವದು ಎಂಬ ರೂಪವು ಸಿದ್ಧವಾಗುತ್ತದೆ. ಮೂಲಧಾತು "ಅಂಬು" ಎಂದಿದ್ದರೆ ಅಂಬುವಮು ಎಂಬ ರೂಪವು ಸಿದ್ಧವಾಗುತ್ತಿತ್ತು.

Dr. KIRTIKAR ON "SENSES."

"ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಡಾಕ್ಟರ ಕೀರ್ತಿಕರರ ವ್ಯಾಖ್ಯಾನವು."

ಕಲಿಸುವದು ಮಾಸ್ತರ ಜನರು ಅರಿಸಿಕೊಂಡಂಥ ಒಂದು ವಿಶೇಷವಾದ ಹೋರೆಯು. ಕಲಿಸುವ ವಿಷಯಗಳನ್ನು ಹಾಗೂ ಹೀಗೂ ಕಲಿಸಿ, ಪಾಠ ಮಾಡಿಸಿ, ವಿದ್ಯಾರ್ಥಿಗಳ ಬಾಯಿಯಿಂದ ಪ್ರಶ್ನಗಳಿಗೆ ಉತ್ತರಗಳನ್ನು ಒಡನುಡಿಸಿದರೆ ಶಿಕ್ಷಕರ ಕೆಲಸವು ಪೂರ್ಣವಾಯಿತೆಂದು ಯಾರೂ ಹೇಳರು. ಕಲಿಯುವ ವಿಷಯಗಳನ್ನು ವಿದ್ಯಾರ್ಥಿಗಳು ಸರಿಯಾಗಿ ತಿಳುಕೊಂಡು ಆ ಧೋರಣದಿಂದ ಬೇರೆ ವಿಷಯಗಳನ್ನು ಕಲಿಯಲಿಕ್ಕೆ ಸಮರ್ಥರಾದರೆ ಮಾತ್ರ ಆ ಶಿಕ್ಷಕರು ಗುರುಗಳೆಂಬ ಗೌರವದ ಬಿರುದಿಗೆ ಪಾತ್ರರಾಗುವರು. ಈ ಮೇರೆಗೆ ಅಧ್ಯಾಪನವನ್ನು ಸಾಗಿಸಬೇಕಾದರೆ ಅಥವಾ ವಿದ್ಯಾರ್ಥಿಗಳ ಜ್ಞಾನೇಂದ್ರಿಯಗಳ ಸಾಮರ್ಥ್ಯವನ್ನು ತಿಳುಕೊಂಡು ಅವುಗಳಿಗೆ ಸರಿಯಾಗಿ ಜಾಲನೇ ಕೊಡಬೇಕಾದರೆ, ಈ ಇಂದ್ರಿಯಗಳ ಜ್ಞಾನವು ಶಿಕ್ಷಕರಿಗೆ ಇರಲಿಕ್ಕೆ ಬೇಕೆಂದು ಪ್ರತ್ಯೇಕವಾಗಿ ಹೇಳುವ ಅವಶ್ಯವಿಲ್ಲ.

ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಠಾಣೆಯ ಸಿವಿಲ್ ಸರ್ಜನ್ನರಾದ ಡಾಕ್ಟರ ಕೀರ್ತಿಕರರು ಕೆಲವು ದಿವಸಗಳ ಕೆಳಗೆ ಮುಂಬಯಿಯಲ್ಲಿ ವ್ಯಾಖ್ಯಾನ ಕೊಟ್ಟರು.

ಿದು ನಮ್ಮ ಶಿಕ್ಷಕ ಜನರಿಗೆ ಬಹು ಪ್ರಯೋಜನಕರವಾಗಿ
ಿೋರಿದ್ದರಿಂದ, ಅದನ್ನು ಕನ್ನಡಿಸಿ ಇವರ ಅಡಿಯಲ್ಲಿ ಕೊ
ಟ್ಟಿತ್ತೇವೆ.

ಅವರು ಹೇಳಿದ್ದೇನೆಂದರೆ:—ಜೇರೆ ಬೇರೆ ತರದ ಸೇವ್ಯ
ಸೇವಕ ಭಾವಗಳಿಂದ ಕೂಡಿರುವ ಘಟಕಗಳುಳ್ಳ ಈ ಮನು
ಷ್ಯ ದೇಹಕ್ಕೆ ಘಡಿಯಾರದ ಸಾಮ್ಯವನ್ನು ಕೊಡಬಹುದು. ಈ
ದೇಹದ ಸೂಕ್ಷ್ಮರೀತಿಯಿಂದ ವರ್ಣನ ಮಾಡತೊಡಿಗಿದರೆ
ಬುದು ಇಡೀ ವರ್ಷವಾದರೂ ಸಾಕಾಗಲಿಕ್ಕಿಲ್ಲ; ತಾನು ಎರಡು
ತಾಸುಗಳಪಾಡೇನು! ಆದರೆ ನಾನು ಕೈಕೊಂಡ ವಿಷಯದ
ಸ್ಥೂಲಮಾನದಿಂದ ದಿಗ್ದರ್ಶನವನ್ನು ಮಾಡಲಿಕ್ಕೆ ತಮ್ಮೆಲ್ಲರ
ಅನುಗ್ರಹದಿಂದ ಯತ್ನಿಸುತ್ತೇನೆ.

ಲೋಹಾದಿ ಧಾತುಗಳಿಂದ ಕೂಡಿದ ಹೊಗೆಬಂಡಿ, ಘಡಿ
ಯಾಳ ಮುಂತಾದ ಕಲಾಯಂತ್ರಗಳನ್ನು ಕುರಿತು ವಿಚಾರ
ಮಾಡುನಾಗ್ಗೆ, ಆ ಯಂತ್ರದ ಕಾರ್ಯ, ಅವನ್ನು ನಿರ್ಮಿ
ಸಿದ ಶಿಲ್ಪಿಗನ ಉದ್ದೇಶ, ಆ ಉದ್ದೇಶವನ್ನು ಈಡೇರಿಸುವ
ಉಪಾಯಗಳು, ಎಂಬೀ ಮಾತುಗಳು ಮನವರಿಕೆಯಾದರೆ
ಆ ಯಂತ್ರದ ಅಂತಸ್ಥ ರಚನೆಯು ಅನಾಯಾಸವಾಗಿ ಲಕ್ಷಕ್ಕೆ
ಬರುವದು; ಅದರ ಬಂದು ಭಾಗವು ಮತ್ತೊಂದು ಭಾಗ
ಕ್ಕೆ ಹ್ಯಾಗೆ ಹೊಂದಿಕೊಂಡಿರುವದು, ಯಾಕೆ ಹೊಂದಿಕೊಂಡಿ
ರುವದು, ಅವರಿಂದಾಗುವ ಪ್ರಯೋಜನವೇನು, ಎಂಬ ಸಂ
ಗತಿಗಳು ಸ್ವಲ್ಪ ವಿಚಾರದಿಂದ ತಿಳಿಯುವವು. ಹಗಲಿರುಳು
ಹೊತ್ತು ತಿಳಿಸಬೇಕೆಂಬದೇ ಘಡಿಯಾಳ ಮಾಡಿದವನ ಉ
ದ್ದೇಶವು. ತಗಡಿನಮೇಲೆ ಕೊರೆದ ವರ್ತುಲದ ಹನ್ನೆರಡು
ಸಮ ಭಾಗಗಳನ್ನು ಬಳಗಿರುವ ಅನೇಕ ಸಣ್ಣ ದೊಡ್ಡ ಚಕ್ರ
ಕ್ರಗಳ ಸಹಾಯದಿಂದ ಅನುಕ್ರಮವಾಗಿ ತೋರಿಸುವದೇ

ಇವಲ್ಲದೆ "ಅಂಬುವದು" ಎಂಬ ರೂಪವು ಅಶುದ್ಧವಾಗುತ್ತದೆ. ಯಾಕಂದರೆ, "ಅನ್ನು" ಧಾತುವಿನಿಂದ ಅಂಬುವದು ಎಂಬ ರೂಪವು ಸಿದ್ಧವಾಗುವದಿಲ್ಲ. ಅನ್ನುವದು ಎಂಬ ರೂಪವು ಸಿದ್ಧವಾಗುತ್ತದೆ. ಮೂಲಧಾತು "ಅಂಬು" ಎಂದಿದ್ದರೆ ಅಂಬುವದು ಎಂಬ ರೂಪವು ಸಿದ್ಧವಾಗುತ್ತಿತ್ತು.

Dr. KIRTIKAR ON "SENSES."

"ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಡಾಕ್ಟರ ಕೀರ್ತಿಕರರ ವ್ಯಾಖ್ಯಾನವು."

ಕಲಿಸುವದು ಮಾಸ್ತರ ಜನರು ಅರಿಸಿಕೊಂಡಂಥ ಬೀದಿ ವಿಶೇಷವಾದ ಹೋರೆಯು. ಕಲಿಸುವ ವಿಷಯಗಳನ್ನು ಹಾಗೂ ಹೀಗೂ ಕಲಿಸಿ, ಪಾಠ ಮಾಡಿಸಿ, ವಿದ್ಯಾರ್ಥಿಗಳ ಬಾಯಿಯಿಂದ ಪ್ರಶ್ನೆಗಳಿಗೆ ಉತ್ತರಗಳನ್ನು ಬಡನುಡಿಸಿದರೆ ಶಿಕ್ಷಕರ ಕೆಲಸವು ಪೂರ್ಣವಾಯಿತೆಂದು ಯಾರೂ ಹೇಳರು. ಕಲಿಯುವ ವಿಷಯಗಳನ್ನು ವಿದ್ಯಾರ್ಥಿಗಳು ಸರಿಯಾಗಿ ತಿಳುಕೊಂಡು ಆ ಧೋರಣದಿಂದ ಬೇರೆ ವಿಷಯಗಳನ್ನು ಕಲಿಯಲಿಕ್ಕೆ ಸಮರ್ಥರಾದರೆ ಮಾತ್ರ ಆ ಶಿಕ್ಷಕರು ಗುರುಗಳೆಂಬ ಗೌರವದ ಬಿರುದಿಗೆ ಪಾತ್ರರಾಗುವರು. ಈ ಮೇರೆಗೆ ಅಧ್ಯಾಪನವನ್ನು ಸಾಗಿಸಬೇಕಾದರೆ ಅಥವಾ ವಿದ್ಯಾರ್ಥಿಗಳ ಜ್ಞಾನೇಂದ್ರಿಯಗಳ ಸಾಮರ್ಥ್ಯವನ್ನು ತಿಳುಕೊಂಡು ಅವುಗಳಿಗೆ ಸರಿಯಾಗಿ ಜಾಲನೇ ಕೊಡಬೇಕಾದರೆ, ಈ ಇಂದ್ರಿಯಗಳ ಜ್ಞಾನವು ಶಿಕ್ಷಕರಿಗೆ ಇರಲಿಕ್ಕೆ ಬೇಕೆಂದು ಪ್ರತ್ಯೇಕವಾಗಿ ಹೇಳುವ ಅವಶ್ಯವಿಲ್ಲ.

ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಠಾಣೆಯ ಸಿವಿಲ್ ಸರ್ಜನ್ನರಾದ ಡಾಕ್ಟರ ಕೀರ್ತಿಕರರು ಕೆಲವು ದಿವಸಗಳ ಕೆಳಗೆ ಮುಂಬಯಿಯಲ್ಲಿ ವ್ಯಾಖ್ಯಾನ ಕೊಟ್ಟರು.

ಅದು ನಮ್ಮ ಶಿಕ್ಷಕ ಜನರಿಗೆ ಬಹು ಪ್ರಯೋಜನಕರವಾಗಿ ತೋರಿದ್ದರಿಂದ, ಅದನ್ನು ಕನ್ನಡಿಸಿ ಇವರ ಅಡಿಯಲ್ಲಿ ಕೊಡುತ್ತೇವೆ.

ಅವರು ಹೇಳಿದ್ದೇನೆಂದರೆ:—ಜೇರೆ ಜೇರೆ ತರದ ಸೇವ್ಯ ಸೇವಕ ಭಾವಗಳಿಂದ ಕೂಡಿರುವ ಘಟಕಗಳುಳ್ಳ ಈ ಮನುಷ್ಯ ದೇಹಕ್ಕೆ ಘಡಿಯಾರದ ಸಾಮ್ಯವನ್ನು ಕೊಡಬಹುದು. ಈ ದೇಹದ ಸೂಕ್ಷ್ಮರೀತಿಯಿಂದ ವರ್ಣನ ಮಾಡತೊಡಿಗಿದರೆ ಬಂದು ಇಡೀ ವರ್ಷವಾದರೂ ಸಾಕಾಗಲಿಕ್ಕಿಲ್ಲ; ತಾಸು ಎರಡು ತಾಸುಗಳಪಾಡೇನು! ಆದರೆ ನಾನು ಕೈಕೊಂಡ ವಿಷಯದ ಸ್ಥೂಲವಾನದಿಂದ ದಿಗ್ದರ್ಶನವನ್ನು ಮಾಡಲಿಕ್ಕೆ ತಮ್ಮೆಲ್ಲರ ಅನುಗ್ರಹದಿಂದ ಯತ್ನಿಸುತ್ತೇನೆ.

ಲೋಹಾದಿ ಧಾತುಗಳಿಂದ ಕೂಡಿದ ಹೊಗೆಬಂಡಿ, ಘಡಿಯಾಳ ಮುಂತಾದ ಕಲಾಯಂತ್ರಗಳನ್ನು ಕುರಿತು ವಿಚಾರ ಮಾಡುವಾಗ್ಗೆ, ಆ ಯಂತ್ರದ ಕಾರ್ಯ, ಅವನ್ನು ನಿರ್ಮಿಸಿವ ಶಿಲ್ಪಿಗನ ಉದ್ದೇಶ, ಆ ಉದ್ದೇಶವನ್ನು ಈಡೇರಿಸುವ ಉಪಾಯಗಳು, ಎಂಬೀ ಮಾತುಗಳು ಮನವರಿಕೆಯಾದರೆ ಆ ಯಂತ್ರದ ಅಂತಸ್ಥ ರಚನೆಯು ಅನಾಯಾಸವಾಗಿ ಲಕ್ಷಕ್ಕೆ ಬರುವದು; ಅದರ ಬಂದು ಭಾಗವು ಮತ್ತೊಂದು ಭಾಗಕ್ಕೆ ಹ್ಯಾಗೆ ಹೊಂದಿಕೊಂಡಿರುವದು, ಯಾಕೆ ಹೊಂದಿಕೊಂಡಿರುವದು, ಅವರಿಂದಾಗುವ ಪ್ರಯೋಜನವೇನು, ಎಂಬ ಸಂಗತಿಗಳು ಸ್ವಲ್ಪ ವಿಚಾರದಿಂದ ತಿಳಿಯುವವು. ಹಗಲಿರುಳು ಹೊತ್ತು ತಿಳಿಸಬೇಕೆಂಬದೇ ಘಡಿಯಾಳ ಮಾಡಿದವನ ಉದ್ದೇಶವು. ತಗಡಿನಮೇಲೆ ಕೊರೆದ ವರ್ತುಲದ ಹನ್ನೆರಡು ಸಮ ಭಾಗಗಳನ್ನು ಬಳಗಿರುವ ಅನೇಕ ಸಣ ದೊಡ್ಡ ಚಕ್ರಗಳ ಸಹಾಯದಿಂದ ಅನುಕ್ರಮವಾಗಿ ತೋರಿಸುವದೇ

ಆ ಘಡಿಯಾಳದ ಕರ್ತವ್ಯವು. ಈ ಸಂಗತಿಗಳನ್ನು ಮುಂ
ದಿಟ್ಟು ನೋಡಿದರೆ ಚಕ್ರಗಳೂ ಮುಳ್ಳುಗಳೂಬಂದಕ್ಕೊಂ
ದು ಹ್ಯಾಗೆ ಸಂಬಂಧಿಸಿರುತ್ತವೆ, ತಮ್ಮ ತಮ್ಮ ಕೆಲಸಗಳ
ನ್ನು ಹ್ಯಾಗೆ ಮಾಡುತ್ತವೆ, ಎಂಬ ಸಂಗತಿಗಳು ಆಯಾ
ಸವಿಲ್ಲದೆ ತಿಳಿಯುವವು. ಅದೇ ಮೇರೆಗೆ ಈ ಮಾನವ
ಶರೀರವೆಂಬ ಕಲಾಯಂತ್ರವನ್ನು ಪರೀಕ್ಷಿಸಿ ನೋಡಿದರೆ
ಈ ದೇಹವು ಪ್ರಾಣವಿರುವವರೆಗೆ ಮಾಡತಕ್ಕದ್ದೇನು, ಆ
ದರಲ್ಲಿ ಯಾವ ಯಾವ ವ್ಯಾಪಾರಗಳು ಸಂಭವಿಸುತ್ತವೆ, ಆ
ದರ ಉತ್ಪತ್ತಿ, ಸ್ಥಿತಿ*, ಲಯ, ಎಂಬೀ ಮೂರು ಅವಸ್ಥೆಗ
ಳುಂಟಾಗಲಿಕ್ಕೆ ಯಾವ ಯಾವ ಶಕ್ತಿಗಳು, ಯಾವ ಯಾವ
ವ್ಯವಸ್ಥೆಗಳು, ಯಾವ ಯಾವ ಸೃಷ್ಟ ಪದಾರ್ಥಗಳು ಕಾ
ರಣವಾಗಿರುತ್ತವೆ, ಮತ್ತು ಇವು ಬಂದಕ್ಕೊಂದು ಹ್ಯಾಗೆ
ಸಂಬಂಧಿಸಿರುತ್ತವೆ ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಈ
ಪ್ರಶ್ನೆಗಳ ಸಮಾಧಾನವನ್ನು ಹೇಳುವದು ಇಂದ್ರಿಯ ವಿ
ಜ್ಞಾನ ಶಾಸ್ತ್ರದ ಕೆಲಸವು.

ತುಸು ವಿಚಾರಮಾಡಿ ನೋಡಿದರೆ, ಶರೀರದಲ್ಲಿ (೧) ಚ
ಲನವಲನ ಮತ್ತು ಕ್ರಮಣ (೨) ಪೋಷಣ ಅಥವಾ ಆ
ಪ್ಯಾಯನ (೩) ಚೈತನ್ಯ ಅಥವಾ ಚೇತನಾ (ಅಂದರೆ ಬಾ
ಹ್ಯ ಸೃಷ್ಟಿಯ ಸಮಾಗಮದಿಂದ ಆದ ಜ್ಞಾನವು) (೪) ಸಂತಾ
ನ ವೃದ್ಧಿ ಎಂಬೀ ನಾಲ್ಕು ಪ್ರಕಾರದ ಕಾರ್ಯಗಳನ್ನು
ಮಾಡುವ ಶಕ್ತಿಗಳು ಇರುತ್ತವೆಂದು ತಿಳಿಯುವದು. ಈ
ನಾಲ್ಕು ಕ್ರಿಯೆಗಳು ಅಥವಾ ಶಕ್ತಿಗಳು ಬಂದಕ್ಕೊಂದು
ಭಿನ್ನವಾಗಿದ್ದರೂ ಆಜನ್ಮ ಅಂದರೆ ಹುಟ್ಟಿದಂದಿನಿಂದ ಮು

---

* ಸ್ಥಿತಿ ಎಂಬದರ ಅರ್ಥವು ಸಂಗೋಪನ, ಪಾಲನಪೋಷಣ, ಸಂ
ವರ್ಧನ ಎಂದು ತಿಳಿದುಕೊಳ್ಳಬೇಕು.

ಬದಗುವವರೆಗೆ ಬಂದನ್ನೊಂದು ಅವಲಂಬಿಸಿರು
ವಿಷ್ಟೇ ಅಲ್ಲ, ಸ್ವಕಾರ್ಯಸಾಧನೆದಲ್ಲಿ ಪೂರ್ಣ ತಪ್ಪ
ಾಗಿರುತ್ತವೆ. ಅವುಗಳಲ್ಲಿ ಬಂದು ದುರ್ಬಲವಾದರೆ ಉ
ವುಗಳಲ್ಲಿ ಕೂಡಲೇ ಹೆಚ್ಚು ಕಡಿಮೆಯಾಗುವದು. ಈ
ಲ್ಲ ಶಕ್ತಿಗಳು ಸರಿಯಾಗಿ ನಡೆಯುವಂಥ ದೇಹವೇ ಉ
ಮ ದೇಹವೆನಿಸಿಕೊಳ್ಳುವದು. ಇವುಗಳಲ್ಲಿ ಪ್ರತಿಯೊಂ
ಶಕ್ತಿಯು ಬಂದೇ ಕೆಲಸವನ್ನು ಮಾಡುತ್ತಿರುವದರಿಂ
ಶಾರೀರಕ ಶ್ರಮದ ಭಾರವು ಎಲ್ಲ ಶಕ್ತಿಗಳಲ್ಲಿ ಸರಿಯಾ
ಹಂಚಲ್ಪಡುವವಲ್ಲದೆ ಕೆಲಸವೂ ಸರಸಾಗಿ ಸಾಗುವದು.
ದೃಷ್ಟಿಯಿಂದ ನೋಡಲು ನಮ್ಮ ಶರೀರವು ಶ್ರಮವಿ
ಾಗದ ಬಂದು ಉತ್ತಮ ಉದಾಹರಣೆಯಾಗಿರುತ್ತದೆಂ
ು ಸ್ಪಷ್ಟವಾಗಿ ತೋರುವದು.

ಈ ನಾಲ್ಕು ಕ್ರಿಯೆಗಳು ದೇಹದ "ಜೀವಂತ ಅವಸ್ಥೆ
ುಲ್ಲಿ" ನಡೆಯುತ್ತವೆಂದು ಆಗಲೇ ಹೇಳಿದ್ದೇವೆ. ಈ ಮಾ
ನ್ನು ಚೆನ್ನಾಗಿ ಲಕ್ಷವಲ್ಲಿಡಬೇಕು. ಯಾಕಂದರೆ ಎಲ್ಲ
ೃಷ್ಟ ಪದಾರ್ಥಗಳಲ್ಲಿ ಸಜೀವ ನಿರ್ಜೀವಗಳೆಂಬ ಎರಡು
ೊಡ್ಡ ಭಾಗಗಳಿರುತ್ತವೆ. ಸಜೀವ ಪದಾರ್ಥಗಳಲ್ಲಿ ಪ್ರಾ
ಿ ಮತ್ತು ವನಸ್ಪತಿಗಳು ಬರುತ್ತವೆ. ರಸಾಯನ ಶಾಸ್ತ್ರ
ದಲ್ಲಿ ವರ್ಣಿಸಲ್ಪಟ್ಟ ನಾನಾಪ್ರಕಾರದ ಧಾತು, ವಾಯು,
ಕ್ಷಾರಗಳು ನಿರ್ಜೀವ ಪದಾರ್ಥಗಳಲ್ಲಿ ಸಮಾವಿಷ್ಟವಾಗು
ತ್ತವೆ. ಇದೇ ಭಾಗದೊಳಗೆ ಮಲಮೂತ್ರಾದಿ ಸೇಂದ್ರಿಯ
ಪದಾರ್ಥಗಳು ಸಹ ಸೇರಿಸಲ್ಪಡುತ್ತವೆ. ಮಾನವ ಶರೀರ
ಕ್ಕೆ ಸಜೀವ ನಿರ್ಜೀವಗಳೆಂಬ ಎರಡೂ ಅವಸ್ಥೆಗಳುಂಟು.
ಶರೀರವ ಚಲನವಲನ, ಪೋಷಣ, ಚೇತನ, ಸಂತಾನವರ್ಧ
ನಗಳೆಂಬ ಶಕ್ತಿಗಳಿಗೆ ಮೂಲಾಧಾರವಾವ ಪ್ರಾಣವೆಂಬ ಆ
ತರ್ಕ್ಯ ಬಡವೆಯು ಹೊರಟು ಹೋದಾಗ್ಯೂ ಆ ಶರೀರವನ್ನೆ

ಕಸುಯುನ ಕ್ರಿಯೆಯನ್ನು ನಡಿಸಿ, ಮೃತ ಶರೀರದಿಂದ ದೂ
ಷಿತ ಮತ್ತು ದುರ್ಗಂಧವುಳ್ಳ ಅನೇಕ ಹೊಸ ಪದಾರ್ಥಗಳ
ನ್ನು ಹುಟ್ಟಿಸುವ ಶಕ್ತಿಯು ಮರಣವ ತರುವಾಯ ಕೆಲಕಾ
ವವರೆಗೆ ಇರುತ್ತದೆ. ಜೀವಂತ ಶರೀರದಲ್ಲಿ ಹೊಸ ಪದಾರ್ಥ
ಗಳನ್ನು ಹುಟ್ಟಿಸುವ ಶಕ್ತಿಗೆ (Potential Energy) "ನ
ವ ಪದಾರ್ಥ ಪ್ರಭವಿಷ್ಣುತಾ' ಎಂಬ ಹೆಸರು ಕೊಡುವಾ. ಈ
ಶಕ್ತಿಯು ಮೃತಶರೀರದಲ್ಲಿ ತುಸು ಕಾಲದವರೆಗೆ ಇರುತ್ತದೆ.
ಅವರಿಂದ ಶರೀರದಲ್ಲಿ ಬಂದು ಬಗೆಯ ನಿಯಮಿತ ಪದಾರ್ಥ
ಗಳು ಸಿದ್ಧವಾಗಿ ಹೋದವೆಂದರೆಈ ಸೋಜಿಗವಾದ ದೇಹ
ದ ಮಹಿಮೆಯು ತೀರುವವಲ್ಲದೆ ಅವರ ಐಹಿಕ ಕಾರ್ಯವು
ಕಟ್ಟಾಗುತ್ತದೆ. ಬಳಿಕ ಈ ಶರೀರವು ಕೇವಲ ಮಣ್ಣಾಗ
ದಿದ್ದರೂ ಮಣ್ಣಿನಂತೆ ಆಗುತ್ತದೆ. "ಮಣ್ಣಿಗೆ ಮಣ್ಣು
ಕೂಡಿತು" ಎಂಬ ನಾಣ್ಣುಡಿಯು ಅಕ್ಷರಶಃ ದಿಟವಾಗದಿದ್ದ
ರೂ ತತ್ವತಃ ದಿಟವಾಗಿರುತ್ತದೆ.

ಜೀವಂತ ಶರೀರದಲ್ಲಿ ಮತ್ತು ಮೃತ ಶರೀರದಲ್ಲಿ ಹೊ
ಸ ಪದಾರ್ಥಗಳನ್ನು ಹುಟ್ಟಿಸುವ ಶಕ್ತಿಯು ಇರುತ್ತದೆಂ
ದು ಮೇಲೆ ಹೇಳಿದ್ದೇವೆ. ಆದರೆ ಅವರ ಕಾರ್ಯಗಳು ಭಿ
ನ್ನ ಭಿನ್ನವಾಗಿರುತ್ತವೆ. ಅದು ಹ್ಯಾಗಂದರೆ:—ಜೀವಂತ
ಶರೀರದೊಳಗಿನ ಶಕ್ತಿಯು ಶರೀರಕ್ಕೆ ಪೋಷಕ ಅನ್ನವು
ದೊರೆಯುವ ವರೆಗೆ ಹಚ್ಚುತ್ತಿರುತ್ತದೆ, ಇಲ್ಲವೇ ಇದ್ದಷ್ಟೇ
ಇರುತ್ತದೆ. ಆದರೆ ಅನ್ನದಿಂದ ಮೃತ ಶರೀರವ ಪೋಷಣ
ವಾಗಲಾರದು. ಅನ್ನದ ಪೋಷಕ ಗುಣವು ಎಷ್ಟು ಮೇಲಾ
ದದ್ದು ಇದ್ದಾಗ್ಯೂ ಮೃತ ಶರೀರವು ವೃದ್ಧಿ ಹೊಂದುವದಿಲ್ಲ;
ಇಷ್ಟೇ ಅಲ್ಲ, ಅವರ ಕ್ರಿಯಾಶಕ್ತಿಯು ಕ್ಷಣ ಕ್ಷಣಕ್ಕೆ
ಕಡಿಮೆಯಾಗುವದು. ಆ ಶರೀರವ ನಾಶವಾವ ಬಾಗ

ಳು ತಿರಿಗಿ ಸರ್ವಥಾ ಹುಟ್ಟಲಾರವು. ಮರಣ ಸಮಯಕ್ಕೆ ಶರೀರದಲ್ಲಿದ್ದ ದ್ರವ್ಯಗಳೆಲ್ಲ ಕ್ರಮದಿಂದ ಹೆಚ್ಚಾಗುತ್ತ ಹೋಗುವವೇ ಹೊರ್ತು ಪೂರ್ವ ಸ್ಥಿತಿಯು ಎಂದಿಗೂ ಬರದು. ಜೀವಂತ ಶರೀರದ ಕಾರ್ಯವು ಹೀಗಲ್ಲ, ಅದಕ್ಕೆ ಪೋಷಕ ಅನ್ನವು ಸಿಕ್ಕರೆ ಸಾಕು, ಹೆಚ್ಚಾದ ದ್ರವ್ಯಗಳನ್ನು ತಿರಿಗಿ ಹುಟ್ಟಿಸುವ ವ್ಯಾಪಾರವು ಎಡೆಬಿಡದೆ ಸಾಗುತ್ತದೆ. ಅನ್ನದ ಪೋಷಕ ಗುಣವು ಹೆಚ್ಚಿದಂತೆ ಶರೀರಾಭಿವೃದ್ಧಿಯು ಭರದಿಂದ ಸಾಗುತ್ತದೆ. ಮತ್ತು ಮುಂದಿನ ಅರು ವ್ಯಾಪಾರಗಳು ಸಂಭವಿಸುತ್ತವೆ. ಅವು ಯಾವವೆಂದರೆ— (೧) ಜೀವಂತ ಶರೀರವು ತನ್ನಿಚ್ಛೆಯಿಂದಲೇ ತಾನು ಅತ್ತಿತ್ತ ಜಲಿಸುತ್ತದೆ; ಅಥವಾ ಕೈಕಾಲು ಮೊರೆ ಮುಂತಾದ ತನ್ನ ಯಾವದೊಂದು ಅವಯವವನ್ನು ಅಗಳಾಡಿಸುತ್ತದೆ. ಈ ಬಲ ಶಕ್ತಿಯು ಶರೀರದಲ್ಲಿಯೇ ಇರುತ್ತದೆ. (೨) ಬಾಹ್ಯ ಸ್ಥಿತಿಗೆ ಸರಿಯಾಗಿ ಜೀವಂತ ಶರೀರವ ಚಲನವಲನವು ಸಾಗುತ್ತದೆ. ಶರೀರಕ್ಕೆ ಅನ್ಯ ಪದಾರ್ಥಗಳ ಸ್ಪರ್ಶವಾದರೆ ಅದು ಸ್ವಾಭಾವಿಕವಾಗಿಯೇ ಅವುಗಳ ಕಡೆಗೆ ತಿರುಗುತ್ತದೆ. ನೀವು ನಮ್ಮ ಕಡೆಗೆ ನೋಡುತ್ತ ನಿಂತಿರುವಾಗ್ಗೆ ನಿಮ್ಮಹಿಂದೆ ಯಾರಾದರೂ ಕೂಗಿದರೆ, ನೀವು ಕೂಡಲೇ ಆ ಸಪ್ಪಳವಾದತ್ತ ನೋಡುವಿರಿ. ಯಾರಾದರೂ ನಿಮಗೆ ತಿಳಿಯದಂತೆ ಕಿವಿಯಲ್ಲಿ ಸಣ್ಣದೊಂದು ಕಡ್ಡಿಯನ್ನಾಗಲಿ ಕೂದಲುವನ್ನಾಗಲಿ ಹಾಕಿದರೆ ನಿಮ್ಮ ತಲೆಯನ್ನು ಅತ್ತಿತ್ತ ಅಗಳಾಡಿಸುವಿರಿ. ನೀವು ಮಲಗಿದ್ದಾಗ್ಗೆ ತಣ್ಣೀರನ್ನು ನಿಮ್ಮಮೇಲೆ ಉಗ್ಗಿದರೆ ನೀವು ಗಾಬರಿಯಾಗಿ ಅಪ್ಪಾಸಿ ಏಳುವಿರಿ. ಕಾಲಿಗೆ ಕೊಳ್ಳಿಯನ್ನು ಹಚ್ಚಿದರೆ ಒಟ್ಟನೆ ಕಾಲನ್ನು ಜಾಡಿಸುವಿರಿ. ಅರ್ತ ಸ್ವರದಿಂದ ಅಳುತ್ತಿದ್ದರೆ,

ಅವನ್ನು ಕೇಳಿವಷ್ಟಕ್ಕೆ ಅದರ ಕಾರಣವು ತಿಳಿಯದಿದ್ದ
ನಿಮ್ಮ ಕಣ್ಣೊಳಗೆ ನೀರು ಬರುವವು. ಇಷ್ಟು ದೂರವ್ಯಾಪ
ಕೂಸು ಹುಟ್ಟಿದ ಕೂಡಲೆ ಜಿಟ್ಟನೆ ಜೀರಿ ಅಳುವದು
ರಿಗೆ ಗೊತ್ತುಂಟು. ಅದು ದುಃಖಿದರ್ಶಕವಲ್ಲ; ಆ
ಕೂಸಿನ ಮೋರೆ ಎದೆಗಳು ಹೊರಗೆ ಬಂದಕೂಡಲೆ ಗಳ
ವಲ್ಲಿ ನಿರ್ಮಾತವಿದ್ದ ಅದರ ಪುಪ್ಪುಸಗಳಲ್ಲಿ ಗಾಳಿಯು ಳ
ದಿಂದ ಸೇರಲು ಅವರಿಂದ ಧ್ವನಿ ಹುಟ್ಟಿ ಶ್ವಾಸೋಚ್ಛ್ವಾಸ
ಆರಂಭವಾಗುತ್ತದೆ. ಇದೇ ಧ್ವನಿಗೆ ಶ್ರೀಮಚ್ಛಂಕರಾ
ರ್ಯರು "ಸೋಹಂ, ಕೋಹಂ" ಎಂಬ ಹೆಸರು ಕೊ
ದ್ದಾರೆ. ದಿಟವಾಗಿ ಹೇಳಬೇಕಾದರೆ ಈ ಶ್ವಾಸೋಚ್ಛ್ವಾಸ
ಬಾಹ್ಯ ಪದಾರ್ಥವಾದ ಹವೆಯ ಸಂಸರ್ಗದಿಂದ ಆಗ
ಗುತ್ತದೆ. ಅವುವಿಂದ ಶರೀರಾಂತರ್ಗತ ಕ್ರಿಯೆಗಳೂ ಆ
ರಲ್ಲಿ ಆಗುವ ಹೆಚ್ಚು ಕಡಿಮೆಗಳೂ ಸುತ್ತಲಿನ ಸಂಗತಿ
ನ್ನು ಅವಲಂಬಿಸಿ ಇರುತ್ತವೆ.

(ಸಶೇಷ.)

TERMINAL EXAMINATION OF THE DHRWA TRAINING COLLEGE-METHOD, 1892.

ಧಾರವಾಡ ಟ್ರೇನಿಂಗ ಕಾಲೇಜಿನ ಷಾಣ್ಮಾಸಿಕ ಪರೀಕ್ಷೆ—ಶಿಕ್ಷಣ ಪದ್ಧತಿ, ೧೮೯೨.

೧ನೇ ವರ್ಷ.

೧. (ಅ) ತಿದ್ದುವಿಕೆ ಅಂದರೆ ಏನು? ಅದರಿಂದಾಗುವ ಪ್ರ
ಯೋಜನವೇನು?

(ಬ) ಹುಡುಗರನ್ನು ಕೈಕೆಳಗೆ ವ್ಯವಸ್ಥಿತವಾಗಿ ನಡಿ
ಕೊಳ್ಳುವದನ್ನು ಕುರಿತು ಇರುವ ನಿಯಮಗಳನ್ನು ಬರೆಯಿರಿ.

(ಗು. ೧

೨. ಆಳಿಕೆಯ ಸಾನುಭ್ಯವೆಂದರೇನು? ಅದನ್ನು ಹುಟ್ಟ

ಹುದೋ? ಅದನ್ನು ಬಿಳಿಸಲಪೇಕ್ಷಿಸುವವನಲ್ಲಿ ಯಾವ ಗುಣ
ಳು ಇರಬೇಕು? ಅವುಗಳನ್ನು ವಿವರಿಸಿರಿ. (ಗು. ೪)

೩. ಶಿಕ್ಷೆಯ ಪ್ರಕಾರಗಳೆಷ್ಟು? ಪಾಠ ವರ್ಜಮಾಡುವ ಶಿ
ಯನ್ನು ಕುರಿತು ಮತ್ತು ಅದರಲ್ಲಿ ಸೇರಿದ ಮತ್ತೊಂದು ಶಿ
ಯನ್ನು ಕುರಿತು ಲಕ್ಷದಲ್ಲಿಡತಕ್ಕ ನಿಯಮಗಳು ಯಾವವು;
ಮತ್ತು ಅಪರಾಧ ಪ್ರತಿಬಂಧಕವಾದ ಶಿಕ್ಷೆಯ ಉದ್ದೇಶವು ಕೊ
ಡಿಗಾಣಬೇಕಾದರೆ ಶಿಕ್ಷೆಯು ಯಾವ ಗುಣವುಳ್ಳದ್ದಿರಬೇಕು ?
(ಗು. ೧೦)

೪. ಸದ್ಗುಣದ ವರ್ಜಸ್ಸು ಅಂದರೇನು? ಅದನ್ನು ಪಡಿಯಲಿ
ಕ್ಕೆ ಶಿಕ್ಷಕನಲ್ಲಿ ಯಾವ ಗುಣಗಳಿರಬೇಕು? ಅವುಗಳಲ್ಲಿ ಅಧ್ಯಾಪ
ನಕ್ಕೆ ಉಪಯುಕ್ತವಾದ ಗುಣಗಳನ್ನು ವಿವರಿಸಿರಿ. (ಗು. ೧೦)

೫. ವಿದ್ಯಾರ್ಥಿಗಳ ಒಲವುಗಳನ್ನು ಬರೆದು, ಶಿಕ್ಷಕನು
ಯಾವ ಒಲವಿನಿಂದ ಯಾವ ಕಾರ್ಯವನ್ನು ಸಾಧಿಸಿಕೊಳ್ಳತಕ್ಕ
ದ್ದೆಂಬದನ್ನು ಬರೆಯಿರಿ. (ಗು. ೧೦)

೬. ಶಿಕ್ಷಕನ ಹೋರೆಯು ಯಾವ ಪ್ರಕಾರದ್ದೆಂಬದನ್ನು
ಪೂರ್ಣವಾಗಿ ವಿವರಿಸಿರಿ. (ಗು. ೪)

೭. ವಿದ್ಯಾರ್ಥಿಗಳು ನಕಲು ಮಾಡಬಾರದು ಎಂಬದರ ಕಾರ
ಣಗಳನ್ನು ಸವಿಸ್ತಾರವಾಗಿ ವಿವರಿಸಿರಿ, ಮತ್ತು ನಕಲು ಮಾಡು
ವ ಚಟದಿಂದ ವಿದ್ಯಾರ್ಥಿಗಳ ನೀತಿಯಲ್ಲಿ ಏನು ಹೆಚ್ಚು ಕಡಿಮೆ
ಯಾಗುವದು ಬರೆಯಿರಿ. (ಗು. ೧೪)

೮. ಶಿಕ್ಷಣ ಅಂದರೇನು? ಅದು ಪೂರ್ಣವಾಯಿತೆಂದು ಹ್ಯಾಗೆ
ತಿಳಿಯಬೇಕು? ಅದನ್ನು ಪೂರ್ಣ ಮಾಡಬೇಕಾದರೆ ಶಿಕ್ಷಕನಲ್ಲಿ
ಅವಶ್ಯವಾಗಿರತಕ್ಕ ಗುಣಗಳು ಯಾವವು? (ಗು. ೧೦)

೯. ವ್ಯಾಖ್ಯಾನ ಪದ್ಧತಿಯ ಭಾಗಗಳನ್ನೂ ಅವರಲ್ಲಿರುವ
ಗುಣದೋಷಗಳನ್ನು ವಿವರಿಸಿರಿ. (ಗು. ೪)

೧೦. ಮನೆಯಲ್ಲಿ ಕೊಡತಕ್ಕ ಪಾಠಗಳನ್ನು ವಿವರಿಸಿರಿ ಮತ್ತು
ಸಹಾಯಕ ಪಾಠದ ಸಂಬಂಧದ ನಿಯಮಗಳನ್ನು ಬರೆಯಿರಿ,
(ಗು. ೧೦)

ಎನೇ ವರ್ಷದ ವರ್ಗ.

(೧) "ಕಲಿಸೋಣವೇ ತನ್ನ ಜನ್ಮದ ಹೋರೆಯು" ಎಂದು

ಅವನ್ನು ಕೇಳಿವಷ್ಟಕ್ಕೆ ಅದರ ಕಾರಣವು ತಿಳಿಯದಿದ್ದರೂ
ನಿಮ್ಮ ಕಣ್ಣೊಳಗೆ ನೀರು ಬರುವವು. ಇಷ್ಟು ದೂರವ್ಯಾಪಕವಾದ
ಕೂಸು ಹುಟ್ಟಿದ ಕೂಡಲೆ ಬಿಟ್ಟನೆ ಚೀರಿ ಅಳುವದು ಎಲ್ಲ
ರಿಗೆ ಗೊತ್ತುಂಟು. ಅದು ದುಃಖಿವರ್ಶಕವಲ್ಲ; ಅದು
ಕೂಸಿನ ಮೋರೆ ಎದೆಗಳು ಹೊರಗೆ ಬಂದಕೂಡಲೆ ಗಭ
ವಲ್ಲಿ ನಿರ್ಮಾತವಿದ್ದ ಅದರ ಪುಪ್ಪುಸಗಳಲ್ಲಿ ಗಾಳಿಯು ಭ
ದಿಂದ ಸೇರಲು ಅವರಿಂದ ಧ್ವನಿ ಹುಟ್ಟಿ ಶ್ವಾಸೋಛ್ವಾಸಕ್ಕೆ
ಆರಂಭವಾಗುತ್ತದೆ. ಇದೇ ಧ್ವನಿಗೆ ಶ್ರೀಮಚ್ಛಂಕರಾಚಾ
ರ್ಯರು "ಸೋಹಂ, ಕೋಹಂ" ಎಂಬ ಹೆಸರು ಕೊಟ್ಟಿ
ದ್ದಾರೆ. ದಿಟವಾಗಿ ಹೇಳಬೇಕಾದರೆ ಈ ಶ್ವಾಸೋಛ್ವಾಸವು
ಬಾಹ್ಯ ಪದಾರ್ಥವಾದ ಹವೆಯ ಸಂಸರ್ಗದಿಂದ ಆಗುತ್ತದೆ. ಅವದರಿಂದ ಶರೀರಾಂತರ್ಗತ ಕ್ರಿಯೆಗಳೂ ಅದ
ರಲ್ಲಿ ಆಗುವ ಹೆಚ್ಚು ಕಡಿಮೆಗಳೂ ಸುತ್ತಲಿನ ಸಂಗತಿಗಳ
ನ್ನು ಅವಲಂಬಿಸಿ ಇರುತ್ತವೆ.

(ಸಕೇಷ.)

TERMINAL EXAMINATION OF THE DHRWAR TRAINING COLLEGE-METHOD, 1892.

ಧಾರವಾಡ ಟ್ರೇನಿಂಗ ಕಾಲೇಜಿನ ಷಾಣ್ಮಾಸಿಕ ಪರೀಕ್ಷೆ—ಶಿಕ್ಷಣ ಪದ್ಧತಿ, ೧೮೯೨.

೧ನೇ ವರ್ಷ.

೧. (ಅ) ತಿದ್ದುವಿಕೆ ಅಂದರೆ ಏನು? ಅದರಿಂದಾಗುವ ಪ್ರಯೋಜನವೇನು?

(ಬ) ಹುಡುಗರನ್ನು ಕೈಕೆಳಗೆ ವ್ಯವಸ್ಥಿತವಾಗಿ ನಡಿಸಿ ಕೊಳ್ಳುವದನ್ನು ಕುರಿತು ಇರುವ ನಿಯಮಗಳನ್ನು ಬರೆಯಿರಿ.

(ಗು. ೧೧)

೨. ಆಲಿಕೆಯ ಸಾಮರ್ಥ್ಯವೆಂದರೇನು? ಅದನ್ನು ಹುಟ್ಟಿಸ

ಹುದೋ? ಅದನ್ನು ಬೆಳಿಸಲಪೇಕ್ಷಿಸುವವನಲ್ಲಿ ಯಾವ ಗುಣ
ಳು ಇರಬೇಕು? ಅವುಗಳನ್ನು ವಿವರಿಸಿರಿ. (ಗು. ೪)

೩. ಶಿಕ್ಷೆಯ ಪ್ರಕಾರಗಳಿಷ್ಟು? ಪಾಠ ವರ್ಜಮಾಡುವ ಶಿ
ಯನ್ನು ಕುರಿತು ಮತ್ತು ಅದರಲ್ಲಿ ಸೇರಿದ ಮತ್ತೊಂದು ಶಿ
ಯನ್ನು ಕುರಿತು ಲಕ್ಷದಲ್ಲಿಡತಕ್ಕ ನಿಯಮಗಳು ಯಾವವು;
ತ್ತು ಅಪರಾಧ ಪ್ರತಿಬಂಧಕವಾದ ಶಿಕ್ಷೆಯ ಉದ್ದೇಶವು ಕೊ
ಗಾಣಬೇಕಾದರೆ ಶಿಕ್ಷೆಯು ಯಾವ ಗುಣವುಳ್ಳದ್ದಿರಬೇಕು ?
(ಗು. ೧೦)

೪. ಸದ್ಗುಣದ ವರ್ಜಸ್ಸು ಅಂದರೇನು? ಅದನ್ನು ಪಡಿಯಲಿ
ಶಿಕ್ಷಕನಲ್ಲಿ ಯಾವ ಗುಣಗಳಿರಬೇಕು? ಅವುಗಳಲ್ಲಿ ವಿದ್ಯಾಪ
ಕ್ಕೆ ಉಪಯುಕ್ತವಾದ ಗುಣಗಳನ್ನು ವಿವರಿಸಿರಿ. (ಗು. ೧೦)

೫. ವಿದ್ಯಾರ್ಥಿಗಳ ಒಲವುಗಳನ್ನು ಬರೆದು, ಶಿಕ್ಷಕನು
ಯಾವ ಬಲವಿನಿಂದ ಯಾವ ಕಾರ್ಯವನ್ನು ಸಾಧಿಸಿಕೊಳ್ಳತಕ್ಕ
ಪ್ರಬಂಧವನ್ನು ಬರೆಯಿರಿ. (ಗು. ೧೦)

೬. ಶಿಕ್ಷಕನ ಹೋರೆಯು ಯಾವ ಪ್ರಕಾರದ್ದೆಂಬದನ್ನು
ಪೂರ್ಣವಾಗಿ ವಿವರಿಸಿರಿ. (ಗು. ೪)

೭. ವಿದ್ಯಾರ್ಥಿಗಳು ನಕಲು ಮಾಡಬಾರದು ಎಂಬದರ ಕಾರ
ಣಗಳನ್ನು ಸವಿಸ್ತಾರವಾಗಿ ವಿವರಿಸಿರಿ, ಮತ್ತು ನಕಲು ಮಾಡು
ವ ಚಟದಿಂದ ವಿದ್ಯಾರ್ಥಿಗಳ ನೀತಿಯಲ್ಲಿ ಏನು ಹೆಚ್ಚು ಕಡಿಮೆ
ಯಾಗುವದು ಬರೆಯಿರಿ. (ಗು. ೧೪)

೮. ಶಿಕ್ಷಣ ಅಂದರೇನು? ಅದು ಪೂರ್ಣವಾಯಿತೆಂದು ಹ್ಯಾಗೆ
ತಿಳಿಯಬೇಕು? ಅದನ್ನು ಪೂರ್ಣ ಮಾಡಬೇಕಾದರೆ ಶಿಕ್ಷಕನಲ್ಲಿ
ಅವಶ್ಯವಾಗಿರತಕ್ಕ ಗುಣಗಳು ಯಾವವು? (ಗು. ೧೦)

೯. ವ್ಯಾಖ್ಯಾನ ಪದ್ಧತಿಯ ಭಾಗಗಳನ್ನೂ ಅದರಲ್ಲಿರುವ
ಗುಣದೋಷಗಳನ್ನು ನಿವರಿಸಿರಿ. (ಗು. ೪)

೧೦. ಮನೆಯಲ್ಲಿ ಕೊಡತಕ್ಕ ಪಾಠಗಳನ್ನು ವಿವರಿಸಿರಿ ಮತ್ತು
ಸಹಾಯಕ ಪಾಠದ ಸಂಬಂಧದ ನಿಯಮಗಳನ್ನು ಬರೆಯಿರಿ,
(ಗು. ೧೦)

ಎನೇ ವರ್ಷದ ವರ್ಗ.

(೧) "ಕಲಿಸೋಣವೇ ತನ್ನ ಜನ್ಮದ ಹೋರೆಯು" ಎಂದು

ಶಿಕ್ಷಕರು ತಿಳಿಯಬೇಕು. ಈ ಸಿದ್ಧಾಂತವನ್ನು ಸ್ಥಾಪಿಸಿರಿ. ೧೦

(೨) "ಮೇಲಿಂದಮೇಲೆ ಶಿಕ್ಷೆಯನ್ನು ಕೊಡುವ ಶಿಕ್ಷಕನು ತನ್ನ ಕೆಲಸಕ್ಕೆ ಅಯೋಗ್ಯನು" ಎಂದು ಒಬ್ಬ ವಿದ್ವಾಂಸನು ತಿಳಿಸುತ್ತಾನೆ; ಈ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಸಕಾರಣವಾಗಿ ಬರೆಯಿರಿ. ೪

(೩) ಶಿಕ್ಷಣದ ವ್ಯಾಪಕಾರ್ಥವೆಂದರೇನು? ಆ ಅರ್ಥಕ್ಕೆ ಸರಿಯಾಗಿ ಶಿಕ್ಷಣವನ್ನು ಸಾಗಿಸಬೇಕಾದರೆ ಯಾವ ಪ್ರಧಾನ ಸಾಧನವನ್ನು ಕೈಕೊಳ್ಳುವಿರಿ. ೫

(೪) "ಗೊತ್ತಿದ್ದರಿಂದ ಗೊತ್ತಿಲ್ಲದ್ದಕ್ಕೆ ಸಾಗು" ಎಂಬ ನಿಯಮದ ತಥ್ಯವನ್ನೂ ಪ್ರಯೋಜನವನ್ನೂ ವಿವರಿಸಿರಿ. ೬

(೫) ಪದ್ಧತಿಯು ಜ್ಞಾನವಷ್ಟೇ ನಿಷ್ಪ್ರಯೋಜಕವೂ ಹಾನಿಕರವೂ ಆಗಿರುತ್ತದೆಂಬುದನ್ನು ಸ್ಥಾಪಿಸಿರಿ. ಸಿದ್ಧಾಂತವನ್ನು ಕಲಿಸುವ ಸರಿಯಾದ ಮಾರ್ಗ ಯಾವುದು? ೫

(೬) "ಸರಿಯಾದ ಸಮವಾದ ಉತ್ತರಗಳನ್ನು ಸ್ವೀಕರಿಸಿ ಅವು ತಪ್ಪೆ ಆದಾಗ ಎಂಬವನ್ನು ತೋರಿಸಿರಿ" ಎಂಬ ನೇಮುವನ್ನು ಯಾಕೆ ಅನುಸರಿಸಬೇಕು. ಕಲಿಸುವಾಗ ಈ ನೇಮುವನ್ನು ಹ್ಯಾಗೆ ಪಾಲಿಸಬಹುದೆಂಬುದನ್ನು ಉದಾಹರಣೆಯಿಂದ ತೋರಿಸಿರಿ. ೧೦

(೭) ಉತ್ತಮವಾದ ನಾಜನದ ಲಕ್ಷಣಗಳನ್ನು ವಿವರಿಸಿರಿ. ಮುತ್ತು ವಿದ್ಯಾರ್ಥಿಗಳು ಈ ಕಲೆಯುಲ್ಲಿ ನಿಪುಣರಾಗಬೇಕಾದರೆ, ಅನುಕೂಲವಾದ ಮುಖ್ಯ ಸಂಗತಿಗಳ್ಯಾವವು? ೧೦

(೮) ಒಂದು ಶಾಲೆಯ ಜನರು ಶಾಲೆಗೆ ಹುಡುಗರನ್ನೇ ಕಳುಹಿಸುವದಿಲ್ಲ ಶಾಲೆಯನ್ನು ಸೇರಿಸಿದರೂ, ವಿದ್ಯಾಭಿವೃದ್ಧಿಯ ಕಡೆಗೆ ಮನಸ್ಸು ಹಾಕುವದಿಲ್ಲವಾದ್ದರಿಂದ ಶಾಲೆಯ ಕೆಲಸದಮೇಲೆ ನಿಮ್ಮನ್ನು ನೇಮಿಸಿದರೆ ಆ ಜನರ ಅನುಕೂಲತೆಯನ್ನೂ, ಸಹಾಯವನ್ನೂ ಹ್ಯಾಗೆ ಸಂಪಾದಿಸುವಿರಿ? ೧೫

(೯) ಯಾವ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಹೊತ್ತು ವ್ಯರ್ಥವಾಗಿ ಹೋಗುವ ಸಂಭವವು ಹೆಚ್ಚು ಉಂಟು? ಈ ನಷ್ಟವನ್ನು ಹ್ಯಾಗೆ ತಪ್ಪಿಸಬಹುದು? ೫

(೧೦) ನಿಮ್ಮ ಸ್ನೇಹಿತನನ್ನು ಮಾಸ್ತರನ ಕೆಲಸಕ್ಕೆ ಹೊಸದಾಗಿ ನೇಮಿಸಿರುತ್ತಾರೆ? ಅವನಿಗೆ ಪ್ರಯೋಜನಕರವಾದ ಕೆಲವು ಸೂಚನೆಗಳನ್ನು ಬರೆಯಿರಿ? ೯

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಜಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಯದಿಂದಿತ್ತಪೆವೋದುವರ್ಗ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದ ವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕೆಟ್ಟ ಶಾಲಾ ಗೃಹಗಳಿಂದ, ವಿದ್ಯಾರ್ಥಿಗಳು ತಕ್ಕಷ್ಟಕ್ಕಿಂತ ಹೆಚ್ಚು ಅಭ್ಯಾಸ ಮಾಡುವದರಿಂದ, ಇನ್ನೂ ಹಲವು ಕಾರಣಗಳಿಂದ ವಿದ್ಯಾಸ ಇಲಾಖೆಯೊಳಗಿನ ವಿದ್ಯಾರ್ಥಿಗಳ ಶರೀರಪ್ರಕೃತಿಯು ಕೆಡಹತ್ತಿರುವದೆಂದು ಆ ಇಲಾಖೆಯ ಸಾನಿಟರಿ ಕಮಿಶನರರು ಬರೆದಿರುತ್ತಾರೆ. ಅಪಚನ ತಲಸೂಲಿ ಈ ರೋಗಗಳು ಮೊದಲು ಆ ಇಲಾಖೆಯಲ್ಲಿ ಅಪರೂಪವಾಗಿದ್ದವು. ಆದರೆ ಇತ್ತಲಾಗಿ ಇವು ಬಹಳ ಹಬ್ಬುಗೊಂಡಿರುತ್ತವೆ. ಶರೀರಪ್ರಕೃತಿಯಿಂದ ಸುದೃಢರೂ ಚಟುವಟಿಕೆಯುಳ್ಳವರೂ ದಷ್ಟಪುಷ್ಟರೂ ಆದ ತರುಣ ಗೃಹಸ್ಥರು ಮೂರಕ್ಕೆ ಹತ್ತೆಂಟು ಜನರು ಸಹ ಸಿಗುವದು ದುರ್ಲಭವೇರುತ್ತದೆ. ವೃಷ್ಟಿಯು ಮಾಂದ್ಯವಂತು ಅಲ್ಲಿ ಬಹಳ ಬೀಳದೆ. ಈ ರೋಗವು ಸಣ್ಣಕ್ಷರದ ಪುಸ್ತಕಗಳನ್ನು ಸಾಕಷ್ಟು ಬೆಳಕಿಲ್ಲದ ಕೋಣೆಗಳಲ್ಲಿ ಅಯೋಗ್ಯವಾದ ಡೆಸ್ಕುಗಳ ಮೇಲೆ ಇಟ್ಟು, ಬೊಗ್ಗಿ ಕಣ್ಣಿಗೆ ತ್ರಾಸ ಮಾಡಿಕೊಂಡು ಓದುವದರಿಂದ ಹುಟ್ಟುತ್ತದೆಂಬದಕ್ಕೆ ಸಂಶಯವಿಲ್ಲ. ಅಭ್ಯಾ

ಶಿಕ್ಷಕರು ತಿಳಿಯಬೇಕು. ಈ ಸಿದ್ಧಾಂತವನ್ನು ಸ್ಥಾಪಿಸಿರಿ. ೧೦

(೨) "ಮೇಲಿಂದಮೇಲೆ ಶಿಕ್ಷೆಯನ್ನು ಕೊಡುವ ಶಿಕ್ಷಕನು ತನ್ನ ಕೆಲಸಕ್ಕೆ ಅಯೋಗ್ಯನು" ಎಂದು ಒಬ್ಬ ವಿದ್ವಾಂಸನು ತಿಳಿಸುತ್ತಾನೆ; ಈ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಸಕಾರಣವಾಗಿ ಬರೆಯಿರಿ. ೪

(೩) ಶಿಕ್ಷಣದ ವ್ಯಾಪಕಾರ್ಥವೆಂದರೇನು? ಆ ಅರ್ಥಕ್ಕೆ ಸರಿಯಾಗಿ ಶಿಕ್ಷಣವನ್ನು ಸಾಗಿಸಬೇಕಾದರೆ ಯಾವ ಪ್ರಧಾನ ಸಾಧನವನ್ನು ಕೈಕೊಳ್ಳುವಿರಿ. ೪

(೪) "ಗೊತ್ತಿದ್ದದರಿಂದ ಗೊತ್ತಿಲ್ಲದ್ದಕ್ಕೆ ಸಾಗು" ಎಂಬ ನಿಯಮದ ತತ್ವವನ್ನೂ ಪ್ರಯೋಜನವನ್ನೂ ವಿವರಿಸಿರಿ. ೬

(೫) ಪದ್ಧತಿಯು ಜ್ಞಾನವಷ್ಟೇ ನಿಷ್ಪ್ರಯೋಜಕವೂ ಹಾನಿಕರವೂ ಆಗಿರುತ್ತದೆಂಬದನ್ನು ಸ್ಥಾಪಿಸಿರಿ. ಸಿದ್ಧಾಂತವ ಕಲಿಸತಕ್ಕ ಮಾರ್ಗ ಯಾವದು? ೪

(೬) "ನಾಳಿನ ದಿನವಾದ ಉತ್ತರಗಳನ್ನು ಸ್ವೀಕರಿಸಿ ಅವು ತಪ್ಪೆ ಹ್ಯಾಗೆ ಎಂಬದನ್ನು ತೋರಿಸಿರಿ" ಎಂಬ ನೇಮನವನ್ನು ಯಾಕೆ ಅನುಸರಿಸಬೇಕು. ಕಲಿಸುವಾಗ ಈ ನೇಮನವನ್ನು ಹ್ಯಾಗೆ ಪಾಲಿಸಬಹುದೆಂಬದನ್ನು ಉದಾಹರಣೆಯಿಂದ ತೋರಿಸಿರಿ. ೧೦

(೭) ಉತ್ತಮವಾದ ನಾಚಿಕೆಯ ಲಕ್ಷಣಗಳನ್ನು ವಿವರಿಸಿರಿ. ಮತ್ತು ವಿದ್ಯಾರ್ಥಿಗಳು ಈ ಕಲೆಯಲ್ಲಿ ನಿಪುಣರಾಗಬೇಕಾದರೆ, ಅನುಕೂಲಿಸುವ ಮುಖ್ಯ ಸಂಗತಿಗಳ್ಯಾವವು? ೧೦

(೮) ಒಂದು ಹಳ್ಳಿಯ ಜನರು ಸಾಲಿಗೆ ಹುಡುಗರನ್ನೀಕಳುಹಿಸುವದಿಲ್ಲ ಕಳುಹಿಸಿದರೂ, ವಿದ್ಯಾರ್ಥಿ ವೃದ್ಧಿಯ ಕಡೆಗೆ ಮನಸು ಹಾಕುವದಿಲ್ಲೆಂಬುವ ಹಳ್ಳಿಯ ಸಾಲೆಯ ಕೆಲಸದಮೇಲೆ ನಿಮ್ಮನ್ನು ನೇಮಿಸಿದಲ್ಲಿ ಆ ಜನರ ಅನುಕೂಲತೆಯನ್ನೂ, ಸಹಾಯವನ್ನೂ ಹ್ಯಾಗೆ ಸಂಪಾದಿಸುವಿರಿ? ೧೫

(೯) ಯಾವ ಪಾಠಗಳಲ್ಲಿ ವಿದ್ಯಾರ್ಥಿಗಳ ಹೊತ್ತು ವ್ಯರ್ಥವಾಗಿ ಹೋಗುವ ಸಂಭವವು ಹೆಚ್ಚು ಉಂಟು? ಈ ನಷ್ಟವನ್ನು ಹ್ಯಾಗೆ ತಪ್ಪಿಸಬಹುದು? ೪

(೧೦) ನಿಮ್ಮ ಸ್ನೇಹಿತನನ್ನು ಮಾಸ್ತರನ ಕೆಲಸಕ್ಕೆ ಹೊಸದಾಗಿ ನೇಮಿಸಿರುತ್ತಾರೆ? ಅವನಿಗೆ ಪ್ರಯೋಜನಕರವಾದ ಕೆಲವು ಸೂಚನೆಗಳನ್ನು ಬರೆಯಿರಿ? ೮

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಜಯಸುತ್ಯಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕ್ಕೆಕೊಂಬುದೈ ।
ಯಿಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಆಗಷ್ಟ ೧೮೯೯. [ಸಂಚಿಕೆ ೮

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕೆಟ್ಟ ಶಾಲಾ ಗೃಹಗಳಿಂದ, ವಿದ್ಯಾರ್ಥಿಗಳು ತಕ್ಕಷ್ಟ
ಂತ ಹೆಚ್ಚು ಅಭ್ಯಾಸ ಮಾಡುವದರಿಂದ, ಇನ್ನೂ ಹಲ
ಪ್ರಕಾರಣಗಳಿಂದ ಮದ್ರಾಸ ಇಲಾಖೆಯೊಳಗಿನ ವಿದ್ಯಾರ್ಥಿಗ
ಶರೀರಪ್ರಕೃತಿಯು ಕಡಪತ್ತಿರುವದೆಂದು ಆ ಇಲಾಖೆಯ
ಸಿಟರಿ ಕಮಿಶನರರು ಬರೆದಿರುತ್ತಾರೆ. ಅಪಚನ ತಲಸೂ
ಈ ರೋಗಗಳು ಮೊದಲು ಆ ಇಲಾಖೆಯಲ್ಲಿ ಅಪರೂಪ
ಾಗಿದ್ದವು. ಆದರೆ ಇತ್ತಲಾಗಿ ಇವು ಬಹಳ ಹಬ್ಬುಗೊಂ
ರುತ್ತವೆ. ಶರೀರಪ್ರಕೃತಿಯಿಂದ ಸುವೃಢರೂ ಚಟುವಟಿ
ಯುಳ್ಳವರೂ ದಷ್ಟಪುಷ್ಟರೂ ಆದ ತರುಣ ಗೃಹಸ್ಥರು
ೂರಕ್ಕೆ ಹತ್ತೆಂಟು ಜನರು ಸಹ ಸಿಗುವದು ದುರ್ಲಭ
ೋರುತ್ತದೆ. ವೃಷ್ಟಿಯು ಮೊಂದ್ಯವಂತು ಅಲ್ಲಿ ಬಹಳ ಬೆ
ದದೆ. ಈ ರೋಗವು ಸಣ್ಣಪ್ಪರವ ಪುಸ್ತಕಗಳನ್ನು ಸಾ
ಷ್ಟು ಬೆಳಕಿಲ್ಲದ ಕೋಣೆಗಳಲ್ಲಿ ಅಯೋಗ್ಯವಾದ ಡೆಸ್ಕುಗ
ಮೇಲೆ ಇಟ್ಟು, ಬೊಗ್ಗಿ ಕಣ್ಣಿಗೆ ತ್ರಾಸ ಮಾಡಿಕೊಂಡು
ದುವದರಿಂದ ಹುಟ್ಟುತ್ತದೆಂಬದಕ್ಕೆ ಸಂಶಯವಿಲ್ಲ. ಅಭ್ಯಾ

ಸ ಮಾಡುವ ಕಾಲಕ್ಕ ತಕ್ಕ ರೀತಿಯಿಂದ [illegible] ಳ
ಬೊಗ್ಗಿ ಅಥವಾ ಬೇರೆ ಕಷ್ಟಕರ ಸ್ಥಿತಿಯಲ್ಲಿ ಕೂತುಕೊ
ಳ್ಳುವದರಿಂದ ಬಂದಿಲ್ಲಬಂದು ಪ್ರಕಾರದ ರೋಗವು ಹತ್ತೋ
ಹತ್ತುವದು.

ಈ ಸ್ಥಿತಿ ಸುಧಾರಿಸುವದನ್ನು ಕುರಿತು ಶಾಲಾಗೃಹಗ
ಳೂ ಸಾಮಾನು—ಪುಸ್ತಕಗಳೂ ತಕ್ಕವುಗಳಾಗಿರುವದಲ್ಲದೆ
ವಿದ್ಯಾರ್ಥಿಗಳು ವಯಸ್ಸಿನ ಮಾನದಿಂದ ಕೆಳಗೆ ತೋರಿಸಿ
ದಂತೆ ಅಭ್ಯಾಸ ಮಾಡತಕ್ಕದ್ದೆಂದು ಅವರು ಸೂಚಿಸುತ್ತಾರೆ.

ವಯಸ್ಸು.	ಮನೆಯಲ್ಲಿ ಮತ್ತು ಶಾಲೆಯಲ್ಲಿ ಕೂಡಿ ಒಟ್ಟು ಅಭ್ಯಾಸ ಮಾಡುವ ಕಾಲ.	ವ್ಯಾಯಾಮ ವಿಶ್ರಾಂತಿಗಳ ಕಾಲ.	ನಿದ್ರೆಯ ಕಾಲ.
೫	೬	೧೬	೧೦
೪	೬/೫	೧೬	೯/೧೦
೯	೫	೧೬	೯
೧೦	೪	೧೬	೪
೧೧	೫	೧೧	೪
೧೬	೬	೧೦	೪
೧೫	೫	೯	೪
೧೪	೪	೯	೫
೧೫	೯	೯	೫

ಮತ್ತು ಅವರು ತಿಳಿಸುವದೇನೆಂದರೆ, ೬ ೫ ವರ್ಷದ
ವಿದ್ಯಾರ್ಥಿಗಳು ೬, ೬½ ತಾಸು ಅಭ್ಯಾಸ ಮಾಡಬಹುದು.
ಅದಕ್ಕೂ ಹೆಚ್ಚು ಹೊತ್ತು ಅವರಿಂದ ಅಭ್ಯಾಸ ಮಾಡಿಸುವ
ದು ತಕ್ಕದ್ದಲ್ಲ. ಬಂದು ವೇಳೆ ಮಾಡಿಸಿದರೆ ಅಪಾಯ ತ
ಪ್ಪದು. ೬ ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಸಾಧಾ
ರಣ ಪ್ರತಿಯು ದೇಶಭಾಷೆಯ ಶಾಲೆಗಳು ಎಷ್ಟು ಮಾತ್ರ
ವೂ ಕೆಲಸದವಲ್ಲ. ಅವರಿಗೆ "ಕಿಂಡರಗಾರ್ಟನ ಪದ್ಧತಿ"
ಯಿಂದ ಕಲಿಸುವ ಸ್ವತಂತ್ರ ಶಾಲೆಗಳೇ ಬೇಕು. ೧೪ರಿಂದ

ಗೆ ಅಭ್ಯಾಸ ಮಾಡಬಹುದೆಂದು ಮೇಲಿನ ಕೋಷ್ಟಕದಲ್ಲಿ ಹೇಳಿರುತ್ತದೆ. ಆದರೆ ಅವರು ಆರೇಳು ತಾಸಿಗಿಂತ ಹೆಚ್ಚು ವೇಳೆ ಅಭ್ಯಾಸ ಮಾಡದಿದ್ದರೆ ಹಿತವೇ ಸರಿ. ಕಾಲೇಜದಲ್ಲಿ ಅಭ್ಯಾಸ ಮಾಡುವವರು ೪ | ೯ ತಾಸು ಅಭ್ಯಾಸ ಮಾಡಬಹುದು. ೧೦ ತಾಸಿಗಿಂತ ಹೆಚ್ಚು ವೇಳೆ ಯಾರೂ ಅಭ್ಯಾಸ ಮಾಡಕೂಡದು.

ಸ್ವೀಡನ್ ದೇಶದಲ್ಲಿ "ಸ್ಲೊಯಿಡ ಪದ್ಧತಿ" ಯಿಂದ ಶಿಕ್ಷಣ ನಡೆಯುತ್ತದೆ. ಆ ಪದ್ಧತಿಯನ್ನು ತಿಳುಕೊಳ್ಳುವದಕ್ಕಾಗಿ ಮಿಸ್ ಕಾರ್ಟರಾಯಿಟ ಎಂಬ ದೊರೆಸಾನಿಯು ನಾಸ ಪಟ್ಟಣಕ್ಕೆ ಹೋಗಿದ್ದಳು. ಅವಳು ಆ ಪದ್ಧತಿಯನ್ನು ವಿವರಿಸಿದ್ದು ಹ್ಯಾಗಂದರೆ:—

"ಸ್ಲೊಯಿಡ ಈ ಶಬ್ದವು ಸ್ವೀಡಿಷ್ ಭಾಷೆಯದು. ಅದು 'ಸ್ಲೋಗ' ಅಂದರೆ ಕುಶಲ ಅಥವಾ ಚತುರ ಎಂಬ ವಿಶೇಷಣದಿಂದ ಹುಟ್ಟಿರುತ್ತದೆ. ಬಡಿಗೆಯ ಕೆಲಸದ ದ್ವಾರದಿಂದ ಶಿಕ್ಷಣ ಕೊಡತಕ್ಕ ಪದ್ಧತಿಗೆ ಈ ಹೆಸರು ಕೊಡಲ್ಪಟ್ಟದೆ. ಸ್ಲೊಯಿಡ ಪದ್ಧತಿಗೂ ಸರ್ವಸಾಧಾರಣವಾದ ಬಡಿಗಗಷ್ಟಕ್ಕೂ ಇರುವ ಹೆಚ್ಚು ಕಡಿಮೆ ಯಾವದೆಂದರೆ, ಸ್ಲೊಯಿಡ ಪದ್ಧತಿಯಲ್ಲಿ ಸಣ್ಣ ಸಣ್ಣ ನಮೂನೆಗಳು ಮಾಡಲ್ಪಡುತ್ತವೆ. ಅದರಲ್ಲಿ ಯಂತ್ರಗಳ ಉಪಯೋಗವಾಗುವದಿಲ್ಲ. ಚಾಕುವೇ ಅದರಲ್ಲಿ ಉಪಯೋಗಿಸಲ್ಪಡುವ ಮುಖ್ಯವಾದ ಹತಿಯಾರವು. (ನಾಸ ಪಟ್ಟಣದಲ್ಲಿರುವ ಸ್ಲೊಯಿಡ ಪದ್ಧತಿಯ ಅಧ್ಯಾಪಕನಾದ ಜರ್‌ಸ್ಲೊಮನ್ನನು ಚಾಕುವೇ ಸ್ಲೊಯಿಡ ಪದ್ಧತಿಯ ಮುಖ್ಯ ಕುರುಹು, ಅದು ಇಲ್ಲದಿದ್ದರೆ ಆ ಪದ್ಧತಿಗೆ ಸ್ಲೊಯಿಡ ಪದ್ಧತಿ ಎಂಬ ಹೆಸ

ಡು ಕಾರಣಗಳುಂಟು. ೧ ಯಂತ್ರಗಳನ್ನು ಬಡವರು ಕೊಂಡುಕೊಳ್ಳಲಾರರು; ಆದರೆ ಜಾಕುಗಳನ್ನು ದೊರಕಿಸುವದು ಯಾರಿಗೂ ಕಠಿಣವಲ್ಲ, ೨ ಯಂತ್ರದಿಂದ ಕೆಲಸ ಮಾಡಿದರೆ ಕೈಕಣ್ಣುಗಳಿಗೆ ತಕ್ಕಷ್ಟು ಶಿಕ್ಷಣವು ದೊರಕಲಾರದು. ಆದದರಿಂದ ಅವು ಶಿಕ್ಷಣದ ಸರಿಯಾದ ಸಾಧನಗಳು ಆಗಲಾರವು.

ಸ್ಲೊಯಿಡ ಪದ್ಧತಿಯಿಂದಾಗುವ ಪ್ರಯೋಜನಗಳು ಯಾವವೆಂದರೆ:—

೧. ಕೆಲಸ ಮಾಡುವ ಉತ್ಸಾಹವು ಹುಟ್ಟುತ್ತದೆ.

೨. ಶರೀರ ಕಷ್ಟದ ಕೆಲಸಗಳೆಂದರೆ ಮಾನಹಾನಿಕರವಾದ ಕೆಲಸಗಳೆಂಬ ತಪ್ಪು ತಿಳುವಳಿಕೆಯು ನಷ್ಟವಾಗುತ್ತದೆ.

೩. ಸ್ವಾವಲಂಬನವು ಹುಟ್ಟುತ್ತದೆ; ಅಂದರೆ ತನ್ನ ಕೆಲಸ ತಾನೇ ಮಾಡಿಕೊಳ್ಳುವ ಬುದ್ಧಿಯು ಜಾಗೃತವಾಗುತ್ತದೆ.

೪. ಕ್ರಮ, ಶುರಣಿ, ಅಚ್ಚುಕಟ್ಟು, ವಿಚಾರಪೂರ್ವಕ ಕೆಲಸ ಮಾಡುವ ಅಭ್ಯಾಸ, ಇವು ಬೆಳೆಯುತ್ತವೆ.

೫. ಲಕ್ಷದ ಚಟವು ಹತ್ತುತ್ತದೆ.

೬. ಉದ್ಯೋಗ, ತತ್ಪರತೆಗಳು ನೆಲೆಗೊಳ್ಳುತ್ತವೆ.

೭. ಸ್ನಾಯುಗಳು ಬಲಪಡುತ್ತವೆ.

೮. ಕಣ್ಣು ಕೂಡುತ್ತದೆ, ಆಕಾರದ ತಿಳುವಳಿಕೆಯು ಬೆಳೆಯುತ್ತದೆ.

೯. ಹಸ್ತಕೌಶಲ್ಯವು ಬೆಳಗುತ್ತದೆ.

೧೦. ಹತಿಯಾರಗಳನ್ನು ಸರಿಯಾಗಿ ಉಪಯೋಗಿಸಲಿಕ್ಕೂ ಸರಸವಾದ ಬಡವೆಗಳನ್ನು ಹುಟ್ಟಿಸಲಿಕ್ಕೂ ಬರುತ್ತದೆ. ಇದು ಎಲ್ಲಕ್ಕೂ ಮೇಲಾದ ಪ್ರಯೋಜನವು.

ಡು, ಹಿಡಿಶಳ್ಳು, ಅರ್ನ, ಕರಗಸ ಮುಂತಾದ ಹತಿಯಾರಗಳು ವಾಡಿಕೆಯಾಗಿ ಉಪಯೋಗಿಸಲ್ಪಡುತ್ತವೆ, ಮತ್ತು ನಮೂನೆಗಳನ್ನು ಸಿದ್ಧ ಮಾಡುವದರಲ್ಲಿ ಅವುಗಳ ಉಪಯೋಗ ಸರಸತನಗಳ ಕಡೆಗೆ ಹೆಚ್ಚು ಲಕ್ಷ ಪೂರೈಸಲ್ಪಡುತ್ತದೆ. ಬಣ ಡೌಲಿಗೆ ಈ ಪದ್ಧತಿಯಲ್ಲಿ ಆಸ್ಪದವಿಲ್ಲ. ಯಾಕಂದರೆ ಬಣ ಡೌಲಿನ ಭರದಲ್ಲಿ ಸರಸತನ ಮತ್ತು ಆಕಾರ ಇವುಗಳ ಕಡೆಗೆ ಲಕ್ಷ ಕೊಡಲಿಕ್ಕೆ ಅವಕಾಶ ದೊರೆಯುವದಿಲ್ಲ. ಇದೇ ಮೇರೆಗೆ ಸ್ಲೊಯಿಡ ಪದ್ಧತಿಯ ನಿಜವಾದ ಉದ್ದೇಶವಾದರೂ ಈಡೇರುವದಿಲ್ಲ. ಮೇಲೆ ವರ್ಣಿಸಲ್ಪಟ್ಟ ಸಾಧಾರಣವಾದ ಪದ್ಧತಿಯಲ್ಲಿ ತುಸು ಹೆಚ್ಚು ಕಡಿಮೆ ಮಾಡಿ "ಬಾಳ ಸ್ಲೊಯಿಡ ಪದ್ಧತಿಯು" ರಚಿಸಲ್ಪಟ್ಟಿರುತ್ತದೆ. ಈ ಪದ್ಧತಿಯಲ್ಲಿ ಹುಡುಗರು ಕೆತ್ತಿ ಸಿದ್ಧ ಮಾಡಿದ ಕಟ್ಟಿಗೆಗಳಿಂದ ನಮೂನೆಗಳನ್ನು ಮಾಡುತ್ತಾರೆ. ಘಾಯ ಮಾಡಿಕೊಂಡಾರೆಂಬ ಭಯದಿಂದ ಅವರ ಕೈಯಲ್ಲಿ ಚಾಕು ಮಾತ್ರ ಕೊಡುವದಿಲ್ಲ; ಆದರೆ ಸಣ್ಣ ಕರಗಸ ಮತ್ತು ಉಜ್ಜು ಕೊರಡು ಇವೇ ಅವರು ಉಪಯೋಗಿಸುವ ಮುಖ್ಯವಾದ ಹತಿಯಾರಗಳು.

ಸಂಯುಕ್ತ ಸಂಸ್ಥಾನಗಳೆಂಬ ರಾಜ್ಯವು ಉತ್ತರ ಅಮೇರಿಕದಲ್ಲಿ ಇರುವದು ಎಲ್ಲರಿಗೆ ಗೊತ್ತುಂಟು. ಅಲ್ಲಿಯ ನಿವಾಸಿಗಳ ಉದ್ಯೋಗದಿಂದಲೂ ಸಾಹಸದಿಂದಲೂ ಆ ರಾಜ್ಯವು ಎಲ್ಲ ಕೆಲಸಗಳಲ್ಲಿ ಮುಂದಾಗಿರುವದಲ್ಲದೆ ಸಂಪತ್ತಿಗೆ ತೌರಮನೆಯಾಗಿರುತ್ತದೆ. ಅಲ್ಲಿಯ ಜನಸಂಖ್ಯೆಯು ೬,೧೦,೦೦,೦೦೦ ಇರುತ್ತದೆ. ಆ ದೇಶವು ೩೯೦೦ ಮೈಲು ಉದ್ದ, ೧೬೦೦ ಮೈಲು ಅಗಲ, ೩೬,೦೦,೦೦೦ ಚಚೌಕ ಮೈಲು ಕ್ಷೇತ್ರವುಳ್ಳದ್ದು ಇರುತ್ತದೆ. ಅಂದರೆ ಹಿಂದುಸ್ತಾನದ ೬½ ಪಾಲು

ಆ ದೇಶದ ವಿಸ್ತಾರವಿರುತ್ತದೆ.

ನಮ್ಮ ದೇಶದ ಜನಸಂಖ್ಯೆಯು ಐದರಲ್ಲಿ ಬಂದು ಪಾಲು ಇರುತ್ತದೆ. ಎಜ್ಯುಕೇಶನಲ್ ಟಾಯಿಮ್ಸು ಎಂಬ ಪತ್ರದಿಂದ, ಈ ಸಂಸ್ಥಾನದಲ್ಲಿ ಸದ್ಯಕ್ಕೆ ಸರಕಾರೀ ಶಾಲೆಗಳಲ್ಲಿ ೧,೦೫೫,೬೩೮ ಖಾಸಗೀ ಶಾಲೆಗಳಲ್ಲಿ ೧೦೫೯೭೦೦ ಜನ ವಿದ್ಯಾರ್ಥಿಗಳು ಕಲಿಯುತ್ತಾರೆಂದು ತಿಳಿಯುತ್ತದೆ. ಈ ಸಂಖ್ಯೆಯನ್ನು ಕಳೆದ ಏಪ್ರಿಲ ತಿಂಗಳ ಶಾಲಾಪತ್ರಿಕದಲ್ಲಿ ಕೊಟ್ಟ ಹಿಂದುಸ್ತಾನದ ಶಾಲೆಗಳಲ್ಲಿಯು ವಿದ್ಯಾರ್ಥಿಗಳ ಸಂಖ್ಯೆಗೆ ಹಚ್ಚಿ ನೋಡಿದರೆ, ಆ ದೇಶದ ವೈಭವದ ಕಾರಣವು ಸಹಜವೇ ಲಕ್ಷದಲ್ಲಿ ಬರುವದು.

ನಮ್ಮ ಭಾಗದ ಕವಿಶಾಸನರರಾದ ಫ್ಲೀಟ ದೊರೆಗಳಿಗೆ ಗಾಟಿಂಜನ್ ಯುನಿವ್ಹರ್ಸಿಟಿಯವರು ಪಿ ಎಚ್. ಡಿ. ಅಂದರೆ "ಅನೇಕ ಭಾಷಾಕೋವಿದ" ಅಥವಾ "ಭಾಷಾಶಾಸ್ತ್ರಜ್ಞ" ಎಂಬ ಬಹುಮಾನದ ಬಿರುದನ್ನು ಕೊಟ್ಟರುತ್ತಾರೆ.

ಗೊಂಡಾಳವ ತಾಕೂರ ಸಾಹೇಬರು ಸದ್ಯಕ್ಕೆ ವಿಲಾಯತಿಯಲ್ಲಿ ಇದ್ದಾರೆ. ಅವರಿಗೆ ಆಕ್ಸಫರ್ಡ ಯುನಿವ್ಹರ್ಸಿಟಿಯವರು ಕಳೆದ ಜೂನ ತಿಂಗಳ ೩ನೇ ತಾರೀಖಿನ ದಿವಸ ಡೀ. ಸೀ. ಎಲ್ ಎಂಬ ಗೌರವದ ಪದವಿಯನ್ನು ಬಹು ಸಮಾರಂಭದಿಂದ ಕೊಟ್ಟರು. ಆಕ್ಸಫರ್ಡ ಯುನಿವ್ಹರ್ಸಿಟಿಯವರು ಹಿಂದುಸ್ತಾನದವರಿಗೆ ಈ ಪ್ರಕಾರದ ಸತ್ಕಾರ ಮಾಡಿದ್ದು ಇದೇ ಮೊದಲನೇದು.

THE HONOURABLE DADABHAI NAOROJI M- P.
ನಾಮುದಾರ ಧಾಧಾಭಾಯಿ ನೌರೋಜಿ ಏಮ್. ಪಿ.

ಕಳೆದ ಜುಲೈಯಿ ತಿಂಗಳ ೭ನೇ ತಾರೀಖಿನ ದಿವಸ ಇಂಗ್ಲಂಡದೊಳಗಿನ ಫಿನ್ಸಬರಿ ಪಟ್ಟಣದ ನಿವಾಸಿಗಳು ನ

ವರನ್ನು ತಮ್ಮ ತರ್ಫಿನಿಂದ ಆರಿಸಿಕೊಂಡು ಇಂಗ್ಲೆಂಡಿನ ಪಾರ್ಲಮೆಂಟ ಸಭೆಯಲ್ಲಿ ನೇಮಿಸಿದರು. ಈ ಸುವಾರ್ತೆಯು ಕ್ರಾಂತಿಯ ದ್ವಾರದಿಂದ ಹಿಂದುಸ್ತಾನಕ್ಕೆ ಬಂದು ಮುಟ್ಟಿದ ವೇ ಗದಿಂದ ಈ ದೇಶದಲ್ಲಿ ಅಲ್ಲಲ್ಲಿಗೆ ಆನಂದೋತ್ಸವಗಳು ಜರು ಗುತ್ತಿವೆ ನಡೆದಿರುತ್ತವೆ. ಈ ಉತ್ಸವಗಳಿಗೆ ಕಾರಣವಾ ದ ಆ ಪಾಸ್ಟರ್ ಸದ್ಗೃಹಸ್ಥರ ವಿಷಯದಲ್ಲಿ ತುಸು ಬರೆಯು ವದು ತಕ್ಕದ್ದಾಗಿದೆ.

ಅವರ ಬಗ್ಗೆ ಹೇಳತಕ್ಕ ಮೊದಲನೇ ಮಾತು ಯಾವ ದೆಂದರೆ ಅವರು ಒಳ್ಳೆ ವಿದ್ವಾಂಸರಿದ್ದಾರೆ. ವಿದ್ವತ್ತೆಯಿಂದ ಮಾತ್ರ ಅವರು ಇಷ್ಟು ದೊಡ್ಡ ಸ್ಥಿತಿಯನ್ನು ಪಡೆಯಲಿಲ್ಲ. ಅವ ರು ವಿದ್ವಾಂಸರೂ ವಾಕ್ಪಟುತ್ವವುಳ್ಳವರೂ ಇದ್ದಾರೆ. ವಿದ್ವಾ ಂಸಕ್ತ್ವಗಳೇ ಸ್ಥಿರವಾದ ಘನತೆಯ ಕಾರಣಗಳಲ್ಲ. ಅವರು ವಿದ್ವಾಂಸರೂ ವಾಕ್ಪಂಡಿತರೂ ಇದ್ದದ್ದಲ್ಲದೆ ಮೈಮುರಿದು ದುಡಿಯುವವರಿದ್ದಾರೆ. ಈ ಮೇರೆಗೆ ಅವರಲ್ಲಿರುವ ಗುಣಗ ಳು ಬಂದಕ್ಕಿಂತ ಬಂದು ಹೆಚ್ಚಿನವಿರುತ್ತವೆ. ಅವರು ವ್ಯಾವಹಾ ರಿಕರೂ, ಸಾಮ್ಯ ಸ್ವಭಾವದವರೂ, ಭೂತದಯೆಯುಳ್ಳ ವರೂ ನಿಷ್ಕಪಟಿಗಳೂ, ಎಲ್ಲರಕೂಡ ಪ್ರೀತಿಯಿಂದ ನಡೆಯು ವವರೂ, ಪರೋಪಕಾರಿಗಳೂ ಇರುತ್ತಾರೆ. ಅವರು ತ ಮ್ಮ ಸ್ವಕೀಯರ ಒಳಿತಿಗಾಗಿ ಪ್ರಯತ್ನಪಟ್ಟಂತೆ ಇಡೀ ದೇ ಶದ ಒಳಿತಿಗಾಗಿ ಅಹೋರಾತ್ರ ಪ್ರಯತ್ನಪಡುತ್ತಾರೆ. ಅವ ರು ದೇಶಕ್ಕೆ ಹಿತಕರವಾದ ಕಾರ್ಯವನ್ನು ಕೈಕೊಂಡು ಯಾವಾಗಲೂ ಆ ವ್ಯಾಸಂಗದಲ್ಲಿ ಮಗ್ನರಾಗಿರುತ್ತಾರೆ. ಅವ ರು ತಮ್ಮ ಸ್ವಂತ ಪ್ರಯತ್ನದಿಂದಲೇ ಇಷ್ಟು ಕೀರ್ತಿಯನ್ನು ಸಂಪಾದಿಸಿದ್ದಾರೆ. ಅವರು ತಮ್ಮ ಹಿರಿಯರು ಗಳಿಸಿಟ್ಟ ದುಡ್ಡಿನಿಂದ ಯೋಗ್ಯತೆಗೆ ಏರಲಿಲ್ಲ. ದುಡ್ಡು ಕೂಡಹಾಕಿ

ದಿಲ್ಲ. ಅವರು ಸಂಪಾದಿಸಿದ ದುಡ್ಡನ್ನೆಲ್ಲ ಸಾರ್ವಜನಿಕ ಕೆಲಸಕ್ಕೆ ವೆಚ್ಚ ಮಾಡುತ್ತ ಬಂದಿರುತ್ತಾರೆ. ಅವರು ಪಾರ್ಸೀ ಜಾತಿಯವರಿದ್ದರೂ ತಮ್ಮ ಜಾತಿಯ ಜನರಿಗೆ ಮಾತ್ರ ಕಲ್ಯಾಣವಾಗಬೇಕೆಂಬ ಆಲೋಚನೆಯು ಅವರ ಕನಸು ಮನಸುಗಳಲ್ಲಿ ಸಹ ಬರುವದಿಲ್ಲ. ದೇಶದೊಳಗಿನ ಎಲ್ಲ ಜನರು ತಮ್ಮ ಬಳಗದವರೆಂದು ನೆನಸುತ್ತಾರೆ. ಇಂಥವರು ದೇಶಕ್ಕೆ ಪ್ರಿಯರಾಗುವದು ಆಶ್ಚರ್ಯವೇ? ಅವರನ್ನು ಪಾರ್ಲಮೆಂಟ ಸಭೆಯ ಸಭಿಕರಾಗಿ ಆರಿಸಿದ್ದನ್ನು ಕೇಳಿ ಎಲ್ಲ ಜನರು ಆನಂದಪಟ್ಟರೆ, ಅದು ಸೋಜಿಗವೇ?

ಈ ಪಾರ್ಸೀ ಗೃಹಸ್ಥರಿಗೆ ಆಲಸ್ಯವೆಂಬ ಕಬ್ಬು ಸಹ ಗೊತ್ತಿಲ್ಲ. ಅವರು ಈಗ್ಗೆ ೬೭ ವರ್ಷದವರಿದ್ದರೂ ದೇಶದ ಹಿತಕ್ಕಾಗಿ ಪಾರ್ಲಮೆಂಟ ಸಭೆಯಲ್ಲಿ ಸೇರಿ ಆ ಕಠಿಣವಾದ ಕೆಲಸವನ್ನು ನಡಿಸುವದಕ್ಕೆ ಟೊಂಕಾ ಕಟ್ಟಿಕೊಂಡು ನಿಂತಿದ್ದಾರೆ. ದೃಢನಿಶ್ಚಯ, ದೀರ್ಘ ಪ್ರಯತ್ನ, ಸದಾಚರಣೆಗಳುಳ್ಳವಿದ್ವಾಂಸನಿಗೆ ಹಿಡಿದ ಕೆಲಸಗಳು ಹ್ಯಾಗೆ ಕೈಗೂಡುತ್ತವೆಂಬದಕ್ಕೆ ಮಿ. ದಾದಾಭಾಯಿ ನಾರೋಜಿಯವರೇ ಸಾಕ್ಷಿಯಾಗಿರುತ್ತಾರೆ. ಕಳೆದ ಆರು ವರ್ಷಗಳಿಂದ ಅವರು ಪಾರ್ಲಮೆಂಟ ಸಭೆಯಲ್ಲಿ ಸೇರಬೇಕೆಂಬ ಪ್ರಯತ್ನ ನಡಿಸಿದ್ದರು. ೧೮೮೬ರಲ್ಲಿ ಅವರ ಪ್ರಯತ್ನವು ಸಫಲವಾಗಲಿಲ್ಲ. ಅಷ್ಟಕ್ಕೇ ಬಿಡದೆ ಅವರು ಬಂದೇಸವನೇ ತಮ್ಮ ಪ್ರಯತ್ನ ನಡಿಸಿದರು. ಇವರ ಗುಣಕ್ಕೆ ಫಿನ್ಸಬರಿಯ ನಿವಾಸಿಗಳು ಮೆಚ್ಚಿ ನಮ್ಮ ಪಕ್ಷದಿಂದ ನಿಮ್ಮನ್ನು ಪಾರ್ಲಮೆಂಟಿನಲ್ಲಿ ನೇಮಿಸಿಕೊಡುತ್ತೇವೆಂದು ಮಾತು ಕೊಟ್ಟು ಸಮಾಧಾನ ಪಡಿಸಿದರು. ಆದರೆ ನಡುವೆ ಅವರ ಆಶೆಯು ಭಂಗವಾಗುವ ಚಿಹ್ನ ತೋಶಪಡಿತ್ತು; ಅಷ್ಟರಲ್ಲಿ ನಿರಾಶೆಯ ತರುವಾಯ ಆಶೆಯು ತಲೆದೋರಿ, ಕಟ್ಟಕಡೆಗೆ ಅವರ ಅಪೇಕ್ಷೆಯು ಪೂರ್ಣವಾಯಿತು.

ದಾದಾಭಾಯಿಯವರು ೧೮೬೫ರಲ್ಲಿ ಹುಟ್ಟಿದರು. ಅವರು ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಬಳಿಕ ಹೆಸರು ಪಡೆದು, ಕೆಲವು ಕಾಲ ಅದೇ ಕಾಲೇಜಿನಲ್ಲಿ ಗಣಿತ, ಪದಾರ್ಥವಿಜ್ಞಾನಶಾಸ್ತ್ರಗಳ ಮುಖ್ಯ ಅಧ್ಯಾಪಕರಾದರು. ಸನ್ ೧೮೫೫ರಲ್ಲಿ ಅವರು ರಾವಸಾಹೇಬ ಮಾಂಡಲಿಕ, ಮಿ. ನೌರೋಜಿ ಫರ್‌ದೂನಜಿ ಮುಂತಾದ ಮಿತ್ರರನ್ನು ಕೂಡಿಕೊಂಡು "ಸ್ಟೂಡೆಂಟ್ಸ್‌ಲಿಟರರಿ ಅಂಡ್ ಸಾಯಂಟಿಫಿಕ್ ಸೊಸಾಯಿಟಿ" ಎಂಬ ಸಂಘವನ್ನು ಸ್ಥಾಪಿಸಿ ಮುಂಬಯಿ ಪಟ್ಟಣದಲ್ಲಿ ಸ್ತ್ರೀ ಶಿಕ್ಷಣವನ್ನು ಉಪಕ್ರಮಿಸಿದರು. ತಮಗೆ ಹೊತ್ತು ಸಿಕ್ಕಾಗ ಸ್ವತಃ ಅಲ್ಲಿಗೆ ಹೋಗಿ ವಿದ್ಯಾರ್ಥಿನಿಯರಿಗೆ ಕಲಿಸುತ್ತಿದ್ದರು. ಈ ಸಾಮಾಜಿಕ ಸುಧಾರಣೆಯಲ್ಲದೆ ರಾಜಕೀಯ ಸುಧಾರಣೆಯನ್ನು ಬಯಸಿ ಮುಂಬಯಿಯಲ್ಲಿ "ಬಾಂಬೆ ಅಸೋಸಿಯೇಶನ್" ಎಂಬ ರಾಜಕೀಯ ಸಭೆಯನ್ನುಂಟು ಮಾಡಿದರು. ೧೮೫೯ನೇ ವರ್ಷ ಅವರು ತಮ್ಮ ಕೆಲಸವನ್ನು ಬಿಟ್ಟು ವ್ಯಾಪಾರದಲ್ಲಿ ಸೇರಿ ಪಾರ್ಸೀ ಜನರು ಸ್ಥಾಪಿಸಿದ "ಕಾಮಾ ಕಂಪನಿ" ಎಂಬ ಸಂಘದ ಪಾಲುಗಾರರಾಗಿ ವಿಲಾಯಿತಿಗೆ ಹೋದರು. ಅಲ್ಲಿ ಅವರು ಹಿಂದುಸ್ತಾನದ ಸಂಬಂಧವಾಗಿ ಅನೇಕ ವ್ಯಾಖ್ಯಾನಗಳನ್ನು ಕೊಟ್ಟು ಇಂಗ್ಲಿಷ ಜನರಿಗೆ ಹಿಂದುಸ್ತಾನದ ನಿಜಸ್ಥಿತಿಯನ್ನು ತಿಳಿಸಿದವರು. ಮತ್ತು ಹಿಂದುಸ್ತಾನದ ಸಂಬಂಧವಾಗಿ ಇಂಗ್ಲಿಷ ಜನರಲ್ಲಿರುವ ಅಜ್ಞಾನವನ್ನು ಕಳೆದು ಇಲ್ಲಿ ನಡೆಯುವ ಸಂಗತಿಗಳನ್ನು ಕಾಲಕಾಲಕ್ಕೆ ತಿಳಿಸಿ, ದೇಶಕ್ಕೆ ಹಿತವಾಗಬೇಕೆಂಬ ಉದ್ದೇಶದಿಂದ "ಈಸ್ಟ ಇಂಡಿಯಾ ಅಸೋಸಿಯೇಶನ್" ಎಂಬ ಸಭೆಯನ್ನು ವಿಲಾಯತಿಯಲ್ಲಿ ಸ್ಥಾಪಿಸಿದವರು. ಈ ಮೇರೆಗೆ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಅವರ ಪ್ರಯತ್ನಗಳು ಬಹಳ ದಿವಸದಿಂದ ಎಡೆಬಿಡದೆ ನಡೆದಿರುತ್ತವೆ.



೧೮೬೯ ರಲ್ಲಿ ಅವರು ಮುಂಬಯಿ
೧೮೬೫ರಲ್ಲಿ ಬಡೋದೆ ಸಂಸ್ಥಾನದಲ್ಲಿ ಗೊಂದಲವೆದ್ದ ದರಿಂದ ಆ ಸಂಸ್ಥಾನದ ದಿವಾಣರಾಗಿ ನೇಮಿಸಲ್ಪಟ್ಟರು. ಮುಂದೆ ಆ ಕೆಲಸವನ್ನು ಬೇಗನೆ ಬಿಟ್ಟು, ಮುಂಬಯಿ ಮುನಿಸಿಪ್ಯಾಲಿಟಿ ಯ ಕೆಲಸಕ್ಕೆ ತೊಡಗಿದರು. ೧೮೬೫ ರಲ್ಲಿ ಮುಂಬಯಿ ಯು ನಿವ್ಹರ್ಸಿಟಿಯ 'ಫೆಲೊ' ಎಂಬ ಗೌರವವ ಬಿರುದನ್ನು ಪಡೆದ ರು. ೧೮೬೫ರಲ್ಲಿ ಮುಂಬಯಿ ಕಾಯದೆ ಕೌನ್ಸಿಲಿನ ಸಭಾ ಸದರಾದರು. ಸನ್ ೧೮೬೬ನೇ ವರ್ಷದಲ್ಲಿ ಪುನಃ ವಿಲಾ ಯತಿಗೆ ಹೋಗಿ ಅಲ್ಲಿ ಪಾರ್ಲಮೆಂಟ ಸಭೆಯಲ್ಲಿ ಸೇರಬೇ ಕೆಂಬ ಬಗ್ಗೆ ಬಹು ಶ್ರಮಪಟ್ಟರು. ಅಗ್ಗೆ ಸೋತರೂ ಕುಂಗೆಡದೆ ಧೈರ್ಯದಿಂದ ತಮ್ಮ ಪ್ರಯತ್ನಗಳನ್ನು ನಡಿಸಿ ದ್ದರಿಂದ ಕಟ್ಟಕಡೆಗೆ ಜಯ ಹೊಂದಿದರು. ಈ ಯಶವು ಸಾ ಮಾನ್ಯವಾದದ್ದಲ್ಲ; ಬಂದು ಬಗೆಯಿಂದ ಹಿಂದುಸ್ಥಾನವು ಬ್ರಿ ಟಿಷ್ ರಾಜ್ಯವನ್ನು ಅಳುವ ಸುದಿವಸವು ಪ್ರಾಪ್ತವಾಯಿ ತೆಂದರೂ ಸಲ್ಲುವದು.

ಮಿ. ದಾದಾಭಾಯಿ ನಾರೋಜಿಯವರನ್ನು, ಅವರ ಎಡೆಬಿಡದ ಪ್ರಯತ್ನಕ್ಕೂ ಸಾಜನ್ಯಕ್ಕೂ ಹೊಗಳುವದು ಯುಕ್ತವೇ ಸರಿ. ಅವರೆ ಸ್ವಾತಂತ್ರ್ಯಪ್ರಿಯರೂ ನ್ಯಾಯ ತತ್ಪರರೂ ಆದ ಇಂಗ್ಲಿಷ ಜನರು ವರ್ಣಭೇದವನ್ನೆಣಿಸದೆ ದಾದಾಭಾಯಿಯವರನ್ನು ತಮ್ಮ ಪಾರ್ಲಮೆಂಟ ಸಭೆಯಲ್ಲಿ ನೇಮಿಸಿ ಕೊಟ್ಟು ಹಿಂದುಸ್ಥಾನದ ಮೇಲೆ ಮಾಡಿದ ಮಹ ದುಪಕಾರವನ್ನು ನಾವು ಎಂದಿಗೂ ಮರೆಯಲಾಗದು; ಬ್ರಿ ಟಿಷ್ ರಾಜ್ಯದ ಯೋಗದಿಂದ ನಮ್ಮ ದೇಶಕ್ಕೆ ಆದ ಅನೇಕ ಲಾಭಗಳಲ್ಲಿ ಇದನ್ನು ಸೇರಿಸಲಿಕ್ಕೆ ಅಡ್ಡಿ ತೋರುವದಿಲ್ಲ. ಘನವಾದಬ್ರಿಟಿಷ್ ರಾಜ್ಯವೂ, ಗುಣಜ್ಞರಾದ ಇಂಗ್ಲಿಷ ಜ ನರೂ, ತಮ್ಮ ವಿದ್ಯಾಬುದ್ಧಿಸದಾಚರಣೆಗಳಿಂದ ಇಂಥ ಜನ ರನ್ನು ಮೆಚ್ಚಿಸದಂಥ ನಮ್ಮ ದಾದಾಭಾಯಿ ನಾರೋಜಿ

ಸಲೆಂದು ನಾವು ಕೋರುತ್ತೇವೆ.

ಇಂಗ್ಲಂದದ ಹೊಸ ಪಾರ್ಲಿಮೆಂಟಿಗಾಗಿ ಮೊನ್ನೆ ಮೊನ್ನೆ ಆರಿಸಲ್ಪಟ್ಟ ೬೫೦ ಸಭಿಕರಲ್ಲಿ ೫೫೬ ಪ್ರಜಾಪಕ್ಷದ ಜನರೂ ೯೦೪ ರಾಜಪಕ್ಷದ ಜನರೂ ಇರುತ್ತಾರೆ. ನಾವುದಾರದಾದಾಭಾಯಿಯವರು ಪ್ರಜಾಪಕ್ಷದವರು.

ENGLISH INFANT SCHOOL.

ಇಂಗ್ಲಂದದ ಬಾಲಶಾಲಾ.

ಇಂಗ್ಲಂಡದಲ್ಲಿ ಶಿಕ್ಷಣದ ವಿಷಯವಾಗಿ ಸುಧಾರಣೆಯು ಬಹಳ ಜಾಗ್ರತೆಯಿಂದ ನಡೆದಿರುತ್ತದೆ. ಚಿಕ್ಕ ಬಾಲಕರ ಆಟಕ್ಕೆ ಆಟವಾಗಿ ಅಭ್ಯಾಸಕ್ಕೆ ಅಭ್ಯಾಸ ಸಾಗುವಂತೆ ಹೊಸ ಹೊಸ ಹಂಚಿಕೆಗಳು ಮೇಲಿಂದ ಮೇಲೆ ಯೋಚಿಸಲ್ಪಡುತ್ತವೆ. ಸ್ವತಂತ್ರ ಬಾಲಶಾಲೆಗಳು ಸ್ಥಾಪಿತವಾಗಿರುತ್ತವೆ. ಅವುಗಳಲ್ಲಿ ೩ನೇ ವರ್ಷದಿಂದ ೭ | ೮ ವರ್ಷದ ವಯಸ್ಸಿನ ಹುಡುಗರನ್ನು ತಕ್ಕೊಳ್ಳುತ್ತಾರೆ. ಇನಸ್ಪೆಕ್ಟರರು ೭ ವರ್ಷದ ವಯಸ್ಸಿನವರ ಅಥವಾ ಅದಕ್ಕೂ ಕಡಿಮೆ ವಯಸ್ಸಿನವರ ಪರೀಕ್ಷೆಯನ್ನು ತಕ್ಕೊಳ್ಳುತ್ತಾರೆ. ಈ ಶಾಲೆಗಳಲ್ಲಿ ಹುಡುಗರೂ ಹುಡುಗಿಯರೂ ಕೂಡೇ ಕಲಿಯುತ್ತಾರೆ; ಕಲಿಸುವ ವಿಷಯಗಳು ಇಲ್ಲಿಯಂತೆ. ಆದರೆ ಅಂಕೆಗಳನ್ನು ಕಲಿಸುವ ರೀತಿಯು ನಮಗಿಂತ ಸ್ವಲ್ಪ ಭಿನ್ನವಾದದ್ದಿರುತ್ತದೆ; ಅಂಕಿಗಳು ಸ್ವಲ್ಪವಿರುತ್ತವೆ; ೧೦×೧೦ ವರೆಗೆ ಮಾತ್ರ ಮೊಗ್ಗಗಳನ್ನು ಕಲಿಸುತ್ತಾರೆ. ಆ ಬಾಲಶಾಲೆಯ ಅಭ್ಯಾಸಕ್ರಮವೂ ವೇಳಾಪತ್ರಿಕೆಯೂ ಸ್ವಲ್ಪ ದಿವಸಗಳ ಕೆಳಗೆ ಸ್ಕೂಲ ಮಿಸ್ತ್ರೆಸ ಎಂಬ ಪತ್ರದಲ್ಲಿ ಪ್ರಸಿದ್ಧವಾಗಿರುತ್ತವೆ. ಅವನ್ನು ನಮ್ಮ ವಾಚಕರ ಸಲುವಾಗಿ ಇದರಡಿಯಲ್ಲಿ ಕೊಡುತ್ತೇವೆ.—

ವಿಷಯ.	೫ನೇ ಅಥವಾ ತೀರ ಸಣ್ಣ ಹುಡುಗರ ವರ್ಗ.	೬ನೇ ವರ್ಗ.	೭ನೇ ವರ್ಗ.	೮ನೇ ವರ್ಗ.	೯ನೇ ವರ್ಗ.
ಲೇಖನ.	ಕರೇ ಹಲಿಗೆಯು ಮೇಲೆ ಬರೆದದ್ದನ್ನು ನೋಡಿಕೊಂಡು ಅದರಂತೆ ಉದ್ದ ಗೆರೆಯನ್ನು ತೆಗೆಯುವದು. m ಮುಂತಾದ ಅಕ್ಷರಗಳನ್ನು ಬರಿಸುವದು.	ಪಟಗಳ ಮೇಲಾಗಲಿ ಕರೇ ಹಲಿಗೆಯ ಮೇಲಾಗಲಿ ಬರೆದದ್ದನ್ನು ನೋಡಿಕೊಂಡು m, n, t, i, v, w ಮುಂತಾದ ಅಕ್ಷರಗಳನ್ನು ಬರೆಯುವದು.	ಕರೇ ಹಲಿಗ, ಪಟ, ಪುಸ್ತಕಗಳನ್ನು ನೋಡದೆ ನೆನಪಿನಿಂದ ಸಣ್ಣಕ್ಷರಗಳನ್ನು ಬರೆಯುವದು. ಎಂದರೆ ವರೆಗೆ ಅಂಕಿಗಳನ್ನು ಬರೆಯುವದು. ಪಟಗಳ ಮೇಲಿಂದ ಕೆಲವು ಶಬ್ದಗಳನ್ನಾಗಲಿ ಬಂದು ವಾಕ್ಯವನ್ನಾಗಲಿ ಬರೆಯುವದು.	ಪಟಗಳನ್ನು ಅಥವಾ ವಾಚನ ಪುಸ್ತಕವನ್ನು ನೋಡಿ ಅದರಂತೆ ಬರೆಯುವದು.	ದೊಡ್ಡ ಅಕ್ಷರದಿಂದಲೂ ಸಣ್ಣ ಅಕ್ಷರದಿಂದಲೂ ಹೆಸರು ಬರೆಯುವದು. ವಾಚನ ಪುಸ್ತಕವನ್ನು ನೋಡಿ ಬರೆಯುವದು; ಅಥವಾ ಅದರೊಳಗಿನ ವಾಕ್ಯಗಳನ್ನು ಹೇಳಿದಂತೆ ಬರೆಯುವದು ಅಂದರೆ ಉಕ್ತಲೇಖನ.
ವಾಚನ.	ಮೂಲಾಕ್ಷರಗಳು ಎರಡು ಅಕ್ಷರದ ಶಬ್ದಗಳನ್ನೋದುವದು.	ಸಣ್ಣ ದೊಡ್ಡ ಮೂಲಾಕ್ಷರಗಳು. ಅಕ್ಷರಗಳನ್ನು ಕೂಡಿಸಿ ಶಬ್ದಗಳನ್ನೋದುವದು. ಪಟಗಳನ್ನೋದುವದು.	೧ನೇ ಪುಸ್ತಕ.	೨ನೇ ಪುಸ್ತಕ ಪೂರ್ವಾರ್ಧ.	೨ನೇ ಪುಸ್ತಕ ಉತ್ತರಾರ್ಧ.

ಶಬ್ದಾಕ್ಷರಗಳನ್ನು ವಿಂಗಡಿಸಿ ಹೇಳೋಣ. (*Spelling*)			೧ನೇ ಪುಸ್ತಕದೊಳಗಿನ ಶಬ್ದಾಕ್ಷರಗಳನ್ನು ವಿಂಗಡಿಸಿ ಹೇಳುವದು.	ಓದಿದ ಪುಸ್ತಕದೊಳಗಿನ ಶಬ್ದಾಕ್ಷರಗಳನ್ನು ವಿಂಗಡಿಸಿ ಹೇಳುವದು.	ಓದಿದ ಪುಸ್ತಕದೊಳಗಿನ ಶಬ್ದಾಕ್ಷರಗಳನ್ನು ವಿಂಗಡಿಸಿ ಹೇಳುವದು.
ಗಣಿತ.	ಬೇರೆ ಬೇರೆ ರೀತಿಯಿಂದ ೧೦೦ ವರೆಗೆ ಎಣಿಸುವದು. ೪೦ ವರೆಗೆ ಬಾಯಿಂದ ಕೂಡಿಸುವದೂ ಕಳೆಯುವದೂ.	೨೦೦ ವರೆಗೆ ೧ ವತ್ತು ೨ ಬಾಯಿಂದ ಕೂಡಿಸುವದೂ ಕಳೆಯುವದೂ. ಬೇರೆ ಬೇರೆ ರೀತಿಯಿಂದ ೨೦೦ ವರೆಗೆ ಎಣಿಸುವದು.	೩೦೦ ವರೆಗೆ (ಅರ್ಧ). ೩ ವತ್ತು ೩ ಬಾಯಿಂದ ಕೂಡಿಸುವದೂ ಕಳೆಯುವದೂ.	೪೦೦ ವರೆಗೆ (ಅರ್ಧ). ನಡೆಯುವ ನಾಣ್ಯದ ಕಿವ್ಮತ್ತು ಬಾಯಿಂದ ಹೇಳುವದು. ಡಝನ್, ಸ್ಕೋರಗಳೆಂದರೇನು ಎಂಬದರ ಜ್ಞಾನ. ೧೦೦ ರ ವರೆಗೆ ಅಂಕಿಗಳು. ರುಗಳು. ವರ್ಷದ ಋತುಕಾಲು, ಅರ್ಧಗಳ ಉಗಗಳು. ೨೦೦ ವರೆಗೆ ಪಯೋಗ.	೫೦೦ ವರೆಗೆ (ಅರ್ಧ). ಬೇರೆ ಬೇರೆ ಪ್ರಕಾರದ ನಾಣ್ಯಗಳೂ ಅವುಗಳ ವಿಭಾಗಗಳೂ. ಡಝನ್ ಸ್ಕೋರಗಳ ಜ್ಞಾನ. ಐತುವಾರಗಳ ಹೆಸರು. ವರ್ಷದ ಋತುಕಾಲು, ಅರ್ಧಗಳ ಉಗಗಳು. ೫೦೦ ವರೆಗೆ ಬಾಯಿಂದ ಕೂಡಿಸುವದೂ ಕಳೆಯುವದೂ. ಸಣ್ಣ ಸಣ್ಣ ಸಂಖ್ಯೆಗಳ ಬ್ಯೇರೀಜ್ ವಜಾಬಾಕಿ. (ಹಚ್ಚಾಲೆ ಬರವಂತೆ ಸಂಖ್ಯೆಗಳನ್ನು ಹೇಳಬೇಕು.)

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಕವಿತಾ.	ಮೂರು ಕವಿತೆಗಳೂ ಎರಡು ಹಾಡುಗಳೂ.	ಮೂರು ಕವಿತೆಗಳೂ ಮೂರು ಹಾಡುಗಳೂ.	ಮೂರು ಕವಿತೆಗಳು.	ಐದು ಹಾಡುಗಳೂ ಕವಿತೆಗಳೂ.	ಐದು ಹಾಡುಗಳ ಕವಿತೆಗಳೂ.
ಕೆಂಪರ ಗಾರ್ಟ್ನ್.	೧ ಮಣಿಗಳನ್ನು ಪೋಣಿಸುವದು. ೨ ಕೆಂಪರ ಗಾರ್ಟ್ನ್‌ದ ೧ನೇ ಪಾಠ. ಬೇರೆ ಬೇರೆ ಬಣ್ಣದ ಆರು ಚಂಡುಗಳಿಂದ ಪಾಠ ಹೇಳುವದು.	೧ ಕಡ್ಡಿಗಳನ್ನು ಬಟ್ಟಿಗೂಡಿಸಿ ಆಕೃತಿಯನ್ನು ರಚಿಸುವದು. ೨ ಧಾರದಿಂದ ಆಕೃತಿಯನ್ನು ರಚಿಸುವದು. ೩ ಗೊಂಬಿಗೆ ದಪ್ಪಿಯನ್ನು ಉಡಿಸುವದು.	೧ ಕಡ್ಡಿಗಳನ್ನು ಕೂಡಿಸಿ ಆಕೃತಿಯನ್ನು ರಚಿಸುವದು. ೨ ಚೆಂಡು ಮಾಡುವದೂ, ಆಡುವದೂ.	೧ನೇ ವರ್ಗದಂತೆ.	ಹುಡುಗರು ಡ್ರಾಯಿಂಗ ಅಥವಾ ಚಿತ್ರಕರ್ಮ ಕಲಿಯುವದಕ್ಕೆ ಹುಡುಗಿಯರು ಕಾಗದಕ್ಕೆ ಸೂಜಿಯಿಂದ ಆಕೃತಿಯನ್ನು ಹುಟ್ಟಿಸುವಂತೆ ತರಬೇತು ಮಾಡುವದೂ ಚಿತ್ರ ಪೋಣಿಸುವದೂ.
ಸಾಮಾನ್ಯ ಜ್ಞಾನದ ಮತ್ತು ಬುದ್ಧಿವೆಯ ಪಾಠಗಳು	ಇಪ್ಪತ್ತು ಪಾಠಗಳು.	ಇಪ್ಪತ್ತು ಪಾಠಗಳು.	ಮೂವತ್ತೆರಡು ಪಾಠಗಳು.	೩೦ ಪಾಠಗಳು.	೩೦ ಪಾಠಗಳು.
ಹೊಲಿಗೇ ಕೆಲಸ.	ಸೂಜಿಯನ್ನೂ ಅಂಗುಸ್ತಾನವನ್ನೂ ಉಪಯೋಗಿಸುವ ಕ್ರಮ ಮುಂತಾದ್ದು.	೩ನೇ ವರ್ಗದಂತೆ.	ಹೊಲಿಯುವದು.	ಹೊಲಿಯುವದೂ ಟಿಬ್ಬಿ ಹಾಕುವದೂ.	ಹೊಲಿಯುವದೂ ಟಿಬ್ಬಿ ಹಾಕುವದೂ

ವೇಳಾಪತ್ರಿಕೆ.

ಕಾಲ.	ವರ್ಗ.				ವರ್ಗ.				ವರ್ಗ.				ವರ್ಗ.				ವ
	೧	೨	೩	೪	೧	೨	೩	೪	೧	೨	೩	೪	೧	೨	೩	೪	೧
೯ ರಿಂದ ೯—೪೫ ೯—೪೫	ಶಾಲೆಯ ಬಾಗಿಲಗಳನ್ನು ತೆರೆ ತೆರೆಯುವದು. ಧರ್ಮವನ್ನು ಬೋ				ಶಾಲೆಯ ಬಾಗಿಲಗಳನ್ನು ತೆರೆ ಯುವದು. ಧರ್ಮವನ್ನು ಬೋ ಧಿಸುವದು.				ಶಾಲೆಯ ಬಾಗಿಲಗಳನ್ನು ತೆರೆಯುವದು. ಧರ್ಮವನ್ನು ಬೋಧಿಸುವದು.				ಶಾಲೆಯ ಬಾಗಿಲಗಳನ್ನು ತೆರೆ ಯುವದು. ಧರ್ಮವನ್ನು ಬೋ ಧಿಸುವದು.				ಶಾಲೆಯ ಬಾ ತೆರೆಯುವದು ವನ್ನು ಬೋಧಿ
೯—೪೫ ರಿಂದ ೯—೫೫	ಹಾಜರಿ ತೆಗೆದು ಕೊಳ್ಳುವದು.																
೯—೫೫ ರಿಂದ ೧೦—೫೫	ಲೇಖನ.	ಗಣಿತ.	ನಾಡಿಗ.	ಲೇಖನ.	ಹಾಡು ಹಾಡುವದು.				ಎಲ್ಲರೂಕೂಡಿ ಹಾಡುವದು.	ಗಣಿತ.	ನಾಡಿಗ.		ಹಾಡು ಹಾಡುವದು.				ನಾಡಿಗ.	ಲೇಖನ.
೧೦—೫೫ರಿಂದ ೧೦—೫೫	ಕವಾಯತು, ಹಾಡು, ಆಟ.				ಕವಾಯತು, ಹಾಡು, ಆಟ.				ಕವಾಯತು, ಹಾಡು, ಆಟ.				ಕವಾಯತು, ಹಾಡು, ಆಟ.				ಕವಾಯತು, ಆಟ
೧೦—೫೫ರಿಂದ ೧೧—೫೫	ಪ್ರಾಣಿಗಳ ವಿಷಯವಾಗಿ ಪಾಠ.	ಲೇಖನ.	ಗಣಿತ.		ಲೇಖನ.	ಗಣಿತ.	ನಾಡಿಗ.	ಲೇಖನ.	ಒಡನೆಯ ಪಾಠ.				ಹೆಸರು ಬರೆಯುವದು.	ನಾಡಿಗ.	ಗಣಿತ.	ನಾಡಿಗ.	ಲೇಖನ.	ಗಣಿತ.

೧೦	೯	೮	೭	೬	೫	೪	೩	೨	೧
ಸಂಖ್ಯೆ.	ಹೆಸರು.	ಸಂಪೂರ್ಣವಾಗಿ ಕಲಿತವರು.			ಸಂಪೂರ್ಣವಾಗಿ ಕಲಿಯುತ್ತಿರುವವರು.			ಸಂಪೂರ್ಣವಾಗಿ ಕಲಿತವರು.		ಸಂಖ್ಯೆ.
		ಒಟ್ಟು.	ಹೆಂಗಸರು.	ಗಂಡಸರು.	ಒಟ್ಟು.	ಹೆಂಗಸರು.	ಗಂಡಸರು.	ಒಟ್ಟು.	ಹೆಂಗಸರು.

೬	೫	೪	೩	೨	೧
೬–೫ ಲಂಬ	೫–೪ ಲಂಬ	೪–೩ ಲಂಬ	೩–೨ ಲಂಬ	೨–೧ ಲಂಬ	೧–೬ ಲಂಬ
೪	ಕೆಲಸಗಾರನಿಗೆ ಅಧಿಕಾರ ಕೊಟ್ಟಿದ್ದಕ್ಕೆ ಸಾಕ್ಷಿ ಬಿಡುವವರು.	ಕೆಲಸ.	ಕೆಲಸದ ಪ್ರದೇಶ.	ಕೆಲಸಗಾರ.	ಕೆಲಸಗಾರನ ಹೆಸರು.
೩	ಕಂಪನಿಯ ಹೆಸರು.	ಕಂಪನಿಯ ಹೆಸರು.	ಕಂಪನಿಯ ಹೆಸರು.	ಕಂಪನಿಯ ಹೆಸರು.	ಕಂಪನಿಯ ಹೆಸರು.
೨	ಹೆಸರು, ಹುದ್ದೆಯ ಹೆಸರು, ವಿಳಾಸ.	ಹೆಸರು, ಹುದ್ದೆಯ ಹೆಸರು, ವಿಳಾಸ.	ಹೆಸರು, ಹುದ್ದೆಯ ಹೆಸರು, ವಿಳಾಸ.	ಹೆಸರು, ಹುದ್ದೆಯ ಹೆಸರು, ವಿಳಾಸ.	ಹೆಸರು, ಹುದ್ದೆಯ ಹೆಸರು, ವಿಳಾಸ.
೧	ಕೆಲಸಗಾರನಿಗೆ ಅಧಿಕಾರ ಕೊಟ್ಟಿದ್ದಕ್ಕೆ ಸಾಕ್ಷಿ ಬಿಡುವವರು.				

ಈ ಅಭ್ಯಾಸ ಕ್ರಮವನ್ನೂ ವೇಳಾಪತ್ರಿಕೆಯನ್ನೂ ಪ್ರತ್ಯೇಕವಾಗಿ ನೋಡಿ ತಿಳುಕೊಂಡು ಅದರಂತೆ ಕೂಡಿದಷ್ಟು ಮಟ್ಟಿಗೆ ನಮ್ಮ ಮಾಸ್ತರ ಜನರು ಯತ್ನಿಸುವರೆಂದು ನಾವು ನಂಬುತ್ತೇವೆ. ಅವಶ್ಯವಾದ ಸಾಹಿತ್ಯಗಳಿಲ್ಲ, ಎರಡೆರಡು ಮೂರು ಮೂರು ವರ್ಗಗಳು ಕೊಳ್ಳಿಗೆ ಬಿದ್ದಿರುವದರಿಂದ ಕಲಿಸಲಿಕ್ಕೆ ಅವಕಾಶವಿಲ್ಲ ಎಂಬ ಮಾತು ನಿಜವು. ಆದರೆ ಕೈಮುಚ್ಚಿಕೊಂಡು ಕೂಡ್ರುವದು ಸರಿಯಲ್ಲ. ಇದ್ದದ್ದರೊಳಗೆ ಆದಷ್ಟು ಸುಧಾರಣೆ ಮಾಡುವದೇ ಜಾಣತನದ ಲಕ್ಷಣವು. ತಿಳವಳ್ಳಿ ಮಾಸ್ತರರಾದ ರಾ|| ಹಣಮಂತ ಕೃಷ್ಣ ದೇಶಪಾಂಡೆ ಇವರು ತಮ್ಮ ಕೆಲಸ ಬಳ್ಳೇ ರೀತಿಯಿಂದ ಮಾಡುತ್ತಾರೆಂದು ಧಾರವಾಡ ಜಿಲ್ಲೆಯ ಅ. ಡಿ. ಇನಸ್ಪೆಕ್ಟರರಿಂದ ಕೇಳಿ ನಮಗೆ ಬಹಳ ಸಂತೋಷವಾಗುತ್ತದೆ. ಅವರೂ ಅವರ ಬಂಧುಗಳಾದ ಬೇರೆ ಮಾಸ್ತರರೂ ಮನಸ್ಸುಗೊಟ್ಟು ಕೆಲಸ ಮಾಡಿದರೆ ಸ್ವಲ್ಪಾದರೂ ಫಲವಾಗದೆ ಇರಲಾರದು. ಬಿನ್ ಇಯತ್ತೆಯ ಹುಡುಗರಿಗೆ ಲಕ್ಷಪೂರ್ವಕವಾಗಿ ಕಲಿಸುತ್ತ ಹೋದರೆ ಮುಂದೆ ಮಾಸ್ತರರಿಗೆ ಬಹಳ ಶ್ರಮ ಬೀಳಲಿಕ್ಕಿಲ್ಲವೆಂಬದೂ ಸ್ಪಷ್ಟವದೆ.

ನಮ್ಮ ದೇಶದಲ್ಲಿ ಸ್ವತಂತ್ರ ಬಾಲಶಾಲೆಗಳು ಕಡಿಮೆ; ಬಂದು ವೇಳೆ ಇಲ್ಲವೆಂದರೂ ಸಲ್ಲುವದು. ಬಾಲವರ್ಗಗಳು ಮಾತ್ರ ಅವೆ. ಶಾಲೆಗಳ ಕೆಲಸ, ಮುಂಜಾನೆ ಮೂರು ತಾಸು, ಸಂಜೆಗೆ ಮೂರು ತಾಸು ಸಾಗುತ್ತದೆ. ಬಾಲವರ್ಗಗಳ ಅಭ್ಯಾಸವನ್ನು ಮೇಲೆ ವಿವರಿಸಿದಂತೆ ಸಾಗಿಸಿ, ಕಡೆಯ ತಾಸಿನಲ್ಲಿ ಯಾವದಾದರೊಂದು ಆಟವನ್ನು ಆಡಿಸಬೇಕು. ಶನಿವಾರ ಅಥವಾ ಸಂತೆಯ ದಿವಸ ಮುಂಜಾನೆ ಮೂರೇ ತಾಸು ಕೆಲಸ ನಡಿಯುತ್ತದೆ. ಅಂದು ಕಲಿತ ವಿಷಯಗಳ ಪುನರಾವರ್ತನ ಮಾಡಿಸಬೇಕು ಹಾಡುಗಳನ್ನು ಹಾಡಿಸಬೇಕು, ಕಥೆಗಳನ್ನು ಹೇಳಬೇಕು ಹೇಳಿಸಬೇಕು.

CORRESPONDENCE.
ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರ ಸಾ॥ ಗವರ ಚರಣಸನ್ನಿಧಿಗೆ—

ವಿನಂತಿ ಕಾಗದ ಬರೆದ ವೃತ್ತವನ್ನು ತಮ್ಮ ಸುಂದರವಾದ ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ರಾವ ಸಾ॥ ಖಂಡೋ ಕೃಷ್ಣ ಗರ್ದೆ ೧ನೇ ಅ॥ ಡಿಪೂಟಿ ಎಜ್ಯುಕೇಶನಲ್ ಇನ್ಸಪೆಕ್ಟರ ಜಿಲ್ಲಾ ವಿಜಾಪೂರ ಇವರು ಈ ಸಾಲೆಯ ಪರೀಕ್ಷೆಯನ್ನು ಕಳೆದ ಜನವರಿ ತಿಂಗಳ ೬ನೇ ತಾರೀಖಿನ ದಿವಸ ತೆಗೆದು ಕೊಂಡರು. ಇವರ ಪರೀಕ್ಷೆ ತೆಗೆದು ಕೊಳ್ಳುವ ಧೋರಣವು ಬಹಳ ಉತ್ತಮವಿದ್ದು, ವಿದ್ಯಾರ್ಥಿಗಳು ತಾವು ಕಲಿತದ್ದು ವ್ಯವಹಾರಕ್ಕೆ ಹ್ಯಾಗೆ ಉಪಯೋಗ ಮಾಡಿಕೊಂಡಿದ್ದಾರೆ; ಮತ್ತು ಅವರ ನಿಜವಾದ ಯೋಗ್ಯತೆ ಎಷ್ಟು ಅದೆ? ಎಂಬದು ಸಾಹೇಬರವರು ಹಾಕುವ ಪ್ರಶ್ನೆಗಳ ಮೇಲಿಂದ ವ್ಯಕ್ತವಾಗುತ್ತದೆ.

ಶಾಲಾ ಗುರುಗಳಾದ ನಾವು ಪ್ರತಿಯೊಂದು ಇಯತ್ತೆಗೆ ನೇಮಿಸಿದ ವಿಷಯಗಳಲ್ಲಿ ಬಂದಷ್ಟು ಕೊರತೆ ಬರದಂತೆ ಯಾವತ್ತು ವಿಷಯಗಳನ್ನು ಕಲಿಸುತ್ತೇವೆ. ಉದಾಹರಣ— ೧ನೇ ಇಯತ್ತೆಯವರಿಗೆ ಜಿಲ್ಲೆಯ ನಕಾಶ ಕಲಿಸುವಾಗ ಭೂಗೋಲದಲ್ಲಿ ಬರೆದಂತೆ ಪಾಠ ಮಾಡಿಸುತ್ತೇವೆ, ೩ನೇ ಇಯತ್ತೆಯವರಿಗೆ ತೊಲಿಂಯಿದ ಗುಂಜಿಗೆ, ಗುಂಜಿಯಿಂದ ತೊಲಿಗೆ, ಮಾಸಿಯಿಂದ ತೊಲಿಗೆ, ಮತ್ತು ತೊಲಿಯಿಂದ ಮಾಸಿಗೆ, ಇತ್ಯಾದಿ ನಾಲ್ಕೆಂಟು ಬಾಯಿಲೆಖ್ಖದ ರೀತಿಗಳನ್ನು ಕಲಿಸುತ್ತೇವೆ. ನಾಲ್ಕನೇ ಇಯತ್ತೆಯವರಿಗೆ ಇದಕ್ಕೂ ಸ್ವಲ್ಪ ಕಠಿಣ. ಈ ಪ್ರಕಾರ ವಿದ್ಯಾರ್ಥಿಗಳಿಗೆ ಬಹುತರವಾಗಿ ಕಲಿಸುವ ಕ್ರಮ ಸಾಗುತ್ತದೆ. ಬಹಳ ಅನುಭವಿಕರಾದ ಗುರುಗಳು ನಾನಾ ಪ್ರಕಾರದ ಉದಾಹರಣಗಳಿಂದ ವಿದ್ಯಾರ್ಥಿಗ

ಳ ಎಬಿಲಿ ಬಕ್ತರುಂಸ್ನು-

ರವರು ಪರಿಕ್ಷೆಯಲ್ಲಿ ಹಾಕಿದ ಕೆಲವು ವಿಷಯಗಳ ಮೇಲಿನ ಪ್ರಶ್ನಗಳನ್ನು ವಿಚಾರಿಸಿ ನೋಡಿದರೆ, ವಿದ್ಯಾರ್ಥಿಗಳಿಗೆ ಅವುಗಳಿಂದಾಗುವ ವ್ಯವಹಾರೋಪಯೋಗ, ವಿಚಾರಶಕ್ತಿಗಳು ಕಂಡು ಬರುವವು. ಕೆಳಗೆ ಬರೆದ ಪ್ರಶ್ನಗಳನ್ನು ನಾಲ್ಕೈಂಟು ಶಾಲೆಗಳ ಗುರುಗಳಿಂದ ತಿಳಿದು ಕೊಂಡು, ಯೋಗ್ಯವಾದವುಗಳನ್ನು ಬರೆದಿರುತ್ತೇವೆ.

ಎನೇ ಇಯತ್ತೆಯವರಿಗೆ ಭೂಗೋಲ—(ಎಲ್ಲ ವಿದ್ಯಾರ್ಥಿಗಳು ಮಾಟ ತೆಗೆದುಕೊಂಡು ನಿಂತ ಬಳಿಕ) ವಿಜಾಪೂರ ಜಿಲ್ಲೆಯ ಪ್ರತಿ ಬಂದು ತಾಲೂಕಿನಲ್ಲಿ ಸಂತೆ ನೆರೆಯುವ ತಕ್ಕ ಮಟ್ಟಿಗೆ ವ್ಯಾಪಾರವಾಗುವ, ಪ್ರಸಿದ್ಧವಾದ ಎರಡೆರಡು ಗ್ರಾಮಗಳನ್ನು ಆಯಾ ತಾಲೂಕಿನ ಹೆಸರುಬರೆದು ಅದರ ಮುಂದೆ ಬರೆಮ ತೋರಿಸಿರಿ.

ಅಥಣಿ, ಚಿಕ್ಕೋಳಚಗೋಡ, ಕೊತಿ, ಸಂಗಮ, ಧನ್ನೂರು, ಗಲಗಲಿ, ಬಾಗಲಕೋಟ ಮುಂತಾದ ಗ್ರಾಮಗಳು ಯಾವ ಯಾವ ನದಿಗಳ ದಂಡೆಗಳಲ್ಲಿ ಇರುತ್ತವೆ, ಬರೆದು ತೋರಿಸಿರಿ.

೪ನೇ ಇಯತ್ತೆಯವರಿಗೆ ಬಾಯಿಲೆಖ್ಖ—ನಾನು ೧೬ ತಿಂಗಳು ಹಾಲು ಕುಡಿದೆನು. ಮೊದಲಿಗೆ ೧೫ ದಿವಸಗಳಲ್ಲಿ ಪ್ರತಿ ದಿವಸ ೧೬ ಶೇರಿನಂತೆ, ಎರಡನೇ ೧೫ ದಿವಸಗಳಲ್ಲಿ ಪ್ರತಿ ದಿವಸ ೧೭ ಶೇರಿನಂತೆ, ಉಳಿದ ದಿವಸಗಳಲ್ಲಿ ಪ್ರತಿ ದಿವಸ ೯ ಶೇರಿನಂತೆ; ಯಾವತ್ತು ಹಾಲಿಗೆ ಎಷ್ಟು ಹಣವನ್ನು ಕೊಡಬೇಕು?

೭ನೇ ಲೆಖ್ಖ—ನಾನು ೭ ತಿಂಗಳ ವರೆಗೆ ನೀರು ಹಾಕಿಸಿ ಕೊಂಡೆನು. ಮೊದಲು ೭೦ ದಿವಸಗಳ ತನಕ ದಿನಂಪ್ರತಿ ೬ ಕೊಡಗಳಂತೆ, ಮುಂದೆ ೧೫ ದಿವಸ ದಿನಂಪ್ರತಿ ೧೦ ಕೊಡಗಳಂತೆ, ಮತ್ತು ಉಳಿದ ೯ ದಿವಸಗಳಲ್ಲಿ ೧೫೦ ಕೊ

ದುಡ್ಡಿಗೆ ೩ ಕೊಡ, ೧೫ ದುಡ್ಡಿಗೆ ೫ ಕೊಡ ಮತ್ತು ೧೫ ಪೈಗೆ ಬಂದು ಕೊಡದಂತೆ; ಆದರೆ ಯಾವತ್ತು ಕೂಡಿ ನೀರಿನವನಿಗೆ ಎಷ್ಟು ಕೊಡಬೇಕು?

೩ನೇ ಲೆಖ್ಖ— ನಾನು ೧೦ ರುಮಾಲಗಳನ್ನು ೧೫ ಧೋತರ ಜೋಡುಗಳನ್ನು ಕೊಂಡೆನು. ರುಮಾಲು ೧ ಕ್ಕೆ ೩ ರುಪಾಯಿ ೧೧ ಆಣೆ ೯ ಪೈ; ಧೋತರ ಜೋಡು ೧ಕ್ಕೆ ೬ ರುಪಾಯಿ ಹದಿನೈದು ಆಣೆ ಹನ್ನೊಂದು ಪೈ. ಈ ಪ್ರಕಾರ ಲೆಖ್ಖ ಮಾಡಿ ೧೫೦ ರುಪಾಯಿಗಳನ್ನು ಕೊಟ್ಟೆನು. ಆದರೆ ಇನ್ನೆಷ್ಟು ಕೊಡುವದು ಉಳಿಯಿತು?

ಟೀಪು ಈ ಲೆಖ್ಖದಲ್ಲಿ ರುಮಾಲದ ಕಿಮ್ಮತ್ತು ರುಪಾಯಿ ೩೯೧೦ ಯಂತೆ ಹಿಡಿದು ಬಂದದ್ದರಲ್ಲಿ ೧೦ ದುಡ್ಡುಗಳನ್ನು ಕಳೆದರೆ, ಧೋತರದ ಕಿಮ್ಮತ್ತು ೬ರುಪಾಯಿಯಂತೆ ಹಿಡಿದು ಬಂದದ್ದರಲ್ಲಿ ೫ ದುಡ್ಡುಗಳನ್ನು ಕಳೆದರೆ ಲೆಖ್ಖವು ಸುಲಭರೀತಿಯಿಂದ ಆಗುತ್ತದೆ. ಈ ಕುಶಲತ್ವವು ಹುಡುಗರಲ್ಲಿ ಉಂಟೋ ಇಲ್ಲವೋ ಎಂಬದನ್ನು ತಿಳುಕೊಳ್ಳುವದಕ್ಕಾಗಿ ಹಾಕಿದ್ದಾರೆ.

ಇತಿಹಾಸ (ಪಾಟಿಯಮೇಲೆ)

೧ ಕರ್ನಾಟಕದಲ್ಲಿ ಶಕಕರ್ತನು ಯಾವನು ಆಗಿ ಹೋದನು? ಅವನ ಶಕವು ಎಂದು ಪ್ರಾರಂಭವಾಯಿತು?

೨ ಕರ್ನಾಟಕದಲ್ಲಿ ಯಾವ ಯಾವ ಋಷಿಗಳು ಎಲ್ಲೆಲ್ಲಿ ವಾಸಿಸಿದರು?

೩ ಮಹಾರಾಷ್ಟ್ರರ ಮೂಲ ಪುರುಷನು ಯಾರು? ಅವನ ರಾಜ್ಯಸಂಪಾದನ ಕ್ರಮವನ್ನು ಸ್ವಲ್ಪದರಲ್ಲಿ ಬರಿ.

೪ ಪೇಶ್ವೆಯ ಮೂಲಪುರುಷನು ಯಾರು? ಅವನು ಎಲ್ಲಿಯವನು?

೫ನೇ ಇಯತ್ತೆ ಯುಕ್ತಿಪಡ—೧ನೇ ಪುಸ್ತಕದ ೧೬ನೇ ಸಿ

ನ್ನು ಬೆಳಿಸಲಾಗಿ ಹೊರಕೋನವು ಸಲ್ಲಗ್ನ ಕೋನವನ್ನು ಬಿಟ್ಟು ಉಳಿದ ಎರಡು ಕೋನಗಳಲ್ಲಿ ಯಾವದೊಂದಕ್ಕಿಂತ ದೊಡ್ಡದಿರುತ್ತದೆ." ಎಂದು ಬರೆದದೆ. ಆದರೆ ಹೊರ ಕೋನವು ಸಲ್ಲಗ್ನ ಕೋನಕ್ಕಿಂತ ದೊಡ್ಡದು ಇರುತ್ತದೋ ಅಥವಾ ಇಲ್ಲವೋ? "ಸಲ್ಲಗ್ನ ಕೋನವನ್ನು ಬಿಟ್ಟು" ಈ ಅಪೂರ್ಣ ವಾಕ್ಯವನ್ನು ಪ್ರತಿಜ್ಞೆಯಲ್ಲಿ ಹಾಕದಿದ್ದರೆ ಏನು ತೊಂದರೆ ಬರುತ್ತದೆ? ಎಂದು ಕೇಳಿದರು. ಈ ಪ್ರಶ್ನಕ್ಕೆ ಉತ್ತರವು ಸ್ವಲ್ಪದರಲ್ಲಿಯೇ ಹೇಳುವ ಹಾಗಿದು ಯಾವ ಶಾಲೆಯ ವಿದ್ಯಾರ್ಥಿಗಳಾದರು ಉತ್ತರವನ್ನು ಹೇಳಲಿಲ್ಲವೆಂದು ಸಾ|| ರವರು ಹೇಳಿದರು. ಅಸರ ಅನ್ನೋಣವು ಅಕ್ಷರಶಃ ನಿಜವಿದ್ದು ಯಾವ ಮಾಸ್ತರರೂ ಇಂಥ ಅಂತರ್ವಿಚಾರಕ್ಕೆ ಹೋಗುವದಿಲ್ಲ.

ಟೀಪು--ಸಲ್ಲಗ್ನ ಕೋನವನ್ನು ಉಂಟು ಮಾಡತಕ್ಕ ತ್ರಿಕೋನದ ಭುಜವು ಪಾದದಮೇಲೆ ಲಂಬವಾದಾಗ ಎರಡೂ ಕೋನಗಳು ಕಾಟ್ಕೋನಗಳಾಗುವದರಿಂದ ಬಂದಕ್ಕೊಂದು ಸರಿಯಾಗಿಯೂ, ಅದೇ ಭುಜವು ಪಾದದಮೇಲೆ ವಿಶಾಲ ಕೋನವನ್ನುಂಟು ಮಾಡುವಂತೆ ನಿಂತಾಗ ಹೊರಕೋನಕ್ಕಿಂತ ಹತ್ತರದ ಕೋನವು ದೊಡ್ಡದಾಗಿಯೂ, ಲಘುಕೋನವನ್ನುಂಟು ಮಾಡುವಂತೆ ನಿಂತಾಗ ಸಣ್ಣದಾಗಿಯೂ ಆಗುವದು. ಆದ ಕಾರಣ ಪ್ರತಿಜ್ಞೆಯಲ್ಲಿ ಬರೆದಿದ್ದರಲ್ಲಿ ಬಂದು ಶಬ್ದವನ್ನು ತೆಗೆದರೆ ಅದು ಅಶುದ್ಧವಾಗುವದು.

ನಿಬಂಧ--ಈ ವರ್ಷ ನಿಮ್ಮ ಊರ ಬೆಳೆಯು ಯಾವ ಪ್ರಕಾರ ಬಂದಿರುತ್ತದೆ? ಅದನ್ನು ಬರೆಯಿರಿ.

ಟೀಪು--ದಿನಂಪ್ರತಿ ಮನೆಯಲ್ಲಿ, ಓಣಿಯಲ್ಲಿ, ಊರಲ್ಲಿ ಜನರು ಬಬ್ಬರಿಗೊಬ್ಬರು ನಿಮ್ಮ ಹೊಲಾ ಹ್ಯಾಗೆ ಬೆಳೆಯಿ

ಕಟ್ಟು ಬಂತು? ಇತ್ಯಾದಿ ಪ್ರಶ್ನೆಗಳನ್ನು ಮೇಲಿಂದಮೇಲೆ ಮಾಡಿ ಉತ್ತರವನ್ನು ಸ್ವೀಕರಿಸುತ್ತಾರೆ. ಅವರ ಈ ಅನ್ವೇಷಣವನ್ನು ವಿದ್ಯಾರ್ಥಿಗಳು ಕೂಡಿಸಿ ಬರೆಯುತಕ್ಕ ದಿರುತ್ತದೆ. ಇದರಿಂದ ತಮ್ಮಸುತ್ತಲೂ ನಡೆಯುವ ಸಂಗತಿಯನ್ನು ಕುರಿತು ವಿದ್ಯಾರ್ಥಿಗಳು ಯಾವಾಗಲೂ ವಿಚಾರಿಸುತ್ತಿರಬೇಕು, ಎಂಬ ಶಿಕ್ಷಣಪದ್ಧತಿಯ ನಿಯಮವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಈ ಪ್ರಕಾರದ ಶಿಕ್ಷಣವನ್ನು ನಾವು ಮತ್ತು ನಮ್ಮಲ್ಲಿ ಬಹು ಜನರು ಸಾಲೆಯಲ್ಲಿ ಬಹುತರವಾಗಿ ನಡಿಸುತ್ತಿರುವದಿಲ್ಲ. "ವ್ಯವಹಾರಕ್ಕೆ ಉಪಯೋಗ ಬೀಳುವಂತೆ ಶಿಕ್ಷಣವು ನಡಿಯುತಕ್ಕದ್ದು" ಎಂಬ ಶಿಕ್ಷಣ ಪದ್ಧತಿಯ ನಿಯಮವನ್ನು ಸಾಹೇಬ ಬಹದ್ದೂರವರು ಮೇಲಿಂದಮೇಲೆ ನೆನಪು ಕೊಟ್ಟದ್ದಾರೆ. ಈ ತರದ ಪರೀಕ್ಷೆಯಿಂದ ಬಹಳ ಹುಡುಗರು ಪಾಸಾಗಲಿಲ್ಲವೆಂದು ನಮ್ಮ ಬಂಧುಗಳಲ್ಲಿ ಬಹು ಜನರು ತಿಳಿಸುತ್ತಾರೆ. ಇದರಿಂದ ನಮಗೇನೂ ಅಸಂತೋಷವಿಲ್ಲ. ಮುಂದೆ ವಿದ್ಯಾರ್ಥಿಗಳು ಕಲಿತದ್ದು ವ್ಯವಹಾರಕ್ಕೆ ಉಪಯೋಗ ಬೀಳುವಂತೆ ಮಾಡಲಿಕ್ಕೆ ಪ್ರಯತ್ನಿಸಬೇಕೆಂದು ಬಂಧುಗಳಿಗೆ ನನ್ನ ವಿನಂತಿಯುಂಟು.

ಎಡಿಟರ ಮಹಾರಾಯರೇ ಈ ವೃತ್ತವು ನಮ್ಮ ಬಂಧುಗಳಿಗೆ ತಿಳಿದು ಏನಾದರು ಉಪಯೋಗಕ್ಕೆ ಬೀಳಬಹುದೆಂದು ಬರೆದಿದ್ದೇನೆ ಇದು ತಮಗೆ ಯೋಗ್ಯವಾದದ್ದೆಂದು ಕಂಡರೆ ಮುದ್ರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಬೇವೂರ
ತಾ|| ಬಾಗಲಕೋಟ
ತಾ|| ೧೪-೫-೯೦. } ಮಧ್ವ ವೆಂಕಟೇಶ ಕುಲಕರ್ಣಿ,
ಸ್ಕೂಲ ಮಾಸ್ತರ.

TRAINING COLLEGE-METHOD, 1892.

ಧಾರವಾಡ ಟ್ರೇನಿಂಗ ಕಾಲೇಜಿನ ಷಾಣ್ಮಾಸಿಕ ಪರೀಕ್ಷೆ—ಶಿಕ್ಷಣ ಪದ್ಧತಿ, ೧೮೯೨.

೩ನೇ ವರ್ಷ.

೧ ಶಿಕ್ಷಕರ ಕರ್ತವ್ಯನನ್ನೂ, ಅವರಲ್ಲಿ ಅವಶ್ಯವಾ (೧೫)
ಗಿ ಇರತಕ್ಕ ಗುಣಗಳನ್ನೂ, ಅವರು ಎಚ್ಚರದಿಂದ ಬೆಳೆಸತ
ಕ್ಕ ನಡತೆಗಳನ್ನೂ, ಜಾಗ್ರತೆಯಿಂದ ತ್ಯಜಿಸತಕ್ಕ ದೋ
ಷಗಳನ್ನೂ ಕುರಿತು ಒಂದು ನಿಬಂಧಬರೆ.

೨ ಪಾಠದ ಕಡೆಗೆ ದುರ್ಲಕ್ಷ, ಸತ್ಯದ ಅನಾಸ್ಥೆ, ಈ ದು (೪)
ರ್ಗುಣಗಳನ್ನು ಹೋಗಲಾಡಿಸುವ ಉಪಾಯಗಳು ಯಾವವು?

೩ ಅಳತೆಗೆಟ್ಟ ಪ್ರೀತಿಯು, ವಿದ್ಯಾರ್ಥಿಯಲ್ಲಿ ಕೃತಜ್ಞತೆ (೪)
ಯನ್ನಾಗಲಿ ಪ್ರೀತಿಯನ್ನಾಗಲಿ ಹುಟ್ಟಿಸಲಾರದು. ಈ
ಮಾತಿನ ಜ್ಞಾನದಿಂದ ಶಿಕ್ಷಕರು ಯಾವ ಪ್ರಯೋಜನವ
ನ್ನು ಮಾಡಿಕೊಳ್ಳತಕ್ಕದ್ದು?

೪ ನಕಲು ಮಾಡುವ ಚಟವನ್ನು ಪ್ರತಿಬಂಧಿಸಲಿಕ್ಕೆ (೧೦)
ಬಾಹ್ಯೋಪಾಯಗಳೂ, ನಿಜವಾದ ಉಪಾಯಗಳೂ, ನೀ
ತಿ ವಿಷಯಕ ಉಪಾಯಗಳೂ, ಇರುತ್ತವೆಂದು ಬಲ್ಲವರು
ಹೇಳುತ್ತಾರೆ. ಆ ಉಪಾಯಗಳು ಯಾವವು? ಅವುಗಳನ್ನು
ಅಯಾ ಸದರಿನಲ್ಲಿ ಸೇರಿಸಿ ಸ್ಪಷ್ಟೀಕರಿಸಿರಿ ಮತ್ತು ಬೇರೆ
ಉಪಾಯಗಳು ತೋಚಿದರೆ, ಬರೆಯಿರಿ.

೫ "ಹುಡುಗರು ತಾವೇ ತಿಳುಕೊಳ್ಳುವಂಥ ಸಂಗತಿ (೧೦)
ಯನ್ನು ಶಿಕ್ಷಕರು ಸರ್ವಥಾ ಹೇಳಬಾರದು" ಇದರ
ಮರ್ಮವೇನು, ಮಹತ್ವವೇನು, ಮತ್ತು ಈ ನಿಯಮವ
ನ್ನು ಶಿಕ್ಷಕರು ವಾಡಿಕೆಯಾಗಿ ಯಾಕೆ ಪಾಲಿಸುವದಿಲ್ಲ?

೬ ಪ್ರಶ್ನ ಪದ್ಧತಿಯೇ ಮೇಲಾದದ್ದೆಂಬ ಮಾತು ಸಿದ್ಧ (೧೦)
ಮಾಡಿರಿ. ಪ್ರಶ್ನಗಳು ಹ್ಯಾಗೆ ಇರಬೇಕೆನ್ನುವದನ್ನು ವಿವರಿಸಿರಿ.

(೭) ಪಾಠಗಳ ಟಿಪ್ಪಣಿಗಳ ಕ್ರಮವನ್ನೂ ಪ್ರಕಾರಗಳ (೧೦)
ನ್ನೂ ಪ್ರಯೋಜನವನ್ನೂ ಹೇಳಿರಿ

೮ ಉಕ್ತ ಲೇಖನವನ್ನು ತಪಾಸಿಸುವ ಯೋಗ್ಯ ಕ್ರಮ (೧೫)
ವ್ಯಾವದು? ಈ ಪದ್ಧತಿಯಿಂದ ಮತ್ತೊಂದು ವಿಷಯವ
ನ್ನು ಕಲಿಸಬಹುದೋ? ಹ್ಯಾಗೆ?

೯ ಹಿರೇಮಣಿಗಳ ಗುಣದೋಷಗಳನ್ನು ವಿವರಿಸಿರಿ. (೪)

೧೦ ಹುಡುಗರ ಅಭ್ಯಾಸದಿಂದ ವರ್ಗಗಳಲ್ಲಿ, ಆರೋ (೧೦)
ಗ್ಯದ ಸಮ್ಮಂಧದಿಂದ ಶಾಲಾ ಗೃಹಗಳಲ್ಲಿ, ಯಾವ ವ್ಯವ
ಸ್ಥೆಗಳನ್ನು ಮಾಡಲಿಕ್ಕೆ ಬೇಕು.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತುಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕ್ಕೈಕೊಂಬುದೈ ।
ದಯೆಯಿಂದೋಷವತಿದ್ದ ಪೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ಸಪ್ಟೆಂಬರ ೧೮೯೯-೨. [ಸಂಬಿಕೆ ೯.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬುಂಧದ ವೃತ್ತಾಂತಗಳು.

ಕೆಲವು ದಿವಸಗಳ ಕೆಳಗೆ ನಮ್ಮ ಹಾಯ್‌ಕೋರ್ಟಿನ ಜಡ್ಜರಾದ ನಾಮುದಾರ ಜಾಡ್ರೈನ ಮತ್ತು ತೆಲಂಗ ಇವರ ಮುಂದೆ ಬಂದು ಕಟ್ಲೆ ನಡೆದಿತ್ತು. ಆ ಕಟ್ಲೆಯಲ್ಲಿ ಮ್ಯಾಜಿಸ್ತ್ರೇಟರು ಸ್ವತಃ ಬರೆದ ಕಾಗದಗಳು ಯಾರಿಗೂ ಓದಲಿಕ್ಕೆ ಬರವಂತೆ ಇವ್ವದ್ದರಿಂದ ನಾಮುದಾರರು ಆ ಕಾಗದಗಳನ್ನು ನಿಸ್ಪ್ರಯೋಜಕ ಮ್ಯಾಜಿಸ್ತ್ರೇಟರ ಕಡೆಗೆ ತಿರುಗಿ ಕಳುಹಿಸಿ, ಅವುಗಳ ಸುವಾಚ್ಯವಾದ ನಕಲುಗಳನ್ನು ತಮ್ಮ ಸಹಿಯಿಂದ ಕಳುಹಿಸಬೇಕೆಂದು ವಿಧಿಸಿದ್ದಲ್ಲದೆ, ಇನ್ನುಮುಂದೆ ಪ್ರತಿಯೊಂದು ನ್ಯಾಯದ ಕೋರ್ಟಿನವರು ತಾವು ಬರೆಯತಕ್ಕದ್ದನ್ನೆಲ್ಲ ಸುವಾಚ್ಯವಾಗಿ ಬರೆಯುತ್ತಿರಬೇಕೆಂದು ಕಟ್ಟು ಮಾಡಿರುತ್ತಾರೆ. ಈ ಕಟ್ಟಳೆಯು ಬಹು ಗೌರವದ್ದಿದೆ. ನಮ್ಮ ಶಿಕ್ಷಕ ಜನರು ಇದನ್ನು ಲಕ್ಷವಲ್ಲಿಟ್ಟು ವಿದ್ಯಾರ್ಥಿಗಳ ಬರಹದ ಕಡೆಗೆ ತಕ್ಕಷ್ಟು ಲಕ್ಷ ಕೊಡಬೇಕೆಂದು ನಾವು ಅಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ಸನ್ ೧೮೮೮ನೇ ಎಪ್ರಿಲ ತಿಂಗಳಿನಲ್ಲಿ ಹಳೆ ನಿಯಮಗಳನ್ನೆಲ್ಲ ರದ್ದು ಪಡಿಸಿ ಮುಲ್ಕೀ ದಿವಾಣೀ ಜಾತೆಗಳ್ಯಾಗಿನ

ಕಡಿಮೆ ತರದ ನೌಕರಿಗಳ ಸಂಬಂಧದ ಪರೀಕ್ಷೆಗಳ ನಿಯಮಗಳನ್ನು ಸರಕಾರದವರು ಪ್ರಕಟಿಸಿದರು, ಮತ್ತು ಅದೇ ಕಾಲಕ್ಕೆ ಸರಕಾರದ ಗ್ಯಾಝೆಟಿನ ಮುಖಾಂತರವಾಗಿ ಸೂಚನೆಯನ್ನು ಮಾಡಿ ಆ ನೇಮಗಳನ್ನು ಬೇರೆ ಖಾತೆಗಳಿಗೂ ಲಾಗೂ ಮಾಡಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಅದೇ ಮೇರೆಗೆ ಸನ್ ೧೯೧೦ನೇ ಇಸವಿಯ ಮೇ ತಿಂಗಳಿನಲ್ಲಿ ಪಬ್ಲಿಕ್ ವರ್ಕ್ಸ್ ಖಾತೆಗೆ ಆ ನಿಯಮಗಳು ಲಾಗೂ ಮಾಡಲ್ಪಟ್ಟವು. ವಿದ್ಯಾಖಾತೆಯಲ್ಲಿ ಈ ನಿಯಮಗಳ ಅಮಲು ನಡೆದಾಗ್ಯೂ ಕಣ್ಣು ತಪ್ಪಿ ಸರಕಾರೀ ಗ್ಯಾಝೆಟಿನಲ್ಲಿ ಮೇಲಿನಂತೆ ನೋಟೀಸು ಕೊಡುವದು ಉಳಿದಿತ್ತು. ಆದರೆ ಸರಕಾರದವರು ಹೋದ ಜುಲೈ ತಿಂಗಳಿನಲ್ಲಿ ಮಾಡಿದ ಠರಾವಿನಿಂದ ಟ್ರೇನ್ಡ್ ಮಾಸ್ತರರಿಗೆ ಖಾಲಾಖಿ ತೆಯೊಳಗಿನ ಕಡಿಮೆ ತರದ ನೌಕರಿಗಳನ್ನು ಪಡೆಯಲಿಕ್ಕೆ ಹಕ್ಕುಂಟೆಂದು ತಿಳಿಸಿವ್ದಲ್ಲದೆ ಈ ನಿಯಮಗಳನ್ನು ಖಾಲಾಖಿತೆಗೂ ಲಾಗೂ ಮಾಡಿರುತ್ತಾರೆ.

ಹಾಲು ತಮಗೆ ಪಚನವಾಗುವದಿಲ್ಲೆಂದು ಅನೇಕ ಜನರು ಅನ್ನುತ್ತಾರೆ. ಇದರ ಕಾರಣವೇನೆಂದರೆ, ಅವರು ಹಾಲಿನ ಪಾತ್ರೆಯನ್ನು ಬಾಯಿಗೆ ಹಚ್ಚಿದ ಕೂಡಲೆ, ಬಂದೇ ಸಲ್ಲಿಗೆ ಎಲ್ಲ ಹಾಲನ್ನು ಕುಡಿದು ಬಿಡುತ್ತಾರೆ. ಇದರಿಂದ ಕುಡಿದ ಹಾಲೆಲ್ಲ ಏಕಕಾಲಕ್ಕೆ ಅನ್ನಕೋಶವನ್ನು ಪ್ರವೇಶಿಸಿ ಅಲ್ಲಿ ಬಂದು ಘಟ್ಟ ಮುದ್ದೆಯಾಗುತ್ತದೆ. ಆ ಮುದ್ದೆಯು ಪಚನವಾಗುವದು ಬಹು ಕಷ್ಟ. ಆದರೆ ಹೀಗೆ ಮಾಡದೆ ತುಸು ತುಸು ಹಾಲನ್ನು ಕುಡಿಯುತ್ತ ಹೋದರೆ ಅಂದರೆ ಬಂದು ಬಟ್ಟಲ ತುಂಬ ಹಾಲನ್ನು ಕುಡಿಯುವದರಲ್ಲಿ ಕನಿಷ್ಠಪಕ್ಷಕ್ಕೆ ೩।೪ ಮಿನಿಟುಗಳನ್ನು ಕಳೆದರೆ, ಆ ತುಸು ತುಸು ಕುಡಿದಂಥ ಹಾಲು ಅನ್ನಕೋಶಕ್ಕೆ ಹೋಗಿ ಅಲ್ಲಿ

ಬೇರೆ ಬೇರೆ ಭಾಗಗಳಾಗುತ್ತದೆ. ಈ ಭಾಗಗಳ ಸುತ್ತೆಲು ಪಾಚಕಕ ರಸದ ಆವರಣವಾಗಿ ಅವೆಲ್ಲ ಭಾಗಗಳು ಕೂಡಿಕೊಂಡು ಸ್ಪಂಜಿನಂತೆ ತೂತುಳ್ಳದ್ದಾಗುವದರಿಂದ ಅದರ ಒಳಗೂ ಹೊರಗೂ ಪಾಚಕಕ ರಸವಾಡಲಿಕ್ಕೆ ಅಸ್ಪದವಾಗುತ್ತದೆ. ಇದರಿಂದ ಆ ಹಾಲು ಬೇಗನೆ ಪಚನವಾಗುತ್ತದೆ. ಅದರೆ ಒಮ್ಮಿಗಿಲೆ ಕುಡಿದ ಹಾಲು ಘಟ್ಟಿ ಮುದ್ದೆಯಾಗಿ ಪಾಚಕ ರಸಕ್ಕೆ ಒಳಸೇರಲಿಕ್ಕೆ ಅಸ್ಪದವಾಗುವದಿಲ್ಲ. ಪಾಚಕರಸದ ಕ್ರಿಯೆಯು ಮೇಲ್ಭಾಗದಲ್ಲಿ ಮಾತ್ರ ನಡಿಯುತ್ತದೆ. ಆವದ್ದರಿಂದ ಮಧ್ಯದಲ್ಲಿಯ ಹಾಲು ಹಾಗೆಯೇ ಉಳಿದು ಅಜೀರ್ಣವಾಗುತ್ತದೆ.

ಹೋದ ಸಂಚಿಕೆಯಲ್ಲಿ ನಮ್ಮ ದೇಶಬಂಧುಗಳಾದ ದಾದಾಭಾಯಿಯವರು ಇಂಗ್ಲಿಷ ಪಾರ್ಲಮೆಂಟಿನ ಸಭಿಕರಾದ ಕಾರಣದಿಂದ ನಮಗಾದ ಆನಂದವನ್ನೂ ಇಂಗ್ಲಿಷ ಜನರು ನಮ್ಮ ಮೇಲೆ ಮಾಡಿದ ಉಪಕಾರಗಳನ್ನೂ ಉಲ್ಲೇಖಿಸಿರುತ್ತೇವೆ. ಆಗ್ಗೆ, ಪಾರ್ಲಮೆಂಟವೆಂದರೇನು? ನಮ್ಮ ದೇಶವನ್ನು ಆಳುವ ಇಂಗ್ಲಿಷ ಜನರನ್ನು ಆಳುವವರಾರು? ಎಂಬ ಮಾತನ್ನು ನಮ್ಮ ವಾಚಕರಿಗೆ ತಿಳುಹಿಸಬೇಕೆಂಬ ನಮ್ಮ ಆಲೋಚನೆಯು ಸ್ಥಳಸಂಕೋಚದ ಸಲುವಾಗಿ ಹಾಗೆಯೇ ಉಳಿಯಿತು. ಈಗ್ಗೆ ಅವುಗಳನ್ನು ಸ್ವಲ್ಪದರಲ್ಲಿಯೇ ವಿವರಿಸುತ್ತೇವೆ.

ನಮ್ಮ ದೇಶದ ರಾಜ್ಯಕಾರಭಾರವನ್ನು ಈವೊತ್ತಿನವರೆಗೆ ಬುಬ್ಬ ತಪ್ಪಿದರೆ ಬುಬ್ಬ ಅರಸನು ನಡಿಸುತ್ತಾ ಬಂದಹಾಗೆ ಸಾಧಾರಣವಾಗಿ ಪೃಥ್ವಿಯೊಳಗಿನ ಎಲ್ಲ ದೇಶಗಳ ರಾಜ್ಯಕಾರಭಾರವನ್ನು ಅರಸರೇ ನಡಿಸುವ ಸಾಂಪ್ರದಾಯವು ಬಹು ದಿವಸಗಳ ವರೆಗೆ ಇತ್ತು. ಅವರೆ ಇತ್ತಿತ್ತಲಾಗಿ ಹಲವು ದೇಶಗಳಲ್ಲಿ ಈ ಸಾಂಪ್ರದಾಯವು ಪೂರಾ ಕಟ್ಟಾಗಿ, ಜನರು

ತಮ್ಮ ದೇಶವನ್ನು ತಾವೇ ಆಳಹತ್ತಿದ್ದಾರೆ. ಅಲ್ಲಿ ಅರಸನೇ ಇಲ್ಲ. ಅವರು ತಮ್ಮಲ್ಲಿ ಕೆಲವು ಪಂಚರನ್ನು ಆರಿಸಿಕೊಂಡು, ಆ ಪಂಚರೊಳಗಿನವನೊಬ್ಬನನ್ನು 'ಸರ ಪಂಚ' ಅಂದರೆ 'ಮುಖ್ಯ ಪಂಚ'ನನ್ನು ಮಾಡಿ, ಅವನು ಇಂತಿಷ್ಟು ದಿವಸಗಳವರೆಗೆ ರಾಜ್ಯದಾಡಳಿತವನ್ನು ನಾಗಿಸಬೇಕೆಂದು ವಿಧಿಸುತ್ತಾರೆ. ಗೊತ್ತು ಮಾಡಿದ ಅವಧಿಯು ಮುಗಿದ ಮೇಲೆ ಮೊದಲಿನ ಪಂಚರ ಸ್ಥಳದಲ್ಲಿ ಹೊಸ ಪಂಚರನ್ನು ನೇಮಿಸುತ್ತಾರೆ. ಈ ಪದ್ಧತಿಯು ಅಮೇರಿಕ ಖಂಡದೊಳಗಿನ ಕೆಲವು ದೇಶಗಳಲ್ಲಿ ಮತ್ತು ಫ್ರಾನ್ಸಿನಲ್ಲಿ ನಡೆಯುತ್ತದೆ. ಇಂಗ್ಲಂಡದಲ್ಲಿ ರಾಜನಾಗಲಿ, ರಾಣಿಯಾಗಲಿ ಸಿಂಹಾಸನದ ಮೇಲೆ ಇದ್ದರೂ ಎಲ್ಲ ಅಧಿಕಾರವು ಬಹುಶಃ ಪಂಚರ ಕೈಯಲ್ಲಿಯೇ ಇರುತ್ತದೆ. ಅರಸನ ಕೈಯಲ್ಲಿ ಅಥವಾ ಅರಸಿಯ ಕೈಯಲ್ಲಿ ಅಧಿಕಾರವು ಬಹುಸ್ವಲ್ಪವುಂಟು.

ಮೊನ್ನೆ ಮೊನ್ನೆ ಇಂಗ್ಲಂಡದಲ್ಲಿ ಹೊಸ ಪಂಚರನ್ನು ನೇಮಿಸಿದರು. ಈ ಪಂಚರನ್ನು ಆರಿಸುವ ಕಾಲಕ್ಕೆ ಪ್ರಾಯಶಃ ಬಹಳ ಗಡಿಬಿಡಿಯು ನಡೆಯುತ್ತದೆ. ಈ ಗಡಿಬಿಡಿಗೆ ಬಂದು ವಿಶೇಷ ಕಾರಣವಿರುತ್ತದೆ. ಅದು ಯಾವದಂದರೆ, ಇಂಗ್ಲಿಷ ಜನರಲ್ಲಿ ರಾಜಕೀಯ ಸಂಬಂಧವಾಗಿ ಎರಡು ಬಣಗಳಿರುತ್ತವೆ. ನಮ್ಮಲ್ಲಿ ಶೈವ ಮತ್ತು ವೈಷ್ಣವ ಎಂಬ ಧರ್ಮ ಸಂಬಂಧದ ಅಥವಾ ಸ್ಮಾರ್ತ, ವೈಷ್ಣವ, ಲಿಂಗಾಯತ ಎಂಬ ಜಾತಿಯ ಸಂಬಂಧದ ಭೇದಗಳು ಇದ್ದಂತೆಯೇ ಇಂಗ್ಲಿಷರಲ್ಲಿ ಈ ಬಣಗಳ ಸಂಬಂಧದ ಭೇದಗಳು ಇರುತ್ತವೆ. ಆದರೆ ಈ ಭೇದಗಳು ರಾಜಕೀಯ ಕೆಲಸಗಳಲ್ಲಿ ಮಾತ್ರ ತೋರುತ್ತವೆ. ಅವುಗಳ ಸಂಬಂಧವು ಉಳಿದ ವ್ಯವಹಾರಗಳಲ್ಲಿ ಎಷ್ಟುಮಾತ್ರವೂ ಇರುವದಿಲ್ಲ. ಬಂದು ಪೇಳೆ ಬಂದು ಬಣಕ್ಕೆ ಸೇರಿದವನು ತನ್ನ ಮತವನ್ನು ಬದಲು ಮಾಡಿ ಮತ್ತೊಂದು ಬಣಕ್ಕೆ ಸೇರಬಹುದು. ಈ ಬಣಗಳು ಇಂ

ಗ್ಲಿಷ ಜನರಲ್ಲಿ ಬಹು ಪುರಾತನ ಕಾಲದಿಂದ ನಡೆಯುತ್ತ ಬಂದಿರುತ್ತವೆ. ಇಷ್ಟು ದಿವಸ ಪ್ರಜಾಪಕ್ಷದವರೆಂತಲೂ, ರಾಜಪಕ್ಷದವರೆಂತಲೂ ಎರಡೇ ಬಣಗಳಿದ್ದವು; ಆದರೆ ಈ ಗ್ಗೆ ಐದು ತಂಡಗಳಾಗಿರುತ್ತವೆ. ಆದರೂ ಅವುಗಳಲ್ಲಿ ೩ ತಂಡದವರು ಬಂದು ಬಣಕ್ಕೆ ೨ ತಂಡದವರು ಮತ್ತೊಂದು ಬಣಕ್ಕೆ ಸೇರಿರುತ್ತಾರೆ.

ಜನರು ಆರಿಸಿದ ಪಂಚರ ಸಭೆಗೆ "ಹೌಸ ಆಫ್ ಕಾಮನ್ಸ್" ಎಂಬ ಹೆಸರು ಇರುತ್ತದೆ. ಈ ಸಭೆಯ ಹೊರ್ತು ಇನ್ನೊಂದು ಘನವಂತರ ಸಭೆ ಇರುತ್ತದೆ. ಈ ಘನವಂತರ ಸಭೆಯು ಜನರನ್ನು ಪ್ರಜೆಗಳು ಆರಿಸುವದಿಲ್ಲ. ಆದರೆ ದೊಡ್ಡ ದೊಡ್ಡ ಮನೆತನಗಳ ಪ್ರಮುಖ ಜನರಿಗೆ ಈ ಸಭೆಯಲ್ಲಿ ಕೂಡುವ ಹಕ್ಕು ಸಹಜವಾಗಿಯೇ ಇರುತ್ತದೆ. ಪ್ರಸಂಗೋಪಾತ್ತಾಗಿ ಅರಸನಾಗಲಿ, ಅರಸಿಯಾಗಲಿ ಕೆಲವರಿಗೆ ತಕ್ಕ ಕಾರಣದಿಂದ ಈ ಹಕ್ಕನ್ನು ಕೊಡುವರು. ಈ ಎರಡು ಸಭೆಗಳು ಕೂಡಿ ಆದ ಸಭೆಗೆ "ಪಾರ್ಲಮೆಂಟ" ಎಂಬ ಹೆಸರು. ಪ್ರತಿಯೊಂದು ಕಾಯದೆ, ಅಥವಾ ನಿಯಮವು ಈ ಎರಡು ಸಭೆಗಳಲ್ಲಿ ಚರ್ಚಿಸಲ್ಪಟ್ಟು ಬಹುಮತದಿಂದ ನಿರ್ಣಯವಾದ ಮೇರೆಗೆ ಅದು ಮಂಜೂರಾಗಲಿ, ನಾಮಂಜೂರಾಗಲಿ ಆಗುತ್ತದೆ. ಪ್ರತಿಯೊಂದು ಹೊಸ ಕಾಯದೆಗೆ ಅರಸನ ಅಥವಾ ಅರಸಿಯ ಒಪ್ಪಿಗೆಯು ಬೇಕಾಗುತ್ತದೆ. ಆದರೆ ಆ ಒಪ್ಪಿಗೆಯನ್ನು ಪಡೆಯುವದು ದುಸ್ತರವಲ್ಲ. ಯಾಕಂದರೆ, ಜನರ ಇಚ್ಛೆಯ ವಿರುದ್ಧವಾಗಿ ನಡೆಯುವಷ್ಟು ಧೈರ್ಯವು ಅರಸನಿಗಾಗಲಿ, ಅರಸಿಗಾಗಲಿ ಆಗುವದಿಲ್ಲ. ಪಣವ ಸಂಬಂಧದ ಯಾವತ್ತು ಕಾಯದೆಗಳು 'ಹೌಸ ಆಫ್ ಕಾಮನ್ಸ್' ಸಭೆಯಲ್ಲಿಯೇ ಉಪಕ್ರಮಿಸಲ್ಪಡಬೇಕೆಂಬ ನಿರ್ಬಂಧವಿರುವದರಿಂದ ಈ ಸಭೆಯ ಪಂಚಜನರ ಕೈಯಲ್ಲಿ ಬಹು ದೊಡ್ಡ ಅಧಿಕಾರವಿರುತ್ತದೆ. ಬಂದು ಬಗೆಯಿಂದ ಇವ

ರೇ ಇಂಗ್ಲಿಷ ರಾಜ್ಯವನ್ನು ಸಾಗಿಸುತ್ತಾರೆಂದು ಹೇಳಬಹುದು. ಮೇಲೆ ಹೇಳಿದ ಎರಡು ಬಣಗಳಲ್ಲಿ ಯಾವ ಬಣದ ಪಂಚ ಜನರ ಸಂಖ್ಯೆಯು ಹೆಚ್ಚಿರುವದೋ ಆ ಬಣದ ಪ್ರಧಾನನನ್ನು ನೇಮಿಸುತ್ತಾರೆ. ಈ ಪ್ರಧಾನನ ಕೆಲಸಕ್ಕೆ ಯೋಗ್ಯನಾದ ಮನುಷ್ಯನನ್ನು ಪ್ರತಿ ಬಣದವರು ಒಬ್ಬೊಬ್ಬನನ್ನು ಗೊತ್ತು ಮಾಡಿರುತ್ತಾರೆ. ಒಂದು ಬಣದವರಿಗೆ "ಕಾನಸರ್ವೇಟೀವ ಅಥವಾ ರಾಜಪಕ್ಷದವರು" (ಅಂದರೆ ಹಿಂದಿನಿಂದ ನಡೆಯುತ್ತ ಬಂದಂಥ ಕಟ್ಟಳೆಗಳಂತೆಯೇ ನಡಿಯುವವರು) ಎಂಬ ಹೆಸರು. ೧೮೮೬ ಇಸವಿಯಿಂದ ಕಳೆದ ಜುಲೈ ತನಕ ಇದೇ ಬಣದವರ ಕಡೆಗೆ ರಾಜಸೂತ್ರಗಳು ಇದ್ದವು. ಮತ್ತೊಂದು ಬಣಕ್ಕೆ "ಲಿಬರಲ್ ಅಥವಾ ಪ್ರಜಾಪಕ್ಷದವರು" (ಅಂದರೆ ಸುಧಾರಣಾ ಪ್ರಿಯರು) ಎಂಬ ಹೆಸರು. ಹೊಸದಾಗಿ ಆರಿಸಲ್ಪಟ್ಟ ಪಂಚ ಜನರಲ್ಲಿ ಲಿಬರಲ್ ಬಣದ ಪಂಚ ಜನರು ಹೆಚ್ಚಿದ್ದಾರೆ, ಆದರೆ ಈ ಎರಡೂ ಬಣಗಳ ಪಂಚ ಜನರ ಸಂಖ್ಯೆಗಳಲ್ಲಿ ಅಂತರವು ಬಹು ಸ್ವಲ್ಪ ಇರುತ್ತದೆ. ಕಾನಸರ್ವೇಟೀವ ಬಣವಲ್ಲಿ ೩೧೫ ಜನರು, ಲಿಬರಲ್ ಬಣದಲ್ಲಿ ೩೪೪ ಜನರು ಇರುತ್ತಾರೆ, ಅಂದರೆ ಇವೆರಡು ಬಣಗಳಲ್ಲಿ ೪೦ ಜನರ ಹೆಚ್ಚು ಕಡಿಮೆ ಮಾತ್ರ ಇರುತ್ತದೆ. ಲಿಬರಲ್ ಬಣದ ಮುಖ್ಯಸ್ಥನು ಮಿ. ಗ್ಲ್ಯಾಡಸ್ಟನ್ನನೆಂಬ ೮೩ ವರ್ಷದ ವಯೋವೃದ್ಧ ಪುರುಷನು ಇರುತ್ತಾನೆ. ಅವನು ಹಿಂದಕ್ಕೆ ಮೂರುಸಾರೆ ಪ್ರಧಾನನ ಕೆಲಸವನ್ನು ಮಾಡಿದವನಿರುತ್ತಾನೆ. ಈಗ್ಗೆ ಅವನು ಪುನಃ ಪ್ರಧಾನನಾಗುವ ಸಂಭವ ತೋರುತ್ತದೆ. ನಾಮದಾರ ದಾದಾಭಾಯಿಯವರು ಸುಧಾರಣಾ ಪಕ್ಷದವರಿರುತ್ತಾರೆಂದು ಹಿಂದೆ ಹೇಳಿದ್ದೇವೆ.

ರ ಕೌನ್ಸೆಲಿನ ಮೆಂಬರರಾದವರಿಂದ ಮುಂಬಯಿ ವಿದ್ಯಾಪೀಠದ ಫೆಲ್ಲೊಸಹಾನ್ಸೆಲರ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಆ ಕೆಲಸಕ್ಕೆ ನಾಮದಾರ ತೇಲಂಗ ಸಾ॥ ರನ್ನು ನೇಮಿಸಿರುತ್ತದೆ. ಕಲಕತ್ತಾ ಮದ್ರಾಸಗಳಲ್ಲಿ ಈ ಪೂರ್ವದಲ್ಲಿಯೇ ಈ ಬಹುಮಾನದ ಕೆಲಸಗಳು ನಮ್ಮ ಜನರಿಗೆ ಕೊಡಲ್ಪಟ್ಟಿರುತ್ತವೆ. ಮುಂಬಯಿಯಲ್ಲಿ ಮಾತ್ರ ಇದೇ ಮೊದಲು. ನಾಮದಾರ ತೇಲಂಗ ಸಾ॥ ರು ಈ ಕೆಲಸಕ್ಕೆ ಬುದ್ಧಿಯಿಂದ ಉದ್ಯೋಗದಿಂದ ವಿದ್ವತ್ತ್ವದಿಂದ ಸ್ವಭಾವದಿಂದ ಸಾರಾಂಶ, ಯಾವತ್ತು ರೀತಿಯಿಂದ ತಕ್ಕವರಿರುತ್ತಾರೆ. ಇವರು ವಿದ್ಯಾಪೀಠದಲ್ಲಿ ತಕ್ಕ ಏರ್ಪಾಡುಗಳನ್ನು ಮಾಡುವರೆಂತಲೂ, ದೇಶೀಯ ಭಾಷೆಗಳಿಗೆ ತಕ್ಕ ಉತ್ತೇಜನ ಕೊಡುವರೆಂತಲೂ ನಂಬುತ್ತೇವೆ.

ಫರ್ಗ್ಯುಸನ್ ಕಾಲೇಜಿನ ಪ್ರಿನ್ಸಿಪಾಲರಾದ ರಾ. ರಾ. ಭಾಮನರಾವ ಆಪಟೆ ಎಂಬವರ ಮರಣದ ಸುದ್ದಿಯನ್ನು ತಿಳುಹಿಸಲಿಕ್ಕೆ ನಾವು ಬಹಳ ವ್ಯಸನಪಡುತ್ತೇವೆ. ಈ ಸ್ವಾತಂತ್ರ್ಯಪ್ರಿಯನಾದ ವಿದ್ವನ್ಮಣಿಯ ಚರಿತ್ರವು ಉದಾಹರಣೀಯನಾವದರಿಂದ ಮುಂದಿನ ಸಂಚಿಕೆಯಲ್ಲಿ ಅದನ್ನು ಕೊಡುವೆವು.

Dr. KIRTIKAR ON "SENSES."

"ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಡಾಕ್ಟರ ಕೀರ್ತಿಕರರ ವ್ಯಾಖ್ಯಾನವು."

(ಗತಸಂಚಿಕೆಯ ಪುಟದಿಂದ ಮುಂದೆ ಸಾಗಿದ್ದು)

(೩.) ಜೀವಂತ ಶರೀರದಲ್ಲಿ ಉಷ್ಣತೆಯು ಹುಟ್ಟಿ, ಸುತ್ತಲು ಇರುವಂಥ ಪದಾರ್ಥಗಳ ಮೇಲೆ ವ್ಯಾಪಾರ ನಡಿಸುತ್ತದೆ. ತೊಯ್ದು ಅರಿವೆಯನ್ನು ತಲೆಯಮೇಲಿಟ್ಟರೆ ಅಥವಾ ಬೆನಿನಿಂದ ಹಸಿಯಾದ ಅಂಗಿಯನ್ನು ಬೆವರುವ ಕ್ರಿಯೆ

ಯು ಕಟ್ಟಾದ ಮೇಲೆ ತುಸು ಹೊತ್ತು ಮೈಯಲ್ಲಿಯೇ ಇರ ಗೊಟ್ಟರೆ, ಅದು ಬಣಗಿ ಹೋಗುತ್ತದೆ, ತಣ್ಣಗಾದ ಹಾಸಿ ಕೆಯ ಮೇಲೆ ಕೆಲ ಹೊತ್ತು ಮಲಗಿಕೊಂಡರೆ ಮೈಕೆಳಗಿನ ಹಾಸಿಕೆಯು ಶರೀರದ ಕಾವಿನಿಂದ ಬೆಚ್ಚಗಾಗುತ್ತದೆ. ಇವೆ ಲ್ಲ ಉಷ್ಣತೆಯ ಕಾರ್ಯಗಳು. ಈ ಶಾರೀರಕ ಉಷ್ಣತೆ ಯ ಸಂಬಂಧದ ಬಂದು ಸೋಜಿಗದ ಸಂಗತಿ ಏನಂದರೆ:— ನಾವು ಉತ್ತರ ಪ್ರದೇಶದೊಳಗಿನ ಅತಿ ಶೀತ ಭಾಗಕ್ಕೆ ಹೋದರೂ, ಭೂಮಧ್ಯರೇಷಾಂಕಿತ ಆಫ್ರಿಕ ಖಂಡದೊಳ ಗಿನ ಅತಿ ಉಷ್ಣ ಪ್ರದೇಶಕ್ಕೆ ತೆರಳಿದರೂ, ಸಮಶೀತೋ ಷ್ಣ ಕಟಿಬಂಧದೊಳಗಿನ ಬೇಕಾದ ಭಾಗಕ್ಕೆ ಗಮಿಸಿದರೂ ಅದು ಎಲ್ಲ ಕಡೆಯಲ್ಲಿಯೂ ಅಷ್ಟೇ ಅಂದರೆ ಫಾರೆನ್‌ಹೈಟ ದ ೯೮.೬ ಏ ಇರುತ್ತದೆ. ಅದೇ ಮೇರೆಗೆ ಅದು ಎಲ್ಲ ಋತುಗಳಲ್ಲಿ ಸಹ ಅಷ್ಟೇ ಇರುತ್ತದೆ. ಚಳಿಗಾಲದಲ್ಲಿ ಹಿಮ ಬಿದ್ದು, ಹವೆಯಲ್ಲಿ ತಂಪು ಹೆಚ್ಚಾಗಿ, ಕೈಕಾಲುಗಳು ಸೆಡುಗಟ್ಟಿ, ಸ್ಪರ್ಶೇಂದ್ರಿಯಗಳ ಜ್ಞಾನವು ಸಹ ಕುಂದಿ ಹೋಗುವಂಥ ದೇಶದಲ್ಲಿ, ಗ್ರೀಷ್ಮ ಋತುವಿನ ಮಧ್ಯಾ ಹ್ನದ ಬಿಸಿಲಿನಿಂದ ಭೋರನೆ ಬೆವರು ಸರ್ವಾಂಗದಿಂದ ಎಡ ಬಿಡದೆ ನೀರು ಸೋರುವಂಥ ದೇಶದಲ್ಲಿ ಸಹ ಅದರ ಮಾನ ವು ಅಷ್ಟೇ ಇರುತ್ತದೆ. ಎಲ್ಲ ಸ್ಥಳಗಳಲ್ಲಿಯೂ ಎಲ್ಲ ಕಾಲ ಗಳಲ್ಲಿಯೂ ಎಲ್ಲ ಜನರಲ್ಲಿಯೂ ಶಾರೀರಕ ಉಷ್ಣತೆಯ ಸಮತ್ವವನ್ನು ಕಾದುಕೊಳ್ಳುವಂಥ ಅತರ್ಕ್ಯ ಶಕ್ತಿಯು ತ್ವಚೆಯಲ್ಲಿರುತ್ತದೆ.

(೭.) ಈ ಮಾನವಶರೀರಕ್ಕೆ ಹೊತ್ತುಹೊತ್ತಿಗೆ ಆಹಾ ರವು ಬೇಕು. ಅದು ಆ ಆಹಾರದಿಂದ ತನ್ನ ಘಟಕಗಳಿಗೆ ಅನುಗುಣವಾದ ಪದಾರ್ಥಗಳನ್ನು ಜಠರದಲ್ಲಿ ಸಂಗ್ರಹಿಸಿ ಕೊಂಡು ಅವುಗಳಿಂದ ತನ್ನ ವೃದ್ಧಿಗೆ ತಕ್ಕ ಪದಾರ್ಥಗಳ

ನ್ನು ಹುಟ್ಟಿಸಿ ರಕ್ತಕ್ಕೆ ಕೂಡಿಸಿಕೊಳ್ಳುತ್ತದೆ. ಆಹಾರದಿಂ ದ ಪೋಷಕ ದ್ರವ್ಯಗಳು ದೊರೆದು ಶರೀರವು ಜೆಳೆಯುತ್ತದೆ, ಮತ್ತು ಮೇಲೆ ಹೇಳಿದ ಶರೀರದೊಳಗಿನ 'ನವಪದಾರ್ಥಪ್ರಭವಿಷ್ಣುತಾ' ಎಂಬ ಶಕ್ತಿಯು ಅವುರಣ ಜಾಗೃತವಾಗಿದ್ದು ಶರೀರದ ಚಲನವಲನ ಮತ್ತು ಚೇತನ ಮುಂತಾದ ಕ್ರಿಯೆಗಳು ಬಲಪಡುತ್ತವೆ.

(೫.) ಶರೀರವು ಪುಪ್ಪುಸಗಳ ಮುಖಾಂತರವಾಗಿ ಸುತ್ತಲಿನ ವಾತಾವರಣವನ್ನು ಎಳೆದುಕೊಂಡು ಅದರೊಳಗಿನ ಪ್ರಾಣವಾಯುವನ್ನು ಹೀರಿಕೊಳ್ಳುತ್ತದೆ. ಈ ಕ್ರಿಯೆಯು ಶರೀರದ ಜೀವನಕ್ಕೆ ವಿಶೇಷ ಅವಶ್ಯವಾಗಿರುವದರಿಂದ ಅದು ಶರೀರದ ಆದ್ಯವ್ಯಾಪಾರವೆಂದು ಹೇಳಬಹುದು. ಮನುಷ್ಯನು ಆಹಾರವಿಲ್ಲದೆ ಕೆಲವು ದಿವಸ ಬದುಕಬಹುದು; ಆದರೆಪ್ರಾಣವಾಯು ಇಲ್ಲದೆ ಎರಡು ಮೂರು ನಿಮಿಷ ಸಹ ಜೀವಿಸಲಾರನು.

(೬.) ಶರೀರವು, ಅನ್ನದಿಂದ ತನಗೆ ಪೋಷಕವಾದ ಪದಾರ್ಥಗಳನ್ನು ಸಿದ್ಧ ಮಾಡಿಕೊಳ್ಳುವಾಗ್ಗೆ ಹುಟ್ಟಿದಂಥ ವಿಷ ಅಥವಾ ಉತ್ಕೃಷ್ಟ ಪದಾರ್ಥಗಳನ್ನೂ, ತನಗೆ ನಿಷ್ಪ್ರಯೋಜನಕರವಾದ ಬೇರೆ ಅನೇಕ ದ್ರವ್ಯಗಳನ್ನೂ ಬತ್ತಿಟ್ಟಗೆ ಮಾಡಿ, ಆಗಾಗ್ಗೆ ಹೊರಗೆ ದೂಡುತ್ತಿರುತ್ತದೆ. ಈ ಕ್ರಿಯೆಗೆ "ವಿಲೋತ್ಸರ್ಗ" ಎಂಬ ಹೆಸರು. ಈ ಕ್ರಿಯೆಯು ಎರಡೂ ಪುಪ್ಪುಸಗಳ ದ್ವಾರದಿಂದ, ತ್ವಚೆಯಲ್ಲಿರುವ ಸಾವಿರಾರು ರೋಮರಂಧ್ರಗಳ ದ್ವಾರದಿಂದ, ಮೂತ್ರವಿಷ್ಟೆಗಳ ದ್ವಾರದಿಂದ ಮತ್ತು ಕಿವಿ, ಮೂಗು, ಬಾಯಿ ಮುಂತಾದ ಅನ್ಯ ಮಾರ್ಗಗಳಿಂದ ನಡೆಯುತ್ತಿರುತ್ತದೆ. ಪೋಷಣಾದಿ ಕ್ರಿಯೆಗಳು ಶರೀರಕ್ಕೆ ಅಗತ್ಯವಿದ್ದಂತೆ ಈ ಕ್ರಿಯೆಯಾದರೂ ಅವಶ್ಯವು. ಈ ಕ್ರಿಯೆಯು ಮುಂದವಾಗಿ ಸಾಗುವಂಥ ಅಥವಾ ಪೂರ್ಣವಾಗಿ ಕಟ್ಟಿಗಿರುವಂಥ ಶರೀರಕ್ಕೆ ವಿಕೃತಿಯು ತಪ್ಪದು. ೧೦೦ರಲ್ಲಿ ೯೦ ವಿಕಾರಗಳು ಈ

ಕ್ರಿಯೆಯು ತಕ್ಕ ರೀತಿಯಿಂದ ನಡೆಯದೆ ಇರುವದರಿಂದಲೇ ಹುಟ್ಟುತ್ತವೆಂಬ ಮೂರು ವೈದ್ಯರ ಅನುಭವಕ್ಕೆ ಯಾವಾಗಲೂ ಬರುತ್ತದೆ. ಈ ಆರು ವ್ಯಾಪಾರಗಳು ಮೃತಶರೀರವಲ್ಲಿ ನಡೆಯುವದಿಲ್ಲ. ಈ ಆರು ವ್ಯಾಪಾರಗಳನ್ನು ಲಕ್ಷಿಸಿ, ಇಂದ್ರಿಯ ವಿಜ್ಞಾನ ಶಾಸ್ತ್ರಕಾರರು ಈ ಮಾನವ ಶರೀರಕ್ಕೆ ಎರಡು ಮುಖ್ಯ ಕರ್ತವ್ಯಗಳಿರುತ್ತವೆಂದು ನಿರ್ಣಯ ಮಾಡಿದ್ದಾರೆ. ಶರೀರದೊಳಗಿನ ಸವೆದು ಹೋದ ದ್ರವ್ಯಗಳನ್ನು ತಿರುಗಿ ಹುಟ್ಟಿಸುವದು ಅಥವಾ ಪೂರ್ಣಸ್ಥಿತಿಗೆ ತರುವದು ಮತ್ತು ಅವುಗಳ ಸಂಬಂಧದ ಹೊಸ ಪದಾರ್ಥಗಳನ್ನು ಹುಟ್ಟಿಸುವದು ಮೊದಲನೇದು; ಮಲವ ಅಥವಾ ಜೀರ್ಣ ಪದಾರ್ಥಗಳ ಉತ್ಸರ್ಗವೆಂಬದು ಎರಡನೇದು.

ಶರೀರವು ತಾಯಿಯ ಗರ್ಭದಲ್ಲಿ ಬಂದೇ ಆದಿ ಪಿಂಡದಿಂದ ಉದ್ಭವಿಸಿದಾಗ್ಯೂ ಕಾಲಗತಿಯಿಂದ ಆ ಪಿಂಡದಲ್ಲಿ ಅನೇಕ ಸೂಕ್ಷ್ಮ ಪಿಂಡಗಳಾಗುತ್ತವೆ. ಆ ಮೇಲೆ ಎಷ್ಟೋ ಅವರ್ಣನೀಯವಾದಂಥ ಅತರ್ಕ್ಯವಾದಂಥ ಕ್ರಿಯೆಗಳು ಸಾಗಿ ಆ ಸೂಕ್ಷ್ಮ ಪಿಂಡಗಳಿಂದ, ಅಸ್ಥಿ, ಸ್ನಾಯು, ಮಸ್ತುಲುಂಗ ಮತ್ತು ಅವರಿಂದ ಹೊರಡುವ ಚೇತನಾಪ್ರವರ್ತಕ ತಂತುಗಳು, ರಕ್ತವಾಹಿನಿಗಳು, ಸರ್ವೇಂದ್ರಿಯ ಬಂಧಕ ತಂತುಜಾಲಗಳು, ಮತ್ತು ತ್ವಚೆ ಮುಂತಾದ ಅವಯವಗಳೂ, ಹೃದಯ ಅಂದರೆ ರಕ್ತಾಶಯ, ಪ್ಲೀಹಾ, ಪಿತ್ತೋತ್ಪಾದಕ ಯಕೃತ ಮುಂತಾದ ರಕ್ತಸಂಚಯದ ಇಂದ್ರಿಯಗಳೂ, ರಕ್ತವನ್ನು ಶುದ್ಧ ಮಾಡುವಂಥ ಮತ್ತು ಧ್ವನಿಯ ಅವ್ಯಸ್ಥನವಾದಂಥ ಎರಡೂ ಫುಪ್ಫುಸಗಳೂ, ಶರೀರದ ಮಲವನ್ನು ಹೊರಗೆ ದೂಡುವಂಥ ಎರಡು ಮೂತ್ರ ಪಿಂಡಗಳೂ, ವಂಶವೃದ್ಧಿಗೂ, ಕಾಮೋಚ್ಛೆಯನ್ನು ಪೂರ್ಣ ಮಾಡುವದಕ್ಕೂ ಕಾರಣವಾದ ಸ್ತ್ರೀಪುರುಷರ ಜನನೇಂದ್ರಿಯಗಳೂ, ಚಲನವಲನಾದಿ ಕ್ರಿಯೆಗಳನ್ನು ಮಾಡುವ ಹಸ್ತ

ಸಾವ ಮುಂತಾವ ಗಾತ್ರಗಳೂ ಹುಟ್ಟುತ್ತವೆ. ಈ ಪ್ರಕಾರ ಅನೇಕ ಘಟಕಗಳಿಂದುಂಟಾವ ಈ ದೇಹವು ನಮ್ಮ ಕ್ರಿಯೆಗಳಿಗೆ ಹ್ಯಾಗೆ ಅನುಕೂಲವಾಗುತ್ತದೆಂಬ ವಿಷಯವನ್ನು ಕುರಿತು ಈಗ್ಗೆ ವಿಚಾರ ಮಾಡುವಾ. ನಮ್ಮನ್ನು ನೋಡುತ್ತ ನಿಂತಂಥ ಮನುಷ್ಯನ ಮೇಲೆ ಖಡ್ಗವನ್ನೆತ್ತಿ ಹೊಡೆಯಹೋದರೆ, ನೋಡುತ್ತ ನಿಂತಂಥ ಆ ಮನುಷ್ಯನು ಕೂಡಲೆ ಆ ಖಡ್ಗವ ದಿಕ್ಕನ್ನು ಲಕ್ಷಕ್ಕೆ ತಂದು ಆ ದಿಕ್ಕಿನಲ್ಲಿ ತನ್ನನ್ನು ಸಂರಕ್ಷಣೆ ಮಾಡಿಕೊಳ್ಳಲಿಕ್ಕೆ ಕೈಗಳನ್ನು ಎತ್ತುವನು. ಈ ಕ್ಷಣಿಕಕೃತಿಯಲ್ಲಿ ಎಷ್ಟು ಕಾರ್ಯಗಳು ಜರಿಗಿದವು ಎಂಬವನ್ನು ವಿಚಾರ ಮಾಡಿ ನೋಡಿದರೆ, ನಮ್ಮ ಇಂದ್ರಿಯಗಳಲ್ಲಿ ಎಷ್ಟು ಚಟುವಟಿಕೆ, ಎಷ್ಟು ವೇಗ, ಎಷ್ಟು ನಿಯಮಿತತನ ಇರುತ್ತವೆಂಬದು ತಿಳಿಯುವದು. ಈ ಕೃತಿಯು ಹಗಲು ವರ್ತಿಸಿರುತ್ತದೆಂದು ಎಣಿಸುವಾ. ಮೊದಲು, ಖಡ್ಗವನ್ನೆತ್ತಿದ ಕೈಯ ಪ್ರತಿಮೆಯು ಸೂರ್ಯನ ಪ್ರಕಾಶವ ಸಹಾಯದಿಂದ ಮಜ್ಜೆಯಿಂದ ಉತ್ಪನ್ನವಾವಂಥ ದೃಷ್ಟಿಯನ್ನು ಹುಟ್ಟಿಸುವಂಥ ಸೂಕ್ಷ್ಮತಂತುಮಯವಾವಂಥ ಕಣ್ಣೊಳಗಿನ ದೃಗ್ಜಾಲ (ರೆಟಿನಾ) ಎಂಬ ಜಾಳಿಗೆಯ ಮೇಲೆ ಬಿದ್ದು, ಅದರಿಂದ ದೃಷ್ಟಿಜನಕ ಮಜ್ಜಾತಂತುಗಳಲ್ಲಿ ಚೇತನ ಉಂಟಾಯಿತು. ಅಲ್ಲಿಂದ ಅನುಮಸ್ತುಲುಂಗವಲ್ಲಿ ಹೋಯಿತು. ಅಲ್ಲಿ ದೃಷ್ಟಿಭವನದ ಪರಮಾಣುಗಳ ಮೇಲೆ ನಡೆಯತಕ್ಕ ಕಾರ್ಯಗಳೆಲ್ಲ ನಡೆದು ಆ ಪರಮಾಣುಗಳ ಮುಖಾಂತರವಾಗಿ ಮನಸು ಜಾಗೃತವಾಯಿತು; ಖಡ್ಗದ ಪೆಟ್ಟು ಬಿದ್ದೀತೆಂದು ಭಯ ಹುಟ್ಟಿತು; ಎಲ್ಲ ಪ್ರಾಣಿಗಳಲ್ಲಿ ಯಾವಾಗಲು ಸ್ವಶರೀರ ಸಂರಕ್ಷಣೆಗಾಗಿ ಇರುವ ಪ್ರಬಲವಾದ ಇಚ್ಛೆಯು ತನ್ನ ಕೆಲಸ ನಡಿಸಲಿಕ್ಕೆ ತತ್ಪರವಾಯಿತು. ಮಸ್ತುಲುಂಗದೊಳಗಿನ ಹಸ್ತಕಾರ್ಯ ಪ್ರವರ್ತಕ ಪರಮಾಣುಗಳಿಗೆ ಸೂಚನೆಯಾಯಿತು. ಆವ

ದ್ದರಿಂದ ಹೊಡಿಸಿಕೊಳ್ಳುವವನ ಕೈಗಳು ಮೇಲೆ ಬಂದವು. ಈ ಕ್ರಿಯೆಯು ನೋಡಲಿಕ್ಕೆ ಸಾಧಾರಣ ಕಂಡರೂ, ಇದರಲ್ಲಿ ಅನೇಕ ಕಾರ್ಯಗಳ ಸಮಾವೇಶವಾಗಿರುವದು; ಮತ್ತು ಈ ಕ್ರಿಯೆಗಳ ಬತ್ತರವನ್ನೂ ಕಾರ್ಯಾನುಕ್ರಮವನ್ನೂ ಕುರಿತು ಕಲ್ಪನೆ ಮಾಡುವದು ಸಹ ದುಸ್ತರವಾಗಿರುವದು. ಆದರೂ ಇವುಗಳಿಂದ ಎರಡು ಮಾತುಗಳು ಸಿದ್ಧವಾಗುತ್ತವೆ. ಅವು ಯಾವವೆಂದರೆ, ಸ್ನಾಯುಗಳ ಮುಖಾಂತರವಾಗಿ ಚಲನ ಕ್ರಿಯೆಯು ಸಂಭವಿಸುವದೆಂಬದು ಮೊದಲನೇದು, ಮತ್ತು ಆ ಚಲನಕ್ರಿಯೆಗೆ ಮಜ್ಜಾಗಳು ಕಾರಣವಾಗುವವೆಂಬದು ಎರಡನೇದು. ಸ್ನಾಯು ಮತ್ತು ಮಜ್ಜಾ ಇವೆರಡು ಶರೀರದ ಮುಖ್ಯ ಚಾಲಕಗಳೆಂದು ಎಣಿಸಲ್ಪಡುತ್ತವೆ. ಸ್ನಾಯುಗಳಲ್ಲಿ ಶರೀರದ ಹೊರಗಿನ ಕೆಲಸಗಳನ್ನು ಮಾಡುವಂಥ ಸ್ನಾಯುಗಳು ಮತ್ತು ರುಧಿರಾಭಿಸರಣ, ಅನ್ನಪಚನ, ಮಲೋತ್ಸರ್ಗ ಎಂಬೀ ಶರೀರದೊಳಗಿನ ಕೆಲಸಗಳನ್ನು ಮಾಡುವಂಥ ಸ್ನಾಯುಗಳು ಎಂಬ ಎರಡು ಭಾಗಗಳಿರುತ್ತವೆ. ಅದೇಮೇರೆಗೆ ಮಜ್ಜಾದಲ್ಲಿಯೂ ಶರೀರದ ಬಾಹ್ಯಸ್ಥಿತಿಯ ಕೂಡ ಸಂಬಂಧವಿಡುವ ಮಜ್ಜಾಗಳು ಹಾಗು ಮಜ್ಜಾತಂತುಗಳು ಮತ್ತು ಶರೀರಾಂತರ್ಗತ ಇಂದ್ರಿಯಗಳ ವ್ಯವಸ್ಥೆಯನ್ನು ಮಾಡುವಂಥ ಮಜ್ಜಾಗಳು ಮತ್ತು ಮಜ್ಜಾತಂತುಗಳು ಎಂಬ ಎರಡು ಭೇದಗಳಿರುತ್ತವೆ. ಆದರೆ ಈ ವಿಭಾಗಗಳಲ್ಲಿ ದ್ವೈತಭಾವವು ಮಾತ್ರ ಇರುವದಿಲ್ಲ. ಇದೇ ಮಾತು ಸ್ನಾಯು ಮತ್ತುಮಜ್ಜಾ ಇವುಗಳಿಗೂ ಸರಿಯಾಗಿ ಹತ್ತುತ್ತದೆ. ಅವು ಬಾವರ ಸಹಾಯವಿಲ್ಲದೆ ಬಂದು ಎಂದೂ ತಮ್ಮ ಕೆಲಸವನ್ನು ಸಾಗಿಸಲಾರವು. ಸ್ನಾಯುಗಳಿಗೆ ಮಾಂದ್ಯ ಉಂಟಾದರೆ ಮಜ್ಜೆಗಳಿಗೂ ಮಾಂದ್ಯ ಉಂಟಾಗುತ್ತದೆ. ಸ್ನಾಯುಗಳ ಶಕ್ತಿಯು ಕುಂದಿದರೆ ಮಜ್ಜೆಗಳ ಶಕ್ತಿಯೂ ಕುಂದುತ್ತದೆ. ಈ ಮೇರೆಗೆ ಅತ್ಯಮ್ಬತ ರೀತಿಯಿಂದ ಸ್ವಕಾ

ರ್ಯವನ್ನು ಸಾಧಿಸುವ ಈ ಮಾನವ ಶರೀರವು ತನ್ನ ಸಾಮರ್ಥ್ಯವನ್ನು ಯಾವ ಪ್ರಕಾರವಾಗಿ ಸ್ಥಿರವಾಗಿ ಇಟ್ಟು ಕೊಳ್ಳುವದಕ್ಕೆ ಸಮರ್ಥವಾಗುತ್ತದೆಂಬ ಮಾತನ್ನು ಪ್ರತಿಯೊಬ್ಬನು ಲಕ್ಷಪೂರ್ವಕವಾಗಿ ವಿಚಾರ ಮಾಡಿ, ಆರೋಗ್ಯದ ಮರ್ಮವನ್ನು ಆರಿತುಕೊಂಡು ಜರಾಮರಣಗಳನ್ನು ಅವಪ್ಟು ಮುಂದಕ್ಕೆ ದೂಡುವದೇ ಅವನ ಈ ಅಲೌಕಿಕ ದೇಹದ ಸಂಬಂಧದ ಕರ್ತವ್ಯವಿರುತ್ತದೆ.

ಶರೀರವು ಅಸ್ಥಿಮಯವಾಗಿದ್ದು ಅದರ ಮೇಲೆ ಸ್ನಾಯುಗಳ ಹೊದಿಕೆ ಇರುತ್ತದೆ. ಸ್ನಾಯುಗಳು ಅಸ್ಥಿಗಳ ಸಹಾಯದಿಂದ ಚಲನವಲನಾದಿ ಕ್ರಿಯೆಗಳನ್ನು ನಡಿಸಲಿಕ್ಕೆ ಸಮರ್ಥವಾಗುತ್ತವೆ. ಬೆಳುವಣಿಗೆಯು ಪೂರ್ಣವಾದ ಶರೀರದಲ್ಲಿ ೨೦೪ ಅಸ್ಥಿಗಳಿರುತ್ತವೆ. ಅವುಗಳ ಹೊರ್ತು ಕೆಲವು ಸ್ಥಳಗಳಲ್ಲಿ ಕೋಮಲವಾದ ಅಸ್ಥಿಗಳ ಪಿಂಡಗಳಿರುತ್ತವೆ. ಅವುಗಳ ಮೇಲೆ ಸಣ್ಣದೊಡ್ಡ, ಪ್ರಬಲದುರ್ಬಲವಾದ ಸುಮಾರು ೪೦೦ | ೫೦೦ ಸ್ನಾಯುಗಳ ಆವರಣವಿರುತ್ತದೆ. ಪ್ರತಿಯೊಂದು ಸ್ನಾಯುವಿನಲ್ಲಿ ಅಸಂಖ್ಯ ರಕ್ತವಾಹಿನಿಗಳೂ ಮೇದೋವಾಹಿನಿಗಳೂ ಮಜ್ಜಾತಂತುಗಳೂ ಕೂಡಿ ಅದಂಥ ಸೂಕ್ಷ್ಮಜಾಳಿಗೆಗಳು ಇರುತ್ತವೆ. ಅವುಗಳೊಳಗಿನ ಬಂದು ಸ್ನಾಯುವಿಶೇಷವು ಅಂದರೆ "ಹೃದಯವು" ಅಥವಾ "ರಕ್ತಕೋಶವು" ರುಧಿರಾಭಿಸರಣದ ಕಾರ್ಯವನ್ನು ನಡಿಸುತ್ತದೆ. ಅದರ ಆಕಾರವು ಮುಷ್ಟಿಯನ್ನು ಹೋಲುತ್ತದೆ. ಅದು ವಕ್ಷಸ್ಥಳದ ಎಡಭಾಗದಲ್ಲಿದ್ದು ಯಾವಾಗಲು ಕ್ರಮವಾಗಿ ಆಕುಂಚಿತ ಪ್ರಸೃತವಾಗುತ್ತಿರುವದರಿಂದ ಹಾರುವಂತೆ ತೋರುತ್ತದೆ. ಅದು ಒಂದು ವರ್ಷಕ್ಕೆ ಮೂರು ಕೋಟಿ ಹತ್ತು ಲಕ್ಷ ಸಾರೆ ಹಾರುತ್ತದೆ. ಅದೇ ಮೇರೆಗೆ ತ್ವಚೆಯ ರಚನೆಯೂ ಬಹು ಸೋಜಿಗವಾದದ್ದುಂಟು. ಅದರಲ್ಲಿ "ಸ್ವೇದ" ಅಂದರೆ ಬೆವರನ್ನು ಹುಟ್ಟಿಸು

ಮಂಥ ಪಿಂಡಗಳು ಎರಡು ಲಕ್ಷಕ್ಕಿಂತ ಹೆಚ್ಚಿರುತ್ತವೆ. ಸರ್ವಕಾಲವಲ್ಲಿಯೂ ಸರ್ವ ದೇಶಗಳಲ್ಲಿಯೂ ಸರಿಯಾದ ಶಾರೀರಕ ಉಷ್ಣತೆಯ ಪ್ರಮಾಣವನ್ನು ಇಟ್ಟುಕೊಳ್ಳುವ ಶಕ್ತಿಯು ಶರೀರದಲ್ಲಿ ಇರುತ್ತದೆಂದು ನಾವು ಮೇಲೆ ಹೇಳಿರುತ್ತೇವಷ್ಟೇ. ಅದಕ್ಕೆ ಈ ಪಿಂಡಗಳಿಂದ ಹುಟ್ಟುವ ಸ್ವೇದ ಕ್ರಿಯೆಯೇ ಕಾರಣವಾಗಿರುತ್ತದೆ. ಈ ಪಿಂಡಗಳ ದ್ವಾರಗಳು ಅಥವಾ ಬಾಯಿಗಳು ತ್ವಚೆಯಲ್ಲಿರುವಂಥ ಅನೇಕ ಸ್ವೇದವಾಹಕ ನಲಿಕೆಗಳಲ್ಲಿಯೇ ತೆರೆದಿರುತ್ತವೆ. ಈ ನಲಿಕೆಗಳನ್ನು ಬಿದಕ್ಕೊಂದು ಹಚ್ಚಿಟ್ಟರೆ ಅವುಗಳ ಉದ್ದಳತೆಯು ಸುಮಾರು ಹತ್ತು ಮೈಲು ಆಗಬಹುದು. ಅದೇ ಮೇರೆಗೆ ರಕ್ತವಾಹಿನಿಗಳು, ಮಜ್ಜಾತಂತುಗಳು, ಮೇದೋವಾಹಿನಿಗಳು ಇವೆಲ್ಲ ಕೂಡಿ ಎಷ್ಟು ಉದ್ದವಾಗಬಹುದೆಂಬ ಲೆಕ್ಕವೇ ಹತ್ತುವ ಹಾಗಿಲ್ಲ. ಅದರಂತೆ ರಕ್ತದೊಳಗಿನ ರಕ್ತ ಪಿಂಡಗಳ ಲೆಕ್ಕವನ್ನು ಸಹ ಮಾಡುವದು ದುಸ್ತರವು.

METHODS OF TEACHING.

ಕಲಿಸುವ ಪದ್ಧತಿಗಳು.

(೧೪೪ನೇ ಪುಟದಿಂದ ಮುಂದೆ ಸಾಗಿದ್ದು.)

ಪೇಳುಪತ್ರಕವಲ್ಲಿ ವಾಚನ ವಿಷಯವೆಂದು ಬರೆದಿರುತ್ತದೆ. ಆವರೆ ಅಷ್ಟು ಹೊತ್ತಿನಲ್ಲಿ ಬರೀ ವಾಚನವೇ ಸಾಗ ತಕ್ಕದ್ದೆಂಬ ಅರ್ಥವಲ್ಲ. ಓದಿದ್ದನ್ನು ತಿಳಿಸಿಕೊಡುವ ಕೆಲಸವಾದರೂ ಸಾಗುವದಿರುತ್ತದೆ. ಇನ್ನು ಈ ವಿಷಯದ ವಿವೇಚನಕ್ಕೆ ಅವಶ್ಯವಾಗಿ ಬೇಕಾಗುವ ಕಾಲವನ್ನು ನಿರ್ಣಯಿಸುವದು ಸ್ವಲ್ಪ ಕಠಿಣವದೆ. ಕಥೆಗಳನ್ನು ಮತ್ತು ವರ್ಣನೆಗಳನ್ನು ತಿಳುಹಿಸಿ ಕೊಡಲಿಕ್ಕೆ ಸ್ವಲ್ಪ ಹೊತ್ತು ಸಾಕಾಗುವದು. ಶಾಸ್ತ್ರೀಯ ವಿಷಯಗಳನ್ನು ತಿಳುಹಿಸಿಕೊಡಲಿಕ್ಕೆ ಹೆಚ್ಚು ಹೊತ್ತಾದರೂ ಶ್ರಮವೂ ಬೇಕು. ವಾಚನದ ರೂಢಿ

ಯು ಹೆಚ್ಚಾದಷ್ಟು ಒಳ್ಳೇದೆಂದು ಹಿಂದೆ ಹೇಳಿರುತ್ತೇವೆ. ಆ ಮೇರೆಗೆ ಕೂಡಿದಷ್ಟು ಹೊತ್ತು ವಾಚನಕ್ಕೆ ಕೊಡಲಿಕ್ಕೆ ಬೇಕು. ಮತ್ತು ಆಗ್ಗೆ ಒಬ್ಬ ವಿದ್ಯಾರ್ಥಿಯು ಓದಬೇಕು, ಉಳಿದವರೆಲ್ಲರು ಪುಸ್ತಕಗಳನ್ನು ಮುಚ್ಚಿ ಅವನು ಓದಿದ್ದನ್ನು ಕೇಳಬೇಕು. ಓದಿದ್ದು ತಿಳಿಯದಿದ್ದರೆ ಓದುವವನು ಅವನ್ನು ತಿರಿಗಿ ಓದಬೇಕು.

ಕಡಿಮೆ ಇಯತ್ತೆಗಳಲ್ಲಿ ವಾಚನದ ಕಡೆಗೆ ವಿಶೇಷ ಲಕ್ಷ ಕೊಡಲಿಕ್ಕೆ ಬೇಕು. ಪಾಠಗಳಾದರೂ ಸುಲಭ ಇರುವದರಿಂದ ಈ ಕೆಲಸ ನೆರವೇರಿಸುವದು ಕಠಿಣವಲ್ಲ. ಪ್ರಕೃತಕ್ಕೆ ಕೆಲವು ಸಾಲೆಗಳಲ್ಲಿ ವಾಚನದ ಮೇಲೆ ವಿಶೇಷ ಲಕ್ಷವು ಕೆಲವುಗಳಲ್ಲಿ ವಿಷಯದ ತಿಳುವಳಿಕೆಯ ಕಡೆಗೆ ಹೆಚ್ಚು ಲಕ್ಷವು ಇದ್ದಂತೆ ಕಂಡುಬರುತ್ತದೆ. ಇವೆರಡೂ ಸರಿಯಲ್ಲ. ವಾಡಿಕೆಯಾಗಿ ವಾಚನ ಪಾಠಕ್ಕೆ ಗೊತ್ತು ಮಾಡಿದ ಹೊತ್ತಿನ ಮೂರರಲ್ಲಿ ಎರಡು ಪಾಲು ವಾಚನಕ್ಕೆ, ಒಂದುಪಾಲು ವಿಷಯವನ್ನು ತಿಳಿಸಿಕೊಡುವದಕ್ಕೆ ಹೆಚ್ಚ ಮಾಡಬಹುದೆಂದು ನಾವು ಸೂಚಿಸುತ್ತೇವೆ. ವಿಷಯ ವಿವೇಚನವು ಅಥವಾ ವಿಷಯವನ್ನು ಸರಿಯಾಗಿ ತಿಳುಹಿಸಿಕೊಡೋಣವು ಗೌರವದ್ದಿರುತ್ತದೆ. ಆದರೆ ಇದನ್ನು ಕುರಿತು ಕೆಲವು ಸೂಚನೆಗಳನ್ನು ಮಾಡುವದು ವಿಹಿತವಾಗಿ ತೋರುತ್ತದೆ; ಅವುಗಳನ್ನನುಸರಿಸಿ ಕವಿತೆಗಳನ್ನು ಶುದ್ಧವಾಗಿಯೂ, ಸ್ಪಷ್ಟವಾಗಿಯೂ ಅನ್ನಲಿಕ್ಕೆ ಕಲಿಸಿದರೆ ವಿದ್ಯಾರ್ಥಿಗಳ ವಾಚನದಲ್ಲಿಯೂ ಮನೋವೃತ್ತಿಗಳಲ್ಲಿಯೂ ಮಾರ್ಪಾಗುವದು. ಅವು ಯಾವವೆಂದರೆ:—

೧. ಸರಸವಾಗಿ ತಿಳಿಯದಿದ್ದಂಥ ಕವಿತ್ವಗಳನ್ನು ಸರ್ವಥಾ ಪಾಠ ಮಾಡಿಸಬಾರದು. ವಾಚನ ಪಾಠಗಳಂತೆ ಕವಿತ್ವಗಳನ್ನಾದರೂ ಶ್ರಮಬಟ್ಟು ಚನ್ನಾಗಿ ತಿಳಿಸಿಕೊಟ್ಟು ಆ ಮೇಲೆ ಪಾಠ ಮಾಡಲಿಕ್ಕೆ ಹೇಳಬೇಕು. ಆರಂಭದಲ್ಲಿ ಶಿಕ್ಷಕ

ರಿಗೆ ಸ್ವಲ್ಪ ಶ್ರಮವಾದರೂ ಕೊನೆಯಲ್ಲಿ ಹಿತವಾಗುವದು.

೨. ಕವಿತ್ವಗಳು ನಿರಾಯಾಸವಾಗಿ ಗಡಗಡನೆ ಅನ್ನಲಿಕ್ಕೆ ಬರದಿದ್ದರೆ ಅವುಗಳಿಂದ ಆನಂದವಾಗಲಾರದು. ಅದರಿಂದ ನಡು ನಡುವೆ ನಿಲ್ಲದೆ ತಡೆ ಅನ್ನದೆ, ತಪ್ಪದೆ, ಕವಿತ್ವಗಳನ್ನು ಬಂದೇ ಸವನೇ ಅನ್ನಲಿಕ್ಕೆ ಬರುವಂತೆ ಪಾಠ ಮಾಡಿಸಬೇಕು. ಹೊಸ ಪಾಠವನ್ನಷ್ಟೇ ಈ ರೀತಿಯಾಗಿ ಕೆಲವರು ಮಾಡಬಹುದು. ಆದರೆ ನಮ್ಮ ಅಭಿಪ್ರಾಯವು ಹಾಗಲ್ಲ. ಹೊಸ ಕವಿತ್ವಗಳನ್ನು ಕಲಿತಹಾಗೆ ಹಳೆ ಕವಿತ್ವಗಳನ್ನು ಮರೆತರೆ ಪ್ರಯೋಜನವೇನು? ಇದರಿಂದ ಲಾಭವಾಗಬೇಕಾದರೆ ಹಳೆವೂ ಹೊಸವೂ ಕೂಡಿಯೇ ಲಕ್ಷದಲ್ಲಿ ಇಡಲಿಕ್ಕೆ ಬೇಕು. ಶಿಕ್ಷಕರಾದರೂ ಕಲಿತದ್ದನ್ನು ಮರೆಯು ಗೊಡವಂತೆ ವಾರಕ್ಕೆ ತಾಸು, ಅರ್ಧ ತಾಸು ಗೊತ್ತು ಮಾಡಿ ಎರಡು ಸಾರೆಯಾಗಲಿ, ಒಮ್ಮೆಯಾಗಲಿ ಪುನರಾವರ್ತನವನ್ನು ಮಾಡಿಸಬೇಕು.

೩. ಕವಿತೆಯನ್ನು ಅನ್ನುವ ರೀತಿ—ವಾಚನದ ದೋಷಗಳೇ ಕವಿತೆಯನ್ನು ಅನ್ನುವದರಲ್ಲಿಯಾದರೂ ಕಂಡುಬರುವವು. ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗ ತೋರಿಸದೆ ಹಾಗೇ ಕಲಿಯಗೊಟ್ಟರೆ, ಅವರು ಬತ್ತರದಿಂದ ಬಂದು ಅಷ್ಟರವನ್ನು ಮತ್ತೊಂದರಲ್ಲಿ ಸೇರಿಸಿ ಅನ್ನುವದು ಸಹಜವು; ಆ ಕಾರಣ ಅವರು ಅಂದ ಕವಿತ್ವವು ಬಂದು ಶಬ್ದವಾದರೂ ಯಾರಿಗೂ ತಿಳಿಯಲಾರದು. ಅವರು ಯತಿ ವಿರಾಮಗಳನ್ನು ಲಕ್ಷಿಸದೆ ಶಬ್ದಗಳನ್ನು ಬಂದರೊಳಗೊಂದು ಸೇರಿಸಿ ಭರದಿಂದ ಓದುವವರಿಂದ, ಕೇಳುವವರಿಗೆ ಅಸಹ್ಯವಾಗುವದೆಂಬದು ಸ್ಪಷ್ಟವೇ ಇರುತ್ತದೆ; ಆದರೆ ಎಷ್ಟೋ ಶಿಕ್ಷಕರು ಈ ದುರ್ಗುಣವನ್ನು ಬಿಡಿಸುವ ಗೊಡವೆಗೆ ಹೋಗುವದಿಲ್ಲ, ಅಥವಾ ಮೂಲತಃ ಅದು ಹತ್ತದಂತೆ ಎಚ್ಚರಪಡುವದಿಲ್ಲ!!

ಕವಿತ್ವಗಳನ್ನು ಬತ್ತರದಿಂದ ಅನ್ನುವ ದುರ್ಗುಣವನ್ನು ತಿದ್ದಬೇಕೆಂದು ನಾವು ಆಗ್ರಹದಿಂದ ಹೇಳುತ್ತೇವೆ; ಆದರೆ ವಿದ್ಯಾರ್ಥಿಗಳು ಅವನ್ನು ಪೈಯ್ಯಾರದಿಂದ ಬಹಳ ಸಾವಕಾಶವಾಗಿ ಬುದೊಂದೇ ಶಬ್ದವನ್ನು ಉಚ್ಚರಿಸುತ್ತ, ಇಲ್ಲವೆ ಹಾವ ಭಾವಗಳನ್ನು ಮಾಡುತ್ತ, ಇಲ್ಲವೆ ನಟಿಸುತ್ತ ಅನ್ನಬೇಕೆಂದು ನಾವು ಹೇಳುವದಿಲ್ಲ. ಇದಾದರೂ ತಪ್ಪು, ಇದನ್ನು ಎಚ್ಚರದಿಂದ ತಿದ್ದಲಿಕ್ಕೆ ಬೇಕು. ಸಾರಾಂಶ, ಕವಿತ್ವಗಳನ್ನು ಸಮಾಧಾನದಿಂದಲೂ, ತಿಳುವಳಿಕೆಯಿಂದಲೂ, ಭಾವಕ್ಕನುರೂಪವಾಗಿಯೂ, ಅರ್ಥಕ್ಕೂ ವೃತ್ತ ಲಕ್ಷಣಕ್ಕೂ ಸರಿಯಾಗಿಯೂ, ತಕ್ಕಷ್ಟು ಸಾವಕಾಶವಾಗಿಯೂ, ಸ್ಪಷ್ಟವಾಗಿಯೂ, ಶುದ್ಧವಾಗಿಯೂ ಅನ್ನಿಸಬೇಕು. ವಾಚನದಂತೆ ಇದನ್ನಾದರೂ ವಿದ್ಯಾರ್ಥಿಗಳು ಶಿಕ್ಷಕರಿಂದಲೇ ಕಲಿಯುವರು. ಆದದ್ದರಿಂದ ಶಿಕ್ಷಕರು ಕವಿತ್ವಗಳನ್ನು ಮೇಲಿಂದ ಮೇಲೆ ಸ್ವತಃ ಅಂಮ ತೋರಿಸಿ, ಅವರಂತೆಯೇ ಅವರಿಂದ ಅನ್ನಿಸುತ್ತಿರಬೇಕು.

ಕವಿತ್ವಗಳನ್ನು ಬಾಯಿಪಾಠ ಮಾಡುವದರಿಂದ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಆಬಾಲವೃದ್ಧರಿಗೂ ಪ್ರಯೋಜನವುಂಟು. ಮನಸ್ಸುಧಾರಣೆ, ವಾಚನ ನೈಪುಣ್ಯ, ಸಹೃದಯತ್ವ ಇವೇ ಮೊದಲಾದ ಗುಣಗಳನ್ನು ಪಡಿಯಲಿಚ್ಛಿಸುವವರಿಗೆ ಕವಿತ್ವಗಳಿಂದ ಬಹಳ ಸಹಾಯವಾಗುವದು. ಶಿಕ್ಷಕರಂತು ಜಲೋ ಕವಿತ್ವಗಳನ್ನು ಅದಷ್ಟು ಪಾಠ ಮಾಡಲೇಬೇಕು. ಶಬ್ದಗಳ ಅರ್ಥವನ್ನೂ ಗೌರವದ ವಿಚಾರಗಳನ್ನೂ ಸರಿಯಾಗಿ ತಿಳಿಸುವ ಕೆಲಸದಲ್ಲಿ ಕವಿತ್ವದ ಪ್ರಯೋಜನವು ಅಷ್ಟಿಷ್ಟೆಂದು ಹೇಳಕೂಡದು. ಕವಿತ್ವಗಳನ್ನು ಓದಿ ತಿಳುಕೊಂಡು ಬಾಯಿಪಾಠ ಮಾಡುತ್ತ ಹೋದಹಾಗೆ ಪಾಠ ಮಾಡುವ ಸಾಮರ್ಥ್ಯವು ಬೆಳೆಯುತ್ತದೆ. ಈ ಮಾತಿನ ನಿಜತ್ವವು ಹತ್ತೆಂಟು ಕವಿತ್ವಗಳನ್ನು ಪಾಠ ಮಾಡಿನವನಿಗೆ ತೋರುವ

ಮು. ಮೊದಲಿನ ಹತ್ತೆಂಟು ಕವಿತ್ವಗಳನ್ನು ಕಲಿಯಲಿಕ್ಕೆ ಹತ್ತಿವಷ್ಟು ಅವಕಾಶವೂ ಶ್ರಮವೂ ಮುಂದೆ ಹತ್ತುವದಿಲ್ಲ.

ಮನೋಹರವಾದ ಕವಿತ್ವಗಳನ್ನು ಆರಿಸಿ ಅವನ್ನು ಪುನಃ ಪುನಃ ಘಟ್ಟಿಯಾಗಿಯೂ, ಅರ್ಥಕ್ಕೂ ಭಾವಕ್ಕೂ ಸರಿಯಾಗಿಯೂ ಶುದ್ಧವಾಗಿಯೂ ಶಿಕ್ಷಕರು ಸ್ವತಃ ಅಂದು ಪಾಠ ಮಾಡುತ್ತಿರಬೇಕು. ಮತ್ತು ವಿದ್ಯಾರ್ಥಿಗಳ ಯೋಗ್ಯತೆಗೆ ಸರಿಯಾವವುಗಳನ್ನು ಅವರಿಗೆ ತಿಳಿಸಿಕೊಟ್ಟು ತಕ್ಕ ರೀತಿಯಿಂದ ಅನ್ನಿಸಿ ಪಾಠ ಮಾಡಿಸಬೇಕು.

NOTICES.

ನೋಟೀಸುಗಳು.

ಮೆ. ಕ್ಯುರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಮುಂಬಯಿ ಇವರ ಕಡೆಯಿಂದ ತಿಳಿಸಲ್ಪಡುವದೇನೆಂದರೆ:—

ಕೆಲವು ಪುಸ್ತಕಗಳು ತಾ|| ೧ನೇ ಎಪ್ರಿಲ ಸನ ೧೮೯೦ನೇ ಇಸವಿಯಿಂದ ತಾ|| ೩೧ನೇ ಜುಲೈ ಸನ ೧೮೯೦ನೇ ಇಸವಿಯವರೆಗೆ ಮುದ್ರಿಸಲ್ಪಟ್ಟು, ಸೆಂಟ್ರಲ್ ಬುಕ್ ಡಿಪೋಕ್ಕೆ ಮಾರಾಟಕ್ಕಾಗಿ ಬಂದಿರುತ್ತವೆ; ಅವುಗಳ ವಿವರವು ಕೆಳಗೆ ಬರೆದಂತೆ:—

ಇಂಡಿಯನ್ ಇಂಗ್ಲಿಷ.

೧ ಬಾಂಬೆ ಸಂಸ್ಕೃತ ಸೀರೀಜ ನಂಬರ ೪೩,
ಋಗ್ವೇದದ ಹ್ಯಾಂಡ ಬುಕ್ಕು ಎನೇ ಭಾಗ ಬೆಲೆ ೫೫.೬.

ಕನ್ನಡ.

೧ ವಾಚನದ ಮೊದಲನೆಯ ಪುಸ್ತಕ ,, ೯೧೬.
೧ ಭೂಮಿತಿಯ ಪುಸ್ತಕ ೧|೦|೩ ಮತ್ತು ೬. ,, ೧೬೧೦೬.

ಮುಂಬಯಿ,
ತಾ|| ೩೧ | ೮ | ೯೦ ಇಸವಿ.

G. B. Nene,
ಕ್ಯುರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಮುಂಬಯಿ.

MYSORE LOKAL EXAMINATIONS, DECEMBER 1892.

ಮೈಸೂರಿನ ಸ್ಥಾನಿಕ ಪರೀಕ್ಷೆಗಳು ಡಿಸಂಬರ ೧೮೯೨.

ಪರೀಕ್ಷಕರು.

ವಿಷಯುಗಳು.	ಪರೀಕ್ಷಕರು
ಇಂಗ್ಲಿಷ ವ್ಯಾಕರಣ ಮತ್ತು ಭಾಷಾ ವಿಷಯ.	ರೆವ್ಹರಂಡ. ಜೆ. ಎಚ್. ವಾಲ್ಟನ್ ಪ್ರಿನ್ಸಿಪಾಲ, ಲಂದನ್ ಮಿಷನ್ ಹೈಸ್ಕೂಲ, ಬೆಂಗಳೂರು ಮತ್ತು ಮಿ. ಎಸ್ ಕ್ರೈಸ್ ಬಿ. ಏ. ಹೆಡ್ಡ ಮಾಸ್ತರ, ಗವರ್ನಮೆಂಟ ಹೈಸ್ಕೂಲ ಹಾಸನ್.
ಇಂಗ್ಲಿಷ ಕೈಬರಹ ಮತ್ತು ಕುದ್ಧಬರಹ.	ಮಿ. ಜೇ. ಅರ್ಭತನಾಟ. ಬಿ. ಏ. ಹೆಡ್ಡ ಮಾಸ್ತರ ಗವರ್ನಮೆಂಟ ಹೈಸ್ಕೂಲ ಚಿತ್ತಲದುರ್ಗ.
ಕನ್ನಡ ಭಾಷಾಂತರ, ಲೋಅರ ಸೆಕಂಡರಿ ಎಗ್ಜಾಮಿನೇಶನ್; ಸ್ಕೂಲ ವ್ಯಾನೇಜಮೆಂಟು, ಟೀಚರ್ಸ ಎಗ್ಜಾಮಿನೇಶನ್.	ಮಿ. ಎಮ್. ಕಾಮರಾವ ಎಮ್. ಏ. ಅಸಿಸ್ಟಂಟ ಮಾಸ್ತರ ಮಹಾರಾಜಾ ಕಾಲೇಜ, ಮೈಸೂರ.
ಅಂಕಗಣಿತ, (ಇಂಗ್ಲಿಷ, ವಿದ್ಯಾರ್ಥಿಗಳಿಗೆ) ಲೋಅರ ಸೆಕಂಡರಿ ಎಗ್ಜಾಮಿನೇಶನ್.	ಮಿ. ಎಸ್ ಮಲ್ಹಾರಿರಾವ ಬಿ. ಎ. ಅಸಿಸ್ಟಂಟ ಮಾಸ್ತರ ಮಹಾರಾಜಾ ಕಾಲೇಜ, ಮೈಸೂರ.
ಭೂಮಿತಿ ಮತ್ತು ಬೀಜಗಣಿತ, ಇಂಗ್ಲಿಷ ಲೋಅರ ಸೆಕಂಡರಿ ಎಗ್ಜಾಮಿನೇಶನ್.	ಮಿ. ಏ. ಮೃತ್ಯುಂಜಯ ಅಯರ ಬಿ. ಏ. ಅಸಿಸ್ಟಂಟ ಮಾಸ್ತರ, ಸೆಂಟ್ರಲ್ ಕಾಲೇಜ, ಬೆಂಗಳೂರ.
ಕನ್ನಡ ಪುಸ್ತಕ, ಟೀಚರ್ಸ ಎಗ್ಜಾಮಿನೇಶನ್ ಮತ್ತು ಕನ್ನಡ ವ್ಯಾಕರಣ, ಲೋಅರ ಸೆಕಂಡರಿ ಎಗ್ಜಾಮಿನೇಶನ್.	ಮಿ. ಆರ್. ರಘುನಾಥರಾವ ಬಿ. ಏ. ಅಸಿಸ್ಟಂಟ ಮಾಸ್ತರ, ಸೆಂಟ್ರಲ್ ಕಾಲೇಜ, ಬೆಂಗಳೂರ.

ಕನ್ನಡ ಪ್ರಸ್ತಕ, ಲೋಅರ ಸೆಕಂಡರಿ ಎಗ್ಜಾಮಿನೇಶನ್, ಕನ್ನಡ ವ್ಯಾಕರಣ, ಟೀಚರ್ಸ ಎಗ್ಜಾಮಿನೇಶನ್.	ಮಿ. ಬಿ. ಮಲ್ಲಪ್ಪ ಹೆಡ್ಡಮಾಸ್ತರ ಗವರ್ನಮೆಂಟ ಕನ್ನಡ ಸ್ಕೂಲ, ಮೈಸೂರ.
ಕನ್ನಡ ನಿಬಂಧ, ಲೋಅರ ಸೆಕಂಡರಿ ಮತ್ತು ಟೀಚರ್ಸ ಎಗ್ಜಾಮಿನೇಶನ್ನ.	ಮಿ. ಎಸ್. ಶ್ರೀನಿವಾಸರಾವ ಬಿ. ಏ. ಅಸಿ. ಮಾಸ್ತರ ಸೆಂಟ್ರಲ್ ಕಾಲೇಜ, ಬೆಂಗಳೂರ.
ಕನ್ನಡ ಕೈಬರಹ, ಮತ್ತು ಪುಡ್ಡಬರಹ, ಲೋಅರ ಸೆಕಂಡರಿ ಎಗ್ಜಾಮಿನೇಶನ್.	ಮಿ. ಡಿ. ಗಂಗಯ್ಯಾ ನಾಯ್ಡು, ಅಸಿ. ಮಾಸ್ತರ ಗವರ್ನಮೆಂಟ ಕಾಲೇಜ, ಶಿವಮೊಗ್ಗ.
ಹಿಂದುಸ್ಥಾನಿ ಮತ್ತು ಪರಸಿಯನ್ ವ್ಯಾಕರಣ, ಟೆಕ್ಸ್ಟ, ನಿಬಂಧಗಳು, ಲೋಅರ ಸೆಕಂಡರಿ ಮತ್ತು ಟೀಚರ್ಸ ಎಗ್ಜಾಮಿನೇಶನ್ನ.	ಮಿ. ಇಸ್ಮಾಯಿಲ್ ಷರಿಫ್. ಹೆಡ್ಡಮಾಸ್ತರ, ಗವರ್ನಮೆಂಟ ಹಿಂದುಸ್ಥಾನೀ ಸ್ಕೂಲ, ಮೈಸೂರ ಮತ್ತು ವಿೂರ್. ಹಮ್ಜಾ ಹುಸೇನ ಬಿ. ಏ. ಸಹಾರ ಲಾಯಿನ್ನ ಶಿವಮೊಗ್ಗ.
ಹಿಂದುಸ್ಥಾನಿ, ಇತಿಹಾಸ, ಭೂಗೋಲ ಮತ್ತು ನಕಾಶ ತೆಗೆಯೋಣ, ಲೋಅರ ಸೆಕಂಡರಿ ಎಗ್ಜಾಮಿನೇಶನ್.	ಮಿ. ಇಸ್ಮಾಯಿಲ್ ಷರಿಫ್, ಹೆಡ್ಡಮಾಸ್ತರ ಗವರ್ನಮೆಂಟ ಹಿಂದುಸ್ಥಾನೀ ಸ್ಕೂಲ, ಮೈಸೂರ.
ಉಳಿದ ಎಲ್ಲ ಹಿಂದುಸ್ಥಾನೀ ಕಾಗದಗಳು.	ವಿೂರ್ ಹಮ್ಜಾಹುಸೆನ. ಬಿ. ಏ. ಸಹಾಯಕ ಲಾಯಿನ್ನ ಶಿವಮೊಗ್ಗ.
ಸಂಸ್ಕೃತ, ಎಲ್ಲ ವಿಷಯಗಳು.	ಮಿ. ಎಸ್. ರಂಗಾಚಾರ್ಲು, ಶಾಲಾಖಾತೆಯ ಡಿಪ್ಯೂಟಿ ಇನಸ್ಪೆಕ್ಟರ, ಮೈಸೂರ.
ತೆಲಗು ಭಾಷಾವಿಷಯ ಮತ್ತು ಉಳಿದ ಎಲ್ಲ ತೆಲಗು ಕಾಗದಗಳು.	ಮಿ. ಏ. ಮಹಾದೇವ ಶಾಸ್ತ್ರಿ ಬಿ. ಏ. ಕ್ಯುರೇಟರ, ಓರಿಯಂಟೆಲ್ ಸಂಸ್ಕೃತ ಲಾಯಬ್ರರೀ, ಮೈಸೂರ.

ತಮಿಳ ಭಾಷಾವಿಷಯ ಮತ್ತು ಎಲ್ಲ ತಮಿಳ ಕಾಗದಗಳು.	ಮಿ. ಡಿ. ಶ್ರೀಕಾಂತಯ್ಯಾ ಬಿ. ಏ. ೯೪ ಕಾರಲ್ ಮಾರ್ಕ್ಂಟಿ ಸ್ಟ್ರೀಟ್, ಬ್ಯಾಂಕ್ ಟೌನ್, ಮದ್ರಾಸ.
ಅಂಕಗಣಿತ, ದೇಶಭಾಷೆಯ (ಉನ್ನೇ ದವಾರರಿಗೆ) ಲೋಅರ ಸೆಕಂಡರಿ ಎಗ್ಜಾಮಿನೇಶನ್, ಟೀಚರ್ಸ ಎಗ್ಜಾಮಿ ನೇಶನ್; ಮೆನ್ಸುರೇಶನ ಲೋಅರ ಸೆಕಂಡರಿ ಎಗ್ಜಾಮಿನೇಶನ್.	ಮಿ. ಆರ್. ವೆಂಕಟರಾಮಯ್ಯಾ ಬಿ. ಏ. ಹೆಡ್ ಮಾಸ್ತರ ಗವರ್ನಮೆಂಟ ಹೈ ಸ್ಕೂಲ ತುಮಕೂರ.
ಭೂಮಿತಿ ಮತ್ತು ಬೀಜಗಣಿತ, ಟೀ ಚರ್ಸ ಎಗ್ಜಾಮಿನೇಶನ್, ಆರೋಗ್ಯ ಶಾಸ್ತ್ರ ಲೋಅರ ಸೆಕಂಡರಿ ಎಗ್ಜಾಮಿ ನೇಶನ್.	ಮಿ ಕೇ. ವೆಂಕಟಸ್ವಾಮಿ ಅಯ್ಯರ ಬಿ. ಏ. ಅಸಿ. ಮಾಸ್ತರ ಮಹಾರಾಜಾ ಕಾಲೇಜ, ಮೈಸೂರ.
ಕೃಷಿಶಾಸ್ತ್ರ, ಲೋಅರ ಸೆಕಂಡರಿ ಎ ಗ್ಜಾಮಿನೇಶನ್.	ಮಿ. ಎನ್. ಏ. ಬಾಪುರಾವ, ಅಸಿಸ್ಟಂಟ ಜನರಲ್ ಸೂಪರಿಂಟೆಂಡರ ಆಫ್ ಫಾರೇಸ್ಟ್ಸ್, ಬೆಂಗಳೂರ ಡಿಸ್ಟ್ರಿಕ್ಟ.
ಶಾಸ್ತ್ರಿಯವಿಷಯ, ಟೀಚರ್ಸ ಎಗ್ಜಾಮಿ ನೇಶನ್ ಮತ್ತು ಫಿಜಿಕಲ್ ಜಾಗ್ರಫಿ, ಲೋಅರಸೆಕಂಡರಿ ಎಗ್ಜಾಮಿನೇಶನ್.	ಮಿ. ಎಸ್. ವೆಂಕಟೇಶ ಅಯ್ಯಂಗರ, ಬಿ. ಏ. ಅಸಿಸ್ಟಂಟ ಮಾಸ್ತರ, ಸೆಂ ಟ್ರಲ್ ಕಾಲೇಜ, ಬೆಂಗಳೂರ.
ಹಿಂದುಸ್ಥಾನದ ಇತಿಹಾಸ, ಲೋಅರ ಸೆಕಂಡರಿ ಎಗ್ಜಾಮಿನೇಶನ್, ಬೆಂಗ ಳೂರ, ಶಿವಮೊಗ್ಗಾ, ಹಾಸನ ಮತ್ತು ಕಡೂರ ಜಿಲ್ಲೆಗಳು.	ಮಿ. ಸಿ. ಕೃಷ್ಣರಾವ, ಬಿ. ಏ. ಹೆಡ್ ಮಾ ಸ್ತರ, ಗವರ್ನಮೆಂಟ ಹೈಸ್ಕೂಲ, ಚಿಕ್ಕಮಂಗಳೂರ.
ಹಿಂದುಸ್ಥಾನದ ಇತಿಹಾಸ, ಲೋಅರ ಸೆಕಂಡರಿ ಎಗ್ಜಾಮಿನೇಶನ್ ಮೈಸೂ ರ, ತುಮಕೂರ, ಕೊಲಾರ, ಚಿತ್ತಾ ಲದುರ್ಗ ಜಿಲ್ಲೆಗಳು, ಟೀಚರ್ಸ ಎ ಗ್ಜಾಮಿನೇಶನ್.	ಮಿ. ಎಮ್. ಬಿ. ಶ್ರೀನಿವಾಸ ಅಯ್ಯಂಗ ರ, ಬಿ. ಏ. ಹೆಡ್ ಮಾಸ್ತರ ಗವರ್ನ ಮೆಂಟ ಹೈಸ್ಕೂಲ ಕೋಲಾರ.

ಭೂಗೋಲ, ಲೋಅರ ಸೆಕಂಡರಿ ಮತ್ತು ಟೀಚರ್ಸ ಎಗ್ಜಾಮಿನೇಶನ್ನು.	ವಿ. ಎಮ್ ವೆಂಕಟ ಕೃಷ್ಣಯ್ಯಾ, ಹೆಡ್ಡ ಮಾಸ್ತರ, ಮರಿಮಲ್ಲಪ್ಪಾ ಸ್ಕೂಲ, ಮೈಸೂರ.
ನಕ್ಷಾ ತಗೆಯುವದು, ಲೋಅರ ಸೆಕಂಡರಿ ಮತ್ತು ಟೀಚರ್ಸ ಎಗ್ಜಾಮಿನೇಶನ್ನು.	ರೆವ್ಹರೆಂಡ. ಜೆ. ಏ. ವೇನ್ನ, ಬಿ. ಏ. ಪೆಸ್ಲ್ಲಿಯನ್ ಮಿಸನರಿ, ಕ್ಲೀವಲಂಡ ಟೌನ್ ಬೆಂಗಳೂರ.
ಸೂಪಶಾಸ್ತ್ರ.	ಪುಟ್ಟಾ ಲಕ್ಷ್ಮಮ್ಮಾ, ಮರಿಮಲ್ಲಪ್ಪಾ ಸ್ಕೂಲ ಮೈಸೂರ.
ಹೊಲಿಗೆ ಕೆಲಸ.	ಮಿಸೆಸ್, ಹಾಕನ್, ವೆಸ್ಲಿನ್, ಮಿಷನ್ ಬೆಂಗಳೂರ, ಮತ್ತು ಮಿಸೆಸ್ ಹೇಗ್, ವೆಸ್ಲಿನ್ ಮಿಷನ್ ಮೈಸೂರ.

TERMINAL EXAMINATION OF THE DHARWAR TRAINING COLLEGE-KANNADA, 1892.

ಧಾರವಾಡ ಟ್ರೇನಿಂಗ ಕಾಲೇಜದ ಷಾಣ್ಮಾಸಿಕ ಪರೀಕ್ಷೆ—ಗದ್ಯಪದ್ಯ. ೧೮೯೨

ಮೂರನೇ ವರ್ಷ.

೧. (ಅ) ಎಲರಲೆಯೆಕೆಲಕೆತೊಲಗಿದ ! ಜಲಶಾಖಿಯು ತಳಿರೆ ತುಡುಕಲಾತುರಿಪಪಿಕಂ ॥ ಗೆಲೆವಂದುದುನುಳಿದು ಕೆಲ । ಕ್ಕೊಲೆದಳ ಜಂದುಟಿಯಜುಂಬಿಸಲ್ತವಕಿಪನಂ ॥ ೧ ॥ ಇದರ ಭಾವಾರ್ಥ ಬರೆ.

ಕುವಲಯಕುಟ್ಮಳಾವಳಿಯಪೇರ್ಗಳಿಯಂನಿಗದೇರಿಲಾಗಿಸುತ್ತ್ತಿ । ವನಜವಲ್ಲರೀನಿಬಿಡಕಂಟಕಸೂಚಿನಿಬದ್ಧಯಂತ್ರಬೊಳ್ । ತವೆನುಸುಳ್ದೀರಿಪಾಸೆವಿಳಿಯೊಳ್

ಪರಿದಾಡಿತರಂಗಸಂಘ ಸಂಭವರಸವಾದ್ಯಕಾಡಿದುದು ಕೂಡೆ ರುಷಂಪೊಸಡೊಂಬನೆಂಬಿನಂ । ಈ ಕವಿತೆಯ ಅನ್ವಯ ಶಬ್ದಾರ್ಥ ಬರೆ. ನುತ್ತು ಈ ಕವಿತೆಗಳ ಅಲಂಕಾರಗಳ ಹೆಸರು, ಲಕ್ಷಣ ಬರೆ.

೨. ನೃಪತಿರಸ್ಕಾರಾಪಮಾನದ । ಚಪಲೆಯರಿನಗೆಯುಡಗಿದವುಭೂ । ವಿಪರಭುಜಬಲನೂನಹಾನಿಯುಕೋಪಕೊಂಕಿದವು ॥ ವಿಫಲನೂದುದೆಜನಕಭೂಪನ । ತಪದಫಲಮೆಂದಿಷ್ಟ ಜನನಿರ್ಮಿಪಿತಚಿಂತಾಭರದೊಳಿರ್ದುದುಬೆರಳನೂಗಿನಲಿ ॥ ಇದರಭಾವಾರ್ಥವನ್ನೂ ಪೂರ್ವಾಪರಸಂಬಂಧವನ್ನೂ ಬರೆ.

೩ "ಸುರರಿಗೀಶ್ವರನಂತೆ" ಈ ಕವಿತೆಯ ಅಲಂಕಾರದ ಹೆಸರು, ಲಕ್ಷಣಗಳನ್ನು ಹೇಳು.

೪. ಗಾಲಿಯೊಂದೇರಥಕೆ ಜೋಡಾಗಿಪೂಡುವರೆ । ಸಾಲದೇಳ್ಹೇಹಯಂ ನಡಿಸುವರೆಸಾರಥಿಗೆ । ಕಾಲಿಲ್ಲಲೋಕಯಾತ್ರೆಯುನೊಲ್ಲೆನೆಂದೊಡಾಗದೆತನಗೆತಿರುಗಲೇಕೆ ॥ ಕಾಲಗತಿಯುಂವಿಚಾರಚಾರದಿಂತೆಂಬುದಂ । ಮೂಲೋಕಕೆಚ್ಚರಿಸುನಂತೆಪೂರ್ವಾ । ಚಲದಮೇಲೆನೂಡಿದನಿಂದಿನವೊಲಬ್ಜಬಾಂಧವಂನಯನಾಂಧ್ಯಮುಂದಡಗಲು. ॥ ಈ ಕವಿತೆಯ ಅಲಂಕಾರ ಲಕ್ಷಣ, ಭಾವಾರ್ಥ ಬರಿ.

೫. ಮೇಲೆ ತೋರಿಸಿದ ರಾಜಶೇಖರದ ಪದ್ಯದೊಳಗಿನಸಮಾಸಗಳ ವಿಗ್ರಹ,ಲಕ್ಷಣ,ಹೆಸರು, ಬರಿ.

೬. (ಅ) ವಿಭಕ್ತಿ ನುಗಿದಲ್ಲಿ ಯಾಕೆ ಯತಿಯನ್ನು ಇಡಬೇಕು. ಒಂದು ಸರ್ವಜ್ಞಪದ್ಯವನ್ನು ಬರೆದು ಅದರಲ್ಲಿ ನಿಯಮಿತ ಸ್ಥಳಕ್ಕೆ ಯತಿಯುಂಟೆಂಬುದನ್ನು ತೋರಿಸು.

ವೈತಾಳಿಕ, ಔ ಪಜ್ಝಟಿಕಾಸ್ಸಿಕವೃತ್ತಗಳ ಲಕ್ಷಣ, ಉದಾಹರಣೆಗಳನ್ನೂ, ಭೇದವನ್ನೂ ಹೇಳು.

೬. ನುಲಯಕೇತುವಿನ ಕೈಯಲ್ಲಿ ನಾವು ಕೊಟ್ಟ ಕಾಗದವನ್ನು ನೋಡಿಕೊಂಡು ಇದು ತನ್ನ ಮನಃಪರಿಕ್ಲಾರ್ಥ ನಾದದ್ದು ಎಂದು ತಿಳಿದು ಹಿಂದಕ್ಕೆ ಕಳುಹಿಸದೆ ಬಹು ಲಾಭವಂ ಪಡೆದವನಂತೆ ಉತ್ಸಾಹನಂತನಾಗಿ ಸೇನಾ ಪ್ರಯಾಣ ಸೂಚಿಕವಾದ ಭೇರಿಧ್ವನಿಗಳಂ ಮಾಡಿಸುತ ನಾದುದರಿಂದ ಈಗ ನಾವು ಮಾಡಿದ ಉಪಕಾರವು ಕೃತಘ್ನ ರೋಗಿಗೆ ಮಾಡಿದ ಚಿಕಿತ್ಸಾಸದೃಶನಾಯಿತು. ನನ್ನ್ಮ ಕಾರ್ಯಲಾಭಾನಂತರದಲ್ಲಿ ಅರ್ಧರಾಜ್ಯಮಾಂತ್ರ ಕೊಡಬೇಕೆಂಬ ಶಬ್ದವುಂಟಾಗುವದು. ಆಗಲಿ ಆಗಿನ ಸ್ರ ಕೃತೋಚಿತವಾಗಿ ನಡಿಯಬಹುದು. ಇದರ ಪೂರ್ವಾ ಪರಸಂಬಂಧ ಸಹಿತ ಸುಲಭವ್ಯಾಕ್ಯಗಳಿಂದ ಅರ್ಥ

೭. (ಕ) ಇಂಥಾ ಹೀನಸಂಧಿಯುಂ ನಿನ್ನ ವಶನರ್ತಿಗಳಾದವರಾದರೂ ಮಾಡತಕ್ಕದ್ದಲ್ಲ. ಈ ಅರ್ಥಕ್ಕೆ ನಾವು ಹೇಳಬಂದವರಲ್ಲ. ತಪ್ತಾಯೋನ್ಯಾಯನಂ ಹೇಳಲು ಬಂದೆವು ಎಂದು ಚಾಣಕ್ಯನು ಹೇಳಲು ಅಯ್ಯಾ! ನೀತಿಜ್ಞರಾದ ಚಾಣಕ್ಯರೇ ನೀವು ಹೇಳಿದ ಅರ್ಥವು ಅನ್ಯತ್ರವೂ ನಡೆಯಬಹುದಷ್ಟೇ? ಎಂದು ಆ ರಾಯಂ ಕೇಳಿದ್ದಕ್ಕೆ ಅಯ್ಯಾ! ದೂರದರ್ಶಿಯಾದ ರಾಯನೇ ನೀನು ಹೇಳಿದ ಅರ್ಥವು ಜ್ಞಾತನಾಯಿತು. ತದರ್ಥವಾಗಿ ನಿನ್ನನ್ನೇ ಪ್ರಾರ್ಥಿಸಬಂದೆವು ನಂದನಿಗ್ರಹ ಹೊತ್ತು ಲಬ್ಧನಾಗುವ ಪ್ರಭುತ್ವಕ್ಕೆ ಚಂದ್ರಗುಪ್ತನು ಒಡಂಬಡುವನಲ್ಲವಾದುದರಿಂದಲೂ, ನಂದರಂ ಸಂಹರಿಸದೇ ಜುಟ್ಟಂಕಟ್ಟುವದಿಲ್ಲೆಂಬ ನನ್ನ ಪ್ರತಿಜ್ಞೆಯು ನಿಷ್ಫಲನಾಗುವದರಿಂದಲೂ ನಂದರಲ್ಲಿ ದಂಡೋಪಾಯವೇ ಮುಖ್ಯ ಕರ್ತವ್ಯವೆಂದು ಚಾಣಕ್ಯನು ಹೇಳಿದನು.

ಇದರ ಪೂರ್ವಾಪರ ಸಂಬಂಧ ಸಹಿತ ಅರ್ಥಬರೆ. ೧೦

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದ ಪೇಳ್ವುದುಬುಧರ್ಜ್ಞಾನಾಭಿವೃದ್ಧಿ ಪ್ರಿಯರ್॥೧॥

ಪುಸ್ತಕ ೨೭.] ಅಕ್ಟೋಬರ ೧೮೫೨. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮಾನಸಿಕಶ್ರಮ ಮತ್ತು ಶಾರೀರಿಕಶ್ರಮ—ಮಾನಸಿಕಶ್ರಮವನ್ನಷ್ಟೇ ಮಾಡುವವರಿಗೆ ಶಾರೀರಿಕಶ್ರಮ ಮಾಡುವವರಿಗಿಂತ ಆಹಾರವು ಕಡಿತುಸು ಬೇಕಾಗುತ್ತದೆಂದು ಕೆಲವರ ತಿಳುವಳಿಕೆಯುಂಟು; ಆದರೆ ಇದು ಸರಿಯಾದದ್ದಲ್ಲ. ಮಾನಸಿಕಶ್ರಮದಿಂದ ವ್ಯಯವಾಗುವ ದ್ರವ್ಯಗಳು ಶಾರೀರಿಕಶ್ರಮದಿಂದ ವ್ಯಯವಾಗುವ ದ್ರವ್ಯಗಳಿಗಿಂತ ಹೆಚ್ಚಿರುತ್ತವೆ. ಮೂರು ತಾಸು ಮನಸುಗೊಟ್ಟು ಅಭ್ಯಾಸ ಮಾಡುವವನ ಶರೀರದ ಸವಕಳಿಯು ಬಂದು ಇಡಿ ದಿವಸ ಶಾರೀರಿಕಶ್ರಮ ಮಾಡುವವನ ಶರೀರದ ಸವಕಳಿಗಿಂತ ಹೆಚ್ಚು ಇರುತ್ತದೆಂದು ವಿದ್ವಾಂಸರು ಶೋಧದಿಂದ ಗೊತ್ತು ಹಚ್ಚಿದ್ದಾರೆ. "ಛಾಸ್ಥರದ ಹೊರತು ಆಲೋಚನೆಯು ನಡೆಯದು" ಎಂಬ ಗಾದೆಯು ಮಾತು ಜರ್ಮನ್ ಭಾಷೆಯಲ್ಲಿ ಪ್ರಸಿದ್ಧವದೆ. ಜ್ಞಾನೇಂದ್ರಿಯಗಳನ್ನು ಹೆಚ್ಚು ಹೆಚ್ಚು ಕೆಲಸಕ್ಕೆ ಹಚ್ಚಿದ ಹಾಗೆ ಜ್ಞಾನದ ಮೂಲಸ್ಥಾನವಾದ ಮಿದುಳಿನ ಮುಖ್ಯ ಘಟಕ

ವು ಅಂದರೆ ಫಾಸ್ಫರವು ಹೆಚ್ಚು ಹೆಚ್ಚು ವ್ಯಯವಾಗುತ್ತ ಹೋಗುತ್ತದೆ. ಮಿದುಳು ಯಾವ ಪ್ರಮಾಣದಿಂದ ಸವಿಯುತ್ತದೆ ಎಂಬ ಸಂಗತಿಯು, ಶರೀರದೊಳಗಿನ ಪ್ರವಾಹಿ ಪದಾರ್ಥಗಳ ಚಲನವಲನವನ್ನು ತುಸು ಲಕ್ಷಗೊಟ್ಟು ಪರೀಕ್ಷಿಸಿದರೆ ಕೂಡಲೆ ತಿಳಿಯುವದು. ಮಿದುಳು ಶ್ರಮ ಮಾಡುವ ಇಂದ್ರಿಯವಿರುತ್ತದೆಂಬ ಮಹತ್ವದ ಸಂಗತಿಯನ್ನು ಅದಕ್ಕೆ ಬೇಕಾಗುವ ರಕ್ತದ ಮೇಲಿಂದ ತಿಳುಕೊಳ್ಳಬಹುದು. ಶರೀರದ ಮಿಕ್ಕ ಭಾಗಗಳಿಗಿಂತ ಮಿದುಳಿಗೆ ರಕ್ತವು ಹೆಚ್ಚು ಪ್ರಮಾಣದಿಂದ ಬೇಕಾಗುತ್ತದೆ. ಸರಾಸರಿ ಮಾನದಿಂದ ಮಿದುಳಿನ ಭಾರವು ಇಡಿ ಶರೀರದ $\frac{1}{35}$ನೇ ಅಂಶದಷ್ಟು ಮಾತ್ರವಿದ್ದರೂ ಇಡಿ ಶರೀರಕ್ಕೆ ಬೇಕಾಗುವ ರಕ್ತದ ೫ರಲ್ಲಿ ಒಂದು ಪಾಲು ರಕ್ತವು ಅದಕ್ಕೆ ಬೇಕಾಗುತ್ತದೆ. ಈ ಸಂಗತಿಯು, ಮಾನಸಿಕಶ್ರಮ ಮಾಡುವವರಿಗೆ ಶಾರೀರಿಕಶ್ರಮ ಮಾಡುವವರಿಗಿಂತ ಹೆಚ್ಚು ಆಹಾರ ಬೇಕಾಗುತ್ತದೆಂಬದಿಷ್ಟೇ ಅಲ್ಲ ಅದರೆ ಪೌಷ್ಟಿಕ ಅನ್ನವೂ ಬೇಕಾಗುತ್ತದೆಂಬದನ್ನು ಸಿದ್ಧ ಮಾಡುತ್ತದೆ.

ಬಾಲಕರ ಪ್ರವಾಸಗಳು—ಮನುಷ್ಯನು ತನ್ನ ಶಕ್ತಿ ಸ್ವಭಾವಗಳಿಗನುಸರಿಸಿ ಇಂತಿಷ್ಟು ವೇಳೆಯಲ್ಲಿ ಇಂತಿಷ್ಟು ದಾರೀ ನಡೆಯಬಹುದೆಂದು ಹೇಳಬಹುದು; ಆದರೆ ಒಳ್ಳೆ ಚಟುವಟಿಕೆಯುಳ್ಳ ಚಿಕ್ಕ ಬಾಲಕರು ಅತ್ತಿತ್ತ ಚಲಿಸುವದನ್ನು ನೋಡಿ ಅವರು ಈ ಹೊತ್ತು ಇಷ್ಟು ಪ್ರಯಾಣ ಮಾಡಿದರು ಎಂದು ಖಂಡಿತವಾಗಿ ಹೇಳುವದು ದುಸ್ತರವು. ಆದರೆ ಕೆಲವು ಶೋಧಕರು ಈ ಸಂಗತಿಯನ್ನು ಲಕ್ಷಪೂರ್ವಕವಾಗಿ ನೋಡಿ ಕೆಲವು ಸೋಜಿಗದ ಮಾತುಗಳನ್ನು ತಿಳಿಸುತ್ತಾರೆ. ಅದು ಹ್ಯಾಗಂದರೆ:—

ಮೊನ್ನೆ ಮೊನ್ನೆ ಪೀಟರ್ಸ್‌ಬರ್ಗ್ ಪಟ್ಟಣದ ಒಬ್ಬ ಗೃಹಸ್ಥನು ತನ್ನ ಪಡಸಾಲೆಯಲ್ಲಿ ಒಗಿಸಿದ ಬಿಳಿಯ ಮಲಮಲ ವಸ್ತ್ರವನ್ನು ಹಾಸಿ, ೧೪ ತಿಂಗಳದ ತನ್ನ ಚಿಕ್ಕ ಬಾಲಕನ ಹಿಮ್ಮಡಕ್ಕೆ ಮಸಿ ಹಚ್ಚಿದ ಬಂದು ದಪ್ಪಾದ ಅರಿವೆಯನ್ನು ಕಟ್ಟಿ, ಆ ಮಗುವು ಹೆಜ್ಜೆಯನ್ನಿಟ್ಟ ಸರ್ತಿಗೊಮ್ಮೆ ಆ ಹಾಸಿದ ಬಿಳಿ ವಸ್ತ್ರದ ಮೇಲೆ ಬಂದೊಂದು ಕಪ್ಪು ಗುರ್ತು ಮೂಡುವಂತೆ ಮಾಡಿದನು. ಆ ಮಗುವು ಬಿಳಿಯ ವಸ್ತ್ರವನ್ನು ನೋಡಿ ಹಿಗ್ಗಿ ಹಿಗ್ಗಿ ದಿನದಂತೆ ಉಲ್ಲಾಸದಿಂದ ಸಾಯಂಕಾಲದವರೆಗೆ ಆಡಿತು. ಹೊತ್ತು ಮುಳುಗಿದ ಬಳಿಕ ಆ ವಸ್ತ್ರದ ಮೇಲೆ ಮೂಡಿದ ಗುರುತುಗಳನ್ನು ಎಣಿಸಲು, ಅವು ೬ ಇಂಚಿಗೊಂದರಂತೆ ಒಟ್ಟು ೬೪೯೭ ಗುರುತುಗಳು ಆದವು. ಇದರಿಂದ ಈ ಮಗುವು ಬಂದು ದಿವಸದಲ್ಲಿ ೩೦೯೦ ಫೂಟು ಅಂದರೆ ಸುಮಾರು ಮುಕ್ಕಾಲು ಮೈಲು ಪ್ರಯಾಣ ಮಾಡಿದಂತೆ ಆಯಿತು! ಆ ಮಗುವು ಚುರುಕು ತನದಲ್ಲಿ ವಿಶೇಷ ಹೇಳಿಕೊಳ್ಳುವಂತೇನು ಇದ್ದಿಲ್ಲ, ಸರಾಸರಿ ಮಾನದ್ದಿತ್ತು.

ಮತ್ತೊಬ್ಬ ಗೃಹಸ್ಥನು ತನ್ನ ೯ ವರ್ಷದ ಹುಡುಗನ ಪ್ರವಾಸವನ್ನು ಮತ್ತೊಂದು ಬಗೆಯಿಂದ ತಿಳುಕೊಂಡನು ಅದು ಹ್ಯಾಗಂದರೆ:—ಗಾಡಿಯಲ್ಲಿ ಕೂತುಕೊಂಡು ಪ್ರಯಾಣ ಮಾಡುವಾಗ್ಗೆ ಇಂತಿಷ್ಟೇ ಹಾದಿಯನ್ನು ನಡಿದೆವು ಎಂದು ತೋರಿಸುವ ಒಂದು ಯಂತ್ರವಿರುತ್ತದೆ. ಅದಕ್ಕೆ "ಪೆಡಿಯಾಮಿಟರ" ಅಥವಾ "ಪದಮಾಪಕ" ಯಂತ್ರ ಎಂಬ ಹೆಸರು. ಆ ಯಂತ್ರವನ್ನು ಅವನು ತನ್ನ ಮಗನ ಕಿಸೆಯಲ್ಲಿ ಇಟ್ಟನು. ಇದರಿಂದ ತಿಳಿದದ್ದೇನೆಂದರೆ:—ಆ ಹುಡುಗನು ಮೊದಲನೇ ದಿವಸ ೯½ ಮೈಲು, ಎರಡನೇ ದಿವಸ ೧೦½ ಮೈಲು,

ಮೊದನೇ ದಿವಸ ೫೫ ಮೈಲು (ಆ ಹೊತ್ತು ಮಳೆಯಾಗಿತ್ತು) ನಾಲ್ಕನೇ ದಿವಸ ೯೯ ಮೈಲು ನಡೆದನೆಂದು ಗೊತ್ತಾಯಿತು !!

ಈ ಸಂಗತಿಯನ್ನು ನೋಡಿ ಆ ಗೃಹಸ್ಥನ ಕುಟುಂಬದವರು ಆಶ್ಚರ್ಯಪಟ್ಟರು. ಯಾರಾದರೂ ಒಂದು ಮೈಲು ನಡೆದು ಬಂದು 'ನಮ್ಮ ಕಾಲು ನೋಯುತ್ತವೆಂದು ಹೇಳಿದರೆ ಅದಕ್ಕೆ ಆ ಕುಟುಂಬದವರು' ನೀವು ನಮ್ಮ ಬಾಬೂನನ್ನು ನೋಡಿ ನಾಚಿರಿ, ಅವನು ಒಂದು ದಿವಸಕ್ಕೆ ೧೦ ಮೈಲು ನಡೆಯುತ್ತಾನೆ, ಎಂದು ಹೇಳಿ ಅವರಿಗೆ ಚೇಷ್ಟೆ ಮಾಡುವರು. ಈ ಶೋಧದಿಂದ ಬಾಬೂನಿಗೆ ಒಂದು ಲಾಭವಾಯಿತು. ಅದೇನಂದರೆ,—ಅವನಿಗೆ ತಿಂಗಳಿಗೊಂದು ಬೂಟಿನ ಹೊಸ ಜೋಡು ಬೇಕಾಗುತ್ತಿತ್ತು. ಅದನ್ನು ಕೊಡಿಸಿ ಕೊಡಿಸಿ ಅವನ ತಾಯಿತಂದೆಗಳು ಬೇಸತ್ತು ಅವನಿಗೆ ಯಾವಾಗಲು ಸಿಟ್ಟು ಮಾಡುತ್ತಿದ್ದರು. ಆದರೆ ಈ ಸಂಗತಿಯು ಅವರಿಗೆ ತಿಳಿದಮೇಲೆ, ಅವರು ಅವನಿಗೆ ಸಿಟ್ಟು ಮಾಡದ ಹಾಗಾದರು.

ಆರೋಗ್ಯಸಂಬಂಧದ ನಾಲ್ಕು ಮಾತುಗಳು.

೧. ಕಾಲುಗಳು ತಣ್ಣಗೆ ಅಥವಾ ಹಸಿ ಇರುವಾಗ್ಗೆ ಎಂದೂ ಮಲಗಬೇಡ.

೨. ತಣ್ಣಗಿರುವ ಯಾವದೊಂದು ಬಡಿವೆಗೆ ಬೆನ್ನು ಹಚ್ಚಿ ಅಥವಾ ಆತುಕೊಂಡು ಕೂಡ್ರಬೇಡ.

೩. ಹೊತ್ತಾರೆ ಊಟ ಮಾಡದೆ ಎಂದೂ ಪ್ರವಾಸಕ್ಕೆ ಹೊರಡಬೇಡ.

೪. ಬಿಸಿಬಿಸಿಯಾದ ಪೇಯವನ್ನು ಎಂದೂ ಕುಡಿಯಬೇ

ಡ, ಬಂದು ವೇಳೆ ಕುಡಿದರೆ ತಂಪಾದ ಹವೆಯಲ್ಲಿಯಾದರೂ ಹೋಗಬೇಡ.

೫. ದಿನಂಪ್ರತಿ ಸ್ನಾನ ಮಾಡುವದನ್ನು ಬಿಡಬೇಡ. ಯಾಕಂದರೆ ಸ್ನಾನ ಮಾಡದಿದ್ದರೆ ತ್ವಚೆಯಲ್ಲಿರುವ ರೋಮರಂಧ್ರಗಳು ತಂಡಿಯಿಂದ ಮುಚ್ಚಿಕೊಂಡು ಹುರುಕು ಖಜ್ಜಿ ಮುಂತಾದ ತ್ವಚೆಯ ರೋಗಗಳು ಹುಟ್ಟುವವು.

೬. ವ್ಯಾಯಾಮ ಮಾಡಿದ ಕೂಡಲೆ ಗಾಳಿಗೆ ಮೈಬಿಟ್ಟು ಕೂಡ್ರಬೇಡ; ಅಥವಾ ಅಡ್ಡಾಡಬೇಡ. ಬಂದು ವೇಳೆ ಅಡ್ಡಾಡಿದರೆ ಕೇಡು ತಪ್ಪದು. ಬಹಳ್ಮಾಮ್ಮೆ ಜೀವಕ್ಕೆ ಸಹ ಅಪಾಯವಾಗುವದು.

೭. ಗಂಟಲವು ಕೆರೆಯುವಾಗ ಉದಷ್ಟ್ಟ ಕಡಿಮೆ ಮಾತಾಡು. ಇಲ್ಲದಿದ್ದರೆ ದನಿ ಬೀಳುವದು. ಅಥವಾ ಗಂಟಲದ ರೋಗಗಳು ಹುಟ್ಟುವವು.

೮. ಬೇಕಾದರೆ ಬೆನ್ನು ಬೆಚ್ಚಗಾಗುವ ವರೆಗೆ ಮಾತ್ರ ಬೆಂಕಿಯನ್ನು ಕಾಸು. ಬೆನ್ನು ಬೆಚ್ಚಗಾದ ಮೇಲೆ ಸಹ ಜಳಕ್ಕೆ ಕೂತರೆ ಅಶಕ್ತತೆಯುಂಟಾಗುವದು.

೯. ಬೆಚ್ಚಗಿನ ಹವೆಯೊಳಗಿಂದ ತಣ್ಣಗಿನ ಹವೆಯೊಳಗೆ ಹೋಗುವಾಗ್ಗೆ ಬಾಯಿ ಮುಚ್ಚಿಕೊಂಡು ಹೋಗು. ಇದರಿಂದ ಶ್ವಾಸೋಚ್ಛ್ವಾಸವು ಮೂಗಿನಿಂದ ನಡೆದು, ಹೊರಗಿನ ತಂಪಾದ ಹವೆಯು ಅನ್ನಕೋಶವನ್ನು ಮುಟ್ಟುವದರೊಳಗಾಗಿಯೇ ತಕ್ಕಷ್ಟ್ಟ ಬಿಸಿಯಾಗುವದು.

೧೦. ತಂಗಾಳಿಗೆ ಎದುರಾಗಿ ಎಂದೂ ನಿಲ್ಲಬೇಡ. ವ್ಯಾಯಾಮ ಮಾಡಿದಾಗಂತು ಈ ಮಾತನ್ನು ಚೆನ್ನಾಗಿ ಲಕ್ಷದಲ್ಲಿಡು. ತಣ್ಣಗಿನ ಕಲ್ಲು, ತ್ಯಾವು ನೆಲ, ಇವುಗಳ ಮೇಲೆ ಅಡ್ಡಾಡದಂತೆ ಜಾಗ್ರತೆ ಪಡು.

ಖಾನಬಹಾದ್ದೂರ ಕಾಜಿ ಶಹಾಬುದ್ದೀನ ಎಂಬ ಮು ಸಲ್ಮಾನ ಜಾತಿಯ ಘನವಂತನು ತನ್ನ ಜ್ಞಾತಿಬಂಧುಗಳನ್ನು ಮುಂದಕ್ಕೆ ತರಬೇಕೆಂಬ ಸದುದ್ದೇಶದಿಂದ ಒಂದು ಲಕ್ಷ ರೂ ಪಾಯಿಗಳನ್ನು ಸರಕಾರದವರ ಸ್ವಾಧೀನ ಮಾಡಿ, ಆ ಹಣದ $\frac{1}{10}$ ಬಡ್ಡಿಯನ್ನು ತಾನು ಬದುಕಿರುವವರೆಗೆ ತನಗೆ ಸಲ್ಲಿಸ ಬೇಕೆಂತಲೂ, ಉಳಿದದ್ದನ್ನು ಸರಕಾರಕ್ಕೆ ಯೋಗ್ಯಕಂಡ ಮೇರೆಗೆ ತನ್ನ ಅನುಮತಿಯಿಂದ ಮುಂಬಯಿ ಶಹರ ಮತ್ತು ಸಿಂಧಪ್ರಾಂತ ಇವುಗಳನ್ನು ಹೊರತುಪಡಿಸಿ ಮುಂಬಯಿ ಇಲಾಖೆಯೊಳಗಿನ ಉಳಿದ ಭಾಗಗಳಲ್ಲಿರುವ ಮುಸಲ್ಮಾನ ಜನರ ಹಿತಕ್ಕಾಗಿ ವೆಚ್ಚ ಮಾಡಬೇಕೆಂತಲೂ ಕೆಲವು ದಿವಸಗಳ ಕೆಳಗೆ ಸರಕಾರದವರಿಗೆ ತಿಳುಹಿಸಿದನು. ಆ ಸಂ ಬಂಧದಿಂದ ಪತ್ರವ್ಯವಹಾರವು ನಡೆದು ಕೊನೆಗೆ ಕಾಜೀ ಶಹಾಬುದ್ದೀನ ಸ್ಕಾಲರಷಿಪ್ಪುಗಳೆಂಬ ೧೬ ಸ್ಕಾಲರಷಿಪ್ಪು ಗಳನ್ನು ಇಡಬೇಕೆಂದು ಗೊತ್ತಾಗಿ ಕೆಳಗೆ ಬರೆದ ನೇಮುಗ ಳು ಪ್ರಸಿದ್ಧಿಸಲ್ಪಟ್ಟವೆ.

೧. ಈ ೧೬ ಕಾಜೀ ಶಹಾಬುದ್ದೀನ ಸ್ಕಾಲರಷಿಪ್ಪುಗ ಳಲ್ಲಿ ಪ್ರತಿವರ್ಷ ೪ ಕೊಡಲ್ಪಡುವವು. ಪ್ರತಿಯೊಂದು ಸ್ಕಾ ಲರಷಿಪ್ಪು ನಾಲ್ಕು ವರ್ಷ ನಡೆಯುವದು. ಸ್ಕಾಲರನಿಗೆ ಮೊದಲಿನ ಎರಡು ವರ್ಷ ತಿಂಗಳಿಗೆ ೧೦ ರೂಪಾಯಿ, ಕಡೆ ಯ ಎರಡು ವರ್ಷ ತಿಂಗಳಿಗೆ ೧೫ ರೂಪಾಯಿ ಸಿಗುವವು.

೨. ಉತ್ತರಭಾಗ, ಮಧ್ಯಭಾಗ ದಕ್ಷಿಣಭಾಗಗಳೊಳ ಗಿನ ಅಂದರೆ ೧೮ ಖಾಲಸಾ ಜೆಲ್ಲೆಗಳೊಳಗಿನ ಯಾವದೊಂ ದು ಸಾರ್ವಜನಿಕ ಶಾಲೆಯಿಂದ ಪಾಸಾದ ಮುಸಲ್ಮಾನ ವಿದ್ಯಾ ರ್ಥಿಗೆ ಈ ಸ್ಕಾಲರಷಿಪ್ಪು ದೊರೆಯುವದು; ಆದರೆ ಆ ವಿದ್ಯಾ ರ್ಥಿಯು ಆ ಶಾಲೆಯಲ್ಲಿ ಪರೀಕ್ಷೆಯ ಪೂರ್ವದಲ್ಲಿ ಕನಿಷ್ಠ ಪ

ಷ್ಟಕ್ಕೆ ಬಂದೇಸವನೆ ಹನ್ನೆರಡು ತಿಂಗಳು ಇರಲಿಕ್ಕೆ ಬೇಕು. ಅನುಕೂಲಿಸಿದರೆ* ಪ್ರತಿಯೊಂದು ಭಾಗಕ್ಕೆ ಬಂದೊಂದು ಸ್ಕಾಲರಷಿಪ್ಪು ಕೊಟ್ಟು ಉಳಿದ ನಾಲ್ಕನೇ ಸ್ಕಾಲರಷಿಪ್ಪನ್ನು ಯೋಗ್ಯ ವಿದ್ಯಾರ್ಥಿಗೆ ಕೊಡಲಾಗುವದು.

೩. ಈ ಸ್ಕಾಲರಷಿಪ್ಪುಗಳನ್ನು ಎಂಟ್ರನ್ಸ ಪರೀಕ್ಷೆಯ ಪರಿಣಾಮದಂತೆ ಅಂದರೆ ಅದರಲ್ಲಿ ಪಾಸಾದ ವಿದ್ಯಾರ್ಥಿಯ ಯೋಗ್ಯತೆಯನ್ನು ಕಂಡು ಮೆ. ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ದೊರೆಗಳು ಕೊಡುವರು; ಆದರೆ ಮೇಲಿನ ನಂಬರದ ವಿದ್ಯಾರ್ಥಿಯು ಘನವಂತನಾಗಿದ್ದು ಅವನಿಗೆ ದ್ರವ್ಯ ಸಹಾಯದ ಪ್ರಯೋಜನವಿಲ್ಲದಿದ್ದರೆ, ಅವನಿಗೆ 'ಆನರರೀ' ಸ್ಕಾಲರಷಿಪ್ಪನ್ನು ಕೊಟ್ಟು; ಅವನ ಕೆಳಗಿನ ನಂಬರಿನ ದ್ರವ್ಯಾನುಕೂಲವನ್ನಿಚ್ಛಿಸುವ ಬಡವಿದ್ಯಾರ್ಥಿಗೆ ಕೊಡಬಹುದು. ಮುಸಲ್ಮಾನರಿಗಾಗಿಯೇ ಸ್ಥಾಪಿಸಿದ ಬೇರೆ ಯಾವದೊಂದು ಸ್ಕಾಲರಷಿಪ್ಪನ್ನು ಪಡೆದಂಥ ವಿದ್ಯಾರ್ಥಿಗೆ ಈ ಸ್ಕಾಲರಷಿಪ್ಪು ಕೊಡಲಾಗದು. ಸ್ಕಾಲರಷಿಪ್ಪುಗಳನ್ನು ಪಡೆದ ವಿದ್ಯಾರ್ಥಿಗಳ ಮತ್ತು ಅವರು ಅಭ್ಯಾಸ ಮಾಡಿದ ಶಾಲೆಗಳ ಹೆಸರುಗಳು ಸರಕಾರದ ಗ್ಯಾಝೆಟನಲ್ಲಿ ಪ್ರತಿವರ್ಷ ಪ್ರಕಟಿಸಲ್ಪಡುವವು.

೪. ಈ ಸ್ಕಾಲರಷಿಪ್ಪುಗಳ ವಿಷಯವಾಗಿ ಅರ್ಜಿಗಳನ್ನು ಎಂಟ್ರನ್ಸ ಪರೀಕ್ಷೆಯ ಪರಿಣಾಮವು ಗೊತ್ತಾದ ೧೫ ದಿವಸಗಳಲ್ಲಿಯೇ ಮೆ. ಡೈರೆಕ್ಟರ ದೊರೆಗಳ ಕಡೆಗೆ ಫೂಟೀ ನ ಮೂನೆಯ ಮೇಲೆ ಮಾಡಬೇಕು.

೫. ಸ್ಕಾಲರಷಿಪ್ಪು ಪಡೆದ ವಿದ್ಯಾರ್ಥಿಯು ಪಾಸಾದ ಎಂಟ್ರನ್ಸ ಪರೀಕ್ಷೆಯ ಮುಂದಿನ ಜಾನುವರಿಯ ೧ನೇ ತಾರೀ

---

* ಪಾಸಾದ ವಿದ್ಯಾರ್ಥಿಯು ಬಂದು ಭಾಗದಲ್ಲಿ ಇಲ್ಲದಿದ್ದರೆ ಆ ಭಾಗದ ಸ್ಕಾಲರಷಿಪ್ಪನ್ನು ಎರಡನೇ ಭಾಗದ ವಿದ್ಯಾರ್ಥಿಗೆ ಕೊಡಲಾಗುವದು.

ಖಾನಬಹಾದ್ದೂರ ಕಾಜಿ ಶಹಾಬುದ್ದೀನ ಎಂಬ ಮು ಸಲ್ಮಾನ ಜಾತಿಯ ಘನವಂತನು ತನ್ನ ಜ್ಞಾತಿಬಂಧುಗಳನ್ನು ಮುಂದಕ್ಕೆ ತರಬೇಕೆಂಬ ಸದುದ್ದೇಶದಿಂದ ಒಂದು ಲಕ್ಷ ರೂ ಪಾಯಿಗಳನ್ನು ಸರಕಾರದವರ ಸ್ವಾಧೀನ ಮಾಡಿ, ಆ ಹಣದ $\frac{1}{10}$ ಬಡ್ಡಿಯನ್ನು ತಾನು ಬದುಕಿರುವವರೆಗೆ ತನಗೆ ಸಲ್ಲಿಸ ಬೇಕೆಂತಲೂ, ಉಳಿದದ್ದನ್ನು ಸರಕಾರಕ್ಕೆ ಯೋಗ್ಯಕಂಡ ಮೇರೆಗೆ ತನ್ನ ಅನುಮತಿಯಿಂದ ಮುಂಬಯಿ ಶಹರ ಮತ್ತು ಸಿಂಧಪ್ರಾಂತ ಇವುಗಳನ್ನು ಹೊರತುಪಡಿಸಿ ಮುಂಬಯಿ ಇಲಾಖೆಯೊಳಗಿನ ಉಳಿದ ಭಾಗಗಳಲ್ಲಿರುವ ಮುಸಲ್ಮಾನ ಜನರ ಹಿತಕ್ಕಾಗಿ ವೆಚ್ಚ ಮಾಡಬೇಕೆಂತಲೂ ಕೆಲವು ದಿವಸಗಳ ಕೆಳಗೆ ಸರಕಾರದವರಿಗೆ ತಿಳುಹಿಸಿದನು. ಆ ಸಂಬಂಧದಿಂದ ಪತ್ರವ್ಯವಹಾರವು ನಡೆದು ಕೊನೆಗೆ ಕಾಜೀ ಶಹಾಬುದ್ದೀನ ಸ್ಕಾಲರಷಿಪ್ಪುಗಳೆಂಬ ೧೬ ಸ್ಕಾಲರಷಿಪ್ಪುಗಳನ್ನು ಇಡಬೇಕೆಂದು ಗೊತ್ತಾಗಿ ಕೆಳಗೆ ಬರೆದ ನೇಮಗಳು ಪ್ರಸಿದ್ಧಿಸಲ್ಪಟ್ಟವೆ.

೧. ಈ ೧೬ ಕಾಜೀ ಶಹಾಬುದ್ದೀನ ಸ್ಕಾಲರಷಿಪ್ಪುಗಳಲ್ಲಿ ಪ್ರತಿವರ್ಷ ೪ ಕೊಡಲ್ಪಡುವವು. ಪ್ರತಿಯೊಂದು ಸ್ಕಾಲರಷಿಪ್ಪು ನಾಲ್ಕು ವರ್ಷ ನಡೆಯುವದು. ಸ್ಕಾಲರನಿಗೆ ಮೊದಲಿನ ಎರಡು ವರ್ಷ ತಿಂಗಳಿಗೆ ೧೦ ರೂಪಾಯಿ, ಕಡೆಯ ಎರಡು ವರ್ಷ ತಿಂಗಳಿಗೆ ೧೫ ರೂಪಾಯಿ ಸಿಗುವವು.

೨. ಉತ್ತರಭಾಗ, ಮಧ್ಯಭಾಗ ದಕ್ಷಿಣಭಾಗಗಳೊಳಗಿನ ಅಂದರೆ ೧೮ ಖಾಲಸಾ ಜಿಲ್ಲೆಗಳೊಳಗಿನ ಯಾವದೊಂದು ಸಾರ್ವಜನಿಕ ಶಾಲೆಯಿಂದ ಪಾಸಾದ ಮುಸಲ್ಮಾನ ವಿದ್ಯಾರ್ಥಿಗೆ ಈ ಸ್ಕಾಲರಷಿಪ್ಪು ದೊರೆಯುವದು; ಆದರೆ ಆ ವಿದ್ಯಾರ್ಥಿಯು ಆ ಶಾಲೆಯಲ್ಲಿ ಪರೀಕ್ಷೆಯ ಪೂರ್ವದಲ್ಲಿ ಕನಿಷ್ಠ ಪ

ಕ್ಷಕ್ಕೆ ಬಂದೇಸವನೆ ಹನ್ನೆರಡು ತಿಂಗಳು ಇರಲಿಕ್ಕೆ ಬೇಕು. ಅನುಕೂಲಿಸಿದರೆ* ಪ್ರತಿಯೊಂದು ಭಾಗಕ್ಕೆ ಬಂದೊಂದು ಸ್ಕಾಲರಷಿಪ್ಪು ಕೊಟ್ಟು ಉಳಿದ ನಾಲ್ಕನೇ ಸ್ಕಾಲರಷಿಪ್ಪನ್ನು ಯೋಗ್ಯ ವಿದ್ಯಾರ್ಥಿಗೆ ಕೊಡಲಾಗುವದು.

೩. ಈ ಸ್ಕಾಲರಷಿಪ್ಪುಗಳನ್ನು ಎಂಟ್ರನ್ಸ ಪರೀಕ್ಷೆಯ ಪರಿಣಾಮದಂತೆ ಅಂದರೆ ಅದರಲ್ಲಿ ಪಾಸಾದ ವಿದ್ಯಾರ್ಥಿಯ ಯೋಗ್ಯತೆಯನ್ನು ಕಂಡು ಮೆ. ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ದೊರೆಗಳು ಕೊಡುವರು; ಆದರೆ ಮೇಲಿನ ನಂಬರದ ವಿದ್ಯಾರ್ಥಿಯು ಘನವಂತನಾಗಿದ್ದು ಅವನಿಗೆ ದ್ರವ್ಯ ಸಹಾಯದ ಪ್ರಯೋಜನವಿಲ್ಲದಿದ್ದರೆ, ಅವನಿಗೆ 'ಆನರರೀ' ಸ್ಕಾಲರಷಿಪ್ಪನ್ನು ಕೊಟ್ಟು; ಅವನ ಕೆಳಗಿನ ನಂಬರಿನ ದ್ರವ್ಯಾನುಕೂಲವನ್ನಿಚ್ಛಿಸುವ ಬಡವಿದ್ಯಾರ್ಥಿಗೆ ಕೊಡಬಹುದು. ಮುಸಲ್ಮಾನರಿಗಾಗಿಯೇ ಸ್ಥಾಪಿಸಿದ ಬೇರೆ ಯಾವದೊಂದು ಸ್ಕಾಲರಷಿಪ್ಪನ್ನು ಪಡೆದಂಥ ವಿದ್ಯಾರ್ಥಿಗೆ ಈ ಸ್ಕಾಲರಷಿಪ್ಪು ಕೊಡಲಾಗದು. ಸ್ಕಾಲರಷಿಪ್ಪುಗಳನ್ನು ಪಡೆದ ವಿದ್ಯಾರ್ಥಿಗಳ ಮತ್ತು ಅವರು ಅಭ್ಯಾಸ ಮಾಡಿದ ಶಾಲೆಗಳ ಹೆಸರುಗಳು ಸರಕಾರದ ಗ್ಯಾಝೆಟಿನಲ್ಲಿ ಪ್ರತಿವರ್ಷ ಪ್ರಕಟಿಸಲ್ಪಡುವವು.

೪. ಈ ಸ್ಕಾಲರಷಿಪ್ಪುಗಳ ವಿಷಯವಾಗಿ ಅರ್ಜಿಗಳನ್ನು ಎಂಟ್ರನ್ಸ ಪರೀಕ್ಷೆಯ ಪರಿಣಾಮವು ಗೊತ್ತಾದ ೧೫ ದಿವಸಗಳಲ್ಲಿಯೇ ಮೆ. ಡೈರೆಕ್ಟರ ದೊರೆಗಳ ಕಡೆಗೆ ಫೂಪೀ ಸ ಮೂನೆಯ ಮೇಲೆ ಮಾಡಬೇಕು.

೫. ಸ್ಕಾಲರಷಿಪ್ಪು ಪಡೆದ ವಿದ್ಯಾರ್ಥಿಯು ಪಾಸಾದ ಎಂಟ್ರನ್ಸ ಪರೀಕ್ಷೆಯ ಮುಂದಿನ ಜಾನುವರಿಯ ೧ನೇ ತಾರೀ

---

* ಪಾಸಾದ ವಿದ್ಯಾರ್ಥಿಯು ಬಂದು ಭಾಗದಲ್ಲಿ ಇಲ್ಲದಿದ್ದರೆ ಆ ಭಾಗದ ಸ್ಕಾಲರಷಿಪ್ಪನ್ನು ಎರಡನೇ ಭಾಗದ ವಿದ್ಯಾರ್ಥಿಗೆ ಕೊಡಲಾಗುವದು.

ಖಿನಿಂದ ನಾಲ್ಕು ವರ್ಷದವರೆಗೆ ಸ್ಕಾಲರಷಿಪ್ಪು ನಡೆಯು ವದು; ಆದರೆ ಅವನು ಮುಂಬಯಿ ವಿದ್ಯಾಪೀಠಕ್ಕೆ ಸೇರಿದ ಯಾವದೊಂದು ಕಾಲೇಜದಲ್ಲಿ ನಿಂತು, ತಪ್ಪದೆ ಹಾಜರಿದ್ದು, ಒಳ್ಳೇ ರೀತಿಯಿಂದ ನಡೆದು, ಲಕ್ಷಪೂರ್ವಕವಾಗಿ ಅಭ್ಯಾಸ ಮಾಡಲಿಕ್ಕೆ ಬೇಕು. ಕೊಟ್ಟ ಸ್ಕಾಲರಷಿಪ್ಪನ್ನು ಗೈರವರ್ತನದ ಸಲುವಾಗಿಯಾಗಲಿ, ಬೇರೆ ಯಾವದೊಂದು ಕಾರಣಕ್ಕಾಗಲಿ ಮೆ. ಡೈರೆಕ್ಟರ ದೊರೆಗಳ ಅನುಮತಿಯು ಹೊರತು ಬಂದು ಮಾಡಲಾಗದು.

೬. ಸ್ಕಾಲರಷಿಪ್ಪಿನ ಹಣವನ್ನು ಮೂರು ತಿಂಗಳಿಗೊಮ್ಮೆ ಛಾಪೀ ನಮೂನೆಯ ಮೇಲೆ, ವಿದ್ಯಾರ್ಥಿಯು ಕಲಿಯುತ್ತಿರುವ ಕಾಲೇಜದ ಪ್ರಿನ್ಸಿಪಾಲರು ತಮ್ಮ ಸಹಿಯಿಂದ ಬಿಲ್ಲು ಮಾಡಿ, ಅದಕ್ಕೆ ಮೆ. ಡೈರೆಕ್ಟರ ದೊರೆಗಳ ಸಹಿಯನ್ನು ಪಡೆದು ತರಿಸಬೇಕು. ಸ್ಕಾಲರನು ತಾನು ಕಲಿಯುತ್ತಿರುವ ಕಾಲೇಜವನ್ನು ಬಿಟ್ಟು ಬೇರೆ ಕಾಲೇಜಕ್ಕೆ ಮೆ. ಡೈರೆಕ್ಟರ ದೊರೆಗಳ ಅನುಮತಿಯ ಹೊರತು ಹೋಗಕೂಡದು.

ಟಿಪ್ಪಣಿ—ಈ ನಿಯಮಗಳು ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಸರಿಯಾಗಿ ಹತ್ತುತ್ತವೆ.

** ಈ ಪ್ರಕಾರ ನಮ್ಮ ದೇಶಬಂಧುಗಳಾದ ಮುಸಲ್ಮಾನರನ್ನು ಮುಂದಕ್ಕೆ ತರುವ ಯತ್ನಗಳು ನಡೆದದ್ದನ್ನು ನೋಡಿ ನಮಗೆ ಬಹಳ ಸಂತೋಷವಾಗುತ್ತದೆ. ನಮ್ಮ ಪ್ರಾಂತದಲ್ಲಿ ಕೆಲವು ಪ್ರಮುಖ ಲಿಂಗಾಯತರು ಶ್ರಮಪಟ್ಟು ಫಂಡವನ್ನು ಕೂಡಿಸಿ ಹಚ್ಚಿದ ವೃಕ್ಷವು ಫಲ ಕೊಡುತ್ತಲಿದೆ. ಈ ಮೇರೆಗೆ ಎಲ್ಲ ಜ್ಞಾತಿಯ ಜನರು ತಮ್ಮ ತಮ್ಮ ಹಿತಕ್ಕಾಗಿ ಯತ್ನಿಸಿದರೆ ದೇಶದ ಹಿತವು ಸಹಜವಾಗಿಯೇ ಸಾಧ್ಯವಾಗುವದು.

THE LIFE OF Mr. VAMAN SIVARAM APTE.

ವಾಮನ ಶಿವರಾಮ ಆಪ್ಟೆ ಇವರ ಚರಿತ್ರವು.

ಈ ಮಹಾಪುರುಷರ ಚರಿತ್ರವನ್ನು ಬರೆಯುವೆವೆಂದು ನಾವು ಹಿಂದಿನ ಸಂಚಿಕೆಯಲ್ಲಿ ವಚನ ಕೊಟ್ಟ ಪ್ರಕಾರ ಅದನ್ನು ಇಲ್ಲಿ ಸಂಕ್ಷಿಪ್ತವಾಗಿ ಬರೆಯುತ್ತೇವೆ.

ಈ ಜಗತ್ತಿನಲ್ಲಿ ಇದುವರೆಗೆ ಆಗಿ ಹೋದಂಥ ದೇಶ ಹಿತಚಿಂತಕರಲ್ಲಿ ಅನೇಕರು ಬಡ ಕುಟುಂಬಗಳಲ್ಲಿ ಹುಟ್ಟಿ, ಬಾಲ್ಯದಲ್ಲಿ ವಿಧವಿಧದ ಸಂಕಟಗಳಿಗೆ ಗುರಿಯಾಗಿದ್ದರೆಂದು ಅನುಭವದಿಂದ ಕಂಡುಬರುತ್ತದೆ. ಈ ಅನುಭವಕ್ಕೆ ಸರಿಯಾಗಿಯೇ ವಾಮನರಾಯರ ಬಾಲ್ಯಸ್ಥಿತಿಯು ಇತ್ತು. ಅವರ ತಂದೆಯಾದ ಶಿವರಾಮಪಂತರು ಕೊಂಕಣಕ್ಕೆ ಸೇರಿದ ಸಾವಂತವಾಡಿ ಸಂಸ್ಥಾನದೊಳಗಿನ ಅಸೋಲಿಪಾಲವೆಂಬ ಹಳ್ಳಿಯಲ್ಲಿ ಹೊಲಮಾಡಿಕೊಂಡು ಹಾಗೂ ಹೀಗು ತಮ್ಮ ಪ್ರಪಂಚವನ್ನು ಸಾಗಿಸುತ್ತಿದ್ದರು. ಅವರಿಗೆ ನಾಲ್ಕು ಗಂಡು, ನಾಲ್ಕು ಹೆಣ್ಣು ಹೀಗೆ ಎಂಟು ಜನ ಮಕ್ಕಳಿದ್ದರು. ಅವರಲ್ಲಿ ದಾಜಿ ಎಂಬ ಮಗನನ್ನು ಬೇರೆ ಕುಟುಂಬಕ್ಕೆ ದತ್ತಕ ಕೊಟ್ಟಿದ್ದರು. ನಾಲ್ಕು ಮಂದಿ ಹೆಣ್ಣು ಮಕ್ಕಳಲ್ಲಿ ಒಬ್ಬಳು ಮದುವೆಯಾದ ಮೇಲೆ, ಮೂವರು ಮದುವೆಯ ಪೂರ್ವದಲ್ಲಿ ತೀರಿದರು. ವಾಮನರಾಯರು ನಾಲ್ಕು ವರ್ಷದವರಾಗುವಷ್ಟರಲ್ಲಿ ಶಿವರಾಮಪಂತರು ಮೃತವಾದರು. ಆದದ್ದರಿಂದ ಅವರ ಮಾತೋಶ್ರಿಯವರು ಬಹು ವಿಪತ್ತಿಗೆ ಒಳಗಾದದ್ದು ಸಹಜವೇ. ಆದರೂ ಅವರು ಧೈರ್ಯಬಿಡದೆ ತಮ್ಮ ಮೂರೂ ಮಕ್ಕಳನ್ನು ಕಟ್ಟಿಕೊಂಡು, ಅವರಿಗೆ ನಾಲ್ಕು ಅಕ್ಷರಗಳನ್ನು ಕಲಿಸಬೇಕೆಂಬ ಇಚ್ಛೆಯಿಂದ, ಕೊಲ್ಹಾಪುರಕ್ಕೆ ಹೋದರು. ಅಲ್ಲಿ ಮೂರು ವರ್ಷ ಕಳೆಯುವವರೊಳಗೆ ಹಿರಿಯ ಮಗನಾದ ಬಾಳಕೃಷ್ಣನು ತೀರಿದನು. ಕೈಗೆ

ಬಂದ ಮಗನ ಗತಿಯು ಹೀಗಾದದ್ದು ಕಂಡು ಆ ಪಾಪ ಬಡ ತಾಯಿಯವರ ಮೇಲೆ ಮುಗಿಲು ಹರಕೊಂಡು ಬಿದ್ದಂತೆ ಆಗಿ, ಮಗನೇ, ಮಗನೇ ಎಂದು ಹಂಬಲಿಸುತ್ತ ಎದೆ ಬಡಕೊಂಡು ಅವರು ಹತ್ತು ತಿಂಗಳಲ್ಲಿಯೇ ತೀರಿದರು. ಆ ಮೇಲೆ ಕೇಳುವದೇನದೆ? ತಾಯಿತಂದೆಗಳು ಇಲ್ಲದಂಥ ಈ ಪರದೇಶಿ ಬಾಲಕರ ಕಷ್ಟಗಳನ್ನು ಎಷ್ಟಂತ ಹೇಳಬೇಕು!! ತಮ್ಮ ಸಹಜ ಗುಣದಿಂದ ಇಷ್ಟು ಬೆಳಕಿಗೆ ಬಂದು, ಚಿರಕಾಲ ಬಾಳುವಂಥ ಕೀರ್ತಿಯನ್ನು ಸಂಪಾದಿಸಿದಂಥ ಈ ವಾಮನರಾಯರು ಎಂಟನೆಯ ವರ್ಷದಲ್ಲಿಯೇ ದಿಕ್ಕಿಲ್ಲದವರಾಗಿ ತುತ್ತು ಕೂಳಿನ ಸಲುವಾಗಿ ಮುಂಗೈಗೆ ಜೋಳಿಗೆಯನ್ನು ಹಾಕುವ ಹೊತ್ತು ಬಂತು!! ಕೊಲ್ಹಾಪುರದ ಬೀದಿಗಳಲ್ಲಿ ಮಧುಕರಿಯ ಜೋಳಿಗೆಯೊಂದಿಗೆ ಮನಿಮನಿಗೆ ಹೋಗಿ "ಭವತಿ ಭಿಕ್ಷಾಂದೇಹಿ" ಮಾಡಿ ಹೊಟ್ಟೆ ಹೊರಕೊಳ್ಳುವ ವಾಮನನು ಮುಂದೆ ಇಷ್ಟು ಯೋಗ್ಯತೆಗೆ ಏರುವನೆಂಬ ಮಾತು ಯಾರ ಕನಸು ಮನಸುಗಳಲ್ಲಿ ಸಹ ಬಂದಿದ್ದಿಲ್ಲ.

ತಾಯಿ ಇಲ್ಲ! ತಂದೆ ಇಲ್ಲ! ಈ ಪ್ರಕಾರ ನಡೆ ಎಂದು ಉಪದೇಶ ಮಾಡುವ ಹಿರಿಯರಿಲ್ಲ! ನಿಮಗೆ ಏನು ಆಗುತ್ತದೆ, ಅಂಜಬೇಡಿರಿ ಎಂದು ಎರಡು ಉಪಚಾರದ ಮಾತುಗಳನ್ನು ಸಹ ಆಡುವವರಿಲ್ಲ! ಇಂಥ ತೀರ ಪರತಂತ್ರದ ಸ್ಥಿತಿಯಲ್ಲಿ ಪರಮೇಶ್ವರನ ಮೇಲೆ ಹೊರೆಹಾಕಿ ಸಿಕ್ಕಷ್ಟೇ ಮಧುಕರಿಯ ಅನ್ನದಿಂದಲೇ ತೃಪ್ತರಾಗಿ ಅಣ್ಣತಮ್ಮಂದಿರಿಬ್ಬರು ರಾಜಾರಾಮ ಸ್ಕೂಲಿನಲ್ಲಿ ಅಭ್ಯಾಸ ಮಾಡಲಿಕ್ಕೆ ಹತ್ತಿದರು. ವಾಮನರಾಯರು ಏಕಮನಸ್ಸಿನಿಂದ ಅಭ್ಯಾಸ ಮಾಡಿ ಏಳು ವರ್ಷಗಳಲ್ಲಿಯೇ 'ಮ್ಯಾಟ್ರಿಕ್ಯುಲೇಶನ್' ಪರೀಕ್ಷೆಯವರೆಗೆ ಕಲಿತು ೧೮೭೩ ರಲ್ಲಿ ಆ ಪರೀಕ್ಷೆಗೆ ಕೂತರು. ಪರೀಕ್ಷೆಯ

ಲ್ಲಿ ಅವರು ಉತ್ತಮ ರೀತಿಯಿಂದ ತೇರ್ಗಡೆ ಹೊಂದಿದ್ದಲ್ಲದೆ ಸಂಸ್ಕೃತದಲ್ಲಿ ೧ನೇ ನಂಬರು ಪಡೆದರು. ಇದರಿಂದ ಅವರಿಗೆ ೨೫ ರೂಪಾಯಿಯ ಜಗನ್ನಾಥ ಶಂಕರಸೇಟ ಸ್ಕಾಲರಶಿಪ್ಪು ದೊರಿಕಿತು. ರಾಜಾರಾಮ ಸ್ಕೂಲಿನಲ್ಲಿ ಇರುವಾಗಲೇ ವಾಮನರಾಯರ ಕುಶಾಗ್ರಬುದ್ಧಿ, ದೃಢಾಭ್ಯಾಸ, ಸತ್ಯನಿಷ್ಠೆ ಮುಂತಾದ ಮೇಲಾದ ಗುಣಗಳು ಅಲ್ಲಿಯ ಶಿಕ್ಷಕರನ್ನೂ ಮಿಕ್ಕ ಗೃಹಸ್ಥರನ್ನೂ ದಂಗು ಪಡಿಸಿದವು. ಕೈ. ವಾ. ಶ್ರೀ ಅಬಾಸಾಹೇಬ ಕಾಗಲಕರ ಇವರು ವಾಮನರಾಯರಿಗೆ ಅಲ್ಪ ಸ್ವಲ್ಪ ಸಹಾಯ ಮಾಡಹತ್ತಿದರು. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಇಳಿದ ಮೇಲೆ ಅವರು ಪುಣೆ ಪಟ್ಟಣದಲ್ಲಿರುವ ಡೆಕನ್ ಕಾಲೇಜಕ್ಕೆ ಹೋದರು. ಸನ್ ೧೮೭೩ರಲ್ಲಿ ಎಫ್. ಏ. ಪರೀಕ್ಷೆಯಲ್ಲಿ ಪಾಸಾದರು. ಆಗ್ಗೆ ಅವರಿಗೆ ಜಗನ್ನಾಥ ಶಂಕರಸೇಟ ಸ್ಕಾಲರಶಿಪ್ಪಿನ ೨೫ ರೂ. ಸೀನಿಅರ ಸ್ಕಾಲರಶಿಪ್ಪಿನ ೨೦ ರೂ. ಕಾಲೇಜದ ಜ್ಯೂನಿಅರ ಸ್ಕಾಲರಶಿಪ್ಪಿನ ೪ ರೂ. ಅಂತೂ ೪೯ ರೂಪಾಯಿಗಳು ಪ್ರತಿ ತಿಂಗಳಿಗೆ ದೊರೆಯುತ್ತಿದ್ದವು. ೧೮೭೫ರಲ್ಲಿ ಅವರು ಬಿ. ಏ. ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ಪಾಸಾದದ್ದರಿಂದ, ಭಾವು ದಾಜಿಯವರ ೨೦೦ ರೂಪಾಯಿಯ ಇನಾಮನ್ನು ಪಡೆದವ್ವಲ್ಲದೆ ಕಾಲೇಜದೊಳಗಿನ ೭೫ ರೂ. ಫೆಲೋಶಿಪ್ಪು ಎಂಬ ಗೌರವದ ಇನಾಮನ್ನು ಸಂಪಾದಿಸಿದರು. ಸನ್ ೧೮೭೯ರಲ್ಲಿ ಎಮ್. ಏ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇದರಲ್ಲಿ ಅವರಿಗೆ ೪೦೦ ರೂ. ಯ ಭಗವಾನದಾಸ ಸಂಸ್ಕೃತ ಇನಾಮು ಸಿಕ್ಕಿತು. ಈ ಮೇರೆಗೆ ಅವರು ಕಾಲೇಜದ ಶಿಕ್ಷಣಕ್ರಮವನ್ನು ಮುಗಿಸಿದರು.

ಗೃಹಸ್ಥಾಶ್ರಮ.

ಮೇಲೆ ವಿವರಿಸಿದಂತೆ ವಿದ್ಯಾಸಂಬಂಧದ ಉತ್ತಮೋತ್ತಮ

ಮುವಾದ ಮೂನೆದ ಪದವಿಗಳನ್ನೂ ಇನಾಮುಗಳನ್ನೂ ಪಡೆ
ದು ವಿದ್ಯಾವಂತರಾದ ಬಳಿಕ, ವಾಮನರಾಯರು ಪ್ರಪಂಚ
ಸುಧನೆದ ಬಗ್ಗೆ ವಿಚಾರ ಮಾಡಹತ್ತಿದರು. ಅವರ ಲಗ್ನಸಂಬಂ
ಧದ ವೃತ್ತಾಂತವನ್ನು ತುಸು ವಿವರಿಸುವದು ತಕ್ಕದ್ದಾಗಿದೆ.
ಆ ಕಾಲಕ್ಕೆ ಕುಟುಂಬಸುಧಾರಣೆಯ ಮತ್ತು ಸಮಾಜ ಸುಧಾ
ರಣೆಯ ವ್ಯಾಖ್ಯಾನಗಳು ತೆರಪಿಲ್ಲದೆ ನಡೆದಿದ್ದವು. ಎಲ್ಲರ ಬಾ
ಯಿಯಿಂದ ಸುಧಾರಣೆ, ಸುಧಾರಣೆ ಎಂಬ ಶಬ್ದವೇ ಹೊರ
ಡುತ್ತಿತ್ತು. ಈ ಭರದಲ್ಲಿ " ಹೆಣ್ಣು ಮಕ್ಕಳನ್ನು ಬುದ್ಧಿವಂ
ತನಾದ ವರನನ್ನು ನೋಡಿ ಕೊಟ್ಟರಾಯಿತು " ಎಂಬ ಘೋ
ಷವೇ ಯಾವತ್ತು ವ್ಯಾಖ್ಯಾನಕಾರರ ಬಾಯಿಯೊಳಗಿಂದ ಹೊ
ರಬೀಳುತ್ತಿತ್ತು. ಬಂದುವೇಳೆ ಸುಧಾರಣಾ ಪ್ರಿಯರ ಮೇಲೆ
ಯೇ ಅಂಶ ಪ್ರಸಂಗ ಬಂತೆಂದರೆ ಅವರು ಹಿಂದು ಮುಂದು
ನೋಡುವದಲ್ಲದೆ ದುಡ್ಡಿನ ಆಶೆಗೆ ಸಹ ಬಳಗಾಗುತ್ತಾರೆಂದು
ಕಂಡುಬರುತ್ತದೆ. ಆದರೂ ಜಗತ್ತಿನಲ್ಲಿ ಕಿತ್ತೆಯನ್ನು ಹಾಕಿ
ಕೊಡುವಂಥ ಜನರು ದೇವರ ಅಂತಃಕರಣದಿಂದ ಆಗಾಗ್ಗೆ
ಹುಟ್ಟುತ್ತಿರುತ್ತಾರೆ. ಕೈ. ವಾ. ಗಣೇಶ ವಾಸುದೇವ ಜೋ
ಸಿ ಎಂಬವರು ಇಂಥ ಜನರೊಳಗಿನವರೊಬ್ಬರಾಗಿದ್ದರು.
ಮನಸಿಗೆ ಬಂದಿದ್ದರೆ ಅವರು ತಮ್ಮ ಮಗಳನ್ನು ಬೇಕಾ
ದಷ್ಟು ಹಣ ವೆಚ್ಚ ಮಾಡಿ ಬಬ್ಬ ಧನವಂತನಾದ ಜಹಾಗೀರ
ದಾರನಿಗೆ ಮದುವೆ ಮಾಡಿ ಕೊಡಬಹುದಾಗಿತ್ತು. ಆದರೆ ಆ
ಸದ್ಗೃಹಸ್ಥರು ಆ ಗೊಡವೆಗೆ ಹೋಗದೆ ತಾವು ಅಡಿ ತೋರಿ
ಸಿದಂತೆ ಮಾಡಿ ತೋರಿಸಿ, ಜನರನ್ನು ಆದೇ ಮಾರ್ಗಕ್ಕೆ ಹ
ಚ್ಚಬೇಕೆಂದು ಆಲೋಚಿಸಿ, ಅವರು ವರನನ್ನು ಹುಡುಕಹ
ತ್ತಿದರು. ಅಷ್ಟರಲ್ಲಿ ದೈವಯೋಗದಿಂದ ವಿದ್ಯಾಸಂಪನ್ನರೂ,
ಸದ್ಗುಣಿಗಳೂ ಆದ ವಾಮನರಾಯರಂಥ ವರನು ದೊರೆದದ್ದ
ರಿಂದ ಸಂತೋಷಪಟ್ಟು ತಮ್ಮ ಮಗಳನ್ನು ವಾಮನರಾಯ

ರಿಗೆ ಸುಲಂಕೃತ ಕನ್ಯಾದಾನ ಮಾಡಿಕೊಟ್ಟರು. ಈ ಮೇರೆಗೆ ವಾಮನರಾಯರಿಗೆ ಹೆಸರಾದ ಸಾತ್ವಿಕ ಕುಟುಂಬಕ್ಕೆ ಸೇರಿದ ಕನ್ನಿಕೆಯು ಹೆಂಡತಿಯಾಗಿ ದೊರೆತಳು. ಅವರ ಹೊಟ್ಟೆಯಿಂದ ಎರಡು ಹೆಣ್ಣು, ಬಂದು ಗಂಡು ಹೀಗೆ ಮೂರು ಮಕ್ಕಳಾದರು. ಅವರಲ್ಲಿ ಸದ್ಯಕ್ಕೆ ಎಂಟು ವರ್ಷದ ಒಬ್ಬ ಹೆಣ್ಣು ಮಗಳು ಮಾತ್ರ ಇದ್ದಾಳೆ.

ವಾಮನರಾಯರಿಗೆ ಸ್ವಾತಂತ್ರ್ಯವು ಇಷ್ಟವಾದಾಗ್ಯೂ ಜೀವನ ಸಾಧನಕ್ಕೆ ಸರಕಾರೀ ಉದ್ಯೋಗವೇ ಸುಲಭ ಮಾರ್ಗವೆಂದು ತೋರುತ್ತಿತ್ತು. ಅವರು ಕಾಲೇಜದಲ್ಲಿರುವಾಗ್ಗೆ, ಆಗರಕರ ಮತ್ತು ಟಿಳಕ ಎಂಬ ಅವರ ಗೆಳೆಯರು ತಾವು ಪರೀಕ್ಷೆ ಪಾಸಾದ ಮೇಲೆ ಏನು ಮಾಡಿತಕ್ಕದ್ದೆಂಬ ಬಗ್ಗೆ ಆಗಾಗ್ಗೆ ತಮ್ಮತಮ್ಮೊಳಗೆ ವಿಚಾರ ಮಾಡುತ್ತಿದ್ದರು. ಸಮಾಜದ ಉತ್ಕಲಷ್ಟ ಸೇವೆ, ಈ ಮನುಷ್ಯದೇಹದ ಉತ್ಕಲಷ್ಟ ಸಾರ್ಥಕ, ಇವೆರಡೂ ವಿದ್ಯಾದಾನದಲ್ಲಿಯೇ ಇರುತ್ತವೆ; ಆದದ್ದರಿಂದ ನಾವು ಆ ಕೆಲಸಕ್ಕೆ ಹತ್ತಬೇಕು; ವಿದ್ಯಾಪ್ರಸಾರಕ್ಕಾಗಿ ದೊಡ್ಡ ದೊಡ್ಡ ವಿದ್ಯಾಲಯಗಳನ್ನು ಸ್ಥಾಪಿಸಿ, ಅವುಗಳ ಶಾಖೆಗಳನ್ನು ಅಲ್ಲಲ್ಲಿಗೆ ನಲೆಗೊಳಿಸಿ ನಮ್ಮ ದೇಶಬಾಂಧವರಲ್ಲಿ ವಿದ್ಯೆಯನ್ನು ಹಬ್ಬುಗೊಳಿಸಬೇಕು; ಇವೇ ಮುಂತಾದ ಆಲೋಚನೆಗಳನ್ನು ಅವರು ಮಾಡುತ್ತಿದ್ದರು. ಈ ಆಲೋಚನೆಗಳನ್ನು ವಾಮನರಾಯರು ಕೇಳಿ ಮನಸಿನಲ್ಲಿಯೇ ನಗುತ್ತಿದ್ದರು. ಬಮ್ಮೊಮ್ಮೆ ನಿಮ್ಮಂತೆಯೇ ನನಗೂ ಅನಿಸುತ್ತದೆ; ಆದರೆ ಅದು ಹ್ಯಾಗೆ ಸಿದ್ಧಿಗೆ ಹೋಗಬೇಕು, ಅದು ಸಾಮಾನ್ಯ ಕೆಲಸವಲ್ಲ, ಅದಕ್ಕೆ ಅಪರಿಮಿತ ದುಡ್ಡು ಅನೆಲ್ಪ ಜನ ಸಹಾಯವೂ ಬೇಕಾಗುವವು ಎಂದು ಹೇಳುವರು. ವಾಮನರಾಯರು ಕಾಲೇಜದ ಅಭ್ಯಾಸವನ್ನು ಮು

ಮವಾದ ಮಾನದ ಪದವಿಗಳನ್ನೂ ಇನಾಮುಗಳನ್ನೂ ಪಡೆದು ವಿದ್ಯಾವಂತರಾದ ಬಳಿಕ, ವಾಮನರಾಯರು ಪ್ರಪಂಚ ಸಾಧನದ ಬಗ್ಗೆ ವಿಚಾರ ಮಾಡಹತ್ತಿದರು. ಅವರ ಲಗ್ನಸಂಬಂಧದ ವೃತ್ತಾಂತವನ್ನು ತುಸು ವಿವರಿಸುವದು ತಕ್ಕದ್ದಾಗಿದೆ. ಆ ಕಾಲಕ್ಕೆ ಕುಟುಂಬಸುಧಾರಣೆಯ ಮತ್ತು ಸಮಾಜ ಸುಧಾರಣೆಯ ವ್ಯಾಖ್ಯಾನಗಳು ತೆರಪಿಲ್ಲದೆ ನಡೆದಿದ್ದವು. ಎಲ್ಲರ ಬಾಯಿಯಿಂದ ಸುಧಾರಣೆ, ಸುಧಾರಣೆ ಎಂಬ ಶಬ್ದವೇ ಹೊರಡುತ್ತಿತ್ತು. ಈ ಭರದಲ್ಲಿ "ಹೆಣ್ಣು ಮಕ್ಕಳನ್ನು ಬುದ್ಧಿವಂತನಾದ ವರನನ್ನು ನೋಡಿ ಕೊಟ್ಟರಾಯಿತು" ಎಂಬ ಘೋಷವೇ ಯಾವತ್ತು ವ್ಯಾಖ್ಯಾನಕಾರರ ಬಾಯಿಯೊಳಗಿಂದ ಹೊರಬೀಳುತ್ತಿತ್ತು. ಬಂದುವೇಳೆ ಸುಧಾರಣಾ ಪ್ರಿಯರ ಮೇಲೆಯೇ ಅಂಥ ಪ್ರಸಂಗ ಬಂತೆಂದರೆ ಅವರು ಹಿಂದು ಮುಂದು ನೋಡುವದಲ್ಲದೆ ದುಡ್ಡಿನ ಆಶೆಗೆ ಸಹ ಬಳಗಾಗುತ್ತಾರೆಂದು ಕಂಡುಬರುತ್ತದೆ. ಆದರೂ ಜಗತ್ತಿನಲ್ಲಿ ಕಿತ್ತೆಯನ್ನು ಹಾಕಿಕೊಡುವಂಥ ಜನರು ದೇವನ ಅಂತಃಕರಣದಿಂದ ಆಗಾಗ್ಗೆ ಹುಟ್ಟುತ್ತಿರುತ್ತಾರೆ. ಕೈ. ವಾ. ಗಣೇಶ ವಾಸುದೇವ ಜೋಸಿ ಎಂಬವರು ಇಂಥ ಜನರೊಳಗಿನವರೊಬ್ಬರಾಗಿದ್ದರು. ಮನಸಿಗೆ ಬಂದಿದ್ದರೆ ಅವರು ತಮ್ಮ ಮಗಳನ್ನು ಬೇಕಾದಷ್ಟು ಹಣ ವೆಚ್ಚ ಮಾಡಿ ಬಬ್ಬ ಧನವಂತನಾದ ಜಹಾಗೀರದಾರನಿಗೆ ಮದುವೆ ಮಾಡಿ ಕೊಡಬಹುದಾಗಿತ್ತು. ಆದರೆ ಆ ಸದ್ಗೃಹಸ್ಥರು ಆ ಗೊಡವೆಗೆ ಹೋಗದೆ ತಾವು ಆಡಿ ತೋರಿಸಿದಂತೆ ಮಾಡಿ ತೋರಿಸಿ, ಜನರನ್ನು ಅದೇ ಮಾರ್ಗಕ್ಕೆ ಹಚ್ಚಬೇಕೆಂದು ಆಲೋಚಿಸಿ, ಅವರು ವರನನ್ನು ಹುಡುಕಹತ್ತಿದರು. ಅಷ್ಟರಲ್ಲಿ ದೈವಯೋಗದಿಂದ ವಿದ್ಯಾಸಂಪನ್ನರೂ, ಸದ್ಗುಣಿಗಳೂ ಆದ ವಾಮನರಾಯರಂಥ ವರನು ದೊರೆದದ್ದರಿಂದ ಸಂತೋಷಪಟ್ಟು ತಮ್ಮ ಮಗಳನ್ನು ವಾಮನರಾಯ

ರಿಗೆ ಸಾಲಂಕೃತ ಕನ್ಯಾದಾನ ಮಾಡಿಕೊಟ್ಟರು. ಈ ಮೇರೆಗೆ ವಾಮನರಾಯರಿಗೆ ಹೆಸರಾದ ಸಾತ್ವಿಕ ಕುಟುಂಬಕ್ಕೆ ಸೇರಿದ ಕನ್ನಿಕೆಯು ಹೆಂಡತಿಯಾಗಿ ದೊರೆತಳು. ಅವರ ಹೊಟ್ಟೆಯಿಂದ ಎರಡು ಹೆಣ್ಣು, ಬಂದು ಗಂಡು ಹೀಗೆ ಮೂರು ಮಕ್ಕಳಾದರು. ಅವರಲ್ಲಿ ಸದ್ಯಕ್ಕೆ ಎಂಟು ವರ್ಷದ ಒಬ್ಬ ಹೆಣ್ಣು ಮಗಳು ಮಾತ್ರ ಇದ್ದಾಳೆ.

ವಾಮನರಾಯರಿಗೆ ಸ್ವಾತಂತ್ರ್ಯವು ಇಷ್ಟವಾದಾಗ್ಯೂ ಜೀವನ ಸಾಧನಕ್ಕೆ ಸರಕಾರೀ ಉದ್ಯೋಗವೇ ಸುಲಭ ಮಾರ್ಗವೆಂದು ತೋರುತ್ತಿತ್ತು. ಅವರು ಕಾಲೇಜದಲ್ಲಿರುವಾಗ್ಗೆ, ಆಗರಕರ ಮತ್ತು ಟಿಳಕ ಎಂಬ ಅವರ ಗೆಳೆಯರು ತಾವು ಪರೀಕ್ಷೆ ಪಾಸಾದ ಮೇಲೆ ಏನು ಮಾಡಿತಕ್ಕದ್ದೆಂಬ ಬಗ್ಗೆ ಆಗಾಗ್ಗೆ ತಮ್ಮ ತಮ್ಮೊಳಗೆ ವಿಚಾರ ಮಾಡುತ್ತಿದ್ದರು. ಸಮಾಜದ ಉತ್ಕೃಷ್ಟ ಸೇವೆ, ಈ ಮನುಷ್ಯದೇಹದ ಉತ್ಕೃಷ್ಟ ಸಾರ್ಥಕ, ಇವೆರಡೂ ವಿದ್ಯಾದಾನದಲ್ಲಿಯೇ ಇರುತ್ತವೆ; ಆದದ್ದರಿಂದ ನಾವು ಆ ಕೆಲಸಕ್ಕೆ ಹತ್ತಬೇಕು; ವಿದ್ಯಾಪ್ರಸಾರಕ್ಕಾಗಿ ದೊಡ್ಡ ದೊಡ್ಡ ವಿದ್ಯಾಲಯಗಳನ್ನು ಸ್ಥಾಪಿಸಿ, ಅವುಗಳ ಶಾಖೆಗಳನ್ನು ಅಲ್ಲಲ್ಲಿಗೆ ನೆಲೆಗೊಳಿಸಿ ನಮ್ಮ ದೇಶಬಾಂಧವರಲ್ಲಿ ವಿದ್ಯೆಯನ್ನು ಹಬ್ಬುಗೊಳಿಸಬೇಕು; ಇವೇ ಮುಂತಾದ ಆಲೋಚನೆಗಳನ್ನು ಅವರು ಮಾಡುತ್ತಿದ್ದರು. ಈ ಆಲೋಚನೆಗಳನ್ನು ವಾಮನರಾಯರು ಕೇಳಿ ಮನಸಿನಲ್ಲಿಯೇ ನಗುತ್ತಿದ್ದರು. ಒಮ್ಮೊಮ್ಮೆ ನಿಮ್ಮಂತೆಯೇ ನನಗೂ ಅನಿಸುತ್ತದೆ; ಆದರೆ ಅದು ಹ್ಯಾಗೆ ಸಿದ್ಧಿಗೆ ಹೋಗಬೇಕು, ಅದು ಸಾಮಾನ್ಯ ಕೆಲಸವಲ್ಲ, ಅದಕ್ಕೆ ಅಪರಿಮಿತ ದುಡ್ಡು ಅನೇಕ ಜನ ಸಹಾಯವೂ ಬೇಕಾಗುವವು ಎಂದು ಹೇಳುವರು. ವಾಮನರಾಯರು ಕಾಲೇಜದ ಅಭ್ಯಾಸವನ್ನು ಮು

ಮವಾದ ಮೂನೆದ ಪದವಿಗಳನ್ನೂ ಇನಾಮುಗಳನ್ನೂ ಪಡೆ
ದು ವಿದ್ಯಾವಂತರಾದ ಬಳಿಕ, ವಾಮನರಾಯರು ಪ್ರಪಂಚ
ಸಾಧನದ ಬಗ್ಗೆ ವಿಚಾರ ಮಾಡಹತ್ತಿದರು. ಅವರ ಲಗ್ನಸಂಬಂ
ಧದ ವೃತ್ತಾಂತವನ್ನು ತುಸು ವಿವರಿಸುವದು ತಕ್ಕದ್ದಾಗಿದೆ.
ಆ ಕಾಲಕ್ಕೆ ಕುಟುಂಬಸುಧಾರಣೆಯ ಮತ್ತು ಸಮಾಜ ಸುಧಾ
ರಣೆಯ ವ್ಯಾಖ್ಯಾನಗಳು ತೆರಪಿಲ್ಲದೆ ನಡೆದಿದ್ದವು. ಎಲ್ಲರ ಬಾ
ಯಿಯಿಂದ ಸುಧಾರಣೆ, ಸುಧಾರಣೆ ಎಂಬ ಶಬ್ದವೇ ಹೊರ
ಡುತ್ತಿತ್ತು. ಈ ಭರದಲ್ಲಿ "ಹೆಣ್ಣು ಮಕ್ಕಳನ್ನು ಬುದ್ಧಿವಂ
ತನಾದ ವರನನ್ನು ನೋಡಿ ಕೊಟ್ಟರಾಯಿತು" ಎಂಬ ಘೋ
ಷವೇ ಯಾವತ್ತು ವ್ಯಾಖ್ಯಾನಕಾರರ ಬಾಯಿಯೊಳಗಿಂದ ಹೊ
ರಬೀಳುತ್ತಿತ್ತು. ಬಂದುವೇಳೆ ಸುಧಾರಣಾ ಪ್ರಿಯರ ಮೇಲೆ
ಯೇ ಅಂಥ ಪ್ರಸಂಗ ಬಂತೆಂದರೆ ಅವರು ಹಿಂದು ಮುಂದು
ನೋಡುವದಲ್ಲದೆ ದುಡ್ಡಿನ ಆಳೆಗೆ ಸಹ ಬಳಗಾಗುತ್ತಾರೆಂದು
ಕಂಡುಬರುತ್ತದೆ. ಆದರೂ ಜಗತ್ತಿನಲ್ಲಿ ಕಿತ್ತೆಯನ್ನು ಹಾಕಿ
ಕೊಡುವಂಥ ಜನರು ದೇವರ ಅಂತಃಕರಣದಿಂದ ಆಗಾಗ್ಗೆ
ಹುಟ್ಟುತ್ತಿರುತ್ತಾರೆ. ಕೈ. ವಾ. ಗಣೇಶ ವಾಸುದೇವ ಜೋ
ಸಿ ಎಂಬವರು ಇಂಥ ಜನರೊಳಗಿನವರೊಬ್ಬರಾಗಿದ್ದರು.
ಮನಸಿಗೆ ಬಂದಿದ್ದರೆ ಅವರು ತಮ್ಮ ಮಗಳನ್ನು ಬೇಕಾ
ದಷ್ಟು ಹಣ ವೆಚ್ಚ ಮಾಡಿ ಬಬ್ಬ ಧನವಂತನಾದ ಜಹಾಗೀರ
ದಾರನಿಗೆ ಮದುವೆ ಮಾಡಿ ಕೊಡಬಹುದಾಗಿತ್ತು. ಆದರೆ ಆ
ಸಜ್ಜನಹಸ್ಥರು ಆ ಗೊಡವೆಗೆ ಹೋಗದೆ ತಾವು ಆಡಿ ತೋರಿ
ಸಿದಂತೆ ಮಾಡಿ ತೋರಿಸಿ, ಜನರನ್ನು ಅದೇ ಮಾರ್ಗಕ್ಕೆ ಹ
ಚ್ಚಬೇಕೆಂದು ಆಲೋಚಿಸಿ, ಅವರು ವರನನ್ನು ಹುಡುಕಹ
ತ್ತಿದರು. ಅಷ್ಟರಲ್ಲಿ ದೈವಯೋಗದಿಂದ ವಿದ್ಯಾಸಂಪನ್ನರೂ,
ಸದ್ಗುಣಿಗಳೂ ಆದ ವಾಮನರಾಯರಂಥ ವರನು ದೊರೆದದ್ದ
ರಿಂದ ಸಂತೋಷಪಟ್ಟು ತಮ್ಮ ಮಗಳನ್ನು ವಾಮನರಾಯ

ರಿಗೆ ಸಾಲಂಕೃತ ಕನ್ಯಾದಾನ ಮಾಡಿಕೊಟ್ಟರು. ಈ ಮೇರೆಗೆ ವಾಮನರಾಯರಿಗೆ ಹೆಸರಾದ ಸಾತ್ವಿಕ ಕುಟುಂಬಕ್ಕೆ ಸೇರಿದ ಕನ್ನಿಕೆಯು ಹೆಂಡತಿಯಾಗಿ ದೊರೆತಳು. ಅವರ ಹೊಟ್ಟೆಯಿಂದ ಎರಡು ಹೆಣ್ಣು, ಬಂದು ಗಂಡು ಹೀಗೆ ಮೂರು ಮಕ್ಕಳಾದರು. ಅವರಲ್ಲಿ ಸದ್ಯಕ್ಕೆ ಎಂಟು ವರ್ಷದ ಬಬ್ಬ ಹೆಣ್ಣು ಮಗಳು ಮಾತ್ರ ಇದ್ದಾಳೆ.

ವಾಮನರಾಯರಿಗೆ ಸ್ವಾತಂತ್ರ್ಯವು ಇಷ್ಟವಾದಾಗ್ಯೂ ಜೀವನ ಸಾಧನಕ್ಕೆ ಸರಕಾರೀ ಉದ್ಯೋಗವೇ ಸುಲಭ ಮಾರ್ಗವೆಂದು ತೋರುತ್ತಿತ್ತು. ಅವರು ಕಾಲೇಜದಲ್ಲಿರುವಾಗ್ಗೆ, ಆಗರಕರ ಮತ್ತು ಟಿಳಕ ಎಂಬ ಅವರ ಗೆಳೆಯರು ತಾವು ಪರೀಕ್ಷೆ ಪಾಸಾದ ಮೇಲೆ ಏನು ಮಾಡಿತಕ್ಕದ್ದೆಂಬ ಬಗ್ಗೆ ಆಗಾಗ್ಗೆ ತಮ್ಮತಮ್ಮೊಳಗೆ ವಿಚಾರ ಮಾಡುತ್ತಿದ್ದರು. ಸಮಾಜದ ಉತ್ಕೃಷ್ಟ ಸೇವೆ, ಈ ಮನುಷ್ಯದೇಹದ ಉತ್ಕೃಷ್ಟ ಸಾರ್ಥಕ, ಇವೆರಡೂ ವಿದ್ಯಾದಾನದಲ್ಲಿಯೇ ಇರುತ್ತವೆ; ಆದದ್ದರಿಂದ ನಾವು ಆ ಕೆಲಸಕ್ಕೆ ಹತ್ತಬೇಕು; ವಿದ್ಯಾಪ್ರಸಾರಕ್ಕಾಗಿ ದೊಡ್ಡ ದೊಡ್ಡ ವಿದ್ಯಾಲಯಗಳನ್ನು ಸ್ಥಾಪಿಸಿ, ಅವುಗಳ ಶಾಖೆಗಳನ್ನು ಅಲ್ಲಲ್ಲಿಗೆ ನೆಲೆಗೊಳಿಸಿ ನಮ್ಮ ದೇಶಬಾಂಧವರಲ್ಲಿ ವಿದ್ಯೆಯನ್ನು ಹಬ್ಬುಗೊಳಿಸಬೇಕು; ಇವೇ ಮುಂತಾದ ಆಲೋಚನೆಗಳನ್ನು ಅವರು ಮಾಡುತ್ತಿದ್ದರು. ಈ ಆಲೋಚನೆಗಳನ್ನು ವಾಮನರಾಯರು ಕೇಳಿ ಮನಸಿನಲ್ಲಿಯೇ ನಗುತ್ತಿದ್ದರು. ಬಮ್ಮೊಮ್ಮೆ ನಿಮ್ಮಂತೆಯೇ ನನಗೂ ಅನಿಸುತ್ತದೆ; ಆದರೆ ಅದು ಹ್ಯಾಗೆ ಸಿದ್ಧಿಗೆ ಹೋಗಬೇಕು, ಅದು ಸಾಮಾನ್ಯ ಕೆಲಸವಲ್ಲ, ಅದಕ್ಕೆ ಅಪರಿಮಿತ ದುಡ್ಡು ಅನೆಲ್ಪ ಜನ ಸಹಾಯವೂ ಬೇಕಾಗುವವು ಎಂದು ಹೇಳುವರು. ವಾಮನರಾಯರು ಕಾಲೇಜದ ಅಭ್ಯಾಸವನ್ನು ಮು

ಗಿಸಿದ ಮೇಲೆ ತಮ್ಮ ಅಭಿಪ್ರಾಯಕ್ಕೆ ಸರಿಯಾಗಿ ಠಾಣೆಯ ಹೈಸ್ಕೂಲಿನಲ್ಲಿ ಸರಕಾರೀ ನೌಕರಿಯನ್ನು ಅಂಗೀಕರಿಸಿದರು. ಮುಂದೆ ಕೆಲವು ಕಾರಣಗಳ ಸಲುವಾಗಿ ಆ ಕೆಲಸವನ್ನು ಬಿಟ್ಟು ಮನಮೆಚ್ಚಿದ ಸ್ವತಂತ್ರ ಕೆಲಸವನ್ನು ಕೈಕೊಂಡರು.

ಡೆಕನ್ ಎಜ್ಯುಕೇಶನ್ ಸೊಸಾಯಿಟಿ.

ಮೇಲೆ ವಿವರಿಸಿದ ಮೇರೆಗೆ ಸ್ವತಂತ್ರ ವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಅಗರಕರ ಮತ್ತು ಟಿಳಕ ಇವರಲ್ಲಿ ೧೮೭೫ನೇ ವರ್ಷ ಹುಟ್ಟಿದ ಕುತೂಹಲವು ದಿನೆದಿನೆ ಬೆಳೆಯುತ್ತಲೇ ಇತ್ತು. ಅಷ್ಟರಲ್ಲಿ ಕೈ. ವಾ. ವಿಷ್ಣು ಶಾಸ್ತ್ರಿ ಚಿಪಳೂಣಕರ ಇವರು ಸರಕಾರೀ ಉದ್ಯೋಗಕ್ಕೆ ಬೇಸತ್ತು ರತ್ನಾಗಿರಿಯಲ್ಲಿದ್ದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಪುಣೆಗೆ ಬಂದು, ಬಂದು ಸ್ವತಂತ್ರ ಶಾಲೆಯನ್ನು ಸ್ಥಾಪಿಸುವ ಉದ್ಯೋಗ ನಡಿಸಿದರು. ಈ ಸುದ್ದಿಯು ಟಿಳಕ ಮುಂತಾದವರಿಗೆ ತಿಳಿದ ಕೂಡಲೆ, ಅವರು ಶಾಸ್ತ್ರಿಗಳಿಗೆ ಭೆಟ್ಟಿಯಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಆ ಮೇಲೆ ಎಲ್ಲರೂ ಕೂಡಿ ಬಮ್ಮನಿಸಿನಿಂದ ೧೮೮೦ನೇ ವರ್ಷ "ನ್ಯೂ ಇಂಗ್ಲಿಷ ಸ್ಕೂಲ" ಎಂಬ ವಿದ್ಯಾಲಯವನ್ನು ಪುಣೆ ಪಟ್ಟಣದಲ್ಲಿ ಸ್ಥಾಪಿಸಿದರು. ತಮಗೆ ವಾಮನರಾಯರಂಥ ಗೃಹಸ್ಥರ ಸಹಾಯದೊರೆದರೆ ತಾವು ಕೈಕೊಂಡ ಕೆಲಸವು ಭರದಿಂದ ಸಾಗುವದೆಂದು ಆಲೋಚಿಸಿ, ಅವರು ವಾಮನರಾಯರನ್ನು ಅನೇಕಯುಕ್ತಿಪ್ರಯುಕ್ತಿಗಳಿಂದ ಒಲಿಸಿಕೊಂಡು, ತಿಂಗಳಿಗೆ ಪ್ರಾಪ್ತಿಯು ಇಂತಿಷ್ಟನೇ ಪಾಲು ಕೊಡುವ ಗೊತ್ತುಮಾಡಿ, ಸನ್ ೧೮೮೦ನೇ ವರ್ಷ ಅವರನ್ನು ತಮ್ಮ ಶಾಲೆಯಲ್ಲಿ ತೆಗೆದುಕೊಂಡರು. ವಾಮನರಾಯರು ಆ ಶಾಲೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಮೈ ಮುರಿದು ಕೆಲಸ ಮಾಡಹತ್ತಿದರು. ಆವ

ರ ಶ್ರಮದಿಂದ ಶಾಲೆಯು ಉರ್ಜಿತಸ್ಥಿತಿಗೆ ಬಂದದ್ದಲ್ಲದೆ ಅ
ದರಲ್ಲಿ ಎಫ್. ಈ. ಎ. ಪರೀಕ್ಷೆಯವರೆಗೆ ಕಲಿಸಬಹುದೆಂ
ದು ವಿದ್ಯಾಪೀಠದಿಂದ ಅಪ್ಪಣೆ ದೊರೆದದ್ದರಿಂದ ಕಾಲೇಜ
ದ ಬಹುಮಾನದ ಯೋಗ್ಯತೆಯನ್ನು ಪಡೆಯಿತು. ಸನ್
೧೮೮೫ನೇ ಇಸವಿಯ ಅಕ್ಟೋಬರ ತಿಂಗಳದ ೭೫ನೇ ತಾ
ರೀಖಿಗೆ ಈ ಮಂಡಳಿಗೆ ವಿಶೇಷ ಮಹತ್ವ ಬರಬೇಕು, ಸಾಲಿ
ಯೂ ಕಾಲೇಜವೂ ಚಿರಸ್ಥಾಯಿಗಳಾಗಬೇಕು ಎಂಬ ಉ
ದ್ದೇಶದಿಂದ 'ಡೆಕನ್ ಎಜ್ಯುಕೇಶನ್ ಸೊಸಾಯಿಟಿ' ಎಂಬ ಹೆ
ಸರಿನದೊಂದು ಸಂಘವನ್ನು ಸ್ಥಾಪಿಸಿದರು. ಕೊಲ್ಹಾಪುರದ
ಮಹಾರಾಜರು ಈ ಸಂಘದ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು,
ಹಾಗು ವಾಮನರಾಯರು ಸ್ವತಃ ಸಂಘದ ಚಿಟ್ಣೀಸರಾದರು.
ಈ ಸಂಘವು ಸ್ಥಾಪನವಾದ ಮೇಲೆ ವಾಮನರಾಯರು ಶಾಲೆ
ಮತ್ತು ಕಾಲೇಜ ಇವುಗಳ ವಿಷಯವಾಗಿ ಅಶ್ರಾಂತ ಶ್ರಮ
ಮಾಡಹತ್ತಿದರು. ಅವರ ಪ್ರಯತ್ನವು ಸಫಲವಾಗಿ ಶಾಲೆಗೆ
ಸ್ವತಂತ್ರ ಇಮಾರತಿಯು ದೊರಕಿದ್ದಲ್ಲದೆ, ಕಾಲೇಜದಲ್ಲಿ ಫಾ
ಯನಲ್ ಬಿ. ಏ. ಪರೀಕ್ಷೆಯವರೆಗೆ ಶಿಕ್ಷಣ ನಡಿಸುವದಕ್ಕೆ ವಿ
ದ್ಯಾಪೀಠದವರು ಅಧಿಕಾರ ಕೊಟ್ಟರು. ಇಷ್ಟಕ್ಕೆಲ್ಲ ವಾಮ
ನರಾಯರ ವೃಷನಿಶ್ಚಯವೂ ದೀರ್ಘೋದ್ಯೋಗವೂ ವಿದ್ವ
ತ್ತೆಯೂ ಕಾರಣವಾಗಿವೆ.

ಸ್ವಭಾವ ಮತ್ತು ಗುಣ

ಅವರು ತೋರಿಕೆಯಲ್ಲಿ ತುಸು ಅಭಿಮಾನಿಗಳಂತೆ ಕಂಡ
ರೂ, ಅವರ ಸ್ವಭಾವವು ಅನ್ಯರ ಮನಸು ನೋಯದಂತೆ
ಅವರ ಕೂಡ ಬಮ್ಮನಿಸಿನಿಂದ ನಡಕೊಳ್ಳುವಂಥಾವಿತ್ತು.
ಯಾವದೊಂದು ಮಾತಿನ ಸಲುವಾಗಿ ತಮ್ಮ ಹಟವೇ ನಡಿ
ಯಲಿಕ್ಕೆ ಬೇಕೆಂದು ಅವರು ಎಂದೂ ಅನ್ನಲಿಲ್ಲ. ಅವರು

ಶಿಸ್ತಿಗೂ, ನಿಯಮಕ್ಕೂ ಸರಿಯಾಗಿ ಕೆಲಸ ಮಾಡುವಂಥ ವರು. ಅವರು ಶಿಕ್ಷಣ ಕೊಡುವ ಕೆಲಸದಲ್ಲಂತು ಬಳ್ಳಿ ದಕ್ಷರು. ಅದರಲ್ಲಿ ಕಾವ್ಯ ನಾಟಕಗಳನ್ನು ಕಲಿಸುವ ಕೆಲಸದಲ್ಲಿ ಅವರ ಮುಂಗೈ ಹಿಡಿಯುವವರು ಯಾರು ಇದ್ದಿಲ್ಲವೆಂದರೂ ಸಲ್ಲುವದು. ನ್ಯೂ ಇಂಗ್ಲಿಷ ಸ್ಕೂಲಿನ ವಿದ್ಯಾರ್ಥಿಗಳಿಗೆ ಜಗನ್ನಾಥ ಶಂಕರಸೇಟ ಸ್ಕೂಲರಶಿಪ್ಪುಗಳು ಬಂದೇಸವನೆ ದೊರೆಯುತ್ತ ಹೋದದ್ದರ ಕಾರಣವು ವಾಮನರಾಯರ ಕಲಿಸುವ ಚಾತುರ್ಯವೇ ಇರುತ್ತದೆ. ಅವರು ಬಳ್ಳಿ ಈರ್ಷೆಯವರೂ, ಮಹತ್ವಾಕಾಂಕ್ಷೆಯುಳ್ಳವರೂ ಇದ್ದರು. ಈ ಗುಣದ ವಿಷಯವಾಗಿ ಇಲ್ಲಿ ಬಂದು ಮಾತನ್ನು ಹೇಳುವದು ಯುಕ್ತವದೆ. ಅದು ಯಾವದೆಂದೆರೆ,—ಅವರು ಬಿ. ಏ. ಪರೀಕ್ಷೆಯ ಅಭ್ಯಾಸ ಮಾಡುತ್ತಿರುವಾಗ್ಗೆ ಭಾಷಾವಿಷಯವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು; ಆದರೆ ಕೆಲವು ಮಿತ್ರರ ಮಾತು ಕೇಳಿ, ಗಣಿತ ವಿಷಯದಲ್ಲಿ ತನ್ನ ಕೈ ಹಿಡಿಯುವವನು ಯಾವನೂ ಇಲ್ಲವೆಂದು ಹೆಮ್ಮೆ ಮಾಡುತ್ತಿದ್ದ ಬಬ್ಬ ವಿದ್ಯಾರ್ಥಿಯ ಸೊಕ್ಕನ್ನು ಮುರಿಯುವದಕ್ಕೆ ಮೊದಲು ತೆಗೆದುಕೊಂಡಿದ್ದ ಭಾಷಾವಿಷಯವನ್ನು ಬಿಟ್ಟು ಗಣಿತ ವಿಷಯವನ್ನು ಕೈಕೊಂಡು ಪರೀಕ್ಷೆಯಲ್ಲಿ ನೂರಕ್ಕೆ ೯೫ ಗುಣಗಳನ್ನು ಪಡೆದರು!! ಇಂಥಾ ಮೇಲಾಟವೂ, ಇಂಥಾ ದೃಢಾಭ್ಯಾಸವೂ ಸಾಧಾರಣವಾದವುಗಳೆಂದು ಯಾರು ಹೇಳಬಹುದು? ತಮ್ಮ ಗೌರವವನ್ನು ಹ್ಯಾಗೆ ಕಾದುಕೊಳ್ಳಬೇಕೆಂಬ ಸಂಗತಿಯು ಅವರಿಗೆ ಚೆನ್ನಾಗಿ ಗೊತ್ತಿತ್ತು. ಅಲಸ್ಯದ ಸುದ್ದಿಯೇ ಅವರಿಗೆ ಗೊತ್ತಿದ್ದಿಲ್ಲ. ಚೆಕನ್ ಎಜ್ಯುಕೇಶನ್ ಸೊಸಾಯಿಟಿಯ ' ಲಾಯಿಫ್ ಮೆಂಬರ ' ಸಂಬಂಧವಾಗಿ ಅವರಿಗೆ ೫೫ ರೂ. ಮಾತ್ರ ಸಲ್ಲುತ್ತಿದ್ದರೂ, ಅವರು ಅಷ್ಟರಿಂದಲೇ ಸಂತು

ಷ್ಟರಾಗಿದ್ದರು. ಇದೇ ಮೇರೆಗೆ ಅನೇಕ ಮೇಲಾದ ಗುಣಗಳ ಸಂಗ್ರಹಸ್ಥಾನವಾದ ಈ ವಾಮನ ಮೂರ್ತಿರಾಯರು ಪೂರಾ ನಿರ್ವ್ಯಸನಿಗಳಾಗಿದ್ದರು. ತಮ್ಮ ಕರ್ತವ್ಯವನ್ನು ಸರಿಯಾಗಿ ನಡಿಸಬೇಕೆಂಬ ವ್ಯಸನದ ಹೊರತು ಮತ್ತೊಂದು ವ್ಯಸನವು ಅವರ ಕನಸು ಮನಸುಗಳಲ್ಲಿ ಸಹ ಬರಲಿಲ್ಲ. ಇಂಥ ಕರ್ತವ್ಯದಕ್ಷರೂ, ಇಂಥ ನಿಸ್ಪೃಹರೂ ಆದ ಪುರುಷರು ಜಗತ್ತಿನಲ್ಲಿ, ವಿಶೇಷವಾಗಿ ನಮ್ಮ ದೇಶದಲ್ಲಿ, ಹುಟ್ಟುವದು ಅಪರೂಪ. ಬಂದುವೇಳೆ ಹುಟ್ಟಿದರೂ ಅವರು ನಮ್ಮ ದುರ್ದೈವದಿಂದ ದಕ್ಕುವದಿಲ್ಲ!!

ಗ್ರಂಥಗಳು.

ಅವರು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಕೆಲವು ಗ್ರಂಥಗಳನ್ನು ಬರೆದರು. ೧೮೯೧ರಲ್ಲಿ 'ಸ್ಟೂಡಂಟ್ಸಗಾಯಿಡ' ಎಂಬ ಪುಸ್ತಕವನ್ನು, ೧೮೯೨ರಲ್ಲಿ ಸ್ಟೂಡಂಟ್ಸ ಪ್ಯಾಗ್ರೇಸೀವ ಎಕ್ಸರಸಾಯಿಜೀಸವೆಂಬ ಎರಡು ಗ್ರಂಥಗಳನ್ನು, ೧೮೯೪ರಲ್ಲಿ ಇಂಗ್ಲಿಷದಿಂದ ಸಂಸ್ಕೃತ ಮತ್ತು ೧೮೯೫ರಲ್ಲಿ ಸಂಸ್ಕೃತದಿಂದ ಇಂಗ್ಲಿಷ ಈ ಪ್ರಕಾರ ಎರಡು ಕೋಶಗಳನ್ನು ಪ್ರಸಿದ್ಧ ಮಾಡಿ ವಿದ್ಯಾರ್ಥಿಗಳಿಗೆ ಬಳ್ಳಿ ಸಹಾಯ ಮಾಡಿಕೊಟ್ಟರು. 'ಕುಸುಮಮಾಲಾ' ಎಂಬ ಪುಸ್ತಕದ ಎರಡು ಭಾಗಗಳನ್ನು ರಚಿಸಿದ್ದಲ್ಲದೆ ಕೇಸರೀ ಮತ್ತು ಮರಾಠಾ ಎಂಬ ವರ್ತಮಾನಪತ್ರಗಳಲ್ಲಿ ಅವರು ಆಗಾಗ್ಗೆ ನಿಬಂಧಗಳನ್ನು ಬರೆಯುತ್ತಿದ್ದರು. ಇಂಗ್ಲಿಷ ಬರೆಯುವದರಲ್ಲಿಯೂ, ಮಾತಾಡುವದರಲ್ಲಿಯೂ ಅವರು ನಿಪುಣರಿದ್ದರು. ಪುಣೆಯೊಳಗಿನ ಎಲ್ಲ ಸಂಸ್ಥೆಗಳಲ್ಲಿ ಅವರ ಅಂಗವು ಬಹಳ ಮಾಡಿ ಇದ್ದೇ ಇತ್ತು.

ಅವರ ಮೂಸೆ ಸನ್ಮಾನಗಳು.

ವಾಮನರಾಯರು ತಮ್ಮ ಬುದ್ಧಿಚಾತುರ್ಯದಿಂದ ಸರಕಾರದಲ್ಲಿಯೂ, ಜನರಲ್ಲಿಯೂ ಸರಿಯಾಗಿ ಕೀರ್ತಿಯನ್ನು ಸಂಪಾದಿಸಿದರು. ವಿದ್ಯಾಪೀಠದ ಪರೀಕ್ಷೆಗಳಲ್ಲಿ ಅವರು ಮೇಲಿಂದ ಮೇಲೆ ಪರೀಕ್ಷಕರಾಗಿ ನೇಮಿಸಲ್ಪಡುತ್ತಿದ್ದರು. ವಿದ್ಯಾಪೀಠದ "ಫೆಲೋ" ಎಂಬ ಗೌರವದಬಿರುದನ್ನು ಸರಕಾರದವರು ಅವರಿಗೆ ಕೊಟ್ಟಿದ್ದರು.

ವಾಮನರಾಯರು ಬಡ ಕುಟುಂಬದಲ್ಲಿ ಹುಟ್ಟಿದರೂ ಅವರ ದೀರ್ಘಪ್ರಯತ್ನ, ಸರಳವರ್ತನೆ, ಸದಾಚಾರ, ಕೈಕೊಂಡ ಕೆಲಸವನ್ನು ಮನಮುಟ್ಟಿ ಮಾಡುವ ಉತ್ಸುಕತೆ ಮುಂತಾದ ಗುಣಗಳೇ ಅವರನ್ನು ಇಷ್ಟು ಯೋಗ್ಯತೆಗೆ ಏರಿಸಲಿಕ್ಕೆ ಕಾರಣವಾದವೆಂದು ಅವರ ಚರಿತ್ರೆಯಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅವರ ಕಿತ್ತೆಯನ್ನು ಅಹೋರಾತ್ರಿ ಎದುರಿಟ್ಟುಕೊಂಡು ಅವರಂತೆಯೇ ನಮ್ಮ ಆಚರಣೆಗಳನ್ನು ತಿದ್ದುತ್ತ ಹೋದರೆ ನಮ್ಮ ಗತವೈಭವವು ಬೇಗನೆ ತಿರುಗಿ ಪ್ರಾಪ್ತವಾಗುವದೆಂದು ಹೇಳಬಹುದು.

NOTES ON GRAMMAR.
ವ್ಯಾಕರಣದ ಟಿಪ್ಪಣಿಗಳು.

೫ನೆಯ ಪುಸ್ತಕ ಪುಟ ೨೫೯.

"ನೋಟುಗಳು ಕಳವಿಗೆ ಹೋಗುವ ಭಯವು ಬಹಳ ಕಡಿಮೆಯುಂಟು."

ಈ ವಾಕ್ಯದಲ್ಲಿ ನೋಟುಗಳೇ ಕಳವು ಮಾಡಲಿಕ್ಕೆ ಹೋಗುವವೋ ಏನು? ಎಂಬ ಅಕ್ಷೇಪ ಹೊರಡುವಂತೆ ಪದಗಳ ರಚನೆಯಾಗಿದೆ. ಆದರೆ ಈ ಮಾತು ಅಸಂಭವವ

ದೆ. ಗ್ರಂಥಕರ್ತರ ಅಭಿಪ್ರಾಯವಾದರೂ ಹೀಗೆ ಇಲ್ಲ. " ನೋಟುಗಳು ಕಳವಾಗಿ ಹೋಗುವ ಭಯವು ಬಹಳ ಕಡಿಮೆಯುಂಟು " ಎಂದಿದ್ದರೆ ಮೇಲೆ ತೋರಿಸಿದ ಅಸಂಭವಾರ್ಥ ಹುಟ್ಟುವದಿಲ್ಲ.

ಒನೆಯ ಪುಸ್ತಕ ಪುಟ ೨೫೯.

" ಚಕ್ರವರ್ತಿಯನ್ನು ನೋಮಿಸುವಾಗ ಪೋಪನೆ ಸಮ್ಮತಿಯ ಕೇಳತಕ್ಕದ್ದಿಂದು ಪ್ರತಿಪಾದಿಸ ಹತ್ತಿದರು. ತಾತ್ಪರ್ಯವೇನೆಂದರೆ, ಈ ಕಾಲದ ಪೋಪಗಳು ಭೂಲೋಕದ ರಾಜ್ಯವೆಲ್ಲ ತಮ್ಮದೇ ಎಂದು ಎಣಿಸುವರು."

ಈ ವಾಕ್ಯಗಳಲ್ಲಿ ಪೋಪ ಶಬ್ದಕ್ಕೆ ಏಕವಚನದಲ್ಲಿ ನೆಕಾರಾಗಮವನ್ನೂ ಬಹುವಚನದಲ್ಲಿ ಗಳಾಗಮವನ್ನೂ ಹಚ್ಚಿರುತ್ತಾರೆ, ಅವರೆ ಗಳಾಗಮ ಹಚ್ಚಿದ್ದು ವ್ಯಾಕರಣದ ನಿಯಮಕ್ಕೆ ಅನುಸರಿಸಿದ್ದಲ್ಲ. ಪೋಪ ಶಬ್ದವು ಅಕಾರಾಂತ ಪುಲ್ಲಿಂಗದ್ದಿರುತ್ತದೆ. ಅಕಾರಾಂತ ಪುಲ್ಲಿಂಗಕ್ಕೆ ಏಕವಚನದಲ್ಲಿ ನಕಾರಾಗಮವೂ ಬಹುವಚನದಲ್ಲಿ ರೇಫಾಗಮವು ಬರತಕ್ಕದ್ದು. ಅದರಿಂದ " ಪೋಪಗಳು " ಎಂಬದು ತಪ್ಪಿನ ರೂಪವವೆ. ಇದರ ಸ್ಥಳವಲ್ಲಿ ಪೋಪರು ಎಂದಿರಬೇಕು. ಈ ಸಂಬಂಧದಲ್ಲಿ ಶಬ್ದಮಣಿದರ್ಪಣದ ಆಧಾರವು:--

ಸೂತ್ರ ೯೪.

ಬರೆಪುಂಸ್ತ್ರೀಲಿಂಗಮುವಾಮು ।
ದಿರೆಸಂಖ್ಯಾಸರ್ವನಾಮಕೃದ್ಗುಣವಚನೆ ॥
ಸ್ಫುರದುರುತದ್ಧಿತಮುಂಮುಂ ।
ದರುವಕ್ಕೂಮುವಂತಲಿಂಗದೊಳ್ವಿಧಿಲೋಪ ॥ ೯೪.

ಅರ್ಥವು--ಸಂಖ್ಯಾವಾಚಕ ಸರ್ವನಾಮ ಕೃದಂತ ಗುಣವಾಚಕ, ತದ್ಧಿತಗಳಾದ ಪುಲ್ಲಿಂಗದ ಅಪವಾ ಸ್ತ್ರೀಲಿಂಗ

ದ ಶಬ್ದಗಳಿಗೆ ವಿಭಕ್ತಿಪ್ರತ್ಯಯ ಪರವಾದರೆ ಅರ್ ಆಗವು ವಾಗುವದು.

ಉದಾಹರಣಗಳು.

ಅರಸರ್, ದೇವಿಯರ್, ಇರ್ವರ್, ಪೆರರ್, ಮೂಡಿದರ್, ಒಳ್ಳಿದರ್, ಮುನಿಗಾರರ್ ಮುಂತಾದವು.

ಋನೆಯು ಪುಸ್ತಕದ ಪುಟ ೨೫೪—೨೫೫.

" ಮನುಷ್ಯನಿಗೆ ಹಲವು ಬಗೆಯ ಸಂಪತ್ತಿಯು ಒಡವೆಗಳು ಸ್ವಲ್ಪ ಸ್ವಲ್ಪ ಬೇಕಾಗುತ್ತವೆ; ಆದರೆ ಅವುಗಳನ್ನೆಲ್ಲ ಸ್ವತಃ ಮಾಡಿಕೊಳ್ಳಲಿಕ್ಕೆ ಯಾರಿಗೂ ಬರುವದಿಲ್ಲ; ಆದರೆ ಒಬ್ಬ ಮನುಷ್ಯನು ಒಂದು ಪ್ರಕಾರದ ಒಡವೆಗಳನ್ನು ಬೇಕಾದಷ್ಟು ಹುಟ್ಟಿಸಬಹುದು.

ಈ ವಾಕ್ಯಗಳಲ್ಲಿ ಆದರೆ ಎಂಬ ಶಬ್ದವು ಎರಡು ಸಾರೆ ಬಂದು ವಾಕ್ಯದ ಶೋಭೆ ಕೆಟ್ಟಿದೆ. ಅದರಿಂದ ಯಾವದಾದರೊಂದು ಆದರೆಯನ್ನು ತೆಗೆದುಹಾಕಬೇಕಾಗಿದೆ. ಇನ್ನು ಯಾವದನ್ನು ತೆಗೆಯಬೇಕೆಂಬ ವಿಚಾರವು:—

ಒಂದು ವಾಕ್ಯದ ವಿರುದ್ಧವಾದ ಅರ್ಥವನ್ನು ಅದರ ಮುಂದಿನ ವಾಕ್ಯದಲ್ಲಿ ಹೇಳುವದಿದ್ದರೆ ಮುಂದಿನ ವಾಕ್ಯದ ಆದಿಯಲ್ಲಿ ಆದರೆ ಎಂಬದು ಬರುತ್ತದೆ. ಮೊದಲಿನ ಎರಡು ವಾಕ್ಯಗಳ ಅರ್ಥಗಳಲ್ಲಿ ವಿರೋಧವೇನೂ ತೋರುವದಿಲ್ಲವಾದದ್ದರಿಂದ ಎರಡನೆಯ ವಾಕ್ಯದ ಆದಿಯಲ್ಲಿರುವ ಆದರೆ ಶಬ್ದವನ್ನು ತೆಗೆದರೆ ಮೂಲಾರ್ಥದಲ್ಲಿ ಏನೂ ಹೆಚ್ಚುಕಡಿಮೆಯಾಗದೆ ಮೇಲೆ ಹೇಳಿದ ದೋಷವೂ ಹೋಗುತ್ತದೆ, ಇದರಂತೆ:—

ಋನೆಯು ಪುಸ್ತಕ ಪುಟ ೨೫೯.

" ಪೂರ್ವಕಾಲದಲ್ಲಿ ತಾಮ್ರದ ನಾಣ್ಯಗಳೇ ಎಲ್ಲ ವ್ಯವ

ಹಾರಗಳಲ್ಲಿ ನಡೆಯುತ್ತಿದ್ದವು. ಪೂರ್ವಕಾಲದಲ್ಲಿ ಸ್ವೀಡನ ದೇಶದಲ್ಲಿ ಎರಡು ಫೂಟು ಉದ್ದ, ಒಂದು ಫೂಟು ಅಗಲು, ಇಂಥಾ ತಾಮ್ರದ ತಗಡುಗಳು ನಾಣ್ಯಗಳಂತೆ ನಡೆಯುತ್ತಿದ್ದವು.''

ಈ ಎರಡು ವಾಕ್ಯಗಳಲ್ಲಿ ''ಪೂರ್ವಕಾಲದಲ್ಲಿ'' ಎಂಬ ಪದವು ಎರಡು ಸಾರೆ ಬಂದದ್ದರಿಂದ ವಾಕ್ಯದ ಚಂದವು ಕೆಟ್ಟದೆ. ಎರಡನೆಯ ವಾಕ್ಯದ ಆದಿಯಲ್ಲಿರುವ ''ಪೂರ್ವಕಾಲದಲ್ಲಿ'' ಎಂಬ ಶಬ್ದವನ್ನು ತೆಗೆದುಹಾಕಬೇಕು ಮತ್ತು ಪೂರ್ವವಾಕ್ಯದ ಕೊನೆಯಲ್ಲಿ ಅರ್ಧವಿರಾಮವನ್ನು ಇಡಬೇಕು.

ಪೂರ್ವವಾಕ್ಯದ ಕಡೆಯಲ್ಲಿ ಅರ್ಧವಿರಾಮವನ್ನು ಇಡುವದರಿಂದ ಪೂರ್ವೋತ್ತರ ವಾಕ್ಯಗಳಿಗೆ ಸಂಬಂಧವುಂಟಾಗಿ ಮೊದಲಿನ ವಾಕ್ಯದ ಆದಿಯಲ್ಲಿರುವ ''ಪೂರ್ವಕಾಲದಲ್ಲಿ'' ಎಂಬ ಪದದ ಸಂಬಂಧವು ಉತ್ತರವಾಕ್ಯಕ್ಕೆ ಬರುತ್ತದೆ. ಆದರಿಂದ ಮೂಲಾರ್ಥದಲ್ಲಿ ಏನೂ ಹೆಚ್ಚು ಕಡಿಮೆಯಾಗಲಿಕಿಲ್ಲ. ಅದೇ ಪ್ರಕಾರ ಬರೆಯೋಣ:—

ಪೂರ್ವಕಾಲದಲ್ಲಿ ತಾಮ್ರದ ನಾಣ್ಯಗಳೇ ಎಲ್ಲ ವ್ಯವಹಾರಗಳಲ್ಲಿ ನಡೆಯುತ್ತಿದ್ದವು; ಸ್ವೀಡನ ದೇಶದಲ್ಲಿ ಎರಡು ಫೂಟು ಉದ್ದ, ಒಂದು ಫೂಟು ಅಗಲು, ಇಂಥಾ ತಾಮ್ರದ ತಗಡುಗಳು ಮುಂತಾದವು.

ನೋಟೀಸು.

ಮಿ. ಡೈರೆಕ್ಟರ್ ಆಫ಼್ ಪಬ್ಲಿಕ ಇನಸ್ಟ್ರುಕಶನ್ ದೊರೆಗಳು ಕೆಳಗೆ ಬರೆದ ಕನ್ನಡ ಪುಸ್ತಕಗಳನ್ನು ದಕ್ಷಿಣಭಾಗದೊಳಗಿನ ಕನ್ನಡ ಶಾಲೆಗಳಲ್ಲಿ ಇನಾಮು ಕೊಡಬಹುದೆಂದು ವಿಧಿಸಿರುತ್ತಾರೆ.

ದ ಶಬ್ದಗಳಿಗೆ ವಿಭಕ್ತಿಪ್ರತ್ಯಯ ಪರವಾದರೆ ಅರ್ ಆಗವು ವಾಗುವದು.

ಉದಾಹರಣಗಳು.

ಅರಸರ್, ದೇವಿಯರ್, ಇರ್ವರ್, ಪೆರರ್, ಮೂಡಿದರ್, ಬಳ್ಳಿದರ್, ಮಣಿಗಾರರ್ ಮುಂತಾದವು.

ಖನೆಯ ಪುಸ್ತಕದ ಪುಟ ೨೫೪—೨೫೫.

" ಮನುಷ್ಯನಿಗೆ ಹಲವು ಬಗೆಯ ಸಂಪತ್ತಿಯ ಒಡವೆಗಳು ಸ್ವಲ್ಪ ಸ್ವಲ್ಪ ಬೇಕಾಗುತ್ತವೆ; ಆದರೆ ಅವುಗಳನ್ನೆಲ್ಲ ಸ್ವತಃ ಮಾಡಿಕೊಳ್ಳಲಿಕ್ಕೆ ಯಾರಿಗೂ ಬರುವದಿಲ್ಲ; ಆದರೆ ಬಬ್ಬ ಮನುಷ್ಯನು ಬಂದು ಪ್ರಕಾರದ ಒಡವೆಗಳನ್ನು ಬೇಕಾದಷ್ಟು ಹುಟ್ಟಿಸಬಹುದು.

ಈ ವಾಕ್ಯಗಳಲ್ಲಿ ಆದರೆ ಎಂಬ ಶಬ್ದವು ಎರಡು ಸಾರೆ ಬಂದು ವಾಕ್ಯದ ಶೋಭೆ ಕೆಟ್ಟಿದೆ. ಅದರಿಂದ ಯಾವದಾದರೊಂದು ಆದರೆಯನ್ನು ತೆಗೆದುಹಾಕಬೇಕಾಗಿದೆ. ಇನ್ನು ಯಾವದನ್ನು ತೆಗೆಯಬೇಕೆಂಬ ವಿಚಾರವು:—

ಬಂದು ವಾಕ್ಯವ ವಿರುದ್ಧವಾದ ಅರ್ಥವನ್ನು ಅದರ ಮುಂದಿನ ವಾಕ್ಯದಲ್ಲಿ ಹೇಳುವದಿದ್ದರೆ ಮುಂದಿನ ವಾಕ್ಯದ ಆದಿಯಲ್ಲಿ ಆದರೆ ಎಂಬದು ಬರುತ್ತದೆ. ಮೊದಲಿನ ಎರಡು ವಾಕ್ಯಗಳ ಅರ್ಥಗಳಲ್ಲಿ ವಿರೋಧವೇನೂ ತೋರುವದಿಲ್ಲವಾದದ್ದರಿಂದ ಎರಡನೆಯ ವಾಕ್ಯದ ಆದಿಯಲ್ಲಿರುವ ಆದರೆ ಶಬ್ದವನ್ನು ತೆಗೆದರೆ ಮೂಲಾರ್ಥದಲ್ಲಿ ಏನೂ ಹೆಚ್ಚುಕಡಿಮೆಯಾಗದೆ ಮೇಲೆ ಹೇಳಿದ ದೋಷವೂ ಹೋಗುತ್ತದೆ, ಇದರಂತೆ:—

ಖನೆಯ ಪುಸ್ತಕ ಪುಟ ೨೫೯.

" ಪೂರ್ವಕಾಲದಲ್ಲಿ ತಾಮ್ರದ ನಾಣ್ಯಗಳೇ ಎಲ್ಲ ವ್ಯವ

ಹಾರಗಳಲ್ಲಿ ನಡೆಯುತ್ತಿದ್ದವು. ಪೂರ್ವಕಾಲದಲ್ಲಿ ಸ್ವೀಡನ ದೇಶದಲ್ಲಿ ಎರಡು ಘೂಟು ಉದ್ದ, ಬಂದು ಘೂಟು ಅಗಲು, ಇಂಥಾ ತಾಮ್ರದ ತಗಡುಗಳು ನಾಣ್ಯಗಳಂತೆ ನಡೆಯುತ್ತಿದ್ದವು.''

ಈ ಎರಡು ವಾಕ್ಯಗಳಲ್ಲಿ ''ಪೂರ್ವಕಾಲದಲ್ಲಿ'' ಎಂಬ ಪದವು ಎರಡು ಸಾರೆ ಬಂದದ್ದರಿಂದ ವಾಕ್ಯದ ಚಂದವು ಕೆಟ್ಟಿದೆ. ಎರಡನೆಯ ವಾಕ್ಯದ ಆದಿಯಲ್ಲಿರುವ ''ಪೂರ್ವಕಾಲದಲ್ಲಿ'' ಎಂಬ ಶಬ್ದವನ್ನು ತೆಗೆದುಹಾಕಬೇಕು ಮತ್ತು ಪೂರ್ವವಾಕ್ಯದ ಕೋನೆಯಲ್ಲಿ ಅರ್ಧವಿರಾಮವನ್ನು ಇಡಬೇಕು.

ಪೂರ್ವವಾಕ್ಯದ ಕಡೆಯಲ್ಲಿ ಅರ್ಧವಿರಾಮವನ್ನು ಇಡುವದರಿಂದ ಪೂರ್ವೋತ್ತರ ವಾಕ್ಯಗಳಿಗೆ ಸಂಬಂಧವುಂಟಾಗಿ ಮೊದಲಿನ ವಾಕ್ಯದ ಆದಿಯಲ್ಲಿರುವ ''ಪೂರ್ವಕಾಲದಲ್ಲಿ'' ಎಂಬ ಪದದ ಸಂಬಂಧವು ಉತ್ತರವಾಕ್ಯಕ್ಕೆ ಬರುತ್ತದೆ. ಅದರಿಂದ ಮೂಲಾರ್ಥದಲ್ಲಿ ಏನೂ ಹೆಚ್ಚು ಕಡಿಮೆಯಾಗಲಿಕಿಲ್ಲ. ಅದೇ ಪ್ರಕಾರ ಬರೆಯೋಣ:—

ಪೂರ್ವಕಾಲದಲ್ಲಿ ತಾಮ್ರದ ನಾಣ್ಯಗಳೇ ಎಲ್ಲ ವ್ಯವಹಾರಗಳಲ್ಲಿ ನಡೆಯುತ್ತಿದ್ದವು; ಸ್ವೀಡನ ದೇಶದಲ್ಲಿ ಎರಡು ಘೂಟು ಉದ್ದ, ಬಂದು ಘೂಟು ಅಗಲು, ಇಂಥಾ ತಾಮ್ರದ ತಗಡುಗಳು ಮುಂತಾದವು.

ನೋಟೀಸು.

ಮೈ. ಡೈರೆಕ್ಟರ್ ಆಫ್ ಪಬ್ಲಿಕ ಇನಸ್ಟ್ರಕಶನ್ ದೊರೆಗಳು ಕೆಳಗೆ ಬರೆದ ಕನ್ನಡ ಪುಸ್ತಕಗಳನ್ನು ದಕ್ಷಿಣಭಾಗದೊಳಗಿನ ಕನ್ನಡ ಶಾಲೆಗಳಲ್ಲಿ ಇನಾಮು ಕೊಡಬಹುದೆಂದು ವಿಧಿಸಿರುತ್ತಾರೆ.

ದ ಶಬ್ದಗಳಿಗೆ ವಿಭಕ್ತಿಪ್ರತ್ಯಯ ಪರವಾದರೆ ಅರ್ ಆಗವು ವಾಗುವದು.

ಉದಾಹರಣೆಗಳು.

ಅರಸರ್, ದೇವಿಯರ್, ಇವರ್ಗರ್, ಪೆರರ್, ಮಾಡಿದರ್, ಒಳ್ಳಿದರ್, ಮುನಿಗಾರರ್ ಮುಂತಾದವು.

ಈನೆಯ ಪುಸ್ತಕದ ಪುಟ ೨೫೪--೨೫೫.

" ಮನುಷ್ಯನಿಗೆ ಹಲವು ಬಗೆಯ ಸಂಪತ್ತಿಯು ಒಡವೆಗಳು ಸ್ವಲ್ಪ ಸ್ವಲ್ಪ ಬೇಕಾಗುತ್ತವೆ; ಆದರೆ ಅವುಗಳನ್ನೆಲ್ಲ ಸ್ವತಃ ಮಾಡಿಕೊಳ್ಳಲಿಕ್ಕೆ ಯಾರಿಗೂ ಬರುವದಿಲ್ಲ; ಆದರೆ ಒಬ್ಬ ಮನುಷ್ಯನು ಬಂದು ಪ್ರಕಾರದ ಒಡವೆಗಳನ್ನು ಬೇಕಾದಷ್ಟು ಹುಟ್ಟಿಸಬಹುದು.

ಈ ವಾಕ್ಯಗಳಲ್ಲಿ ಆದರೆ ಎಂಬ ಶಬ್ದವು ಎರಡು ಸಾರೆ ಬಂದು ವಾಕ್ಯದ ಶೋಭೆ ಕೆಟ್ಟಿದೆ. ಅದರಿಂದ ಯಾವದಾದರೊಂದು ಆದರೆಯನ್ನು ತೆಗೆದುಹಾಕಬೇಕಾಗಿದೆ. ಇನ್ನು ಯಾವದನ್ನು ತೆಗೆಯಬೇಕೆಂಬ ವಿಚಾರವು:—

ಬಂದು ವಾಕ್ಯದ ವಿರುದ್ಧವಾದ ಅರ್ಥವನ್ನು ಅದರ ಮುಂದಿನ ವಾಕ್ಯದಲ್ಲಿ ಹೇಳುವದಿದ್ದರೆ ಮುಂದಿನ ವಾಕ್ಯದ ಆದಿಯಲ್ಲಿ ಆದರೆ ಎಂಬದು ಬರುತ್ತದೆ. ಮೊದಲಿನ ಎರಡು ವಾಕ್ಯಗಳ ಅರ್ಥಗಳಲ್ಲಿ ವಿರೋಧವೇನೂ ತೋರುವದಿಲ್ಲವಾದದ್ದರಿಂದ ಎರಡನೆಯ ವಾಕ್ಯದ ಆದಿಯಲ್ಲಿರುವ ಆದರೆ ಶಬ್ದವನ್ನು ತೆಗೆದರೆ ಮೂಲಾರ್ಥದಲ್ಲಿ ಏನೂ ಹೆಚ್ಚುಕಡಿಮೆಯಾಗದೆ ಮೇಲೆ ಹೇಳಿದ ದೋಷವೂ ಹೋಗುತ್ತದೆ, ಇದರಂತೆ:—

ಈನೆಯ ಪುಸ್ತಕ ಪುಟ ೨೫೯.

" ಪೂರ್ವಕಾಲದಲ್ಲಿ ತಾಮ್ರದ ನಾಣ್ಯಗಳೇ ಎಲ್ಲ ವ್ಯವ

ಹಾರಗಳಲ್ಲಿ ನಡೆಯುತ್ತಿದ್ದವು. ಪೂರ್ವಕಾಲದಲ್ಲಿ ಸ್ವೀಡನ ದೇಶದಲ್ಲಿ ಎರಡು ಫೂಟು ಉದ್ದ, ಬಂದು ಫೂಟು ಅಗಲು, ಇಂಥಾ ತಾಮ್ರದ ತಗಡುಗಳು ನಾಣ್ಯಗಳಂತೆ ನಡೆಯುತ್ತಿದ್ದವು.''

ಈ ಎರಡು ವಾಕ್ಯಗಳಲ್ಲಿ ''ಪೂರ್ವಕಾಲದಲ್ಲಿ'' ಎಂಬ ಪದವು ಎರಡು ಸಾರೆ ಬಂದದ್ದರಿಂದ ವಾಕ್ಯದ ಚಂದವು ಕೆಟ್ಟದೆ. ಎರಡನೆಯ ವಾಕ್ಯದ ಆದಿಯಲ್ಲಿರುವ ''ಪೂರ್ವಕಾಲದಲ್ಲಿ'' ಎಂಬ ಶಬ್ದವನ್ನು ತೆಗೆದುಹಾಕಬೇಕು ಮತ್ತು ಪೂರ್ವವಾಕ್ಯದ ಕೋನೆಯಲ್ಲಿ ಅರ್ಧವಿರಾಮವನ್ನು ಇಡಬೇಕು.

ಪೂರ್ವವಾಕ್ಯದ ಕಡೆಯಲ್ಲಿ ಅರ್ಧವಿರಾಮವನ್ನು ಇಡುವದರಿಂದ ಪೂರ್ವೋತ್ತರ ವಾಕ್ಯಗಳಿಗೆ ಸಂಬಂಧವುಂಟಾಗಿ ಮೊದಲಿನ ವಾಕ್ಯದ ಆದಿಯಲ್ಲಿರುವ ''ಪೂರ್ವಕಾಲದಲ್ಲಿ'' ಎಂಬ ಪದದ ಸಂಬಂಧವು ಉತ್ತರವಾಕ್ಯಕ್ಕೆ ಬರುತ್ತದೆ. ಅದರಿಂದ ಮೂಲಾರ್ಥದಲ್ಲಿ ಏನೂ ಹೆಚ್ಚು ಕಡಿಮೆಯಾಗಲಿಕಿಲ್ಲ. ಅದೇ ಪ್ರಕಾರ ಬರೆಯೋಣ:—

ಪೂರ್ವಕಾಲದಲ್ಲಿ ತಾಮ್ರದ ನಾಣ್ಯಗಳೇ ಎಲ್ಲ ವ್ಯವಹಾರಗಳಲ್ಲಿ ನಡೆಯುತ್ತಿದ್ದವು; ಸ್ವೀಡನ ದೇಶದಲ್ಲಿ ಎರಡು ಫೂಟು ಉದ್ದ, ಬಂದು ಫೂಟು ಅಗಲು, ಇಂಥಾ ತಾಮ್ರದ ತಗಡುಗಳು ಮುಂತಾದವು.

ನೋಟೀಸು.

ಮೈ. ಡೈರೆಕ್ಟರ್ ಆಫ಼ ಪಬ್ಲಿಕ ಇನಸ್ಟ್ರುಕ್ಶನ್ ದೊರೆಗಳು ಕೆಳಗೆ ಬರೆದ ಕನ್ನಡ ಪುಸ್ತಕಗಳನ್ನು ದಕ್ಷಿಣಭಾಗದೊಳಗಿನ ಕನ್ನಡ ಶಾಲೆಗಳಲ್ಲಿ ಇನಾಮು ಕೊಡಬಹುದೆಂದು ವಿಧಿಸಿರುತ್ತಾರೆ.

ನಂಬರು.	ಪುಸ್ತಕಗಳ ಹೆಸರು.	ಬೆಲೆ.		
	ಮೈಸೂರ ಪುಸ್ತಕಗಳು.			
೧	ಕನ್ನಡ ಮಹಾಭಾರತ ಟೀಕಾ ಆದಿಪರ್ವ.	೫	೮	೦
೬	,, ,, ಸಭಾಪರ್ವ.	೧	೮	೦
೩	,, ,, ಭೀಷ್ಮಪರ್ವ.	೬	೦	೦
೪	,, ,, ದ್ರೋಣಪರ್ವ.	೬	೪	೦
೫	,, ,, ಕರ್ಣಪರ್ವ.	೧	೬	೦
೬	,, ,, ಉದ್ಯೋಗಪರ್ವ	೧	೫	೦
೭	,, ,, ವಿರಾಟಪರ್ವ.	೦	೧	೦
೮	ಚನ್ನಬಸವ ಪುರಾಣ.	೬	೫	೦
೯	ಜಯಮಿನಿ ಭಾರತ.	೦	೫	೦
೧೦	ಕಥಾಮಂಜರಿ.	೦	೬	೦
೧೧	ನೀತಿ ಚಿಂತಾಮಣಿ ೧ನೇ ಭಾಗ.	೦	೮	೦
೧೬	,, ,, ೬ನೇ ಭಾಗ.	೦	೫	೦
೧೫	,, ,, ೫ನೇ ಭಾಗ.	೦	೮	೦
೧೪	ಸಾಂಚಾಲಿ ಪರಿಣಯ (ಷೇಕ್ಸಪಿಅರ ಕೃತ "ಮರ್ಚಂಟ ಆಫ ವೇನೀಸ" ಎಂಬ ಗ್ರಂಥದ ಭಾಷಾಂತರ.	೦	೧೦	೦
೧೫	ರಾಮವರ್ಮ ಲೀಲಾವತಿ ಚರಿತ್ರ (ಷೇಕ್ಸಪಿಅರ ಕೃತ "ರೋಮಿಯೋ ಆಂಡ್ ಜುಲಿಯಟ್" ಎಂಬ ಗ್ರಂಥದ ಭಾಷಾಂತರ.	೦	೪	೦
೧೬	ಬಸಪ್ಪಶಾಸ್ತ್ರಿಗಳ ಶಾಕುಂತಲನಾಟಕ.	೦	೧೬	೦
೧೭	ನಳಚರಿತ್ರ ಗದ್ಯಗ್ರಂಥ.	೦	೪	೦
೧೪	ವಿಕ್ರಮಾರ್ಕ್ಯರಾಯನ ಚರಿತ್ರ.	೦	೧೬	೦
೧೯	ಹರಿಶ್ಚಂದ್ರ ನಾಟಕ.	೦	೪	೦
೨೦	ಕರ್ನಾಟಕ ಭಾಷಾಭೂಷಣ.	೧೬	೪	೦
೨೧	ಕರ್ನಾಟಕ ಕಾದಂಬರಿ.	೧	೦	೦
	ಮಂಗಳೂರ ಪುಸ್ತಕಗಳು.			
೧	ಪ್ರಾಕಾವ್ಯಮಾಲಾ.	೧	೦	೦
೬	ಕಾವ್ಯಮಾಲಾ ಕಿಟಲ್ ಸಾಹೇಬರದು.	೧	೦	೦
೩	,, ಸಣ್ಣದು.	೦	೪	೦
೪	ಇಸೋಪನ ನೀತಿ ಕಥೆಗಳು.	೦	೮	೦
೫	ಪಂಚತಂತ್ರ.	೧	೮	೦
೬	ಕಥಾಸಂಗ್ರಹ ೧ನೇ ಭಾಗ.	೧	೮	೦

೫	ಎನೇ ಭಾಗ.			
೪	ಡಾಕ್ಟರ ಜೀಗ್ಲರ ಸಾಹೇಬರ ಇಂಗ್ಲಿಷ ಮತ್ತು ಕನ್ನಡ ಕೋಶ.	೧	೮	೦
೯	ಹಡಸನ್ ಸಾಹೇಬರ ಕನ್ನಡ ವ್ಯಾಕರಣ.	೬	೪	೦
೧೦	ಕನ್ನಡ ಮತ್ತು ಇಂಗ್ಲಿಷ ಕೋಶ ಸಣ್ಣದು.	೩	೦	೦
೧೧	ಕೃಷ್ಣ ಮಾಚಾರಿಗಳ ಹೊಸಗನ್ನಡ ನುಡಿಗನ್ನಡಿ.	೧	೪	೦
೧೨	ವರ್ಥ ಸಾಹೇಬರ ಹಳೆಗನ್ನಡ ವ್ಯಾಕರಣ.	೦	೬	೦
೧೩	ಶಬ್ದಮಣಿದರ್ಪಣ.	೦	೫	೦
೧೪	ಶಾಲಾವ್ಯಾಕರಣ.	೦	೪	೦
೧೫	ಪಂಚತಂತ್ರ ಅಥವಾ ಪಂಚೋಪಾಖ್ಯಾನ.	೦	೨	೦
೧೬	ಗಾದೆಗಳು. ೫೪೭	೦	೧	೦
	ಎರಡನೇ ಪುಸ್ತಕಗಳು.			
೧	ಮುದ್ರಾಮಂಜೂಷ.	೦	೬	೦
೨	ಸಾವಿತ್ರಿಯ ಚರಿತ್ರ.	೦	೬	೦
೩	ಸ್ತ್ರೀಧರ್ಮ ನೀತಿ.	೦	೬	೦
೪	ಜಯವಿನಿಭಾರತ (ಸಂಪೂರ್ಣ.)	೧	೦	೦
೫	ಪಂಪಾರಾಮಾಯಣ.	೧	೫	೦
೬	ತೊರವೀರಾಮಾಯಣ.	೧	೦	೦
೭	ಸೋಮೇಶ್ವರ ಶತಕ.	೦	೪	೦
೮	ಚುರಮರಿಕೃತ ಶಾಕುಂತಲ ನಾಟಕ.	೦	೮	೦
೯	ಸರ್ವಜ್ಞಗಳು.	೦	೪	೦
	ಮದ್ರಾಸ ಪುಸ್ತಕಗಳು.			
೧	ನ್ಯಾಚುರಲ್ ಹಿಸ್ಟರೀ ಆಫ್ ಅನಿಮಲ್ಸ (ಪ್ರಾಣಿಗಳ ಚರಿತ್ರ) ೧ನೇ ಭಾಗ ಕೆಳೆ ಚಿತ್ರಗಳುಳ್ಳದ್ದು.	೧	೦	೦

ಧಾರವಾಡ.
ತಾ॥ ೬ನೇ ಅಗಷ್ಟ ೧೮೯೬.

(Sd.) S. V. Patwardhan,
ಎಜ್ಯುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

DEPARTMENTAL NOTICE.

ನೋಟೀಸು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೭ನೇ ತಾರೀಖಿನ ದಿವಸ (ಸೋ

ಮುವಾರ) ಈನ್ನಡ ೬ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೧ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ೧೮ ಘೂಟಿಗಿಂತ ಎತ್ತರಿರುವವರೂ, ಹದಿನೇಳರಮೇಲೆ ಇಪ್ಪತ್ತೆರಡರ ಒಳಗೆ ವಯಸ್ಸುಳ್ಳವರೂ ಇರಬೇಕು. ತಾವು ಕಲಿತ ಸಾಲಿಯ ಮಾಸ್ತರರಿಂದ ವಯಸ್ಸಿನ* ದಾಖಲೆಯನ್ನೂ ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು ೫ನೇ ನವಂಬರಕ್ಕೆ ಬಂದು ತಮ್ಮ ಹೆಸರುಗಳನ್ನು ದಾಖಲು ಮಾಡಿಸಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಪೋದವಾರರೇ ಇರಲಿ ಅವರಲ್ಲಿ ಉತ್ತಮರೀತಿಯಿಂದ ಪಾಸಾದ ೪೦ ಜನರನ್ನು ಪಗಾರೀ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವೆವು.

೨. ಈ ವರ್ಷದ ಮುಲ್ಕೀ ಪರೀಕ್ಷೆಯ ಪರಿಣಾಮವು ನವಂಬರ ೫ನೇ ತಾರೀಖಿನ ಬಳಗಾಗಿ ಪ್ರಸಿದ್ಧವಾಗದಿದ್ದರೆ, ಈ ಪರೀಕ್ಷೆಗೆ ಕೂತವರು ಸಹ ಪ್ರವೇಶ ಪರೀಕ್ಷೆಗೆ ಬರಬಹುದು; ಆದರೆ ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಬಂದು ವೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜವಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ. ಇದಕ್ಕೆ ಒಪ್ಪಿಗೆ ಇದ್ದವರು ಮಾತ್ರ ಪ್ರವೇಶ ಪರೀಕ್ಷೆಗೆ ಬರಬಹುದು.

ಧಾರವಾಡ ಟ್ರೇ. ಕಾ.
ತಾ॥ ೧೧–೫–೧೦.

RAOJI B. KARANDIKAR,
ಪ್ರಿನ್ಸಿಪಾಲ.

---

* ವಯಸ್ಸಿನ ದಾಖಲೆಯು ನಮೂನೆ.

ಇದರಮೇಲೆ ಸ್ಕೂಲ ಮಾಸ್ತರರಾಗಲಿ ತಂದೆಯಾಗಲಿ ಪಾಲಕನಾಗಲಿ ಸಹಿ ಮಾಡತಕ್ಕದ್ದು.

ನಾನು ಸರ್ಟಿಫಿಕೇಟು ಕೊಡುವದೇನಂದರೆ,
ಇವನು ತಾ॥ ಮೂಹೆ ಸರ್ ೧೮೯೯ ಇಸವಿ ದಿವಸ ಹುಟ್ಟಿದನು. ಇವನ ವಯಸ್ಸು ಈವೊತ್ತಿನ ದಿವಸ ಒಳಗೊಂಡು ವರ್ಷ ತಿಂಗಳು ದಿವಸ ಇರುತ್ತ
ದಿ. ತಾ॥ ಮೂಹೆ ಸರ್ (ಸಹಿ.)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷವುಂ ।
ಬಯಸುತ್ತುಂ ಪ್ರತಿವಾಸವಾವಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ನವಂಬರ ೧೮೫೨. [ಸಂಚಿಕೆ ೧೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಬಡೋದೆಯ ಸಂಸ್ಥಾನದ ಮಹಾರಾಜರು ತಮ್ಮ ರಾಜ್ಯವಲ್ಲಿ ಪ್ರಜೆಗಳಿಗೆ ಹಿತಕರವಾವ ಅನೇಕ ತಿದ್ದುಪಾಟುಗಳನ್ನು ನಡಿಸಿರುವರೆಂದು ನಾವು ನಮ್ಮ ವಾಚಕರಿಗೆ ಕೆಲವು ಸಾರೆ ತಿಳಿಸಿರುತ್ತೇವೆ. ಆ ಮಹಾರಾಜರು, ತಮ್ಮ ರೈತರು ಊರ್ಜಿತ ಸ್ಥಿತಿಯನ್ನೈದಬೇಕಾವರೆ, ಅವರು ಸುಶಿಕ್ಷಿತರಾಗುವದು ಅವಶ್ಯವೆಂದು ಆಲೋಚಿಸಿ, ಸದ್ಯಕ್ಕೆ ನಡೆಯುತ್ತಿರುವ ಶಿಕ್ಷಣಕ್ರಮದಲ್ಲಿ ಏರ್ಪಾಡು ಮಾಡುವದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಆ ಕಮಿಟಿಯವರು ಒಂದು ಪ್ರಶ್ನ ಪತ್ರಿಕೆಯನ್ನು ಪ್ರಸಿದ್ಧಿಸಿ ಅದನ್ನು ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿರುವ ಪ್ರಮುಖ ಜನರಿಗೆ ಕಳುಹಿಸಿ ಅವರ ಅಭಿಪ್ರಾಯಗಳನ್ನು ಕೇಳಿದ್ದಾರೆ. ಆ ಅಭಿಪ್ರಾಯಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳನ್ನನುಸರಿಸಿ ತಮ್ಮ ರಾಜ್ಯದಲ್ಲಿ ಶಿಕ್ಷಣವನ್ನು ನಡಿಸಬೇಕೆಂದು ಶ್ರೀಮಂತರ ನಿಶ್ಚಯವಿರುತ್ತದೆ. ಆ ಪ್ರಶ್ನಗಳು ವಿಚಾರಣೀಯವಾಗಿರುವದರಿಂದ ಅವುಗಳನ್ನು ನಮ್ಮ ಭಾಗದೊಳಗಿನ ಶಾಲಾ ಗುರುಗಳ ಸಲುವಾಗಿ ಕೆಳಗೆ ಬರೆಯುತ್ತೇವೆ.

ಪ್ರಶ್ನೆಗಳು.

೧. ಜನಸಂಖ್ಯೆ ಎಷ್ಟಿದ್ದ ಊರಲ್ಲಿ ಸಾಲೆಯನ್ನು ಸ್ಥಾಪಿಸಬಹುದು?

೨. ಊರಲ್ಲಿರುವ ಒಟ್ಟು ಜನರಲ್ಲಿ ಸಾಲೆಗೆ ಹೋಗಲಿಕ್ಕೆ ತಕ್ಕ ವಯಸ್ಸಿನ ಹುಡುಗರ ಸಂಖ್ಯೆಯು ನೂರಕ್ಕೆ ಯಾವ ಪ್ರಮಾಣದಿಂದ ಇರುವದೆಂದು ಎಣಿಸಬಹುದು?

೩. ಶಾಲಾಗೃಹದ ಸಂಬಂಧವಾಗಿ ಯಾವ ತರದ ಸೋಯಿಗಳನ್ನು ಮಾಡತಕ್ಕದ್ದು?

೪. ಕನಿಷ್ಟ ಪಕ್ಷಕ್ಕೆ ಎಷ್ಟು ವಯಸ್ಸಿನ ಹುಡುಗರನ್ನು ಸಾಲೆಯಲ್ಲಿ ತೆಗೆದುಕೊಳ್ಳಬೇಕು?

೫. ಹುಡುಗರಿಗೆ ಮನೋರಂಜನವಾಗಿ ಶಿಕ್ಷಣವು ದೊರೆಯಬೇಕಾದರೆ ಯಾವ ಪ್ರಕಾರದ ವ್ಯವಸ್ಥೆಯನ್ನು ಮಾಡಬೇಕು?

೬. ಸಾಲೆಯ ಕೆಲಸವನ್ನು ಎಷ್ಟು ಹೊತ್ತು ನಡಿಸಬೇಕು?

೭. ಬಾಲೋದ್ಯಾನ ಪದ್ಧತಿಯಿಂದ ಶಿಕ್ಷಣ ಕೊಡುವದು ಯೋಗ್ಯವೋ? ಈ ಪದ್ಧತಿಗಿಂತ ಯಾವದಾದರೊಂದು ಪದ್ಧತಿಯು ಮೇಲಾದದ್ದೆಂದು ನಿಮ್ಮ ಅಭಿಪ್ರಾಯವಿದ್ದರೆ, ಅದು ಯಾವದು? ಅದನ್ನು ಹ್ಯಾಗೆ ಕೊಡಬೇಕು?

೮. ಸಾಲೆಯಲ್ಲಿ ಯಾವ ತರದ ಶಿಕ್ಷೆಯನ್ನು ಕೊಡತಕ್ಕದ್ದು? ಫಸಕ್ಕೀ ತೆಗೆಸುವ ಮತ್ತು ಬೊಗ್ಗಿಸಿ ನಿಲ್ಲಿಸುವ ಶಿಕ್ಷೆಗಳು ನಿಮ್ಮ ಮನಸಿಗೆ ಬರುವವೋ?

೯. ಒಬ್ಬ ಶಿಕ್ಷಕನು ಪರಮಾವಧಿ ಎಷ್ಟು ವಿದ್ಯಾರ್ಥಿಗಳಿಗೆ ಕಲಿಸಬಹುದು? ಈ ಪ್ರಶ್ನೆದ ಉತ್ತರವನ್ನು ಪ್ರತಿಬಂದು ಇಯತ್ತೆಯನ್ನು ಅನುಲಕ್ಷಿಸಿ ಕೊಡಬೇಕು.

೧೦. ಪ್ರಚಾರದಲ್ಲಿರುವ ಗುಜರಾಥಿ ವಾಚನ-ಮಾಲೆಯ (ಹೋಪ ಸೀರೀಜದ) ಪುಸ್ತಕಗಳು ಸರಿಯಾಗಿರುವವೋ? ಅವುಗಳಲ್ಲಿ ಯಾವ ಸುಧಾರಣೆಯನ್ನು ಮಾಡಬೇಕು?

೧೧. ಪ್ರಾಥಮಿಕ ಶಿಕ್ಷಣದ ಸಾಲೆಗಳಲ್ಲಿ ಯಾವ ಮಾದರಿಯ ವ್ಯವಸ್ಥೆಯು ಇರತಕ್ಕದ್ದು? ಅಲ್ಲಿ ಯಾವ ಯಾವ ವಿಷಯಗಳನ್ನು ಕಲಿಸಬೇಕು?

೧೨. ಪ್ರಾಥಮಿಕ ಶಿಕ್ಷಣದ ಸಾಲೆಗಳಲ್ಲಿ ಮೇಲಿನ ವರ್ಗಗಳಿಗೆ ಇಂಗ್ಲಿಷ ಕಲಿಸಬಹುದೋ? ಕಲಿಸಿದರೆ ಈ ವಿಷಯವಾಗಿ ಯಾವ ವ್ಯವಸ್ಥೆ ಮಾಡಬೇಕೆಂಬದನ್ನು ದಯಮಾಡಿ ತಿಳುಹಿಸುವದಾಗಬೇಕು.

೧೩. ಇಂಗ್ಲಿಷ ಭಾಷೆಯಲ್ಲಿ "ನರಸರೀಟೇಲ್ಸ" "ನರಸರೀರ್ಹಾಮಿವುಸ್ಸ" ಎಂಬ ಪುಸ್ತಕಗಳು ಇರುತ್ತವೆ. ಅವುಗಳ ಭಾಷಾಂತರನ್ನು ಮಾಡಿಸುವ ತಕ್ಕ ಉಪಾಯವು ಯಾವದು?

೧೪. ಪ್ರಾಥಮಿಕ ಸಾಲೆಗಳಲ್ಲಿ ಮೇಲಿನ ವರ್ಗಗಳಿಗೆ ಸಂಸ್ಕೃತ ಕಲಿಸಿದರೆ ಹಿತವಾಗಬಹುದೋ?

೧೫. ಹೆಣ್ಣು ಮಕ್ಕಳಿಂದ ಓದಿಸಲ್ಪಡುವ "ವಾಚನ ಪುಸ್ತಕಗಳು" ಎಂಥವು ಇರತಕ್ಕದ್ದು?

೧೬. ಹೆಣ್ಣು ಮಕ್ಕಳ ಸಾಲೆಗಳಲ್ಲಿ ಅವಶ್ಯವಾಗಿ ಕಲಿಸತಕ್ಕ ವಿಷಯಗಳು ಯಾವವು?

೧೭. ಅನುಭವಸಿದ್ಧವಾದ ಪಾಕಶಾಸ್ತ್ರವನ್ನು ಹೆಣ್ಣು ಮಕ್ಕಳ ಸಾಲೆಗಳಲ್ಲಿ ಕಲಿಸಬಹುದೋ? ಕಲಿಸಿದರೆ ಯಾವ ಇಯತ್ತೆಗೆ?

೧೮. ಹೆಣ್ಣು ಮಕ್ಕಳಿಗೆ ಆರೋಗ್ಯಶಾಸ್ತ್ರವನ್ನು ಕಲಿಸಬಹುದೋ?

೧೯. ಹೆಣ್ಣು ಮಕ್ಕಳಿಗೆ ಸಂಸ್ಕೃತ ಕಲಿಸಬಹುದೋ?

೨೦. ಪ್ರಚಾರದೊಳಗಿನ ಹಾಡುಗಳನ್ನು ಹೆಣ್ಣು ಮಕ್ಕಳಿಗೆ ಪದ್ಧತಿಗೆ ಸರಿಯಾಗಿ ಹ್ಯಾಗೆ ಕಲಿಸಬೇಕು?

೨೧. ಹೆಣ್ಣು ಮಕ್ಕಳಿಗೆ ಗೃಹವ್ಯವಸ್ಥೆಯ ಜ್ಞಾನವನ್ನು ಹ್ಯಾಗೆ ಮಾಡಿಕೊಡತಕ್ಕದ್ದು?

೨೨. ಹೆಣ್ಣು ಮಕ್ಕಳಿಗೆ ಶಾರೀರಿಕ ಶಿಕ್ಷಣವನ್ನು ಯಾವ ಪದ್ಧತಿಯಿಂದ ಕೊಡತಕ್ಕದ್ದು?

೨೩. ಯೋಗ್ಯರಾದ ಸ್ತ್ರೀಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ ಯಾವ ಉಪಾಯವನ್ನು ನೀವು ಸೂಚಿಸುವಿರಿ?

೨೪. ಪ್ರೌಢ ವಯಸ್ಸಿನ ಸ್ತ್ರೀಯರಿಗೆ ಕಲಿಸಬೇಕಾದರೆ, ಉಪಾಯ ಯಾವದು?

೨೫. ಸ್ತ್ರೀ ಶಿಕ್ಷಣವು ಲೋಕಪ್ರಿಯವಾಗಲಿಕ್ಕೆ ಯಾವ ಯಾವ ವ್ಯವಸ್ಥೆಗಳನ್ನು ಮಾಡಬೇಕು?

೨೬. ದೇಶೀ ಗ್ರಂಥಸಂಗ್ರಹವು ಬೆಳೆಯಬೇಕಾದರೆ, ಯಾವ ಉಪಾಯವನ್ನು ಕೈಕೊಳ್ಳತಕ್ಕದ್ದು?

೨೭. ದೇಶೀ ಭಾಷೆಯ ಪೂರ್ಣಜ್ಞಾನವಾಗಬೇಕಾದರೆ, ಯಾವ ಉಪಾಯ ಮಾಡಬೇಕು?

೨೮. ದೇಶೀ ಭಾಷೆಯ ಕಾಲೇಜವನ್ನು ಸ್ಥಾಪಿಸಿದರೆ ಹಿತವಾಗಬಹುದೋ? ಬಂದು ವೇಳೆ ಹಿತವಾಗುವದೆಂದು ನಿಮ್ಮ ಅಭಿಪ್ರಾಯವಿದ್ದರೆ, ಅದರ ಸಲುವಾಗಿ ಯಾವ ಯಾವ ವ್ಯವಸ್ಥೆಗಳನ್ನು ಮಾಡತಕ್ಕದ್ದು? ಮತ್ತು ಯಾವ ಯಾವ ವಿಷಯಗಳನ್ನು ಕಲಿಸತಕ್ಕದ್ದು?

೨೯. ಸರಕಾರಿಯ ನೌಕರಿಯನ್ನು ಬಯಸದೆ ಸ್ವತಂತ್ರ ಉದ್ಯೋಗಗಳನ್ನು ಕೈಕೊಂಡು ಹೊಟ್ಟೆ ತುಂಬಿಕೊಳ್ಳಬೇಕಾದರೆ ಯಾವ ಮಾದರಿಯ ವ್ಯವಹಾರಿಕ ಜ್ಞಾನವು ಅವಶ್ಯವು?

೫೬. ಶಾಲೆಯಲ್ಲಿ ನೀತಿಶಿಕ್ಷಣ ಕೊಡಬಹುದೋ ?

೫೧. ಧರ್ಮಶಿಕ್ಷಣವನ್ನು ಶಾಲೆಯಲ್ಲಿ ನಡಿಸಬಹುದೋ? ಬಂದು ಪೇಳೆ ನಡಿಸಿದರೆ ಅದರ ಬಗ್ಗೆ ಯಾವ ವ್ಯವಸ್ಥೆಯನ್ನು ಮಾಡಬೇಕು ?

೫೨. ಹೆಣ್ಣು ಮಕ್ಕಳಿಗೆ ವ್ಯಾಯಾಮದ ಸಂಬಂಧದಿಂದ ಯಾವ ಆಟಗಳನ್ನು ಅಡಿಸಬೇಕು ?

೫೩. ಕೆಲವು ಸಾಲೆಗಳಲ್ಲಿ ಚಿತ್ರ, ಕೃಷಿಕರ್ಮ ಮುಂತಾದ ವಿದ್ಯೆಗಳನ್ನು ಕಲಿಸಿದರೆ ಹಿತವಾಗುವದೋ ? ಬಂದು ಪೇಳೆ ಈ ವಿಷಯಗಳನ್ನು ಕಲಿಸಿದರೆ, ಈಗ ನಡೆಯುತ್ತಿರುವ ವಿಷಯಗಳಲ್ಲಿ ಯಾವ ಯಾವನ್ನು ತೆಗೆದು ಹಾಕ ತಕ್ಕದ್ದು ?

೫೪. ಈಗಿನ ಗಾವಠೀ ಶಾಲೆಗಳಲ್ಲಿ ನಡೆಯುವ ಶಿಕ್ಷಣವನ್ನು ಪ್ರಯೋಜನಕರವಾಗಿ ಮಾಡಿಕೊಳ್ಳುವ ಬಗೆ ಹ್ಯಾಗೆ ?

೫೫. ಹುಡುಗರ ಸಲುವಾಗಿ ಗಾಯನ ಶಾಲೆಗಳನ್ನು ಸ್ಥಾಪಿಸಬಹುದೋ ?

೫೬. ಶಿಕ್ಷಣದ ಪ್ರಸಾರವು ಬತ್ತರದಿಂದ ಸಾಗಬೇಕಾದರೆ ಏನು ಮಾಡಬೇಕು ? ಎಲ್ಲರೂ ವಿದ್ಯೆ ಕಲಿಯಲಿಕ್ಕೆ ಬೇಕೆಂಬ ನಿರ್ಬಂಧವನ್ನು ಈ ದೇಶದಲ್ಲಿ ಮಾಡಬಹುದೋ ?

೫೭. ವಿದ್ಯಾರ್ಥಿಗಳ ಪರೀಕ್ಷೆಯನ್ನು ಹ್ಯಾಗೆ ತೆಗೆದುಕೊಳ್ಳಬೇಕು ? ವಿದ್ಯಾರ್ಥಿಗಳನ್ನು ಯಾವ ಯಾವ ಇಯತ್ತೆಗಳಲ್ಲಿ ಮತ್ತು ಯಾವ ಯಾವ ವಿಷಯಗಳಲ್ಲಿ ಪ್ರತಪ್ರತ್ಯೇಕವಾಗಿ ಪರೀಕ್ಷಿಸಬೇಕು ? ಮತ್ತು ಯಾವ ಯಾವ ಇಯತ್ತೆಗಳಲ್ಲಿ ಮತ್ತು ಯಾವ ಯಾವ ವಿಷಯಗಳಲ್ಲಿ ಎಲ್ಲರನ್ನು ಬಮ್ಮೈಲೆ ಪರೀಕ್ಷಿಸಬೇಕು ?

೫೮. ಈಗಿನ ಉರ್ದು ಶಾಲೆಗಳಲ್ಲಿ ನಡೆಯುತ್ತಿರುವ ಅಭ್ಯಾಸಕ್ರಮದಲ್ಲಿ ಹೆಚ್ಚು ಕಡಿಮೆ ಮಾಡುವದು ಅವಶ್ಯವೋ?

ಇವುಗಳ ಹೊರತು ಮತ್ತೇನಾದರು ಸೂಚಿಸುವದು ಯೋಗ್ಯಕಂಡರೆ, ಅದನ್ನು ಸಹ ಸೂಚಿಸತಕ್ಕದ್ದು.

ಇಷ್ಟು ದಿವಸಗಳವರೆಗೆ ನಮ್ಮ ವಿದ್ಯಾಪೀಠದ ಸಭಿಕರನ್ನು ಸರಕಾರದವರೇ ನೇಮಿಸುತ್ತಿದ್ದರು. ಆದರೆ ಇನ್ನು ಮುಂದೆ ಆ ಸಭಿಕರಲ್ಲಿ ಇಬ್ಬರನ್ನು ನೇಮಿಸುವ ಹಕ್ಕು ಕೆಲವು ಹೆಚ್ಚಿಚ್ಚಿನ ಪರೀಕ್ಷೆಗಳನ್ನು ಕೊಟ್ಟಂಥ ಗ್ರಾಜುಯೇಟ ಜನರಿಗೆ ಸರಕಾರದವರು ಹೊಸದಾಗಿ ಕೊಟ್ಟಿರುತ್ತಾರೆ. ಈ ಹೊಸ ನಿಯಮಕ್ಕೆ ಸರಿಯಾಗಿ ನಡೆಯುವ ತಿಂಗಳಿನಲ್ಲಿ ಇಬ್ಬರು ಸಭಿಕರ ನೇಮಣೂಕವಾಗತಕ್ಕದ್ದುಂಟು.

ಡಬ್ಲಿಯು. ಬಿ. ರಿಚರ್ಡಸನ್ನನೆಂಬ ವೈದ್ಯನು ಮೊನ್ನೆ ಮೊನ್ನೆ ಕನಸುಗಳ ಸಂಬಂಧವಾಗಿ ತಾನು ಬರೆದ ನಿಬಂಧವನ್ನು ಇಂಗ್ಲಂಡದಲ್ಲಿ ಬಂದು ಸಭೆಯ ಮುಂದೆ ಓದಿದನು. ಆದರ ಅಭಿಪ್ರಾಯವೇನೆಂದರೆ:—ಜನರು ಕನಸುಗಳನ್ನು ಮೂಢಶ್ರದ್ಧೆಯಿಂದ ನಂಬುತ್ತಿರುವರು. ಆದರೆ ಅವುಗಳಲ್ಲಿ ತಿಳಿಯಲಿಕ್ಕೆ ಅಸಾಧ್ಯವಾದ ಯಾವ ತರದ ಗೂಢಾರ್ಥವಾದರೂ ಇರುವದಿಲ್ಲ. ನಿದ್ರೆ ಹೋದಾಗ್ಗೆ ಕನಸುಗಳು ಬೀಳದೆ ಇದ್ದರೆ ಶರೀರವು ಸ್ವಾಭಾವಿಕ ಸ್ಥಿತಿಯಲ್ಲಿದ್ದು ಆರೋಗ್ಯವುಳ್ಳದ್ದಾಗಿರುತ್ತದೆಂತಲೂ, ಇಂದ್ರಿಯಗಳ ಕೆಲಸಗಳು ಸರಿಯಾಗಿ ನಡೆಯುತ್ತಿರುವದೆಂತಲೂ ತಿಳುಕೊಳ್ಳಬಹುದು. ಮನುಷ್ಯನ ಪ್ರಕೃತಿಯು ಕೆಟ್ಟಿದ್ದರೆ ಅಥವಾ ಮಾನಸಿಕಶ್ರಮವು ಹೆಚ್ಚಾದರೆ ಮಾತ್ರ ಇದಕ್ಕೆ ವಿಪರೀತವಾಗಿ ಕನಸುಗಳು ಬೀಳುತ್ತವೆ.

ಚಿಕ್ಕವರಿಗೆ ಕನಸುಗಳು ಬಿದ್ದರೆ, ಅವು ಅವರ ಆರೋಗ್ಯದಲ್ಲಿ ನೂನತ್ವವಿರುವದೆಂತಲೂ, ಅವರ ಪ್ರಕೃತಿಯು

ಕೆಟ್ಟಿರುತ್ತದೆಂತಲೂ, ಅವರಿಗೆ ಔಷಧೋಪಚಾರ ಮಾಡು
ವದು ಅವಶ್ಯವೆಂತಲೂ ಸೂಚಿಸುತ್ತವೆ. ಶರೀರದ ಅಸ್ವಾ
ಸ್ಥ್ಯದಿಂದ ಬೀಳುವ ಕನಸುಗಳು ಬಂದು ಪ್ರಕಾರದವು;
ಮತ್ತು ವಿಕಾರದಿಂದಾಗಲಿ ದುಷ್ಟ ಪದಾರ್ಥಗಳ ಸೇವನೆದಿಂ
ದಾಗಲಿ ಬೀಳುವ ಕನಸುಗಳು ಮತ್ತೊಂದು ಪ್ರಕಾರದವು;
ಹೀಗೆ ಎರಡು ಪ್ರಕಾರದ ಕನಸುಗಳುಂಟು. ಕನಸುಗಳು
ಬೀಳಹತ್ತಿದರೆ ಇವೆರಡರಲ್ಲಿ ಒಂದು ಕಾರಣವು ಇರಲೇಬೇ
ಕೆಂಬ ಮಾತನ್ನು ಲಕ್ಷದಲ್ಲಿಟ್ಟು ಆ ಕಾರಣವೆನ್ನು ಆದಷ್ಟು
ಬೇಗ ಎಚ್ಚರದಿಂದ ದೂರ ಮಾಡಬೇಕು.

ಹಗಲು ನೋಡಿದ ಕೆಲಸಗಳ ಸಂಬಂಧವಾಗಿ ಕನಸುಗ
ಳು ಬೀಳಹತ್ತಿದರೆ ಮಾನಸಿಕ ಶ್ರಮವು ಮಿತಿಮೀರಿ ಆಗಿ
ರುತ್ತದೆಂದು ತಿಳಿಯತಕ್ಕದ್ದು, ಮತ್ತು ತಾವು ಮಾಡಿದ
ಮಾನಸಿಕ ಶ್ರಮವನ್ನು ಉದ್ದೇಶಿಸಿ, ಸ್ವಪ್ನಗಳು ಬಿದ್ದು
ಕನಸಿನಲ್ಲಿ ಸಹ ಮಾನಸಿಕ ಶ್ರಮವು ಸಾಗುವಂತೆ ತೋರಿ
ದರೆ, ಕೂಡಲೆ ಅದರ ಬಗ್ಗೆ ಉಪಾಯ ಮಾಡಬೇಕು. ಇ
ಲ್ಲದಿದ್ದರೆ ಅದೇ ರೂಢಿ ಬಿದ್ದು ಮುಂದೆ ಮನುಷ್ಯನಿಗೆ ಭ
ಯಂಕರವಾದ ಅಪಾಯವಾಗುವ ಸಂಭವ ಉಂಟು. ಮಾನ
ಸಿಕ ಶ್ರಮಾತಿರೇಕದಿಂದ ಕನಸುಗಳು ಬೀಳುವದು ಹೆಚ್ಚು.
ಆದರೆ ಇದಕ್ಕೆ ವ್ಯಾಯಾಮ ವಿಶ್ರಾಂತಿಗಳೇ ತಕ್ಕ ಮದ್ದು.

ಸವ್ಯಕ್ಕೆ ಮುಂಬಯಿ ವಿದ್ಯಾಪೀಠದ ಉತ್ಪನ್ನದಿಂದ ಅದ
ರ ಖರ್ಚುವೆಚ್ಚವು ಸರಿಯಾಗಿ ಸಾಗುವದಿಲ್ಲ. ಅದರಲ್ಲಿ
ಸರಕಾರದವರು ಪ್ರತಿವರ್ಷ ಕೊಡುತ್ತ ಬಂದಂಥ ೧೫೦೦
ರೂಪಾಯಿಗಳ ಸಹಾಯದ ರಕಮನ್ನು ಹೆಚ್ಚಿಸುವದಕ್ಕೆ ಬದ
ಲಾಗಿ ಕಡಿಮೆ ಮಾಡುವವರಿದ್ದಾರೆ. ಆದದ್ದರಿಂದ ವಿದ್ಯಾ

ಫೀಠದವರು ಕೆಳಗೆ ಬರೆದ ಪರೀಕ್ಷೆಗಳ ಫೀಯನ್ನು ಹೆಚ್ಚಿಸುವ ವಿಚಾರ ನಡಿಸಿರುವರು. ಅದು ಹ್ಯಾಗಂದರೆ:—

ಪರೀಕ್ಷೆಗಳು.	ಈಗಿನ ಫೀ.	ಹೊಸ ಫೀ.
ಮ್ಯಾಟ್ರಿಕ್ಯುಲೇಶನ್	೧೦	೧೫
ಸ್ಕೂಲಫೈಯನಲ್	೧೦	೧೫
ಸೆಕಂಡ ಬಿ. ಏ.	೧೦	೨೦
ಎಲ್. ಎಲ್. ಬಿ.	೩೦	೪೦
ಎಲ್, ಎಮ್ಮು, ಎಂಡ್, ಎಸಿ	೧೦	೧೫
ಸೆಕಂಡ ಬಿ. ಎಸಿ. ಸಿ	೧೦	೨೦

ಇದಲ್ಲದೆ ಪ್ರತಿಯೊಬ್ಬ ಸಭಿಕನು (ಫೆಲೋ) ವರ್ಷಕ್ಕೆ ೧೦ ರೂ. ವರ್ಗಣಿಯನ್ನು ಇಲ್ಲವೆ ಒಮ್ಮೀಲೆ ೧೦೦ ರೂ. ಡೊನೇಶನವನ್ನು ಕೊಡಲಿಕ್ಕೆ ಬೇಕೆಂಬ ನಿರ್ಬಂಧವನ್ನು ಮಾಡುವವರಿದ್ದಾರೆ.

ಸೆನೇಟವಲ್ಲಿ ಈ ಮಾತಿನ ವಿಚಾರವಾಗಿ ಫೀ ಹೆಚ್ಚಿಸುವದಕ್ಕೆ ಬದಲಾಗಿ ಇನ್ನೊಮ್ಮೆ ಸರಕಾರದವರಿಗೆ ವಿಜ್ಞಾಪನೆ ಮಾಡಿಕೊಳ್ಳಬೇಕೆಂದು ಗೊತ್ತಾಗಿದೆ; ಆದರೆ ಪುಣೆಯೊಳಗಿನ ವಿಕ್ಟೋರಿಯಾ ಹೈಸ್ಕೂಲೆಂಬ ಬಾಲಿಕಾಶಾಲೆಯ ಹೊಸ ಗೃಹದ ಪ್ರವೇಶ ಸಮಾರಂಭದ ಕಾಲಕ್ಕೆ ನಮ್ಮ ಗವರ್ನರರಾದ ಲಾರ್ಡ ಹ್ಯಾರಿಸ ದೊರೆಗಳು ಮಾಡಿದ ಸಂಭಾಷಣೆಯಿಂದ ಸೆನೇಟದವರ ವಿಜ್ಞಾಪನೆಯು ಸಫಲವಾಗುವದು ಸಂಶಯವೇ ತೋರುತ್ತದೆ. ಆ ಭಾಷಣದಲ್ಲಿ ವಿದ್ಯಾಪ್ರಸಾರಾಸ್ಥೆಯ ಆಕ್ಷೇಪವನ್ನು ದೂರ ಮಾಡಿದ್ದಲ್ಲದೆ ಸರಕಾರಕ್ಕೆ ಇರುವ ಹಣದ ಕೊರತೆಯನ್ನೂ ಅವರು ಮಾಡಬೇಕಾಗಿದ್ದ ಅನೇಕ ಅವಶ್ಯವಾದ ಕೆಲಸಗಳನ್ನೂ ನಮ್ಮ ಗವರ್ನರ ದೊರೆಗಳು ವಿವರವಾಗಿ ತೋರಿಸಿ ಕೊಟ್ಟರು.

ಎಲ್ಫಿನ್‌ಸ್ಟನ್ ಕಾಲೇಜಿನ ಪ್ರಿನ್ಸಿಪಾಲರಿಗೆ ಪೆನ್‌ಶನ್ ಕೊಡಿನ ನಿಯಮಗಳಿಗನುಸರಿಸಿ ವರ್ಷಕ್ಕೆ ೫೦೦೦ ರೂಪಾಯಿ ಪೆನ್‌ಷನ್ ದೊರೆಯತಕ್ಕದ್ದು. ಆದರೆ ಪ್ರೊಫೆಸರ ವರ್ಡ್ಸ್‌ವರ್ಥ್ ಥೊರೆಗಳು ತಮ್ಮ ಕೆಲಸವನ್ನು ಬಹಳ ಚನ್ನಾಗಿ ಮಾಡಿದ್ದರಿಂದ ಅವರಿಗೆ ವರ್ಷಕ್ಕೆ ೬೦೦೦ ರೂಪಾಯಿ ಪೆನ್‌ಷನ್ ಕೊಡಬೇಕೆಂದು ಸ್ಟೇಟ್ ಸೆಕ್ರೇಟರಿಯವರು ವಿಧಿಸಿರುತ್ತಾರೆಂದು ತಿಳಿದು ಬರುತ್ತದೆ.

ನಮ್ಮ ವೈಸರಾಯಿಗಳಾದ ಲಾರ್ಡ್ ಲ್ಯಾನ್ಸ್‌ಡೌನ್ ಪ್ರಭುಗಳು ಇದೇ ತಿಂಗಳಿನ ೩೧ನೇ ತಾರೀಖಿಗೆ ನಿಜಾಮ ಹೈದರಾಬಾದಿಗೆ ಬಂದು ೧೦ನೇ ತಾರೀಖಿಗೆ ಮೈಸೂರಿಗೆ ಹೋಗತಕ್ಕವರಿದ್ದಾರೆಂದು ತಿಳಿಯುತ್ತದೆ.

ವಕೀಲಿಯ ಪರೀಕ್ಷೆಯು ಮುಂದಿನ ಫೆಬ್ರುವರಿಯ ೭ನೇ ತಾರೀಖಿನ ದಿವಸ ಪ್ರಾರಂಭವಾಗುವದು. ಉಪೇಂದವಾರರು ತಮ್ಮ ಹೆಸರುಗಳನ್ನು ಫೆಬ್ರುವರಿಯ ೧೦ನೇ ತಾರೀಖಿನ ವಳಗಾಗಿ ಪರೀಕ್ಷೆಯ ಕಮಿಟಿಗೆ ಬರೆದು ತಿಳಿಸಬೇಕೆಂದು ಗೊತ್ತಾಗಿದೆ.

Dr. KIRTIKAR ON "SENSES."

"ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಡಾಕ್ಟರ ಕೀರ್ತಿಕರರ ವ್ಯಾಖ್ಯಾನವು."

(ಒಂದನೇ ಪುಟದಿಂದ ಮುಂದೆ ಸಾಗಿದ್ದು.)

ಇನ್ನು ಮುಂದೆ ನೇತ್ರ ರಚನೆಯ ವಿಷಯವಾಗಿ ವಿಚಾರ ಮಾಡುವಾ. ಅದರ ಅಂತರ್ಭಾಗದಲ್ಲಿ ಪ್ರಕಾಶ ಕಿರಣಗಳು ಸೇರಲಿಕ್ಕೆ ಸಹಾಯಭೂತವಾದ ಪಾರದರ್ಶಕ ಪದಾರ್ಥಗಳನ್ನೆಲ್ಲ ಸದ್ಯಕ್ಕೆ ಬಿಟ್ಟು ಅದರೊಳಗಿನ "ದೃಗ್ಜಾಲ" ವೆಂಬ ಮುಖ್ಯ ಪಟಲದ ವಿಷಯವಾಗಿ ತುಸು ಹೇಳುತ್ತೇವೆ.

ಈ ಪಟಲವು ತೋರಿಕೆಯಲ್ಲಿ ಕಾಗದಕ್ಕಿಂತ ತೆಳುವಾದದ್ದು ಕಂಡರೂ ಅದರಲ್ಲಿ ಅತಿ ಸೂಕ್ಷ್ಮವಾದ ಬಂಬತ್ತು ಪದರು ಗಳಿರುತ್ತವೆ. ಅವುಗಳಲ್ಲಿ ಎಲ್ಲಕ್ಕೂ ಹೊರಗಿನ ಪದರು "ಶಲಾಕಾಕಾರ" ಮತ್ತು "ಶಂಕ್ವಾಕಾರ" ಪಿಂಡಗಳಿಂದ ಆಗಿರುತ್ತದೆ. ಶಲಾಕಾಕಾರ ಪಿಂಡಗಳು ೩ ಕೋಟಿ, ಶಂಕ್ವಾ ಕಾರ ಪಿಂಡಗಳು ೩೦ ಲಕ್ಷ ಇರುತ್ತವೆ. ಕಿರಣಗಳು ಮೊ ದಲು ಈ ಪಿಂಡಗಳ ಮೇಲೆ ಬೀಳುತ್ತವೆ. ಎಲ್ಲ ಇಂದ್ರಿಯ ಗಳಲ್ಲಿ ಅತಿ ಸೋಜಿಗವಾದ ಮಸ್ತುಲುಂಗದ ಘಟಕ ಪಿಂಡಗ ಳಲ್ಲಿ ಬಿಳಿ ಬಣ್ಣದವು, ಪಿಂಗಟ ಬಣ್ಣದವು ಎಂಬ ಎರಡು ಪ್ರಕಾರಗಳಿರುತ್ತವೆಂತಲೂ, ಪಿಂಗಟ ಬಣ್ಣದವು ೬೦ ಕೋಟಿ ಇರುತ್ತವೆಂತಲೂ, ಅವುಗಳೊಳಗಿನ ಪ್ರತಿಯೊಂದು ಪಿಂಡ ದಲ್ಲಿ ಚನ್ನಾಗಿ ಕಣ್ಣಿಗೆ ಕಾಣುವಂಥ ಸಹಸ್ರಾವಧಿ ಸೂಕ್ಷ್ಮ ಪಿಂಡಗಳಿರುತ್ತವೆಂತಲೂ, ಈ ಪ್ರತಿ ಬಂದು ಸೂಕ್ಷ್ಮ ಪಿಂ ಡವು ಲಕ್ಷಾವಧಿ ಅಣು ರೇಣುಗಳಿಂದ ಆಗಿರುತ್ತದೆಂತಲೂ ಮೌನರ್ಟನೆಂಬ ವಿದ್ವಾಂಸನು ಗೊತ್ತು ಹಚ್ಚಿದ್ದಾನೆ.

ಈ ಎಲ್ಲ ಅವಯವಗಳ ಸಹಾಯದಿಂದ ಶರೀರದ ಇಡೀ ಕೆಲಸವು ನಿಯಮಿತ ರೀತಿಯಿಂದ ಸಾಗುತ್ತದೆ. ಹುಟ್ಟಿದಾ ರಭ್ಯ ಯೌವನ ಕಾಲವು ಪೂರ್ಣವಾಗುವತನಕ ಈ ಶರೀ ರವು ದಿನ ದಿನೇ ಬೆಳೆಯುತ್ತ ಹೋಗಿ ಮುಪ್ಪಿನ ಕಾಲಕ್ಕೆ ಶಕ್ತಿಗುಂದಿ ಕ್ಷೀಣವಾಗುತ್ತದೆ. ಅಂತ್ಯದಲ್ಲಿ ಈ ಕ್ಷೀಣತೆ ಯಿಂದ ಪೋಷಣಾದಿ ಕ್ರಿಯೆಗಳು ಸರಿಯಾಗಿ ನಡೆಯದೆ ಶರೀರವು ವಿಕಲವಾಗುತ್ತದೆ. ಮುಪ್ಪಿನಲ್ಲಿ ಅದು ಗಲಿತಗಾ ತ್ರವಾಗಿ ವಿಕಾರವಿರಹಿತವಾದ ಮರಣವನ್ನೈದಿದರೆ, ಅದಕ್ಕೆ ಒಳ್ಳೆ ಮರಣವು ಬದಗಿತು, ಅಂದರೆ ಶರೀರದ ಅಂತ್ಯವು ತಕ್ಕ ರೀತಿಯಿಂದ ಆಯಿತು ಎಂದು ಶಾರೀರ ಶಾಸ್ತ್ರವೆತ್ತರು

ಅನ್ನುತ್ತಾರೆ. ಆದದ್ದರಿಂದ ಈ ವಿಕಾರವಿರಹಿತಸ್ಥಿತಿಯು ದೇಹಕ್ಕೆ ಉಂಟಾಗಬೇಕೆಂಬ ಉದ್ದೇಶದಿಂದ ನಾವು ಅದರ ಪೋಷಣವನ್ನೂ ಸಂಗೋಪನವನ್ನೂ, ಕನಿಷ್ಠ ಪಕ್ಷಕ್ಕೆ ಯೌವನ ಕಾಲದವರೆಗಾದರೂ ಬಳ್ಳಿ ಎಚ್ಚರಿಕೆಯಿಂದ ಮಾಡಲಿಕ್ಕೆ ಬೇಕು. ಇವುಗಳನ್ನು ಹ್ಯಾಗೆ ಮಾಡಬೇಕೆಂಬ ಮಾತನ್ನು ಇನ್ನು ಮುಂದೆ ವಿವರಿಸುತ್ತೇವೆ.

"ಹನಿ ಹನಿ ಕೂಡಿ ಹಳ್ಳವಾಗುತ್ತದೆ" ಎಂಬ ಗಾದೆಯು ಮಾತು ಪ್ರಸಿದ್ಧವದೆ. ಪ್ರೌಢ ಮನುಷ್ಯನ ದೇಹವು ಬಾಲ ದೇಹದಿಂದಲೇ ಆಗುವದು. ಬಾಲ್ಯಾವಸ್ಥೆಯನ್ನು ಕ್ರಮಿಸುವ ಸಾಮರ್ಥ್ಯವುಳ್ಳಂಥ ದೇಹವೇ ಪ್ರೌಢಾವಸ್ಥೆಯನ್ನು ಹೊಂದುವದು. ಆದದ್ದರಿಂದ ಬಾಲಸಂಗೋಪನದ ವಿಷಯವು ಬಹು ಗೌರವವುಳ್ಳದ್ದೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ವಿಷಯಕ್ಕೆ ಜೋಡಾದ ವಿಷಯವು ೧೪ ವಿದ್ಯೆಗಳಲ್ಲಿಯೂ ೬೪ ಕಲೆಗಳಲ್ಲಿಯೂ ಮತ್ತೊಂದು ಇಲ್ಲವೆಂದು ನಿರ್ಧಾರದಿಂದ ಸಾರುತ್ತೇವೆ. ಈ ದೇಹದ ಪುಷ್ಟಿಪೋಷಣೆಯನ್ನು ಯಾವ ಜ್ಞಾನದ ಸಹಾಯದಿಂದ ಮಾಡತಕ್ಕದ್ದೋ ಯಾವ ವಿಷಯದ ಜ್ಞಾನದಿಂದ ಅದರ ಆರೋಗ್ಯದ ನೆಲಗಟ್ಟು ಸ್ಥಿರವಾಗತಕ್ಕದ್ದೋ ಆ ವಿಷಯವನ್ನು ಪ್ರತಿಪಾದಿಸುವಂಥ ಶಾಸ್ತ್ರವು ಮಿಕ್ಕ ಎಲ್ಲ ಶಾಸ್ತ್ರಗಳಿಗಿಂತ ಹೆಚ್ಚಿನದಾಗಿರುವದು. ಯಾಕಂದರೆ ಶರೀರಸಾಮರ್ಥ್ಯವಿಲ್ಲದ್ದರಿಂದಾಗಲಿ, ಶರೀರದಲ್ಲಿ ಆರೋಗ್ಯವಿಲ್ಲದ್ದರಿಂದಾಗಲಿ, ಬಾಲ್ಯಾವಸ್ಥೆಯಲ್ಲಿ ಶರೀರಪೋಷಣಕ್ಕೆ ಅವಶ್ಯವಿದ್ದಷ್ಟು ಲಕ್ಷ ಕೊಡದೆ ಇದ್ದದರಿಂದಾಗಲಿ ಕೆಟ್ಟಂಥ ಶರೀರಕ್ಕೆ ೧೪ ವಿದ್ಯೆಗಳಿಂದ ಪ್ರಯೋಜನವೇನು? ೬೪ ಕಲೆಗಳಿಂದ ಆದಾಯವೇನು? ಧನ ದ್ರವ್ಯಗಳಿಂದ ಲಾಭವೇನು? ವಸ್ತ್ರಾಲಂಕಾರಗಳಿಂದ ಸುಖವೇನು? ಅವನಿಗೆ ಏನಿದ್ದರೂ ಫಲವಿಲ್ಲ. ಈ ಹೊತ್ತು

ಬದುಕಿದ್ದೇ ದೊಡ್ಡದು! ನಾಳೆನ ಹಾಡೇನೋ ದೇವರೇ ಬಲ್ಲ! ಎಂಥಾ ಘೋರ ಪ್ರಸಂಗ ಬರುವದೋ ಎಂಬ ಭೀತಿಯಿಂದ ಅವನು ಹಗಲಿರುಳು ಖಿನ್ನನಾಗಿರುತ್ತಾನೆ. ಆದರೆ ಇಂಥ ಭೀತಿಯನ್ನು ದೂರ ಮಾಡಬೇಕಾದರೆ ಬಾಲಸಂಗೋಪನವ ಹೊರತು ಮತ್ತೊಂದಿಲ್ಲ. ಆದದ್ದರಿಂದ ಈ ಬಾಲಸಂಗೋಪನವೆಂಬ ವಿಷಯವು ಎಲ್ಲ ಜಾತಿಯವರಿಗೂ, ಎಲ್ಲ ಪುರುಷರಿಗೂ, ಎಲ್ಲ ಸ್ತ್ರೀಯರಿಗೂ, ಎಲ್ಲ ತಾಯಿತಂದೆಗಳಿಗೂ, ಎಲ್ಲ ಶಿಕ್ಷಕರಿಗೂ, ಎಲ್ಲ ಧರ್ಮಾಚಾರಿಗಳಿಗೂ, ಎಲ್ಲ ರಾಜ್ಯಕಾರ್ಯಧುರಂಧರರಿಗೂ, ಎಲ್ಲ ಸಾಮಾಜಿಕಹಿತಚಿಂತಕರಿಗೂ ಬಹಳ ಪ್ರಯೋಜನಕರವಾದದ್ದಿದೆ. ತಾಯಿತಂದೆಗಳಿಗೆ ಈ ವಿಷಯವು ಹೆಚ್ಚು ಗೌರವವುಳ್ಳದ್ದಿದೆ. ಅದರಲ್ಲಿ ಮಾತೃಹೃದ್ಯಕ್ಕಂತು ಈ ವಿಷಯದ ಜ್ಞಾನವಿರುವದು ಅತ್ಯವಶ್ಯವು. ಯಾಕಂದರೆ ಅವರು ತಮ್ಮ ಶರೀರಕ್ಕೆ ಎಷ್ಟು ಕ್ಲೇಶವಾದರೂ ಅದನ್ನು ಸಹಿಸಿಕೊಂಡು ಎಷ್ಟು ಶ್ರಮವಾದರೂ ಅದನ್ನು ತಾಳಿಕೊಂಡು ಆ ಕೋಮಲ ಅರ್ಭಕರನ್ನು ತಮ್ಮಿಂದಾದಷ್ಟು ಉಪಾಯಗಳಿಂದ ಸಂರಕ್ಷಣೆ ಮಾಡಿ ಅವರ ಬೆಳುವಣಿಗೆ ಉತ್ತೇಜನ ಕೊಡುವದೂ, ಅವರಿಗೆ ಎಳ್ಳುಕಾಳಷ್ಟು ಸಹ ಕ್ಲೇಶವಾಗಗೊಡದಿರುವದೂ, ತುಸು ದುಃಖವಾದರೆ ರಾತ್ರೀ ಹಗಲು ಮಾಡಿ ಅವರನ್ನು ವ್ಯಾಧಿಗಳಿಂದ ಮುಕ್ತಮಾಡುವದೂ ಇವೇ ಮೊದಲಾದ ಕಾರ್ಯಗಳನ್ನು ಅವರು ಹಗಲಿರುಳು ಯೋಚಿಸುತ್ತಿರುತ್ತಾರೆ. ಈ ಕೆಲಸಗಳನ್ನು ಮಾಡುವದರಿಂದ ಆಗುವ ಸುಖಕ್ಕಿಂತ ಹೆಚ್ಚಿನ ಸುಖವು ಅವರಿಗೆ ಮತ್ತೊಂದಿಲ್ಲ ಎಂಬ ಮಾತನ್ನು ಎಲ್ಲರೂ ಬಲ್ಲರು. ಮನುಷ್ಯನ ಉತ್ಪತ್ತಿಯ ಕಾಲದಿಂದ ಕಿಂಬಹುನಾ ಸೃಷ್ಟಿಯ ಉದ್ಭವದ ಕಾಲದಿಂದ ಈ ಹೊತ್ತಿನವರೆಗೆ ಮಾತೃಪ್ರೇಮದ ಅನುಭವವಿಲ್ಲವಂಥ

ಹತಭಾಗ್ಯನಾದ ಪ್ರಾಣಿಯು ಈ ಜಗತ್ತಿನಲ್ಲಿ ಬಬ್ಬನಾದರೂ ಸಿಗಬಹುದೋ? ಮಾತೃಪ್ರೇಮವು ಇಷ್ಟು ಪ್ರಬಲವಾಗಿರುವದರಿಂದ, ಮತ್ತು ಶಿಸುಪಾಲನದ ಸಲುವಾಗಿ ತಾಯಿಯ ನೈಸರ್ಗಿಕ ಪ್ರವೃತ್ತಿಗಳು ಯಾವಾಗಲು ಇಷ್ಟು ಜಾಗ್ರತೆಯುಳ್ಳವುಗಳಾಗಿರುವದರಿಂದ, ಮಕ್ಕಳ ಸಂಗೋಪನದ ಕೆಲಸವಲ್ಲಿ ತಾಯಿತಂದೆಗಳಿಂದ ತಪ್ಪುಗಳಾಗುವ ಸಂಭವವಿಲ್ಲೆಂತಲೂ, ಅವರ ಕೃತ್ಯಗೆಳೆಲ್ಲ ಶಾರೀರಿಕ ವಿಷಯಗಳಿಗನುಸಾರವಾಗಿಯೇ ನಡೆಯುತ್ತವೆಂತಲೂ, ಬಾಲಕರ ಶರೀರ–ಸಂಗೋಪನ ಮತ್ತು ಬಾಲ್ಯಾವಸ್ಥೆಯಲ್ಲಿ ಅವರ ಮಾನಸಿಕ ಶಿಕ್ಷಣ ಇವು ಯೋಗ್ಯ ರೀತಿಯಿಂದ ಸಾಗುತ್ತವೆಂತಲೂ ಯಾರಾವರು ಹೇಳಬಹುದೋ? ಒಂದು ವೇಳೆ ಹೇಳಿದರೆ ಅದು ಸರಿಯಾದದ್ದಲ್ಲ. ಶಾರೀರಶಾಸ್ತ್ರದ ನಿಯಮಗಳು ತಾಯಿ ತಂದೆಗಳಿಗೆ ಗೊತ್ತಿಲ್ಲದ್ದರಿಂದ ಅವರಿಂದ ಅನೇಕ ತಪ್ಪುಗಳು ಆಗಾಗ್ಗೆ ಆಗುತ್ತಿರುತ್ತವೆ. ಅಂಥ ತಪ್ಪುಗಳು ಆಗಬಾರದೆಂದು ಇಲ್ಲಿ ಕೆಲವು ಮಾತುಗಳನ್ನು ಹೇಳುತ್ತೇವೆ. ಈ ತಪ್ಪುಗಳಾಗುವದಕ್ಕೆ ಅವರ ಅಜ್ಞಾನವೇ ಮುಖ್ಯ ಕಾರಣವೆಂಬ ಮಾತನ್ನು ಮರೆಯಲಾಗದು; ಅವಕ್ಕೆ ಅವರ ಕ್ರೂರತನ, ದುಷ್ಟತನ, ಅಜಾಗ್ರತೆಗಳು ಕಾರಣವಾಗಿರುತ್ತವೆಂದು ನಾವು ಹೇಳುವದಿಲ್ಲ.

ಅದೇ ಹುಟ್ಟಿದ ಕೂಸು ಎಷ್ಟು ಭಾರವುಳ್ಳದ್ದಿರಬೇಕು, ತಲೆಯಿಂದ ಪಾದಗಳವರೆಗೆ ಎಷ್ಟು ಉದ್ದ ಇರತಕ್ಕದ್ದು, ಶರೀರವು ಯಾವ ಪ್ರಮಾಣದಿಂದ ಬೆಳೆಯುತ್ತ ಹೋಗಬೇಕು, ಬೆಳಿಗೆ ಕಡಿಮೆಯಾದರೆ ಅದು ಪ್ರತಿ ತಿಂಗಳಿಗೆ ಅಥವಾ ಪ್ರತಿವರ್ಷಕ್ಕೆ ಯಾವ ಪ್ರಮಾಣದಿಂದ ಕಡಿಮೆಯಾಗುತ್ತ ಹೋಗಬೇಕು, ಎಂಬೀ ಪ್ರಶ್ನೆಗಳನ್ನು ತಾಯಿ ತಂದೆಗಳಿಗೆ ಕೇಳಿದರೆ, ಅವರಲ್ಲಿಎಷ್ಟು ಜನರು ಸರಿಯಾಗಿ ಉತ್ತರ ಕೊಡಬಹು

ದು? ಬೆಳಿಗೆಯು ಕಡಿಮೆಯಾಗುವ ಹಾಗು ಸರಿಯಾಗಿ ಸೊಗ
ವ ನಿಯಮಗಳ ತಿಳುವಳಿಕೆಯು ಇಲ್ಲದಿದ್ದರೆ ಅವರು ಈ ಪ್ರ
ಶ್ನಗಳ ಉತ್ತರವನ್ನು ಕೊಡಲಾರರೆಂಬದು ಸ್ಪಷ್ಟವದೆ. ಬಂ
ದುವೇಳೆ ಈ ನಿಯಮಗಳು ಅವರಿಗೆ ಗೊತ್ತಿದ್ದರೆ ಕೂಸಿನ
ಬೆಳಿಗೆಯು ಇಂತಿಷ್ಟು ಕಾಲದವರೆಗೆ ಯೋಗ್ಯ ರೀತಿಯಿಂದ
ಸಾಗಿ ಮುಂದೆ ಕುಂದುತ್ತಾ ಬಂತೆಂದು ಅವರು ಸಹಜವಾಗಿ
ಯೇ ತಿಳುಕೊಂಡು ಯೋಗ್ಯ ಉಪಾಯಗಳನ್ನು ಹುಡುಕ
ಹತ್ತುವರು. ಈ ಜ್ಞಾನವು ಇಲ್ಲದ್ದರಿಂದ ಹುಡುಗರ ಶರೀರ
ದಲ್ಲಿ ವಿಕಾರಗಳು ಹುಟ್ಟಿ ಬಲಿತಮೇಲೆ, ಅವರು ಆ ಮಕ್ಕ
ಳನ್ನು ವೈದ್ಯರ ಬಳಿಗೆ ಬಯ್ಯುತ್ತಾರೆ. ಅವರು ಕೆಲವು
ದಿವಸಗಳವರೆಗೆ ಔಷಧ ಕೊಟ್ಟರೂ ರೋಗಗಳು ವಾಸಿ
ಯಾಗುವದಿಲ್ಲ. ಬೆಳಿಗೆಯು ಕಡಿಮೆಯಾಗಲಿಕ್ಕೆ ಹತ್ತಿದ
ಕೂಡಲೇ ಔಷಧ ಕೊಟ್ಟಿದ್ದರೆ ಎಷ್ಟೋ ಬಾಲಕರ ಬೇನೆ
ಗಳು ಗುಣವಾಗುತ್ತಿದ್ದವೆಂಬ ಸಂಗತಿಯು ವೈದ್ಯರ ಅನುಭ
ವಕ್ಕೆ ಬಂದಿರುತ್ತದೆ. ಅದೇಮೇರೆಗೆ ಬಹು ಮುಂದಿ ಮಕ್ಕ
ಳುಳ್ಳ ತಾಯಿತಂದೆಗಳಿಗೆ, ನಿಮ್ಮ ಮಕ್ಕಳ ಸ್ಮರಣ ಶಕ್ತಿಯು
ಎಂದಿನಿಂದ ಉದಯಕ್ಕೆ ಬರಹತ್ತಿತು? ಎಷ್ಟನೇ ತಿಂಗಳಿಗೆ
ಅವು ಬಾಹ್ಯ ಪದಾರ್ಥಗಳನ್ನು ಗೊತ್ತುಹಿಡಿಯ ಹತ್ತಿದವು?
ಎಂದಿನಿಂದ ಅವುಗಳ ಎದುರಿಗೆ ನುಡಿದಂಥ ಶಬ್ದಗಳ ಅಥವಾ
ಮಾಡಿದಂಥ ಹಾವಭಾವಗಳ ಅನುಕರಣ ಮಾಡಹತ್ತಿದವು?
ಎಂದಿನಿಂದ ಭಯ, ಕ್ರೋಧ ಮುಂತಾದ ವೃತ್ತಿಗಳಿಗೆ ಪ್ರಾ
ರಂಭವಾಯಿತು? ಎಂದು ಕೇಳಿದರೆ ಅವರು ಬಂದಕ್ಕಾದರೂ
ಉತ್ತರ ಕೊಡಲಾರರು. ನಮ್ಮ ಜನರಲ್ಲಿ ಇಂಥ ವಿಚಾರಗ
ಳನ್ನು ಮಾಡುವ ಬುದ್ಧಿಯೇ ಕಡಿಮೆ. ಅಂದಮೇಲೆ ಬಂದ
ಕ್ಕಾದರೂ ಸಮರ್ಪಕವಾದ ಉತ್ತರ ಸಿಗಲಿಕ್ಕಿಲ್ಲವೆಂಬ ಮಾ

ತು ಸಹಜವಾದದ್ದು. ಈ ಕೆಲಸವು ಇಂದ್ರಿಯವಿಜ್ಞಾನ ಶಾಸ್ತ್ರವೆತ್ತರದು. ಅವರು ಇತ್ತಿತ್ತಲಾಗಿ ಇದನ್ನು ಕೈಕೊಂಡು ಶೋಧಗಳನ್ನು ಮಾಡಹತ್ತಿದ್ದಾರೆ.

NOTES ON GRAMMAR.

ವ್ಯಾಕರಣದ ಟಿಪ್ಪಣಿಗಳು.

ವಾಕ್ಯಗಳನ್ನು ಪರೀಕ್ಷಿಸುವದೂ ತಿದ್ದುವದೂ.

ನಾಲ್ಕನೆಯ ಪುಸ್ತಕ ಪುಟ ೧೧೮.

"ಅವುಗಳ ಕಣ್ಣು ಕಿವಿಗಳು ಬಲು ಚುರುಕಾಗಿರುವಂತೆ ತೋರುತ್ತವೆ. ಆದರೆ ಅವುಗಳಿಗೆ ಕಬ್ಬವಿಲ್ಲ"

ಈ ವಾಕ್ಯದಲ್ಲಿ ಮೀನುಗಳ ವರ್ಣನೆಯಿದೆ. ಮೊದಲಿನ ವಾಕ್ಯದಲ್ಲಿ "ತೋರುತ್ತವೆ" ಎಂದು ಬಹುವಚನದ ಕ್ರಿಯಾಪದವು ಅಗತ್ಯವಾಗಿ ತೋರುವದಿಲ್ಲ. ಯಾಕಂದರೆ, ಮೀನುಗಳ ಕಣ್ಣು ಕಿವಿಗಳನ್ನು ನೋಡಿದರೆ ಅವು ಚುರುಕಾಗಿರುವವು ಹೀಗೇನು ತೋರುವದಿಲ್ಲ. ಆದರೆ ಆ ಪ್ರಾಣಿಗಳ ಸಂಚಾರಾದಿ ಲಕ್ಷಣಗಳನ್ನು ನೋಡಿದರೆ ಕಣ್ಣು ಕಿವಿಗಳು ಚುರುಕು ಅವೆ ಎಂದು ನೋಡುವವರು ತರ್ಕ ಮಾಡುತ್ತಾರೆ. ಆದದರಿಂದ ಈ ವಾಕ್ಯದಲ್ಲಿ ಮೀನುಗಳ ಕಣ್ಣು ಕಿವಿಗಳು ವರ್ಣಿಸಲ್ಪಡತಕ್ಕವುಗಳಲ್ಲ. ಅವುಗಳ ಸ್ಥಿತಿಯು ಅಥವಾ ಕ್ರಿಯೆಯು ವರ್ಣಿಸಲ್ಪಡತಕ್ಕದ್ದದೆ; ಅದು ಏಕವಚನಾಂತವಾಗೇ ಇರುತ್ತದೆ. ಕಾರಣ ತೋರುತ್ತವೆ ಎಂಬ ಬಹುವಚನದ ಕ್ರಿಯಾಪದದ ಸ್ಥಳದಲ್ಲಿ "ತೋರುತ್ತದೆ" ಎಂಬ ಏಕವಚನದ ಕ್ರಿಯಾಪದವು ಬೇಕು. "ಆದರೆ ಅವುಗಳಿಗೆ ಕಬ್ಬವಿಲ್ಲ" ಎಂಬ ಎರಡನೆಯ ವಾಕ್ಯದ ಅಭಿಪ್ರಾಯವು ಚೆನ್ನಾಗಿ ತಿಳಿಯುವದಿಲ್ಲ. ಯಾಕಂದರೆ "ಅವು

ಗಳಿಗೆ" ಅಂದರೆ ಕಣ್ಣು ಕಿವಿಗಳಿಗೆಂದು ಅರ್ಥ ಮಾಡಬೇಕೋ? ಮಾನುಗಳಿಗೆ ಎಂದು ಅರ್ಥ ಮಾಡಬೇಕೋ? ಕಣ್ಣು ಕಿವಿಗಳಿಗೆಂದು ಅರ್ಥ ಮಾಡೋಣವೆಂದರೆ ಅವಕ್ಕೆ ಬೇವರು ಶಬ್ದವನ್ನೇ ಕೊಟ್ಟಿಲ್ಲ. ಮಾನುಗಳಿಗೆ ಎಂದು ಅರ್ಥ ಮಾಡೋಣವೆಂದರೆ ವಾಕ್ಯದ ಪ್ರಾರಂಭದಲ್ಲಿದ್ದ "ಆದರೆ" ಎಂಬ ಪ್ರತಿಪಕ್ಷಾರ್ಥಕ ಅವ್ಯಯಕ್ಕೆ ನಿಷ್ಪ್ರಯೋಜನತ್ವ ಬರುತ್ತದೆ. ಅಂತೂ ಇಂತೂ ಯಾವದಾದರೊಂದು ದೋಷವನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಕರ್ತನು ಕಣ್ಣು ಕಿವಿಗಳಿಗೆ ಶಬ್ದವನ್ನು ಕೊಟ್ಟಿದ್ದರೆ "ಆದರೆ" ಅವ್ಯಯವು ಸಾರ್ಥಕವಾಗುತ್ತಿತ್ತು. ಹಾಗೆ ಸೃಷ್ಟಿಯಿಲ್ಲದ್ದರಿಂದ "ಆದರೆ" ಎಂಬದನ್ನು ತೆಗೆಯಲೇ ಬೇಕಾಯಿತು. ಇನ್ನು ಅವುಗಳಿಗೆ ಎಂಬ ಪದವನ್ನು ಇಟ್ಟರೂ ಇಡಬಹುದು. ಆದರೆ ಮೇಲಿಹೇಳಿದಂತೆ ಮತ್ತೆ ಸಂಶಯ ಉಳಿಯುತ್ತದೆ. ಅದರಿಂದ ಅದರ ಸ್ಥಳದಲ್ಲಿ "ಮಾನುಗಳಿಗೆ" ಎಂಬ ಪದವನ್ನೇ ಇಡುವದು ಪ್ರಶಸ್ತ ಕಾಣುತ್ತದೆ.

ತಿದ್ದಿದ ವಾಕ್ಯವು.

ಅವುಗಳ ಕಣ್ಣು ಕಿವಿಗಳು ಬಲು ಚುರುಕಾಗಿರುವಂತೆ ತೋರುತ್ತದೆ. ಮಾನುಗಳಿಗೆ ಶಬ್ದವಿಲ್ಲ.

ನಾಲ್ಕನೆಯ ಪುಸ್ತಕ ಪುಟ ೧೧೪.

"ಪ್ರಾಚೀನ ಸಂಸ್ಕೃತ ಶಬ್ದಗಳೊಳಗಿನ ಸಕಾರಕ್ಕೆ ಬದಲಾಗಿ ಉತ್ತರಕೀಮೆಯ ಜನರು ಹಕಾರವನ್ನು ಉಚ್ಚರಿಸುವದುಂಟು. ಆವದ್ದರಿಂದ ವಾಯುವ್ಯಕಡೆಯಿಂದ ಬರುವ ಜನರಿಗೆ ಮೊದಲು ಈ ದೇಶದ ಮೇರೆಯಾದ ಸಿಂಧುನದಿ ಹತ್ತುತ್ತದೆ. ಕಾರಣ ಸಿಂಧು ಎಂಬದರ ಬದಲಾಗಿ ಹಿಂದು ಎಂದು ಅಪಭ್ರಂಶವಾಗಿ ಆ ನದಿಯು ಪ್ರದೇಶಕ್ಕೆ ಹಿಂದುಸ್ಥಾನವೆಂಬ ಹೆಸರು ಮೊದಲು ಬಂತು ಇತ್ಯಾದಿ—

ಈ ವಾಕ್ಯಗಳಲ್ಲಿ-ಪ್ರಾಚೀನ ಸಂಸ್ಕೃತ ಶಬ್ದಗಳೊಳಗಿನ ಸಕಾರಕ್ಕೆ ಬದಲಾಗಿ ಹಕಾರವನ್ನು ಉಚ್ಚರಿಸುವದರಿಂದ ವಾಯುವ್ಯ ಕಡೆಯಿಂದ ಬರುವ ಜನರಿಗೆ ಮೊದಲು ಈ ದೇಶದ ಮೇರೆಯಾದ ಸಿಂಧುನದಿ ಹತ್ತುತ್ತದೆ ಎಂತಲೂ ಸಿಂಧುನದಿ ಹತ್ತುವದರಿಂದ ಸಿಂಧು ಎಂಬದರ ಬದಲಾಗಿ ಹಿಂದು ಎಂದು ಉಚ್ಚರಿಸುವರೆಂತಲೂ ಅಸಂಗತವಾದ ಅರ್ಥಗಳು ಉಂಟಾಗುತ್ತವೆ. ಇಂಥಾ ವ್ಯತ್ಯಾಸ ಉಂಟಾಗಲಿಕ್ಕೆ ಅವ ದರಿಂದ, ಕಾರಣ ಎಂಬ ಎರಡು ಪದಗಳು ಕಾರಣವಾಗಿವೆ. ಇವುಗಳನ್ನು ತೆಗೆದುಹಾಕಿ ಕೆಳಗೆ ಬರೆದಂತೆ ವಾಕ್ಯರಚನೆ ಯನ್ನು ಮಾಡಿದರೆ ಪ್ರಕೃತ ದೋಷವು ಹೋಗುತ್ತದೆ. ಹ್ಯಾಗಂದರೆ,—

ಪ್ರಾಚೀನ ಸಂಸ್ಕೃತ ಶಬ್ದಗಳೊಳಗಿನ ಸಕಾರಕ್ಕೆ ಬದ ಲಾಗಿ ಉತ್ತರ ಸೀಮೆಯ ಜನರು ಹಕಾರವನ್ನು ಉಚ್ಚರಿಸು ವದುಂಟು. ವಾಯವ್ಯ ದಿಕ್ಕಿನಿಂದ ಈ ದೇಶಕ್ಕೆ ಬರುವ ಜನರಿಗೆ ಮೊದಲು ಈ ದೇಶದ ಮೇರೆಯಾದ ಸಿಂಧುನದಿ ಹತ್ತುತ್ತದೆ. ಅವರಿಂದ ಸಿಂಧು ಎಂಬದರ ಬದಲಾಗಿ ಹಿಂದು ಎಂದು ಅಪಭ್ರಂಶವಾಗಿ ಆ ನದಿಯ ಪ್ರದೇಶಕ್ಕೆ ಹಿಂದುಸ್ತಾ ನವೆಂಬ ಹೆಸರು ಮೊದಲು ಬಂತು.

ಈ ತಿದ್ದಿದ ವಾಕ್ಯಗಳಲ್ಲಿ ಮೊದಲಿನ ಸೀಮೆ ಎಂಬ ಶಬ್ದ ದ ಶಕಾರಕ್ಕೆ ಬದಲು ಸಕಾರವನ್ನೂ ವಾಯವ್ಯ ಕಡೆಯಿಂದ ಎಂಬ ಶಬ್ದದ ಬದಲು ದಿಕ್ಕಿನಿಂದ ಎಂಬ ಶಬ್ದವನ್ನೂ ಪಾಕ ರುತ್ತೇವೆ. ಯಾಕಂದರೆ,—ಸಂಸ್ಕೃತದಲ್ಲಿ ಸೀಮೆ ಎಂಬ ಶಬ್ದ ಉಂಟು. ಶೀಮೆ ಎಂಬ ಶಬ್ದವಿಲ್ಲ. ವಾಯವ್ಯ ಕಡೆ ಯಿಂದ ಅಂಪರೆ ಅರೆಸಮಾಸವಾಗುತ್ತದೆ.

ನಾಲ್ಕನೆಯ ಪುಸ್ತಕ ಪುಟ ೧೮೪.

" ಅನಂತರ ಅದೇ ನೀರು ಕೊಳದಿಯ ಒಡೆಯು ಬಮ್ಮಲೇ

ಹೊಲದೊಳಗೆ ಬಿಟ್ಟರೆ, ಹೊಲದೊಳಗಿನ ಪೈರು ಎಲ್ಲಾ ನುಣ್ಣಗೆ ಕೆಟ್ಟುಹೋಗುವದು.

ಈ ವಾಕ್ಯದಲ್ಲಿ ಬಿಡೆದು ಎಂಬದಕ್ಕೆ ನೀರು ಎಂಬದು ಕರ್ತೃ ಪದವೋ? ಎಂಬ ಸಂಶಯ ಉಂಟಾಗುತ್ತದೆ. ಆದರೆ ನೀರು ಎಂಬ ಪದವು ಬಿಡೆದು ಎಂಬದಕ್ಕೆ ಕರ್ತೃವು ಆಗುವದಿಲ್ಲ. ಬಿಟ್ಟರೆ ಎಂಬದಕ್ಕೆ ಕರ್ಮವಾಗಿದೆ. ನೀರು ಎಂದು ಪ್ರಥಮಾಂತ ಪದವನ್ನಿಟ್ಟ ಕಾರಣ ಮೇಲೆ ಹೇಳಿದಂತೆ ಸಂಶಯಕ್ಕೆ ಆಸ್ಪದವಾಯಿತು. ಆದದ್ದರಿಂದ ಅಲ್ಲಿ ನೀರನ್ನು ಎಂಬ ದ್ವಿತೀಯಾಂತ ಪದವು ಇರಲಿಕ್ಕೆ ಬೇಕು.

ನಾಲ್ಕನೆಯ ಪುಸ್ತಕದ ಪುಟ ೧೫೬.

ಅಪೂರ್ವಸ್ಮೈರಣೆ ಎಂಬಲ್ಲಿ ಅಪೂರ್ವವಾದ ಸ್ಮೈರಣೆ ಯೆಂದಿರಬೇಕು. ಯಾಕಂದರೆ, ಅಪೂರ್ವಸ್ಮೈರಣೆ ಎಂಬದು ಅರೆಸಮಾಸವಾಗುತ್ತದೆ. ಹಿಂದಿನ ಕವಿಗಳು ಮಾಡಿದ ಅರೆಸಮಾಸಕ್ಕೂ, ಅಲುಕ್ ಗಮಕ ಕ್ರಿಯಾಸಮಾಸಗಳಲ್ಲಿ ಬಂದ ಅರೆಸಮಾಸಕ್ಕೂ ದೋಷವಿಲ್ಲ. ಆದರೆ ಅಪೂರ್ವಸ್ಮೈರಣೆ ಎಂಬ ಅರೆಸಮಾಸವು ಈ ಯಾವ ತರದಲ್ಲೂ ಬರುವದಿಲ್ಲ.

ನಾಲ್ಕನೆಯ ಪುಸ್ತಕ ಪುಟ ೧೧೪.

ಇಡೀ ಹಿಂದುಸ್ತಾನಕ್ಕೆಲ್ಲ ಎಂಬ ಪದದಲ್ಲಿ ಇಡೀ ಅಂತ ದೀರ್ಘ ಶಬ್ದವನ್ನಿಟ್ಟದ್ದು ತಪ್ಪದೆ. ಯಾಕಂದರೆ, ಇಡಿ ಧಾತುವಿನಿಂದ ಇಡಿ ಎಂಬ ವಿಶೇಷಣ ವುಂಟಾಗುವದೇ ಹೊರತು ಇಡೀ ಅಂತ ದೀರ್ಘಾಂತ ಶಬ್ದ ಹುಟ್ಟುವದಿಲ್ಲ. ಇದಲ್ಲದೆ ಕನ್ನಡದಲ್ಲಿ ದೀರ್ಘಾಂತವಾದ ಅನೇಕಾಕ್ಷರದ ಶಬ್ದವೇ ಇಲ್ಲ. ಅಂಥ ಶಬ್ದಗಳು ಪರಭಾಷೆಯಿಂದ ಕನ್ನಡದಲ್ಲಿ ಬರುವಾಗ ಹ್ರಸ್ವಾಂತವಾಗುತ್ತವೆ.

೫ನೆಯ ಪುಸ್ತಕ ಪುಟ ೧೨೮.

" ನನಗೂ ನಿನಗೂ ಗುರುತವೇ ಇಲ್ಲೆಂಬುವ ಹಾಗೆ ಮಾಡಿ ಬಿಡುವೆನು "

ಈ ವಾಕ್ಯದಲ್ಲಿ ಗುರುತವೇ ಎಂದಿಟ್ಟದ್ದು ತಪ್ಪು. ಗುರುತು ಎಂದು ಅನಿತ್ಯ ಉಕಾರಾಂತ ಶಬ್ದವು ಪ್ರಸಿದ್ಧವದೆ. ಈ ಶಬ್ದದ ಪ್ರಥಮೆಯ ಏಕವಚನವು ಗುರುತು ಎಂದು ಆಗುತ್ತದೆ. ಇದಕ್ಕೆ ಏ ನಿಪಾತವು ಮುಂದಾದರೆ ಅನಿತ್ಯ ಉಕಾರವು ಲೋಪವಾಗಿ ಗುರುತೇ ಎಂದಾಗುತ್ತದೆ. ಗುರುತ ಎಂದು ಅಕಾರಾಂತ ಶಬ್ದವಿದ್ದರೆ ಮಾತ್ರ ಗುರುತವೇ ಎಂಬ ಪದವು ಸಿದ್ಧವಾದೀತು, ಆದರೆ ಹಾಗೆ ಅಲ್ಲ.

೫ನೆಯ ಪುಸ್ತಕ ಪುಟ ೧೪೬.

" ದುಃಖವೇ ಆಮರಣಾಂತವಾಗಿ ಬೆಂಬಳಿಸುವದು "

ಈ ವಾಕ್ಯದಲ್ಲಿ " ಆಮರಣಾಂತವಾಗಿ " ಎಂಬದು ಅಶುದ್ಧವಾಗುತ್ತದೆ. ಆಮರಣಾಂತವಾಗಿ ಅಂದರೆ ಮರಣದವರೆಗೆ ಎಂಬರ್ಥವುಂಟು. ಈ ಅರ್ಥವು ಮರಣ ಶಬ್ದಕ್ಕೆ ಆ ಉಪಸರ್ಗವನ್ನು ಜೋಡಿಸಿದರೆ ಹುಟ್ಟುವ ಆಮರಣ ಎಂಬ ಶಬ್ದಕ್ಕೆ ಬರುತ್ತಿರಲಿಕ್ಕೆ ಅಂತ ಶಬ್ದವನ್ನು ಹೆಚ್ಚಿಗೆ ಹಚ್ಚಲಿಕ್ಕೆ ಕಾರಣವಿಲ್ಲ—ಅದರಿಂದ "ಆ ಮರಣಾಂತವಾಗಿ" ಎಂಬದರ ಸ್ಥಳದಲ್ಲಿ " ಆಮರಣವೂ " ಎಂಬ ಪದವನ್ನಿಡಬೇಕು.

೫ನೆಯ ಪುಸ್ತಕ ಪುಟ ೨೬೮.

" ಶ್ರೀಮಂತರ ವಿಲಾಸದ ಪದಾರ್ಥಗಳನ್ನಷ್ಟೇ ಮಾತ್ರ ಇಲ್ಲದ ಹಾಗೆ ಮಾಡಿಬಿಡು "

ಈ ವಾಕ್ಯದಲ್ಲಿ " ಪದಾರ್ಥಗಳನ್ನಷ್ಟೇ ಮಾತ್ರ " ಎಂದು ಇದ್ದದ್ದು ಅಬದ್ಧವಾಗುತ್ತದೆ. ನಿಶ್ಚಯಾರ್ಥವನ್ನು

ಹೇಳುವವಕ್ಕೆ ಏಕಾರವನ್ನು ಅಥವಾ ಮಾತ್ರ ಶಬ್ದವನ್ನು ಪ್ರಯೋಗಿಸುವರೇ ಹೊರತು ಎರಡನ್ನೂ ಬಿಮ್ಮಿಗೆ ಪ್ರಯೋಗಿಸುವ ರೂಢಿಯಿಲ್ಲ—ಕಾರಣ ಅಲ್ಲಿ "ಪದಾರ್ಥಗಳನ್ನೆಷ್ಟೆ" ಎಂಬ ಪದವಾಗಲಿ, "ಪದಾರ್ಥಗಳನ್ನೆಷ್ಟು ಮಾತ್ರ" ಎಂಬ ಪದವಾಗಲಿ ಇರಬೇಕು.

ಳನೆಯ ಪುಸ್ತಕ ಪುಟ ೫೩.

"ಬಾಳ್ಯವಂತರ ನಡತೆಯೋ?" ಎಂಬ ವಾಕ್ಯದಲ್ಲಿ "ಬಾಳ್ಯವಂತರ" ಎಂದಿರುವದು ತಪ್ಪು. ಆ ಸ್ಥಳದಲ್ಲಿ "ಬಾಳ್ವೆವಂತರ" ಎಂಬ ಪದವಿರಬೇಕು. ಯಾಕಂದರೆ, ಬಾಳ ಧಾತುವಿನಿಂದ ಬಾಳ್ವೆ ಎಂಬ ಶಬ್ದ ಹುಟ್ಟುವದು. ಬಾಳ್ಯ ಎಂಬ ಶಬ್ದವು ಹುಟ್ಟುವದಿಲ್ಲ.

CORRESPONDENCE.

ಪತ್ರ ವ್ಯವಹಾರವು.

ಓ ಸದ್ಧರ್ಮ ಪ್ರಭುಗಳೂ ವಿದ್ಯಾಗ್ರಗಣ್ಯರೂ
ಆದ ಏಡಿಟರ ಮಹನ್ಮಣಿಗಳೇ,—

ಗದಗ ತಾ॥ ಮೈಕೆ ಹಮ್ಮಿಗಿಯಲ್ಲಿರುವ ವಿದ್ಯಾರ್ಥಿಗಳ ಪುನೋಬಯಕೆಯನ್ನು ತೀವ್ರ ನೆರವೇರಿಸ ಬೇಕೆಂದು ಬೇಡಿಕೊಳ್ಳುತ್ತೇವೆ.

ನಮ್ಮ ಸಾಲೆಯ ಸ್ಥಿತಿಯು ಸಂಖ್ಯೆಯಿಂದಲೂ, ಅಭ್ಯಾಸದಿಂದಲೂ ತೀರ ಕನಿಷ್ಠ ಸ್ಥಿತಿಗೆ ಬಂದಿತ್ತು, ಆದರೆ ಈ ಸಾಲೆಗೆ ಹೊಸದಾಗಿ ನೇಮಿಸಲ್ಪಟ್ಟ ಭಿ. ನಾ. ಯಾರ್ದಿ ಇವರು ಬಂದು ೪ ತಿಂಗಳು ಆಗುವದರೊಳಗಾಗಿಯೇ ೫೬ ಹುಡುಗರನ್ನು ಕೂಡಿಸಿದ್ದಲ್ಲದೆ ಬಬ್ಬ ಅ॥ ರನ್ನು ಪಡೆದರು. ಇಲ್ಲಿಯ ಜನಸಂಖ್ಯೆ ಸುಮಾರು ೧೪೦೦ ಉಂಟು. ಯಾರ್ದಿ

ಮಾಸ್ತರರು ಬಳ್ಳೇ ಶ್ರಮಪಡುವವರೂ, ದೀರ್ಘಾಲೋಚಿಗಳೂ ಇದ್ದಾರೆ. ತಾ॥ ೧೩ನೇ ಅಕ್ಟೋಬರ ದಿವಸ ಪೂರ್ವಾಹ್ನಕಾಲದ ೮ ಘಂಟೆಗೆ ಸ್ಕೂಲ ಪಂಚರೂ, ಗ್ರಾಮಸ್ಥರೂ, ಸಭ್ಯಗೃಹಸ್ಥರೂ, ಪತ್ತೋಪಂತ ಪಿನ್‌ಶಿನ್ ಮಾಸ್ತರ ಮುಂತಾದವರು ಸಾಲೆಗೆ ಬಂದು ೫ನೇ ಇಯತ್ತೆಯಿಂದ ಕ್ರಮವಾಗಿ ಎಲ್ಲ ಇಯತ್ತೆಗಳ ಪರೀಕ್ಷೆ ತಕ್ಕೊಂಡು ವ್ಹಿ. ಬುಕ್ಕನಲ್ಲಿ ನಮ್ಮ ಪ್ರಿಯಗುರುಗಳಾವ ಯಾರ್ದಿ ಇವರು "ಬಳ್ಳೇ ಸತ್ಯವಂತರಿದ್ದು ತಮ್ಮ ಕೆಲಸ ಬಹು ಕಾಳಜಿಯಿಂದ ಮಾಡುತ್ತಾರೆ." ಎಂದು ಸದರೀ ಗೃಹಸ್ಥರ ಪೈಕಿ ಬಳ್ಳೇ ಪ್ರಸಿದ್ಧ ಸಾವುಕಾರರಾವ ಮು॥ ರಾ॥ ರಾ॥ ಬಸವಣ್ಣೆಪ್ಪ ಪಾಂತಿ ಎಂಬ ಸ್ಕೂಲ ಪಂಚರು ವಿದ್ಯೋತ್ತೇಜನದಬಗ್ಗೆ ಬಂದು ರೂಪಾಯಿಯನ್ನು ತುರ್ತಿಗೆ ಕೊಟ್ಟು ಇದಕ್ಕಿಂತಲೂ ಚೆನ್ನಾಗಿ ಅಭ್ಯಾಸ ಮಾಡಿ ತೋರಿಸಿದರೆ ನಿಮಗೆ ಇನ್ನೂ ಹೆಚ್ಚಿಗೆ ಬಕ್ಷಿಸು ಕೊಡುವೆವು ಎಂದು ಹೇಳಿದರು.

ಹಮ್ಮಿಗಿಯಲ್ಲಿ ಕಾಲಾ ಸ್ಥಾಪನೆಯಾಗಿ ೫ ವರುಷಗಳಾದವು. ಅವರೂ ಈ ಪ್ರಕಾರದ ಬಕ್ಷಿಸು ಕೊಡುವ ಸಮಾರಂಭವಾದದ್ದು ಇದೇ ಮೊದಲನೇದು. ಇದಕ್ಕೆ ಮುಖ್ಯ ಕಾರಣೀಭೂತರಾದ ನಮ್ಮ ಬಸವಣ್ಣೆಪ್ಪನವರೂ ಇವರಂತೆ ಇನ್ನೂ ಅನೇಕ ಲಕ್ಷ್ಮೀಪುತ್ರರೂ ತಮ್ಮ ಪಾವ ಸ್ಪರ್ಧವನ್ನು ನಮ್ಮ ಸಾಲೆಯ ಹೊಸ್ತಲಕ್ಕೆ ಮೇಲಿಂದ ಮೇಲೆ ಮಾಡುತ್ತಾ ಇರಲೆಂದು ಜಗನ್ನಿಯಂತನಾದ ಪರಮೇಶ್ವರನನ್ನು ಏಕೋಭಾವದಿಂದ ಪ್ರಾರ್ಥಿಸುತ್ತೇವೆ.

ಮು. ಹಮ್ಮಿಗಿ.
ರವಿವಾರ.
ತಾ॥ ೧೪.೧೦.೯೦ ಇಸ್ವಿ.

} ಫಕೀರಾ ಭರಮಪ್ಪ ಸಾಳೇರ.
ಹನಮಾಬುದ್ಧಿವಂತಪ್ಪಾ ಸಾಳೇರ.
ವಿದ್ಯಾರ್ಥಿಗಳು.

ಶಾರ್ದೂಲ–ಹಾರೀಸಪ್ರಭುಜೂತವೈಷ್ಣವೆನಿಪೀಯೂಸ್ಥಾನವೀಗಳ್ಗಡಾ ।
ಸಾರುತ್ತಂಬಹಜೈತ್ರಮೆಂಬಸುಪರೀಕ್ಷಾಕಾಲದೊಳ್ಬೀಗದಿಂ॥
ಬೀರುತ್ತಂಫಲಪುಷ್ಪಮೆಂಬಸುಜನವ್ರಾತಂಗಳಿಂಜೆಂದದಿ ।
ತೋರುತ್ತಿರ್ಪ್ಪದುಕಣ್ಗೆ ನಂದನವನೆಂಬಂತೀಗ ಕಾಲೇಜವು ॥ ೧ ॥

ನಮ್ಮ ಇಲಾಖಾಧಿಕಾರಿಗಳಾದ ನೇಕನಾಮದಾರ ಗವರ್ನರ ಹಾರೀಸ ದೊರೆಗಳು ಧಾರವಾಡವಕ್ಕೆ ಬಂದ ದಿವಸವೇ ಅಂದರೆ ತಾರೀಖು ೧೦ನೇ ಎಪ್ರೀಲ ೧೯೦೯ನೇ ಇಸ್ವೀ ದಿವಸವೇ ಸಾಯಂಕಾಲದ ೫ ಘಂಟೆಗೆ ಧಾರವಾಡ ಟ್ರೇನಿಂಗ ಕಾಲೇಜ ವನ್ನು ನೋಡಲು ಬಂದಿದ್ದರು. ಆಗ ರಾ॥ ಸಾ॥ ಪ್ರಿನ್ಸಿಪಾಲರವರಿಂದ ಸನ್ಮಾನ ಹೊಂದಿದ ಹಾರೀಸ ದೊರೆಗಳು ಬಹಳ ಆನಂದಯುಕ್ತರಾದರು. ಬಳಿಕ ದೊರೆಗಳವರು ಕೆಲಹೊತ್ತು ಕಾಲೇಜದ ನಡು ಕೋಣೆಯಲ್ಲಿ ಕುಳಿತು ಕಾಲೇಜದ ಸುವ್ಯವಸ್ಥೆಯನ್ನು ಕಂಡು ಸಂತೋಷಪಟ್ಟು, ಶಾರೀರ ಶಿಕ್ಷಣದ ಬೆಳುವಣಿಗೆಯನ್ನು ನೋಡುವದಕ್ಕೆ ಕಾಲೇಜದ ಮಧ್ಯ ಪಟಾಂಗಣದ ಬಲಗಡೆಯಲ್ಲಿರುವ ತಾಲೀಮು ಮಾಡುವ ವಿಶಾಲವಾದ ಸ್ಥಳಕ್ಕೆ ಬಂದರು. ಅಲ್ಲಿ ಕೆಲವು ವಿದ್ಯಾರ್ಥಿಗಳು ಉತ್ತಮ ಪ್ರಕಾರದ ತಾಲೀಮು ಮಾಡುವದನ್ನು ನೋಡಿ ಶಾರೀರ ಶಿಕ್ಷಣಕ್ಕೆ ಬಳ್ಳೀ ಉತ್ತೇಜನ ಬರುವಂತೆ ೧೫೦ ರೂಪಾಯಿಗಳನ್ನು ಕೊಟ್ಟು, ತಾಲೀಮು ಮಾಡುವವರಲ್ಲಿ ಉತ್ತಮ ಪ್ರಕಾರ ಪಾಸಾದ ವಿದ್ಯಾರ್ಥಿಗಳಿಗೆ ಇನಾಮು ಕೊಡಲ್ಪಡತಕ್ಕದ್ದೆಂದು ಹೇಳಿದರು. ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮಿ. ಶೀತಾರಾಮು ವಿ. ಪಟವರ್ಧನ ಸಾಹೇಬರವರು ಮತ್ತೂ ಕೆಲವು ಹಣ ಕೂಡಿಸಿ ಮೂರು ವರ್ಷಗಳವರೆಗೆ ನೇಕ ನಾಮದಾರ ಹಾರೀಸ ದೊರೆಗಳವರ ಹೆಸರಿನ ಬಕ್ಷೀಸ ಸಮಾರಂಭವು ನಡಿಯುವಂತೆ ವ್ಯವಸ್ಥೆಯನ್ನು ಮಾಡಿದರು.

ಮುಂದೆ ಸನ್ ೧೯೯೦ನೇ ಇಸವೀ ಅಗಟೆಂಬರ ೭೪ನೇ ದಿವಸ ಹಾರೀಸ ದೊರೆಗಳವರ ಬಕ್ಷೀಸ ಸಮಾರಂಭವು ಮೊದಲನೇ ಸಾರೆ ಆಯಿತು. ಆಗ ಕಾಲೇಜ ಮತ್ತು ಹಾಯ ಸ್ಕೂಲ ಪ್ರಾಕ್ಟಿಸಿಂಗ ಸ್ಕೂಲಗಳ ವಿದ್ಯಾರ್ಥಿಗಳು ಕೂಡಿ ಬಂಭತ್ತು ಜನರು ಬಕ್ಷೀಸು ಪಡೆದರು.

ಮುಂದೆ ಸನ್ ೧೯೨೦ನೇ ಇಸವೀ ಅಗಟೆಂಬರ ತಿಂಗಳ ೧೦ನೇ ತಾರೀಖಿನ ದಿವಸ ಎರಡನೇ ಸಾರೆ ಬಕ್ಷೀಸ ಸಮಾರಂಭವು ಆಗಬೇಕೆಂದು ಗೊತ್ತಾಗಿತ್ತು. ಆ ದಿವಸ ಕಾಲೇಜವನ್ನು ತರತರದ ಬಣ್ಣದ ನಿಶಾನಿಗಳಿಂದ ಅಲಂಕರಿಸಿದ್ದರು. ಅದರಿಂದ ನೋಡುವವರಿಗೆ ಇದೊಂದು ಆನಂದ ಹುಟ್ಟಿಸುವ ಮೂಲಸ್ಥಾನವೋ ಏನೋ ಎಂಬಂತೆ ತೋರುತ್ತಿತ್ತು. ಮತ್ತು ಕಾಲೇಜದ ಮಹದ್ವಾರದ ಮುಂದೆ ಎರಡೂ ಕಡೆಗೆ ವಿಶಾಲವಾಗಿಯೂ ಎತ್ತರವಾಗಿಯೂ ಇರುವ ಎರಡು ಪತಾಕೆಗಳನ್ನು ನಿಲ್ಲಿಸಿದ್ದರು. ಅದರಿಂದ ಮಹದ್ವಾರಕ್ಕೆ ಅತಿ ಶೋಭೆಯುಂಟಾಗಿತ್ತು. ಮತ್ತು ಮಹದ್ವಾರದ ಮುಂದೆ ಬಂದು ನಿಂತ ಕೂಡಲೇ ನಮ್ಮ ವಿಕ್ಟೋರಿಯಾ ಚಕ್ರವರ್ತಿನಿಯವರ ಚಿತ್ರವೂ, "ದೇವರೇ, ಮಹಾರಾಣಿಯವರಿಗೆ ಜಯವಾಗಲಿ" ಎಂಬ ಇಂಗ್ಲಿಷ ಲಿಪಿಯೂ ಭವ್ಯವಾಗಿ ಕಾಣುತ್ತಿದ್ದವು. ಅದರಿಂದ ಇದು ಪ್ರತ್ಯಕ್ಷ ಮಹಾರಾಣಿಯವರ ಸಭೆಯೋ ಏನೋ ಎಂಬಂತೆ ಕಾಣುತ್ತಿತ್ತು. ಬಳಿಕ ಸ್ವಲ್ಪ ಮುಂದಕ್ಕೆ ಬಂದ ಕೂಡಲೆ ಕಾಲೇಜವನ್ನು ಸ್ಥಾಪನೆ ಮಾಡಿದ ಮೆಹರಬಾನ ರಾಬರ್ಟಸನ್ನ ಸಾಹೇಬ ಕಲೆಕ್ಟರರವರ ಚಿತ್ರವು ಕಟ್ಟಲ್ಪಟ್ಟಿತ್ತು. ಮುಂದೆ ಎರಡು ಮೂರು ಸೋಪಾನಗಳನ್ನು ಇಳಿದ ಕೂಡಲೆ ಬಂದು ವಿಶಾಲವಾದ ಮಂಟಪವು ಹಾಕಲ್ಪಟ್ಟಿತ್ತು. ಆ ಮಂಟಪವು ನಾಲ್ಕೂ ಕಡೆಯಲ್ಲಿ ಬಳಸಿದ ಜೂವಿನ ಗಿಡಗಳಿಂದಲೂ, ಮಾವಿನ

ತೋರಣಗಳಿಂದಲೂ, ತರತರದ ನಿಶಾನೆಗಳಿಂದಲೂ ಅತಿ ರಮಣೀಯವಾಗಿ ತೋರುತ್ತಿತ್ತು. ಅದರ ಮಧ್ಯ ಭಾಗದಲ್ಲಿ ಬಹು ಅಂದವಾದ ಸಿಂಹಾಸನವನ್ನು ಇಟ್ಟಿದ್ದರು. ಅದರ ಮುಂದೆ ಬಂದು ಮೇಜು ಇತ್ತು. ಎಡಬಲಗಳಲ್ಲಿ ಕುರ್ಚಿಗಳ ನಾಲ್ಕು ನಾಲ್ಕು ಸಾಲುಗಳು ಇದ್ದವು. ಇವೆಲ್ಲವುಗಳಿಂದ ಆ ಮಂಟಪವು ಇಂದ್ರನ ನಂದನ ವನದೊಳಗಿನ ರಾಜಭವನವೋ ಏನೋ ಎಂಬಂತೆ ತೋರುತ್ತಿತ್ತು. ಅದರ ಮುಂಭಾಗದಲ್ಲಿಯೇ ತಾಲೀಮು ಮಾಡುವ ವಿಶಾಲವಾದ ಸ್ಥಳವು ಕಂಗೊಳಿಸುತ್ತಿತ್ತು. ಅಲ್ಲಿ ಮೂರು ಹಾರಿಗಳುಳ್ಳ ಜೋಡು ಜೋಡು ಕಂಭಗಳೂ ಎರಡು ಕುದುರೆ ಆಕಾರದ ಜಿಗಿಯುವ ಸಾಧನಗಳೂ, ಮೂರು ಪೆರಲಲ್ ಬಾರಗಳೂ, ಎತ್ತರವಾದ ಜೋಡು ಕಂಭಗಳ ಮೇಲೆ ಹಾಕಿದ ಅಡ್ಡ ತೊಲೆಯಿಂದ ಇಳಿಬಿಟ್ಟ ಜೋಕಾಲಿಯ ಆಕಾರದ ವ್ಯಾಯಾಮ ಸಾಧನವೂ ಇದ್ದದರಿಂದ ಬಯಲಿಗೆ ಬಂದು ನೋಡುವವರಿಗೆ ಆಶ್ಚರ್ಯಾನಂದವೂ, ಆಶ್ಚರ್ಯಭಕ್ತಿಯೂ ಆಗುವಂತೆ ಇದ್ದವು. ಆ ಜೈಲ ಪ್ರದೇಶವ ಸುತ್ತುಮುತ್ತು ಬೇಂಚುಗಳನ್ನು ಜೋಡು ಸಾಲಾಗಿ, ನೆಟ್ಟಗೆ ಇಟ್ಟಿದ್ದರು.

ಆ ದಿವಸ ಮುಂಜಾನೆ ಯಾವತ್ತು ವಿದ್ಯಾರ್ಥಿಗಳು ಮಹಾರಾಣಿಯವರ ಚಿತ್ರದಿಂದ ಮಹದ್ವಾರದ ನಿಶಾನಿಗಳವರಿಗೆ ಎರಡೂ ಕಡೆಯಲ್ಲಿ ಸಾಲಾಗಿ ನಿಂತಿದ್ದರು. ಸುಮಾರು ೧॥ ತಾಸು ಹೊತ್ತೇರಿದ ಮೇಲೆ ಮೆ. ಎಜ್ಯುಕೇಷನಲ್ ಇನಸ್ಪೇಕ್ಟರ ಸಾಹೇಬ ಬಹಾದ್ದೂರ ಇಕ್ಷಿಣಭಾಗ ಇವರು ಬಂದು ರಾವಸಾಹೇಬ ಪ್ರಿನ್ಸಿಪಾಲರವರಿಂದಲೂ, ಉಳಿದ ಯಾವತ್ತು ಕಾಲೇಜದ ಗುರುಗಳಿಂದಲೂ, ಸನ್ಮಾನ ಹೊಂದಿ ಹಂಚರದ ಮಧ್ಯದಲ್ಲಿ ಮೊದಲೇ ಸಿದ್ಧವಾದ ಅಗ್ರಾಸನದಲ್ಲಿ ಕುಳಿತುಕೊಂಡರು.

(ಮುಂದಕ್ಕೆ ಸಾಗುವದು.)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ಹೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೭.] ದಿಶಂಬರ ೧೮೯೯. [ಸಂಚಿಕೆ ೧೨.

EDUCATIONAL INTELLIGENCE AND USEFUL, NCTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಾವು ಹಿಂದಕ್ಕೆ ತಿಳಿಸಿವಂತೆ ಸರಕಾರದವರ ಆಜ್ಞೆಯ ಮೇರೆಗೆ "ಎಜ್ಯುಕೇಶನಲ್ ಇನಸ್ಪೆಕ್ಟರರ ಕಾನ್ಫರನ್ಸವು" ಕಳೆದ ಅಕ್ಟೋಬರ ತಿಂಗಳಿನ ೨೪ನೇ ತಾರೀಖಿನ ದಿವಸ ಪುಣೆ ಪಟ್ಟಣದಲ್ಲಿ ಕೂಡಿತ್ತು. ಅಧ್ಯಕ್ಷಸ್ಥಾನವನ್ನು ಮೆ. ಪೈರೆಕ್ಟರ ಆಫ಼ ಪಬ್ಲಿಕ ಇನಸ್ಟ್ರಕ್ಶನ್ ದೊರೆಗಳು ಸ್ವೀಕರಿಸಿದ್ದರು. ಸರ್ ೧೮೭೫ನೇ ಇಸವಿಯು ಡಿಸ್ಟ್ರಿಕ್ಟ ಮ್ಯುನಿಸಿಪಾಲಿಟಿ ಆಕ್ಟಿನ ೨೪ನೇ ಕಲಮಿನ ಮೇರೆಗೆ ಡಿಸ್ಟ್ರಿಕ್ಟ ಮ್ಯುನಿಸಿಪಾಲಿಟಿಗಳಿಗೆ ಇರುವಂಥ ಅಧಿಕಾರಗಳನ್ನು ಕುರಿತು ಮತ್ತು ಮ್ಯುನಿಸಿಪಾಲಿಟಿಗಳಿಗೂ ಸರಕಾರೀ ವಿದ್ಯಾಶಾಖೆಗೂ ಇರುವ ಸಂಬಂಧವನ್ನು ಕುರಿತು ವಿಚಾರ ಮಾಡುವದೇ ಕಾನಫರನ್ಸವ ಉದ್ದೇಶವಿತ್ತು. ಈ ವಿಷಯವ ನಿಯಮಗಳು ಸರ್ ೧೮೮೬ನೇ ಇಸವಿಯ ಅಗಷ್ಟ ತಿಂಗಳಿನಲ್ಲಿ ಮೊದಲು ಪ್ರಸಿದ್ಧಿಪಡಿಸಲ್ಪಟ್ಟವು. ಅಂದಿನಿಂದ ಈ ಹೊತ್ತಿನ ವರೆಗೆ ಅಂದರೆ ಆರು ವರ್ಷಗಳ ಅನುಭವದಿಂದ ಅವುಗಳಲ್ಲಿ

ಅವಶ್ಯ ತೋರಿದ ಸುಧಾರಣೆಗಳನ್ನು ಮಾಡುವದು ಉಚಿತ ವಾದದ್ದೆಂದು ಸರಕಾರದವರು ನೆನಸಿ ಈ ಕಾನಫರನ್ಸವ ನ್ನು ಕೂಡಿಸಿದರು. ಇದರ ಅಧ್ಯಕ್ಷರು ಈಗಿನ ನಿಯಮು ಗಳಲ್ಲಿ ಏನಾದರೂ ತಿದ್ದುಪಾಟು ಮಾಡುವದು ಅವಶ್ಯವೆಂದು ತೋರಿದರೆ ಅದನ್ನು ತಿಳಿಸಿ ಕಾನಫರನ್ಸದ ಕೆಲಸಕ್ಕೆ ನೆರ ವಾಗಬೇಕೆಂದು ಶಾಲೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದು ಕೊಂಡ ಎಲ್ಲ ಮ್ಯುನಿಸಿಪಾಲಿಟಿಯವರಿಗೆ ಸೂಚಿಸಿದರು. ಅದಕ್ಕೆ ಬಹುಶಃ ಎಲ್ಲ ಮ್ಯುನಿಸಿಪಾಲಿಟಿಯವರು ಈಗಿನ ನಿ ಯಮುಗಳಿಂದ ಕೆಲಸವು ಚನ್ನಾಗಿ ಸಾಗುತ್ತದೆಂತಲೂ ಅವು ಗಳಲ್ಲಿ ವಿಶೇಷವಾದ ಏರ್ಪಾಡು ಮಾಡುವದು ಅವಶ್ಯವಿಲ್ಲೆಂ ತಲೂ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳುಹಿಸಿದರು. ಕಾನಫರನ್ಸದವರು ಈ ನಿಯಮುಗಳು ಪ್ರಸಿದ್ಧವಾದಂದಿ ನಿಂದ ಈ ಹೊತ್ತಿನವರೆಗೆ ಹೊರಟ ಆಕ್ಷೇಪಗಳನ್ನೆಲ್ಲ ಲಕ್ಷಿಸಿ ಅವುಗಳಲ್ಲಿ ಅಲ್ಪಸ್ವಲ್ಪ ಸುಧಾರಣೆಗಳನ್ನು ಮಾಡಿ ಅವುಗಳನ್ನು ಸರಕಾರದವರ ಕಡೆಗೆ ಕಳುಹಿಸಿದ್ದಾರೆ. ಅವು ಬೇಗನೆ ಮಂಜೂರಾಗುವವು. ಇನ್ನು ಮುಂದೆ ಮ್ಯುನಿಸಿ ಪಾಲಿಟಿಗಳ ವಶದಲ್ಲಿದ್ದ ಸಾಲಿಗಳ ವ್ಯವಸ್ಥೆಯು ಹಚ್ಚು ಚನ್ನಾಗಿ ನಡೆದು ಸರಕಾರವವರ ಕೋರಿಕೆಯು ಸಫಲವಾ ಗುವದೆಂದು ನೆನಿಸುತ್ತೇವೆ.

ಕಳೆದ ಐದು ವರ್ಷಗಳಲ್ಲಿ ಪಂಜಾಬದ ವಿದ್ಯಾಪೀಠದಿಂ ದ ೩೫೯ ಜನ ಎಫ್. ಈ. ಏ ಪರೀಕ್ಷೆಯಲ್ಲಿ, ೧೩೭ ಜನ ಬೀ. ಏ. ಪರೀಕ್ಷೆಯಲ್ಲಿ, ೩ ಜನ ಎಮ್ಮು. ಡಿ. ಪರೀಕ್ಷೆಯಲ್ಲಿ, ೪೦ ಜನ ಕಾಯದೆಯ ಪರೀಕ್ಷೆಯಲ್ಲಿ, ೬೦ ಜನ ವೈದ್ಯಕೀ ಪರೀಕ್ಷೆಯಲ್ಲಿ, ೪೫ ಜನ ಇಂಜಿನೀಯರ ಪರೀಕ್ಷೆಯಲ್ಲಿ ತೇ ರ್ಗಡೆ ಹೊಂದಿದರೆಂದು ತಿಳಿಯುತ್ತದೆ. ಪಂಜಾಬದ ವಿದ್ಯಾ

ಪೀಠವು ಸ್ಥಾಪನೆಯಾಗಿ ತುಸು ದಿವಸವಾಗಿದ್ದರೂ, ಇಷ್ಟು ಜನರು ಸಾಸಾದದ್ದನ್ನು ನೋಡಿ ನಮಗೆ ಸಂತೋಷವಾಗುತ್ತದೆ.

ನಮ್ಮ ಸರ್ವಾಧಿಪತಿಗಳಾದ ಲಾರ್ಡ್ ಲಾನ್ಸ್‌ಡೌನ್ ದೊಬೆಗಳು ಮೊನ್ನೆ ಪುಣೆ ಪಟ್ಟಣಕ್ಕೆ ಬಿಜಯಂಗೈದಾಗ್ಗೆ ತಮ್ಮ ಆಗಮನದ ಸ್ಮಾರಕಕ್ಕಾಗಿ ಬಂದು ಬೆಳ್ಳಿಯ ಪದಕವನ್ನು ಇನಾಮು ಇಟ್ಟಿದ್ದಾರೆ. ಆ ಪದಕವು ಪುಣೆ ಪಟ್ಟಣದೊಳಗಿನ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದಂಥ ಮತ್ತು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಎಲ್ಲರಿಗೂ ಹೆಚ್ಚಿನ ನಂಬರು ಪಡೆದಂಥ ವಿದ್ಯಾರ್ಥಿಗೆ ಕೊಡಲ್ಪಡುವದು. ಈ ಇನಾಮನ್ನು ಪಡೆದಂಥ ವಿದ್ಯಾರ್ಥಿಗಿಂತ ಆ ವಿದ್ಯಾರ್ಥಿಗೆ ವಿದ್ಯಾದಾನ ಮಾಡಿದಂಥ ಶಾಲೆಯ ಕೀರ್ತಿಯು ವಿಶೇಷವಾಗಿ ಹಬ್ಬುವದೆಂದು ಇಲ್ಲಿ ಹೇಳುವ ಪ್ರಯೋಜನವಿಲ್ಲ.

ಪರೀಕ್ಷೆಗಳ ಕಾಲಕ್ಕೆ ವಯಸ್ಸಿನ ದಾಖಲೆಗಳ ಸಂಬಂಧವಾಗಿ ಸಂಶಯಗಳು ಮೇಲಿಂದ ಮೇಲೆ ಬಂದು ಅನೇಕ ಜನ ಮಾಸ್ತರರ ಹಾಗು ಆ ದಾಖಲೆಗಳನ್ನು ಕೊಟ್ಟ ಸರಕಾರೀ ಉದ್ಯೋಗಸ್ಥರ ಲುಕಸಾನಿಯು ಆಗುತ್ತಿರುತ್ತದೆ. ವಿಶೇಷತಃ ನಮ್ಮಲ್ಲಿ "ಅ ನು ೧೪ ವರ್ಷದವನಿರುತ್ತಾನೆ. ಈ ವಾಕ್ಯದ ಅರ್ಥವು ಬೇರೆ ಬೇರೆ ರೀತಿಯಿಂದ ಮಾಡಲಿಕ್ಕೆ ಬರುತ್ತಿರುವದರಿಂದ ತೊಂದರೆಯು ಹೆಚ್ಚಾಗುತ್ತದೆ. ಈ ವಾಕ್ಯದಿಂದ ಅ ನಿಗೆ ೧೪ ವರ್ಷ ತುಂಬಿರುವನೆಂತಲೂ ೧೫ ವರ್ಷ ತುಂಬಿ ೧೪ನೇದು ನಡೆಯುತ್ತದೆಂತಲೂ ಅರ್ಥವಾಗುತ್ತದೆ. ಮಿಡಲ್ ಮತ್ತು ಹೈಸ್ಕೂಲು ಸ್ಕಾಲರಶಿಪ್ಪಗಳ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳು ಇಂತಿಷ್ಟು ವಯಸ್ಸನ್ನು

ವಿಾರಿದವರಿರಬಾರದೆಂದು ಸರಕಾರದವರು ಕಟ್ಟು ಮಾಡಿರು ತಾರೆ. ಆವಕ್ಕೆ ಸರಿಯಾಗಿ ನಿಜವಾದ ದಾಖಲೆಯು ಸಿಗುವ ವಕ್ಕೊಸ್ಕರ ಸರಕಾರದವರು ವಯಸ್ಸಿನ ದಾಖಲೆಯ ನ ಮೂನೆಯಲ್ಲಿ ಸುಧಾರಣೆಯನ್ನು ಮಾಡಿದ್ದಾರೆ. ಆ ನಮೂ ನೆಗಳಲ್ಲಿ ಬರೆವಂಥ ಸಂಗತಿಗಳನ್ನು ಮಾಸ್ತರರು ಚನ್ನಾಗಿ ತಿಳುಕೊಂಡು ಎಚ್ಚರದಿಂದ ದಾಖಲೆಯನ್ನು ಕೊಡುತ್ತಿರ ಬೇಕು. ಈ ನಮೂನೆಯನ್ನು ತುಂಬುವಾಗ್ಗೆ ಹುಟ್ಟಿದ ದಿವ ಸ ಮತ್ತು ದಾಖಲೆ ಕೊಡುವ ದಿವಸ ಇವೆರಡನ್ನೂ ಲೆಕ್ಕ ದಲ್ಲಿ ಹಿಡಿಯುತಕ್ಕದ್ದಲ್ಲ.

ವಿದ್ಯಾರ್ಜನೆಯ ಗೌರವದ ಉದ್ದೇಶವನ್ನು ಬಹು ಜನರು ಲಕ್ಷಕ್ಕೆ ತರುವದಿಲ್ಲ. ಅದರಿಂದ ತಪ್ಪುಗಳು ಆಗುತ್ತವೆ. ಅನೇಕ ಜನರು ವಿದ್ಯವನ್ನು ಸಂಪಾದಿಸಲಿಕ್ಕೆ ಹವಣಿಸು ತ್ತಾರೆ. ಅವರಲ್ಲಿ ಕೆಲವರು ಸಾಹಜಿಕವಾದಂಥ ಅನಿವಾರ್ಯ ವಾದಂಥ ಕುತೂಹಲವನ್ನು ಪೂರೈಸುವದಕ್ಕಾಗಿ ವಿದ್ಯಾಭ್ಯಾಸ ನಡಿಸುತ್ತಾರೆ. ಕೆಲವರು ಮನರಂಜನಾರ್ಥವಾಗಿಯೂ ಚಕ್ಕು ತ್ತಾರ ಸಂಗತಿಗಳನ್ನು ತಿಳುಕೊಳ್ಳುವದಕ್ಕಾಗಿಯೂ ಅಭ್ಯಾ ಸ ಮಾಡುತ್ತಾರೆ. ಕೆಲವರು ಜನರಲ್ಲಿ ಮರ್ಯಾದೆಯನ್ನೂ ದೊಡ್ಡಸ್ತಿಕೆಯನ್ನೂ ಪಡೆಯಬೇಕೆಂತಲೂ, ಕೆಲವರು ತಮ್ಮ ವಿದ್ಯದ ಬಲದಿಂದ ಅನ್ಯರನ್ನು ಗೆದ್ದು ತಮ್ಮ ಪಾಂಡಿತ್ಯವನ್ನು ಮೆರಿಸಬೇಕೆಂತಲೂ, ಇನ್ನೂ ಕೆಲವರು ತಮ್ಮ ಹೊಟ್ಟೆ ಹೊರಕೊಳ್ಳುವದಕ್ಕಾಗಿಯೂ ಕಲಿಯುತ್ತಾರೆ. ಈ ಉದ್ದೇ ಶಗಳು ಎಷ್ಟುಮಾತ್ರವೂ ಗೌರವದವಲ್ಲ. ದೇವರು ಕೊ ಟ್ಟ ವಿಚಾರಶಕ್ತಿಯನ್ನು ಬೆಳಸಿ ಅದರಿಂದ ತಮ್ಮ ಹಿತವ ನ್ನೂ, ಅನ್ಯರ ಹಿತವನ್ನೂ ಸಾಧಿಸುವದೇ ವಿದ್ಯಾರ್ಜನೆಯ

ಗೌರವದ ಉದ್ದೇಶವು. ಇದನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು.

ಚಿಕ್ಯಾಗೊ ಮತ್ತು ನ್ಯೂಯಾರ್ಕ ಪಟ್ಟಣಗಳು ಅಕ್ಕೊಟ್ಟೇ ಬರದ ೧೯೧೪ನೇ ತಾರೀಖಿನ ದಿವಸ "ಟೆಲಿಫೋನ" ಎಂಬ ಧ್ವನಿವಾಹಕ ಯಂತ್ರದಿಂದ ಜೋಡಿಸಲ್ಪಟ್ಟವು. ಈ ಹೊತ್ತಿನವರೆಗೆ ಇಷ್ಟು ಉದ್ದ ಟೆಲಿಫೋನು ಎಲ್ಲಿಯೂ ಆಗಿದ್ದಿಲ್ಲ. ನ್ಯೂಯಾರ್ಕದೊಳಗೆ ಮಾತಾಡಿದವನ ಮಾತು ಚಿಕ್ಯಾಗೋ ಪಟ್ಟಣದಲ್ಲಿ ಸ್ಪಷ್ಟವಾಗಿ ಕೇಳಿಸುತ್ತದಂತೆ!!!

ಇಂಗ್ಲಂಡದಲ್ಲಿ ೩೮೦೦೦ ಸ್ತ್ರೀಯರು ವತನದಾರರಿರುತ್ತಾರೆ. ಅವರಲ್ಲಿ ೬೦೦೦ ಸ್ತ್ರೀಯರು ತಮ್ಮ ವತನೀ ಸಂಬಂಧದ ಯಾವತ್ತು ಲೆಕ್ಕ ಪತ್ರಗಳನ್ನು ತಾವೇ ಇಡುವದಲ್ಲದೆ, ಎಲ್ಲ ತರದ ವ್ಯವಸ್ಥೆಗಳನ್ನು ಸ್ವತಃ ಮಾಡುತ್ತಾರೆ. ನಮ್ಮ ದೇಶದಲ್ಲಿ ಇಷ್ಟು ಸುಧಾರಣೆ ಎಂದಾಗುವದೋ ಅದೇ ಸುದಿನವು.

ಪ್ರಾಚ್ಯಭಾಷಾಭಿಜ್ಞ ಜನರ ಸಭೆಯು ಹೋದ ಸಪ್ಟಂಬರ ತಿಂಗಳಿನ ೨೧ನೇ ತಾರೀಖಿನ ದಿವಸ ಲಂದನ ಪಟ್ಟಣದಲ್ಲಿ ನೆರೆದಿತ್ತು. ಆ ಸಭೆಯ ಅಧ್ಯಕ್ಷರು ಮ್ಯಾಕ್ಸಮ್ಯುಲ್ಲರ ರೆಂಬ ಹೆಸರಾದ ಸಂಸ್ಕೃತ ಪಂಡಿತರು ಇರುತ್ತಾರೆ. ಅವರು ಆ ಹೊತ್ತಿಗೆ ಆರ್ಯ ಜನರ ಪ್ರಾಚೀನ ಇತಿಹಾಸದ ಸಂಬಂಧವಾಗಿ ಮಾಡಿದ ಭಾಷಣವು ಅತಿ ಗೌರವವುಳ್ಳದ್ದಿರುವದರಿಂದ ಅದರೊಳಗಿನ ಮುಖ್ಯ ಮುಖ್ಯ ಮಾತುಗಳನ್ನು ಇಲ್ಲಿ ಹೇಳುತ್ತೇವೆ. ಅವು ಯಾವವೆಂದರೆ:—ವಾಯವ್ಯ ದಿಕ್ಕಿನಿಂದ ಹಿಂದುಸ್ತಾನವನ್ನು ಪ್ರವೇಶಿಸಿದಂಥ ಆರ್ಯ ಜನ

ರ ವಂಶಜರೇ ನಾವು ಇರುತ್ತೇವೆಂದು ಈಗ್ಗೆ ಎಲ್ಲ ಶಾಲೆಗಳಲ್ಲಿ ಕಲಿಸುವ ರೂಢಿಯು ಬಿದ್ದಿರುತ್ತದೆ. ಆದರೆ ಆ ಆರ್ಯ ಜನರು ಮೊದಲು ಎಲ್ಲಿ ವಾಸಿಸುತ್ತಿದ್ದರು, ಅವರ ಹಿಂದಿನ ಇತಿಹಾಸವು ಎಲ್ಲಿಯವರೆಗೆ ದೊರೆಯುತ್ತದೆ ಮುಂತಾದ ಸಂಗತಿಗಳನ್ನು ಯಾವ ಗ್ರಂಥದಲ್ಲಿಯೂ ಉಲ್ಲೇಖಿಸಿರುವದಿಲ್ಲ. ಬಂದು ಮೇಳೆ ತುಸು ತುಸು ಪ್ರಸ್ತಾಪಿಸಿದ್ದರೆ ಅದು ಇತ್ತಿತ್ತಣ ವರ್ಣನೆಯೇ ಇರುತ್ತದೆ. ಭಾಷೆಯ ಇತಿಹಾಸದಿಂದ ವಿಚಾರ ಮಾಡಲು, ಆರ್ಯ ಜನರ ಅತಿ ಪ್ರಾಚೀನ ಅಸ್ತಿತ್ವದ ಕಾಲವು ಕ್ರಿ. ಮು. ೧೦,೦೦೦ ವರ್ಷಗಳ ಹಿಂದೆ ಇರುತ್ತದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಮತ್ತು ಕ್ರಿ. ಮು. ೫೦೦೦ ವರ್ಷಗಳ ಹಿಂದೆ ಗ್ರೀಕ ಮತ್ತು ಸಂಸ್ಕೃತ ಭಾಷೆಗಳು ಬಂದನ್ನೊಂದು ಅಗಲಲಿಕ್ಕೆ ಹತ್ತಿದ ಕುರುಹುಗಳನ್ನು ಸ್ಪಷ್ಟವಾಗಿ ತೋರಿಸಬಹುದು. ಇವರಿಂದ ಆರ್ಯ ಜನರ ಭಾಷೆಯು ಮತ್ತು ಅವರ ಪುರಾತನ ಗ್ರಂಥಗಳು ಕ್ರಿ. ಮು. ೪—೫ ಸಾವಿರ ವರ್ಷಗಳ ಹಿಂದೆಯೇ ಇದ್ದವೆಂದು ತಿಳಿದು ಬರುತ್ತದೆ. ಆದದ್ದರಿಂದ ಪೃಥ್ವಿಯೊಳಗಿನ ಯಾವತ್ತು ಗ್ರಂಥಗಳಲ್ಲಿ ಹಿಂದು ಜನರ ಗ್ರಂಥಗಳು ಬಹು ಪ್ರಾಚೀನವಾವಂಥವು ಎಂದು ಅನುಮಾನ ಮಾಡಲಿಕ್ಕೆ ಎನೂ ಬಾಧೆ ತೋರುವದಿಲ್ಲ.

RULES FOR THE ENCOURAGEMENT OF ELEMENTARY DRWING.

ಪ್ರಾಥಮಿಕ ಕಲಾಶಿಕ್ಷಣೋತ್ತೇಜನಾರ್ಥವಾಗಿ ಸರಕಾರದವರು ಪ್ರಕಟಿಸಿವ ನಿಯಮಗಳು.

ಇತ್ತಿತ್ತಲಾಗಿ ಕಲಾಶಿಕ್ಷಣವು ಹೆಚ್ಚಾಗುತ್ತಾ ನಡೆದದ್ದನ್ನು ನೋಡಿ ನಮಗೆ ಬಹಳ ಸಂತೋಷವಾಗುತ್ತದೆ. ಕಲೆ

ಯು ಜ್ಞಾನವು ಸ್ವತಂತ್ರ ಉದ್ಯೋಗಕ್ಕೆ ಬಲವಾದ ಸಾಧನವಾಗಿರುತ್ತದೆ. ಈ ಹೊತ್ತಿನವರೆಗೆ ಕಲಿತು ಸಿದ್ಧರಾದಂಥ ವಿದ್ಯಾರ್ಥಿಗಳು ಸರಕಾರೀ ನೌಕರಿಯನ್ನು ಬಿಟ್ಟು ಉಳಿದ ಹೋರೆಗಳಿಗೆ ಕೈ ಹಾಕದೆ ಇರುವದಕ್ಕೆ ಕಲಾಶಿಕ್ಷಣದ ಅಭಾವವೇ ಕಾರಣವು.

ಪ್ರತಿ ಬಂದು ಹೈಸ್ಕೂಲಿನಲ್ಲಿ ಒಬ್ಬೊಬ್ಬ ಡ್ರಾಯಿಂಗ ಮಾಸ್ತರನನ್ನು ನೇಮಿಸಿ ಚಿತ್ರಕಲೆಯ ಅಭ್ಯಾಸಕ್ಕೆ ಸರಕಾರದವರು ಅನುಕೂಲ ಮಾಡಿ ಕೊಟ್ಟಿರುವದಲ್ಲದೆ ಎಲ್ಲ ಶಾಲೆಗಳಲ್ಲಿ ಚಿತ್ರಕಲೆಯ ಅಭ್ಯಾಸವು ಭರದಿಂದ ಸಾಗುವಂತೆ ಕೆಲವು ನಿಯಮಗಳನ್ನು ಮಾಡಿ ಅವುಗಳನ್ನು ಸಪ್ಟಂಬರ ೨೦ನೇ ತಾರೀಖಿನ ಗ್ಯಾಜೇಟಿನಲ್ಲಿ ಪ್ರಸಿದ್ಧಿಸಿರುತ್ತಾರೆ. ಅವುಗಳನ್ನು ಮಾಸ್ತರ ಜನರ ಸಲುವಾಗಿ ಇಲ್ಲಿ ಕೊಟ್ಟಿರುತ್ತೇವೆ. ಲೋಕಲ್ ಫಂಡ ಮಾಸ್ತರರಲ್ಲಿ ಅನೇಕರು ಡ್ರಾಯಿಂಗ ಕಲಿತವರಿರುತ್ತಾರೆ. ಅವರು ತಮ್ಮ ಅಭ್ಯಾಸವನ್ನು ಬೆಳಿಸಿ "ಸೆಕಂಡಗ್ರೇಡ" ಪರೀಕ್ಷೆಯನ್ನು ಕೊಟ್ಟು ಈ ಹೊಸ ನಿಯಮಗಳಂತೆ ಇನಾಮು ಪಡೆದು ತಮ್ಮ ಸ್ಥಿತಿಯನ್ನು ಸುಧಾರಿಸುವರೆಂದು ನಾವು ನಂಬುತ್ತೇವೆ.

ಪ್ರಾಥಮಿಕ ಚಿತ್ರಕಲಾ ಶಿಕ್ಷಣೋತ್ತೇಜನಾರ್ಥವಾಗಿ ಮಾಡಿದ ನಿಯಮಗಳು.

೧. ಶಾಲೆಗಳ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ಪ್ರತಿಯೊಬ್ಬ ವಿದ್ಯಾರ್ಥಿಯಬಗ್ಗೆ ಕೊಡಲ್ಪಡುವ ಗ್ರಾಂಟವು ಹ್ಯಾಗಂದರೆ:—

---

* ಈ ನಿಯಮದ ಆ, ಬ, ಕ ಕಲಮುಗಳಲ್ಲಿ ಕಾಣಿಸಿದ ರಕಮುಗಳು ಗ್ರಾಂಟ ಇದ ಏಡ ಶಾಲೆಗಳೊಳಗಿನ ೧೪ ವರ್ಷಕ್ಕಿಂತ ಕಡಿಮಿ ವಯಸ್ಸಿನ್ನಳ್ಳ ವಿದ್ಯಾರ್ಥಿಗಳ ಸಲುವಾಗಿಯೇ ಇರುತ್ತವೆ. ಡ ಕಲವಿನಲ್ಲಿ ಕಾಣಿಸಿದ ರಕಮು ಗ್ರಾಂಟ-ಇನ್-ಏಡ ಶಾಲೆಗಳೊಳಗಿನ ವಿದ್ಯಾರ್ಥಿಗಳ ಸಲುವಾಗಿ ವಯಸ್ಸಿನ ನಿರ್ಬಂಧವಿಲ್ಲದೆ ಕೊಡಲಾಗುವದು.

ರೂ. ಆ.

(ಅ) ೧ನೇ ಗ್ರೇಡಿನ ಪ್ರತಿ ಬಂದು ವಿಷಯಕ್ಕೆ "ಫೇರ್" (ಸಾಧಾರಣ) ಎಂಬ ಗುಣ ಪಡೆದ ವಿದ್ಯಾರ್ಥಿಯ ದೆಸೆಯಿಂದ. ೦—೮

(ಬ) ೧ನೇ ಗ್ರೇಡಿನ ಪ್ರತಿ ಬಂದು ವಿಷಯಕ್ಕೆ "ಗುಡ್" (ಚಲೊ) ಎಂಬ ಗುಣ ಪಡೆದ ವಿದ್ಯಾರ್ಥಿಯ ದೆಸೆಯಿಂದ. ೧—೦

(ಕ) ೧ನೇ ಗ್ರೇಡಿನ ಪ್ರತಿ ಬಂದು ವಿಷಯಕ್ಕೆ "ಎಕ್ಸಲೆಂಟ" (ಉತ್ತಮ) ಎಂಬ ಗುಣ ಪಡೆದ ವಿದ್ಯಾರ್ಥಿಯ ದೆಸೆಯಿಂದ. ೨—೦

(ಡ) ೨ನೇ ಗ್ರೇಡಿನ ಪ್ರತಿಯೊಂದು ವಿಷಯದ ದೆಸೆಯಿಂದ. ೪—೦

೨. ೨ನೇ ಗ್ರೇಡಿನ ಸರ್ಟಿಫಿಕೇಟನ್ನು ಪಡೆದಂಥ ಮತ್ತು ತಮ್ಮ ಶಾಲೆಗಳಲ್ಲಿ ಚಿತ್ರ ಕಲೆಯನ್ನು ಕಲಿಸುತ್ತಿರುವಂಥ ಪಾಲಾ ಮಾಸ್ತರರಿಗಾಗಲಿ, ಪ್ಯೂಪಿಲ-ಚೀಟರರಿಗಾಗಲಿ, ಅವರ ಕೈಯಲ್ಲಿ ೧೦ಕ್ಕಿಂತ ಕಡಿಮೆಯಿಲ್ಲದಷ್ಟು ವಿದ್ಯಾರ್ಥಿಗಳು ೧ನೇ ಗ್ರೇಡ ಸರ್ಟಿಫಿಕೇಟನ್ನು ಪಡೆದರೆ, ೧೦೦ ರೂ. ಇನಾಮು ದೊರೆಯುವವು. ಬಂದು ದೊಡ್ಡ ಶಾಲೆಯಲ್ಲಿಯಾಗಲಿ, ಹಲವು ಶಾಲೆಗಳಿಗೆ ಕೂಡಿಯಾಗಲಿ ಚಿತ್ರ ಕಲೆಯನ್ನು ಕಲಿಸುತ್ತಿರುವಂಥ ಡ್ರಾಯಿಂಗ ಮಾಸ್ತರರಿಗೆ ಸಹ ಈ ನಿಯಮಗಳು ಹತ್ತುತ್ತವೆ. ಮಾಸ್ತರರು ೩ನೇ ಗ್ರೇಡ ಸರ್ಟಿಫಿಕೇಟನ್ನು ಪಡೆದವರಿದ್ದರೆ, ಅವರಿಗೆ ೧೫೦ ರೂ. ಉಚಿತವಾಗಿ ದೊರೆಯುವವು.

೩. ಕೆಳಗಿನ ನಿಯಮಗಳು ಚಿತ್ರಕಲೆಯನ್ನು ಕಲಿಸುತ್ತಿರುವ ಈ ಇಲಾಖೆಯೊಳಗಿನ ಎಲ್ಲ ಶಾಲೆಗಳಿಗೂ, ಕಾಲೇಜುಗಳಿಗೂ ಹತ್ತುತ್ತವೆ.

೪. ಇನಾಮುಗಳೂ ಸರ್ಟಿಫಿಕೇಟುಗಳೂ— ೧ನೇ ಅಥವಾ ೨ನೇ ಗ್ರೇಡಿನ ಯಾವದೊಂದು ವಿಷಯಕ್ಕೆ "ಎಕ್ಸಲೆಂಪ" (ಉತ್ತಮ) ಎಂಬ ಗುಣ ಪಡೆದ ವಿದ್ಯಾರ್ಥಿಗೆ ಒಂದೊಂದು ಇನಾಮೂ, ೧ನೇ ಅಥವಾ ೨ನೇ ಗ್ರೇಡಿನ ಎಲ್ಲ ವಿಷಯಗಳಲ್ಲಿ ಪಾಸಾದ ವಿದ್ಯಾರ್ಥಿಗೆ ಆಯಾ ಗ್ರೇಡಿನ ಒಂದೊಂದು ಸರ್ಟಿಫಿಕೇಟೂ ಕೊಡಲಾಗುವದು.

೧ನೇ ಗ್ರೇಡಿನ ಇನಾಮುಗಳು ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮಾತ್ರ ಸಿಗುವವು.

೫. ೧ನೇ ೨ನೇ ಗ್ರೇಡುಗಳ ಪರೀಕ್ಷೆಗಳು ವರ್ಷಕ್ಕೊಮ್ಮೆ ಏಪ್ರಿಲ ತಿಂಗಳಿನಲ್ಲಿ ಆಗುವವು.

೬. ೧ನೇ ಗ್ರೇಡಿನ ವಿಷಯಗಳು ಯಾವವೆಂದರೆ:—

(ಅ) ಸಾದಾ ಫ್ರೀಹ್ಯಾಂಡ ಡ್ರಾಯಿಂಗ.

(ಬ) ಸಾದಾ ಮಾಡೆಲ ಮತ್ತು ಅಬ್ಜೆಕ್ಟ ಡ್ರಾಯಿಂಗ (ಕಂಪಾಸ ಮುಂತಾದ ಯಾವದೊಂದು ಯಂತ್ರದ ಸಹಾಯವಿಲ್ಲದೆ ಬರಿಗೈಯಿಂದ ಚಿತ್ರ ತೆಗಿಯುವದು.) (ಮುಂದಿಟ್ಟ ಪದಾರ್ಥವನ್ನು ಅಥವಾ ಹಣ್ಣುಅಂಪಲಗಳನ್ನು ನೋಡಿ ಚಿತ್ರ ತೆಗಿಯುವದು.)

(ಕ) ಕರ್ತವ್ಯಭೂಮಿತಿ.

೫. ೧ನೇ ಗ್ರೇಡಿನ ಸಾದಾ ಫ್ರೀಹ್ಯಾಂಡ ಡ್ರಾಯಿಂಗ.

ಸಾದಾ ಫ್ರೀಹ್ಯಾಂಡ ಡ್ರಾಯಂಗ ಅಂದರೆ ರೂಲು ಹೊಡೆಯದೆ, ಅಳತೆ ಮಾಡದೆ, ಒಂದರ ಮೇಲೊಂದನ್ನಿಟ್ಟು ನಕಲು ಮಾಡದೆ, ಯಾವದೊಂದು ಯಾಂತ್ರಿಕ ಸಾಧನವನ್ನು ಉಪಯೋಗಿಸದೆ, ಸೀಸಪೇನು ಕಾಗದ (ಅಥವಾ ಪಾಟಿ) ರಬ್ಬರ ಇವುಗಳಿಂದಲೇ ಚಿತ್ರವನ್ನು ತೆಗೆಯೋಣ.

ಚಿತ್ರ ತೆಗೆಯಲಿಕ್ಕೆ ಕೊಡುವಂಥ ಪದಾರ್ಥವು ಹೂವು, ಎಲೆ, ಹಣ್ಣು, ವಿದ್ಯಾರ್ಥಿಗಳಿಗೆ ಗೊತ್ತಿರುವಂಥ ಯಾವದೊಂದು ಬಡವೆ ಇದ್ದು ಅದು ತೆಗೆಯಲಿಕ್ಕೆ ಸುಲಭವಾದದ್ದೂ ಅಂದವಾದದ್ದೂ ಇರಬೇಕು.

೪. ೧ನೇ ಗ್ರೇಡಿನ ಮೊದಲ ಡ್ರಾಯಿಂಗ.

ಮೊದಲ ಡ್ರಾಯಿಂಗ ಅಂದರೆ ವಿದ್ಯಾರ್ಥಿಗಳಿಗೆ ಸಕ್ರಮವುತ್ತು ಸರಳ ರೇಖೆಗಳನ್ನು ತೆಗೆಯಲಿಕ್ಕೆ ಅನುಕೂಲವಾಗುವಂತೆ ಇಟ್ಟಂಥ ಯಾವದೊಂದು ಬಡವೆಯನ್ನು ನೋಡಿ ಚಿತ್ರ ತೆಗೆಯುವದು. ದೇಶೀಯ ಮಣ್ಣಿನ ಮತ್ತು ಹಿತ್ತಾಳೆಯ ಪಾತ್ರೆಗಳೂ, ಸುರತ ಪಟ್ಟಣದ ಲಟಿದ ಸಾಮಾನುಗಳೂ ಈ ಕೆಲಸಕ್ಕೆ ತಕ್ಕ ಪದಾರ್ಥಗಳಾಗಿರುತ್ತವೆ.

ಕ. ಕರ್ತವ್ಯ ಭೂಮಿತಿ.

ಕರ್ತವ್ಯ ಭೂಮಿತಿಯು ಮೂಲತತ್ವಗಳನ್ನೂ, ಚಿತ್ರ ಕರ್ಮದಲ್ಲಿ ಉಪಯೋಗಿಸುವ ಕಂಪಾಸು, ವರ್ತುಳ ಮುಂತಾದ ಸಾಧನಗಳ ಪ್ರಯೋಜನವನ್ನೂ ತಿಳಿಸುವ ಉದ್ದೇಶದಿಂದ ಈ ವಿಷಯವನ್ನು ಇಟ್ಟಿರುತ್ತದೆ. ಒಬ್ಜೆಕ್ಟಿನ ಕರ್ತವ್ಯ ಭೂಮಿತಿಯು ೧—೩೦, ೩೩ ಮತ್ತು ೩೫ ಸಿದ್ಧಾಂತಗಳಲ್ಲಿಯೂ "ಟ್ರ್ಯಾಮೆಲ್ಲ" ದ ಸಹಾಯದಿಂದ ದೀರ್ಘವರ್ತುಲ ತೆಗೆಯುವದನ್ನು ತಿಳಿಸುವಂಥ ಸಿದ್ಧಾಂತದಲ್ಲಿಯೂ ಪರೀಕ್ಷೆಯಾಗುವದು.

೭. ೧ನೇ ಗ್ರೇಡಿನ ಅಭ್ಯಾಸಕ್ಕಾಗಿ ವಾರಕ್ಕೆ ೩ ತಾಸುಗಳಿಗಿಂತ ಕಡಿಮೆ ವೇಳೆಯು ಇರಕೂಡದು.

೮. ವಿದ್ಯಾರ್ಥಿಗಳು ೧ನೇ ಗ್ರೇಡಿನ ಮೂರೂ ವಿಷಯುಗಳಲ್ಲಿ ಪರೀಕ್ಷೆ ಕೊಡತಕ್ಕದ್ದು. ಬಂದು ವಿಷಯದಲ್ಲಿ ನಾಪಾ

ಸೂದ ವಿದ್ಯಾರ್ಥಿಯು ಮುಂದಿನ ವರ್ಷ ಅದೇ ವಿಷಯದಲ್ಲಿ ಮತ್ತೊಮ್ಮೆ ಪರೀಕ್ಷೆ ಕೊಡಬಹುದು.

೯. ೧ನೇ ಗ್ರೇಡಿನ ಎಲ್ಲ ವಿಷಯಗಳಲ್ಲಿ ಪಾಸಾಗದ ವಿದ್ಯಾರ್ಥಿಯು ೨ನೇ ಗ್ರೇಡಿನ ಪರೀಕ್ಷೆಗೆ ಕೂಡ್ರಲಿಕ್ಕೆ ತಕ್ಕವನಾಗಲಾರನು.

೧೦. ೨ನೇ ಗ್ರೇಡಿನ ಪರೀಕ್ಷೆಯ ವಿಷಯಗಳು ಯಾವ ಮೆಂವರೆ:—

(ಅ) ಕಾಗದವ ಮೇಲಿನ ಚಿತ್ರವನ್ನು ನೋಡಿ ಫ್ರಿ ಹ್ಯಾಂಡ ಚಿತ್ರ ತೆಗೆಯುವದು.

(ಬ) ಎದುರಿಗೆ ಇಟ್ಟ ಪದಾರ್ಥಗಳನ್ನು ನೋಡಿ ಫ್ರಿ ಹ್ಯಾಂಡ ಚಿತ್ರ ತೆಗೆಯುವದು.

(ಕ) ಕರ್ತವ್ಯ ಭೂಮಿತಿ.

(ಡ) ಪದಾರ್ಥವು ಕಣ್ಣಿಗೆ ಕಂಡಂತೆ, ರೇಖೆಗಳಿಂದ ಆಕೃತಿ ತೆಗೆದು ತೋರಿಸುವದು.

(ಇ) ಯಾವದೊಂದು ಪದಾರ್ಥವನ್ನು ನೋಡಿ ಅಥವಾ ಚಿತ್ರವನ್ನು ನೋಡಿ ಜೋರ್ಡಿನ ಮೇಲೆ ಅದರ ಆಕೃತಿಯನ್ನು ಸಿದ್ಧವಾಡಿ ತೋರಿಸುವದು.

೧೧. ೨ನೇ ಗ್ರೇಡಿನ ಸರ್ಟಿಫಿಕೇಟ ಪರೀಕ್ಷೆಯು ಉಮೇದವಾರರು ಕೆಳಗಿನ ವಿಷಯಗಳಲ್ಲಿ ಪರೀಕ್ಷೆ ಕೊಡತಕ್ಕದ್ದು.

(ಅ) ಕಾಗದದ ಮೇಲೆ ತೆಗೆದ ಚಿತ್ರವನ್ನು ನೋಡಿ ನೇಮಿಸಿದ ವೇಳೆಯಲ್ಲಿ ಮತ್ತೊಂದು ಕಾಗದದ ಮೇಲೆ ಚಿತ್ರ ತೆಗೆಯುವದು.

(ಬ) ಪರೀಕ್ಷಕರು ಎದುರಿಗೆ ಇಟ್ಟಂಥ ಪದಾರ್ಥಗಳ ಸಮೂಹವನ್ನು ನೋಡಿ ಚಿತ್ರ ತೆಗೆಯುವದು.

(ಕ) ಕೆಳಗೆ ಬರೆದ ಸಿದ್ಧಾಂತದ ಪ್ರಶ್ನೆಗಳನ್ನು ಕಾಗದದ ಮೇಲೆ ಬಿಡಿಸುವದು. ಅವು ಯಾವವೆಂದರೆ:—

೧. ಆರ್ ಬರ್ಚಿಟಿ ಸಾಹೇಬರು ಮಾಡಿದ ಸರಳ ಭೂಮಿತಿಯೊಳಗಿನ ಪ್ರಶ್ನೆಗಳು ೧ರಿಂದ ೧೦೫ವರೆಗೆ; ಅವುಗಳಲ್ಲಿ ಕೆಳಗೆ ಬರೆದವುಗಳನ್ನು ಬಿಡತಕ್ಕದ್ದು:—೩೪, ೩೫, ೩೬, ೩೯, ೪೧, ೪೩, ೪೪, ೪೫, ೪೫, ೪೬, ೪೮, ೫೦, ೫೧, ೫೩, ೫೫, ೫೬, ೫೭, ೫೮ ಮತ್ತು ೬೦.

೨. ಜ್ಯಾನ್ ಕ್ಯಾರೋಲ ಸಾಹೇಬರು ರಚಿಸಿದ ಕರ್ತವ್ಯಭೂಮಿತಿಯ ೩ನೇ ಪಾಠದೊಳಗಿನ ೪೯ನೇ ಸಿದ್ಧಾಂತದ ಮತ್ತು ೪ನೇ, ೯ನೇ, ೧೦ನೇ, ೧೬ನೇ, ೧೭ನೇ, ೧೪ನೇ ಪಾಠಗಳಲ್ಲಿ ಹೇಳಿರುವ ಸಿದ್ಧಾಂತಗಳ ಮೇಲೆಗೆ ಮಾಪನ ರೇಖೆಗಳನ್ನು ರಚಿಸುವದು, ಮತ್ತು ಮುಂದಿಟ್ಟ ನಮೂನೆಯನ್ನು ನೋಡಿ ಚಿತ್ರ ತೆಗೆಯುವದರಲ್ಲಿ ಆ ಮಾಪಕ ರೇಖೆಗಳ ಉಪಯೋಗವನ್ನು ಮಾಡುವದು.

೩. ಕ್ಯಾರೋಲ ಸಾಹೇಬರ ಕರ್ತವ್ಯಭೂಮಿತಿಯಲ್ಲಿ ತಿರ್ಯಕ್ ಪಾತಳಿಗಳಿಂದ ಘನಾಕೃತಿಗಳಲ್ಲಿ ಆಗುವ ಛೇದಗಳ ಸಂಬಂಧದ ಪಾಠಗಳನ್ನಷ್ಟು ಹೊರ್ತುಪಡಿಸಿ ಉಳಿದ ಘನಾಕೃತಿಗಳ ಸಂಬಂಧದ ಭೂಮಿತಿಯ ಮೂಲತತ್ವಗಳ ಪಾಠಗಳು (ಅಂದರೆ ಅಫರ್ಮಾಗ್ರ್ಯಫಿಕ್ ಪ್ರೊಜೆಕ್ಷನ್).

(ಡ) ಪ್ರತಿಜ ಸಮೀಂತರ ಪಾತಳಿಯಲ್ಲಿ ಅಂತರಹಿತ (ಅವಿನಾಶ) ಬಿಂದು ಮತ್ತು ಮಾಪಕ ಬಿಂದು ಇವುಗಳನ್ನು ತೆಗೆ

---

* ಜಾನಕ್ಯಾರೋಲ ಸಾಹೇಬರ ಕರ್ತವ್ಯಭೂಮಿತಿ ಎಂಬ ಪ್ರಸ್ತಕವು ಮುಂಬಯಿಯಲ್ಲಿ ಕಾಳ್ಬಾದೇವೀ ಬೀದಿಯಲ್ಲಿ ಇರುವ ರಾಧಾಬಾಯಿ ಆತ್ಮಾರಾಮ ಸಗುಣ ಇವರ ಡಿಪೂದಲ್ಲಿ ಸಿಗುವದು.

ದುಕೊಂಡು ಇವುಗಳ ಸಹಾಯದಿಂದ ಎಫಾದರ್ಥನ ಚಿತ್ರಗಳನ್ನು ತೆಗೆಯುವದು, ಮತ್ತು ಬೇಕಾದ ಸ್ಥಿತಿಯಲ್ಲಿ (ಅಂದರೆ ಅಡ್ಡವಾಗಲಿ, ಉದ್ದವಾಗಲಿ, ಇಳಿಜಾರಾಗಲಿ) ಇಟ್ಟಂಥ ಘನಾಕೃತಿಗಳ ಚಿತ್ರಗಳನ್ನು ತೆಗೆಯುವದು.

(ಇ) ಹೇಳಿದ ಚಿತ್ರವನ್ನು ಪರೀಕ್ಷಕರ ಎದುರಿಗೆ ಕರೆ ಹಲಿಗೆಯ ಮೇಲೆ ತೆಗೆದು ಅವನ್ನು ಬಂದು ವರ್ಗಕ್ಕೆ ತಿಳಿಸಿ ಕೊಡುವದು.*

೧೦. ಅನುಕೂಲವಾದ ಮೇರೆಗೆ ಎನೇ ಗ್ರೇಡಿನ ಬಿ. ದೊಂದು ವಿಷಯವನ್ನು ಆರಿಸಿಕೊಂಡು ಅದರಲ್ಲಿ ಪರೀಕ್ಷೆ ಕೊಡಬಹುದು; ಆದರೆ ಆಯಾ ವಿಷಯದ ಸಿದ್ಧತೆಯ ಬಗ್ಗೆ ಪರೀಕ್ಷಕರನ್ನು ಮನಗಾಣಿಸುವದಕ್ಕಾಗಿ ತಾವು ತೆಗೆದ ಬಂದು ಮಾದರಿಯನ್ನು ಮುಂಬಯಿಯಲ್ಲಿರುವ ಜೇಮಸೇಟ್‌ಜಿ ಜೀಜಿ ಭಾಯ ಸ್ಕೂಲ ಆಫ್ ಆರ್ಟ ಎಂಬ ವಿದ್ಯಾಲಯಕ್ಕೆ ಎನೇ ಮಾರ್ಕದ ಬಳಗಾಗಿ ಕಳುಹಿಸತಕ್ಕದ್ದು. ಆ ಮಾದರಿಯನ್ನು ಪರೀಕ್ಷಕರು ಪಸಂದ ಮಾಡಿದರೆ, ಆ ವಿದ್ಯಾರ್ಥಿಯು ನಾರ್ಮಿಕ ಪರೀಕ್ಷೆಗೆ ಕೂಡ್ರಬಹುದು.

೧೩. ಉಮೇದವಾರರು ಕಳುಹಿಸತಕ್ಕ ಮಾದರಿಗಳು ಯಾವವೆಂದರೆ:—

(ಅ) ಕಾಗದದ ಮೇಲಿನ ಚಿತ್ರಗಳನ್ನು ನೋಡಿ ತೆಗೆದಂಥಾದ್ದೊಂದು ಚಿತ್ರವು.

(ಬ) ಪದಾರ್ಥಗಳ ಸಮೂಹವನ್ನು ನೋಡಿ ತೆಗೆದಂಥ ಚಿತ್ರವು.

---

* ಈ ವಿಷಯವು ಡ್ರಾಯಿಂಗ ಮಾಸ್ತರರ ಉದ್ಯೋಗವನ್ನು ಪಡೆಯಬಯಸುವ ಉಮೇದವಾರರ ಸಲುವಾಗಿ ಮಾತ್ರ ಇರುತ್ತದೆ. ಈ ವಿಷಯದ ಪರೀಕ್ಷೆಯು ಮುಂಬಯಿಯಲ್ಲಿಯೇ ಆಗುವದು.

(ಕ) ಆರಕ್ಕಿಂತ ಹೆಚ್ಚು ಸಿದ್ಧಾಂತದ ಪ್ರಶ್ನೆಗಳನ್ನು ಬಿಡಿಸಿದಂಥ ಬಂದು ಪತವು.

(ಡ) ವದಾರ್ಥವು ಕಣ್ಣಿಗೆ ಕಂಡಂತೆ ಬರೇ ರೇಖೆಗಳಿಂದ ಸಿದ್ಧ ಮಾಡಿದ ಚಿತ್ರ.

ಮೇಲಿನ ನಮೂನೆಗಳನ್ನು ಇಂಪಿರಿಯಲ್ ಎಂಬ ಕಾಗದದ ಅರ್ಧ ಹಾಳೆಯ ಮೇಲೆ (೨೧″×೧೫″) ತೆಗೆಯಬೇಕು, ಮತ್ತು ಅವುಗಳನ್ನು ೧೫ನೇ ಮಾರ್ಚದ ದಿವಸವಾಗಲಿ, ಅದಕ್ಕೂ ಪೂರ್ವದಲ್ಲಿಯಾಗಲಿ ಪ್ರತಿಯೊಂದು ವಿಷಯಕ್ಕೆ ಬಂದೊಂದು ರೂಪಾಯಿ ಫೀ ಸಹಿತವಾಗಿ "ಜೀಮ್ಸೇಟಜೀ ಜೀಜಿಭಾಯ್ ಸ್ಕೂಲ ಆಫ ಆರ್ಟ" ವಿದ್ಯಾಲಯಕ್ಕೆ ಕಳುಹಿಸಿಕೊಡಬೇಕು.

೧೪ ಬಂದು ವಿಷಯವಲ್ಲಿ ಬಂದಾವತಿ ಪಾಸಾದ ವಿದ್ಯಾರ್ಥಿಯನ್ನು ಅದೇ ವಿಷಯದಲ್ಲಿ ಮತ್ತೊಮ್ಮೆ ಪರೀಕ್ಷಿಸಲಿಕ್ಕಿಲ್ಲ.

೧೫. ಮುಂಬಯಿ ಪಟ್ಟಣದಲ್ಲಿರುವ ಶಾಲಾಗುರುಗಳೂ ಪ್ಯೂಪಿಲಟೀಚರರೂ ಜೀಮ್ಸೇಟಜೀ ಜೀಜಿಭಾಯ್ ಸ್ಕೂಲ ಆಫ ಆರ್ಟ ವಿದ್ಯಾಲಯದಲ್ಲಿ ಬೆಳಗ್ಗೆ ಹೋಗಿ ನಿಯಮಿತ ಫೀ ಕೊಟ್ಟು ಒನೇ ಗ್ರೇಡಿನ ಸರ್ಟಿಫಿಕೇಟ ಪರೀಕ್ಷೆಯ ಅಭ್ಯಾಸವನ್ನು ಮಾಡಬಹುದು.

ಟಿಪ್ಪಣಿ—ಆರ್ ಬರ್ಜೆಟ್ ಸಾಹೇಬರ ಕರ್ತವ್ಯಭೂಮಿತಿಯು ಮರಾಠಿ, ಗುಜರಾಥಿ ಮತ್ತು ಕನ್ನಡ ಭಾಷಾಂತರಗಳು ಸರಕಾರೀ ಬುಕ್ಕ ಡಿಪೋಗಳಲ್ಲಿ ಸಿಗುವವು.

ಮುಂದಿನ ವರ್ಷ ಆಗತಕ್ಕ ಪರೀಕ್ಷೆಯು ಈ ಸುಧಾರಿಸಿದ ನಿಯಮಗಳ ಮೇರೆಗೆ ಆಗುವದು. ಪರೀಕ್ಷೆಯನ್ನು ಸರ್ ಜೀಮ್ಸೇಟಜೀ ಜೀಜಿಭಾಯ್ ಸ್ಕೂಲ ಆಫ್ ಆರ್ಟ ವಿದ್ಯಾಲಯದವರು ತೆಗೆದುಕೊಳ್ಳುವರು.

DEPARTMENTAL NOTICE.

ನೋಟೀಸು.

ಸ ೧೮೭೩ನೇ ಇಸವಿಯ ಅಕ್ಟೋಬರ ತಿಂಗಳ ಬಾಂಬಾ ಪತ್ರಕದ ೧೪ರಿಂದ ೧೬ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಷ ಪ್ರಾಯಜೀಜ್" ಎಂಬ ಇನಾಮುಗಳಿಗಾಗಿ ಪರೀಕ್ಷೆಯನ್ನು ಕೆಳಗೆ ಸಹಿ ಮಾಡಿದವರು ಸ ೧೮೭೪ನೇ ಇಸವಿಯ ಅಕ್ಟೋಬರ ತಿಂಗಳ ೨೦ನೇ ತಾರೀಖು ಸೋಮವಾರ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತೆಗದುಕೊಳ್ಳುವರು. ೪೦ ರೂಪಾಯಿಗಳದು ಒಂದು, ೨೦ ರೂಪಾಯಿಗಳದು ಮತ್ತೊಂದು, ಹೀಗೆ ಎರಡು ಇನಾಮುಗಳಿರುತ್ತವೆ. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ಸ ೧೮೭೪ನೇ ಇಸವಿಯ ಸಪ್ಟಂಬರ ೨೦ನೇ ತಾರೀಖಿನ ಪೂರ್ವದಲ್ಲಿ ಅಥವಾ ಪರಮಾವಧಿ ಆ ತಾರೀಖಿನ ದಿವಸ ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಿಸ ಬೇಕು. ಪರೀಕ್ಷೆಯು ಬೆಳಿಗಿನ ೧೦½. ಘಂಟಿಗೆ (ಮದ್ಯಾಸ ವೇಳೆ) ಪ್ರಾರಂಭವಾಗುವದು.

ಧಾರವಾಡ.
೧೦ನೇ ನವಂಬರ ೧೮೭೩.

S. V. Patwardhan,
ಎಜ್ಯುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

ನೋ ಟಿ ಸು.

ಸ ೧೮೭೩–೭೪ನೇ ವರ್ಷ ದಕ್ಷಿಣ ಭಾಗದಲ್ಲಿ ಅಂದರೆ ಬೆಳಗಾವ, ಧಾರವಾಡ, ವಿಜಾಪುರ, ಕಾನಡಾ, ಕುಲಾಬಾ, ರತ್ನಾಗಿರಿ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ನೆರೆಯ ಸಂಸ್ಥಾನಗಳ ಸಂಬಂಧದಿಂದ ಕೊಲ್ಹಾಪೂರದಲ್ಲಿಯೂ ಲಗುವಂಥ ೨ನೇ ಮತ್ತು ೩ನೇ ಗ್ರೇಡಿನ ಮುಲ್ಕೀ ಪರೀಕ್ಷೆಗಳಿಗಾಗಿ ಕೆಳಗೆ ಕಾಣಿಸಿದ ಪುಸ್ತಕಗಳು ನೇಮಿಸಲ್ಪಟ್ಟಿರುತ್ತವೆ.

೨. ಬೆಳಗಾವಿ ಪಟ್ಟಣದಲ್ಲಿ ಆಗುವ ಪರೀಕ್ಷೆಗಳು ಇಂಗ್ಲಿಷ, ಕನ್ನಡ ಹಾಗು ಮರಾಠೀ ಭಾಷೆಗಳಲ್ಲಿ ನಡೆಯುವವು. ಧಾರವಾಡ, ವಿಜಾಪುರ ಮತ್ತು ಕಾರವಾರ ಪಟ್ಟಣಗಳಲ್ಲಿ ಇಂಗ್ಲಿಷ ಮತ್ತು ಕನ್ನಡ ಭಾಷೆಗಳಲ್ಲಿ ನಡೆಯುವವು. ರತ್ನಾಗಿರಿ, ಕುಲಾಬಾ, ಕೊಲ್ಹಾಪುರ ಪಟ್ಟಣಗಳಲ್ಲಿ ಇಂಗ್ಲಿಷ ಹಾಗೂ ಮರಾಠಿಭಾಷೆಗಳಲ್ಲಿ ನಡೆಯುವವು. ಬೂ ಮಿ ಪೇಳಿ ಉರ್ದೂ ಭಾಷೆಯಲ್ಲಿ ಪರೀಕ್ಷೆ ಕೊಡುವವರಿದ್ದರೆ ಅವರಿಗೆ, ಅನುಕೂಲತೆಯು ಹೇರೆಗೆ ಇಂಥ ಪಟ್ಟಣದಲ್ಲಿ ಪರೀಕ್ಷೆ ಕೊಡ ಬಹುದೆಂದು ಹುಕುಮು ಕೊಡಲಾಗುವದು.

೩. ಮಹಾರಾಷ್ಟ್ರ ಭಾಷೆಯಲ್ಲಿ ಪರೀಕ್ಷೆ ಕೊಡಲಪೇಕ್ಷಿಸುವ ಧಾರವಾಡ, ವಿಜಾಪುರ, ಕಾನಡಾ ಜಿಲ್ಲೆಗಳೊಳಗಿನ ಉಮೇದವಾರರು ಮೊದಲು ನಮ್ಮ ಅಪ್ಪಣೆಯನ್ನು ಪಡಕೊಂಡು ಬೆಳಗಾವಿ, ಸೊಲ್ಹಾಪುರ, ರತ್ನಾಗಿರಿ, ಕೊಲ್ಹಾಪುರ ಮತ್ತು ಸಾತಾರಾ ಈ ಐದು ಪಟ್ಟಣಗಳಲ್ಲಿ ತಮಗೆ ಸವಿುಪವಾಗಿಯೂ ಅನುಕೂಲವಾಗಿಯೂ ಇರುವಂಥ ಯಾವದಾದರೊಂದರಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು.

ಎನೇ ಗ್ರೇಡ ಸರ್ಟಿಫಿಕೇಟಿನ ಪರೀಕ್ಷೆಗಾಗಿ ನೇವಿುಸಲ್ಪಟ್ಟ ಪುಸ್ತಕಗಳು.

(ಈ ಪರೀಕ್ಷೆಯು ಮುಖ್ಯವಾಗಿ ಇಂಗ್ಲಿಷದಲ್ಲಿ ಆಗುವದು.)

ಇಂಗ್ಲಿಸ ಸಾಹೇಬರ ಪುಸ್ತಕದಲ್ಲಿ ಅಥವಾ ಬೇರೆ ಪುಸ್ತಕದಲ್ಲಿ ಇಲ್ಲವೆ ಯಾವದಾದರೊಂದು ಕ್ರಮಿಕ ಪುಸ್ತಕದಲ್ಲಿ ಪೇಳಿವ ಮುಬೇರಜೀ ಜಮಾಖರ್ಚಿನ ಮೂಲತತ್ವಗಳು.

ಇಂಗ್ಲಿಷ ಗದ್ಯ—"ವಿಕಾರ ಆಫ್ ವೇಕ್‌ಫೀಲ್ಡ" ದಿಂದ ೩೦ ಅಧ್ಯಾಯಗಳು ಸಂಪೂರ್ಣ ಅಥವಾ "ರಾಬಿನ್‌ಸನ್ ಕ್ರೂಸೋ"ವ ಆರಂಭದ ೩೦ ಪುಟಗಳು.

ಇಂಗ್ಲಿಷ ಪದ್ಯ—"ಗೋಲ್ಡ ಸ್ಮಿಥ" ನ ಟ್ರ್ಯಾವೆಲ್ಲರದ ಮೊದಲಿನ ೪೦೦ ಪಂಕ್ತಿಗಳು, ಅಥವಾ ಸ್ಕಾಟನ "ಲೇಡೀ ಆಫ್ ದಿ ಲೇಕ" ದೊಳಗಿನ ೪ನೇ ಕ್ಯಾಂಟೋ (ಸರ್ಗ).

ಮರಾಠೀ ಗದ್ಯ—ಕೃಷ್ಣ ಶಾಸ್ತ್ರೀ ಚಿಪಳೂಣಕರ ಕೃತ "ಅನೇಕ ವಿದ್ಯಾ ಮೂಲ ತತ್ವ ಸಂಗ್ರಹ."

ಕನ್ನಡ—ಕನ್ನಡ ೬ನೇ ಪುಸ್ತಕ ಪೂರ್ವಾರ್ಧ.

ಸ್ಯಾನಿಟರಿಪೈ್ರಮರ:—ವೇಟು ಹೆಲ್ಥ.

ಮಹತ್ವವೂಪನ—ಈ ವಿಷಯವನ್ನು ಉಮೇದವಾರರು ಇಚ್ಛಾನುಸಾರವಾಗಿ ತೆಗದುಕೊಳ್ಳಬಹುದು. ಸರಕಾರೀ ಕೆಲ ಸಗಳನ್ನು ಕೊಡುವ ಕಾಲಕ್ಕೆ ಈ ವಿಷಯದಲ್ಲಿ ಅಥವಾ ಚಿತ್ರವಿದ್ಯಾ, ಕೃಷಿಕರ್ಮ, ಮೋಜಣೀ ಕೆಲಸ (ಅಂದರೆ ಲೆವ್ಹಲಿಂಗ ಮತ್ತು ಸರ್ವೆಯಿಂಗ) ಜೀವನೇಂದ್ರಿಯ ಶಾಸ್ತ್ರ, ಉದ್ಭಿಜ್ಜ ಶಾಸ್ತ್ರ ಇವುಗಳೊಳಗಿನ ಬಂದು ವಿಷಯದಲ್ಲಿ ಪಾಸಾದ ಉಮೇದವಾರರಿಗೆ ಮುಲ್ಕೀ ಪರೀಕ್ಷೆಯ ಉಳಿದ ವಿಷಯಗಳಲ್ಲಿ ಮಾತ್ರ ಪಾಸಾದ ಉಮೇದವಾರರಿಗಿಂತ ಹೆಚ್ಚು ಹಕ್ಕು ಇರುತ್ತದೆಂದು ಎಣಿಸಲಾಗುವದು.

ಟಿಪ್ಪಣಿ:—ಉರ್ದು ಭಾಷೆಯು ನಡೆಯುತ್ತಿರುವ ಕಚೇರಿಗಳಲ್ಲಿ ಕೆಲಸ ಮಾಡಲಪೇಕ್ಷಿಸುವ ಉಮೇದವಾರರು ೬ನೇ ಮತ್ತು ೩ನೇ ಗ್ರೇಡಿನ ಪರೀಕ್ಷೆಗಳಿಗೆ ನೇಮಿಸಿರುವ ಕನ್ನಡ ಅಥವಾ ಮರಾಠಿ ವಿಷಯಕ್ಕೆ ಬದಲಾಗಿ ಉರ್ದು ಭಾಷೆಯಲ್ಲಿ ಪರೀಕ್ಷೆ ಕೊಡಬಹುದು.

೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪರೀಕ್ಷೆಗಾಗಿ ನೇಮಿಸಿದ ಪುಸ್ತಕಗಳು.

(ಈ ಪರೀಕ್ಷೆಯನ್ನು ಮುಖ್ಯವಾಗಿ ಮಹಾರಾಷ್ಟ್ರ ಅಥವಾ ಕನ್ನಡ ಭಾಷೆಯಲ್ಲಿ ಕೊಡತಕ್ಕದ್ದು.)

ಗದ್ಯ—ಮರಾಠೀ ೬ನೇ ಪುಸ್ತಕದೊಳಗಿನ ಗದ್ಯ ಭಾಗ

ಇನ್ನು ಮಾತ್ರ ಓದುವದೂ ವಿವರಿಸುವದು; ಅಥವಾ ಕನ್ನಡ ಓನೇ ಪುಸ್ತಕ ಸಂಪೂರ್ಣ.

ಆರೋಗ್ಯವಿದ್ಯ— "ವೇಟುಹೇಲ್ಥ" ಎಂಬ ಇಂಗ್ಲಿಷ ಪುಸ್ತಕದ ಭಾಷಾಂತರ.

ಮಹತ್ವವೂಪನವನ್ನು ಐಚ್ಛಿಕ ವಿಷಯವಾಗಿ ತೆಗೆದು ಕೊಳ್ಳಬಹುದು. ಸರಕಾರೀ ನೌಕರಿಯನ್ನು ಕೊಡುವಾಗ್ಗೆ ಈ ವಿಷಯದಲ್ಲಿ ಅಥವಾ ಚಿತ್ರವಿದ್ಯದಲ್ಲಿ ಇಲ್ಲವೆ ಕೃಷಿಕರ್ಮ ಶಾಸ್ತ್ರದಲ್ಲಿ ಪರೀಕ್ಷೆ ಪಾಸಾದ ಉಮೇದವಾರರಿಗೆ ಬರಿಯ ಮುಲ್ಕೀ ಪರೀಕ್ಷೆಯ ಉಳಿದ ವಿಷಯಗಳಲ್ಲಿ ತೇರ್ಗಡೆ ಹೊಂದಿದವರಿಗಿಂತ ಹೆಚ್ಚು ಹಕ್ಕುಂಟೆಂದು ಎಣಿಸಲಾಗುವದು.

ಟಿಪ್ಪಣಿ:—(೧) ಓನೇ ಸದರಿನ ಬದಲಾಗಿ ಕೆಳಗೆ ಬರೆದ ವಿಷಯಗಳಲ್ಲಿ ಪರೀಕ್ಷೆ ಕೊಡಬಹುದು.

ಗದ್ಯ-ಮರಾಠೀ ಓನೇ ಪುಸ್ತಕ ಅಥವಾ ಕನ್ನಡ ಓನೇ ಪುಸ್ತಕ ಮತ್ತು ಅಖ್ಲಾಕಿ ಕಾಷೀ. ಉರ್ದು ವ್ಯಾಕರಣಪೂರಾ.

ಮರಾಠಿ ಅಥವಾ ಕನ್ನಡ ಇಲ್ಲವೆ ಉರ್ದು ಸರಕಾರೀ ಕೈಬರಹದ ಕಾಗದಗಳನ್ನು ಸರಳವಾಗಿ ಓದುವದು.

(೨) ಉರ್ದು ಭಾಷೆಯು ನಡೆಯುತ್ತಿರುವ ಕಚೇರಿಗಳಲ್ಲಿ ಕೆಲಸ ಮಾಡಲಪೇಕ್ಷಿಸುವ ಉಮೇದವಾರರು ಷಿನೇ ಗ್ರೇಡ ಮುಲ್ಕೀ ಪರೀಕ್ಷೆಗೆ ಇರುವ ಮರಾಠಿ ಅಥವಾ ಕನ್ನಡ ವಿಷಯಗಳಿಗೆ ಬದಲಾಗಿ ಉರ್ದು ಭಾಷೆಯಲ್ಲಿ ಪರೀಕ್ಷೆ ಕೊಡಬಹುದು. ಗದ್ಯ—ಅಖ್ಲಾಕೀ ಕಾಷಿ.

ಧಾರವಾಡ,
ತಾ॥ ೧೫ ಅಕ್ಟೋಬರ ೧೯೦೯. } S. V. Patwardhan,
ಎಜ್ಯುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

CORRESPONDENCE.
ಪತ್ರ ವ್ಯವಹಾರವು.

(ಒಟ್ಟಿನೇ ಪುಟದಿಂದ ಮುಂದೆ ಸಾಗಿದ್ದು.)

ಆ ಬಳಿಕ ಎಷ್ಟೋ ಸಭ್ಯ ಗೃಹಸ್ಥರೂ, ಬೇರೆ ಸಾಲೆಯ ವಿದ್ಯಾರ್ಥಿಗಳೂ, ಅನೇಕ ಜನ ಪ್ರೇಕ್ಷಕರೂ ಈ ಮಹಾ ಸಮಾರಂಭವನ್ನು ನೋಡಲಿಕ್ಕೆ ಬಂದಿದ್ದರು. ಅವರು ತಮ್ಮ ಯೋಗ್ಯತೆಯ ಮೇರಿಗೆ ಉಚಿತಾಸನದಲ್ಲಿ ಕುಳಿತುಕೊಂಡರು.

ಬಳಿಕ ಎರಡು ತಾಸು ಹೊತ್ತೇರುವ ಸುಮಾರಿಗೆ ರಾವ ಸಾಹೇಬ ಎಜ್ಯುಕೇಶನಲ್ ಇನಸ್ಪೇಕ್ಟರರೂ, ರಾವಸಾಹೇಬ ಪ್ರಿನ್ಸಿಪಾಲರೂ ಕೂಡಿ, ಪರೀಕ್ಷೆಯನ್ನು ತೆಗೆದುಕೊಂಡರು. ಪರೀಕ್ಷೆಗೆ ಎಂಟು ಮಂದಿ ಕಾಲೇಜದ ವಿದ್ಯಾರ್ಥಿಗಳೂ, ಆರು ಮಂದಿ ಹಾಯಸ್ಕೂಲ ವಿದ್ಯಾರ್ಥಿಗಳೂ, ನಾಲ್ಕು ಜನ ಮಹಾರಾಷ್ಟ್ರ ಶಾಲೆಯ ವಿದ್ಯಾರ್ಥಿಗಳೂ, ಈ ವರ್ಗದ ಪ್ರ್ಯಾಕ್ಟಿಸಿಂಗ ಸ್ಕೂಲ ವಿದ್ಯಾರ್ಥಿಗಳೂ ಕೂತಿದ್ದರು. ಪರೀಕ್ಷೆಗೆ ಕೂತ ಬಟ್ಟೆ ೩೦ ಜನರಲ್ಲಿ ೧೩ ಜನರು ಪಾಸಾಗಿ ಇನಾಮುಗಳನ್ನು ದೊರಿಕಿಸಿದ್ದು ಹ್ಯಾಗೆಂದರೆ:—ಟ್ರೇನಿಂಗಕಾಲೇಜ ಮತ್ತು ಪ್ರ್ಯಾಕ್ಟಿಸಿಂಗ ಸ್ಕೂಲ ವಿದ್ಯಾರ್ಥಿಗಳಲ್ಲಿ ೮ ಜನರು ಪಾಸಾಗಿ ೧೫ ರೂಪಾಯಿಯವು ಮೂರು, ೧೦ ರೂಪಾಯಿಯವು ಎರಡು, ೮ ರೂಪಾಯಿಯವು ಒಂದು, ೫ ರೂಪಾಯಿಯವು ಎರಡು, ಈ ಮೇರೆಗೆ ೮ ಇನಾಮುಗಳನ್ನು ಪಡೆದರು. ಹೈಸ್ಕೂಲಿನವರು ಮೂವ್ವರು ಪಾಸಾಗಿ ೮ ರೂಪಾಯಿಯವು ಎರಡು, ೫ ರೂಪಾಯಿನ್ನು ಒಂದು ಹೀಗೆ ೩ ಇನಾಮುಗಳನ್ನು ದೊರಿಕಿಸಿದರು. ಮರಾಠಿ ಶಾಲೆಯವರು ಇಬ್ಬರು ಪಾಸಾಗಿ ಒಬ್ಬನು ೧೦ ರೂಪಾ

ಯಿದ್ದು ಮತ್ತೊಬ್ಬನು ೫ ರೂಪಾಯಿದ್ದು ಹೀಗೆ ೨ ಇನಾ
ಮುಗಳನ್ನು ಪಡೆದರು. ಈ ಎಲ್ಲರ ಪರೀಕ್ಷೆಯು ೪॥ ತಾ
ಸು ಸುಮಾರಕ್ಕೆ ಮುಗಿಯಿತು.

ಬಳಿಕ ಅದೇ ದಿವಸ ಸಾಯಂಕಾಲಕ್ಕೆ ಮೇಹಬ್ಬಾನ್
ಇನಸ್ಪೆಕ್ಟರ ಸಾಹೇಬರವರು ಪರೀಕ್ಷೆ ತೆಗೆದುಕೊಂಡ ವಿದ್ಯಾ
ರ್ಥಿಗಳಿಗೆ ಬಕ್ಷೀಸು ಕೊಡುವ ಸಮಾರಂಭವಾಯಿತು.
ಆಗ್ಗೆ ಮೆಹಬ್ಬಾನ್ ಕ್ಯಾಲಿ ಬೋವ್ಹೆ ಸಾಹೇಬ ಕಲೇಕ್ಟರ,
ಅಸಿಸ್ಟಂಟ ಕಲೆಕ್ಟರ, ಡಿಸ್ಟ್ರಿಕ್ಟ ಮತ್ತು ರೇಲ್ವಿಖಾತೆಯ
ಸುಪ್ರಿಂಟಿಂಡೆಂಟ ಸಾಹೇಬರು, ಮೆಹಬ್ಬಾನ್ ಡಾಕ್ಟರ ಸಾ
ಹೇಬರು, ಡಿಪೂಟಿ ಕಲೆಕ್ಟರ ಮುಂತಾದ ಅನೇಕಯುರೋ
ಪಿಯನ್ ಅಧಿಕಾರಸ್ಥರು ಬಂದಿದ್ದರು. ಅವರಲ್ಲಿ ಕೆಲವರು
ತಮ್ಮ ತಮ್ಮ ಕುಟುಂಬ ಸಹಿತವಾಗಿ ಬಂದಿದ್ದರು. ಮೇಹ
ಬ್ಬಾನ್ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರೂ
ರಾವಸಾಹೇಬ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೇಕ್ಟರರೂ
ಜಾವೂರ ಜಹಾಗೀರದಾರರಾದ ಶ್ರೀಮಂತ ಬಾಬಾ ಸಾಹೇ
ಬರೂ ಮಹಾರಾಜಶ್ರಿ ರಾಮರಾವ ದೇಸಾಯರೂ ಇನ್ನೂ
ಅನೇಕ ಸರಕಾರೀ ಹಿಂದು ಅಧಿಕಾರಸ್ಥರೂ ಸಭ್ಯಗ್ರಹಸ್ಥ
ರೂ ಕೂಡಿದ್ದರು. ಇದಲ್ಲದೆ ಸಾವಿರಾರು ಜನ ಪ್ರೇಕ್ಷಕರು
ಬಂದಿದ್ದರು. ಆಗ ಪುನಃ ತಾಲೀಮು ಪರೀಕ್ಷೆಯಲ್ಲಿ ಪಾಸಾದ
ವಿದ್ಯಾರ್ಥಿಗಳು ಮಾಡಿ ತೋರಿಸಿದ ಕೌತುಕದ ಕಸರತ್ತು
ಗಳನ್ನು ನೋಡಿ ನೆರೆದ ಯಾವತ್ತು ಜನರು ಆನಂದದಿಂದ
ಚಕಿತರಾಗಿ ಬಂದೇ ಕಡೆಗೆ ಇಟ್ಟ ಮನಸಿನಿಂದಲೂ ದೃಷ್ಟಿ
ಯನ್ನು ಬೇರೆ ಕಡೆಗೆ ಹೋಗಗೊಡದೆ ಬತ್ತಿಟ್ಟಗೇ ನೋ
ಡುತ್ತಿದ್ದವರಿಂದಲೂ ಚಿತ್ರದ ಗೊಂಬೆಗಳಂತೆ ಕಾಣುತ್ತಿದ್ದ
ರು. ಮತ್ತು ಅತ್ಯಗಾಧವಾಗಿ ಮಾಡಿ ತೋರಿಸಿದ ಕಸರತ್ತು

ಗಳನ್ನು ಕಂಡು ಆನಂದದಿಂದ ನೆರೆದ ಯಾವತ್ತು ಜನರ ಕೈಗಳು ಚಪ್ಪಾಳೆಯನ್ನಿಕ್ಕುತ್ತಿದ್ದವು. ಮತ್ತು ಸಣ್ಣ ಮಕ್ಕಳು ಅತಿ ಚಪಲತನದಿಂದ ಲಗಬಗೆಯಾಗಿ ಮಾಡಿ ತೋರಿಸುವ ಸಾಧಕಗಳನ್ನು ಕಂಡು ಯುರೋಪಿಯನ್ ದೊರೆಸಾನಿಯವರು ಆನಂದವನ್ನು ಅಗಾಗ್ಯೆ ವ್ಯಕ್ತಪಡಿಸುತ್ತಿದ್ದರು. ಮತ್ತು ಕಾಲೇಜಿನ ತಾಲೀಮು ಮಾಸ್ತರರೂ ಹಾಯಸ್ಕೂಲ ತಾಲೀಮು ಮಾಸ್ತರರೂ ನಡುನಡುವೆ ಬಹಳ ಸರಸಾಗಿ ಕಸರತ್ತು ಮಾಡಿ ತೋರಿಸಿ ಜನರನ್ನು ದಂಗು ಪಡಿಸಿದರು.

ಆ ಬಳಿಕ ಮಿಸ್ಸೆಸ ಕ್ಯಾಲಿ ಬೋವ್ಹೀ ದೊರೆಸಾನಿಯವರು ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಇನಾಮು ಕೊಟ್ಟರು. ತರುವಾಯ ರಾವಸಾಹೇಬ ಪ್ರಿನ್ಸಿಪಾಲರವರು ಪುಷ್ಪಮಾಲೆಗಳಿಂದಲೂ ತಾಂಬೂಲಗಳಿಂದಲೂ ಸುಗಂಧದ್ರವ್ಯಗಳಿಂದಲೂ ಸಭಿಕರನ್ನು ಆದರಿಸಿದರು. ಬಳಿಕ ನೋಡಬಂದ ಯುರೋಪಿಯನ್ ಉದ್ಯೋಗಸ್ಥರು ಕಾಲೇಜಿನ ಮೂರು ಭೋಜನ ಶಾಲೆಗಳನ್ನೂ ಕಲಾಕೌಶಲ್ಯವ ಶಾಲೆಯನ್ನು ನೋಡಿ ರಾವಸಾಹೇಬರವರ ನಿರೂಪ ತಕ್ಕೊಂಡು ಸ್ವಸ್ಥಾನಗಳಿಗೆ ತೆರಳಿದರು.

ಇದೇ ಪ್ರಕಾರ ಇಂಥಾ ದರ್ಶನೀಯ ಸಭೆಗಳು ಮೇಲೆ ಮೇಲೆ ನಮ್ಮ ಕಾಲೇಜಿನಲ್ಲಿ ಆಗಬೇಕೆಂತಲೂ ಶರೀರ ಶಿಕ್ಷಣವು ಚನ್ನಾಗಿ ಏರ್ಪಾಡು ಹೊಂದಬೇಕೆಂತಲೂ ನಾನು ದೇವರನ್ನು ಕುರಿತು ಪ್ರಾರ್ಥಿಸುತ್ತೇನೆ.

ಧಾರವಾಡ
ತಾ॥ ೧೨ । ೧೦ । ೯೨.

ನಾರಾಯಣ ಬಾ. ಹಿರೇನೆರ್ತಿ.
ಕಾಲೇಜಿನ ಫಿನೇ ವರ್ಷದ ವಿದ್ಯಾರ್ಥಿ.

ಕಳೆದ ಸಪ್ಟೆಂಬರ ತಿಂಗಳನಲ್ಲಿ ಅದ ಧಾರವಾಡ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಗೆ ಕಾಲೇಜದವರು ೧೬೦ ವಿದ್ಯಾರ್ಥಿಗಳೂ ಹೊರಗಿನವರು ೧೦ ಜನರೂ ಕೂತಿದ್ದರು. ಅವರಲ್ಲಿ ಕಾಲೇಜದವರು ೧೧೪ ಜನರೂ ಹೊರಗಿನವರು ೪ ಜನರೂ ಪಾಸಾದರು. ಅವರ ವಿವರ ಕೆಳಗೆ ಬರೆದ ಮೇರೆಗೆ.

ನಂಬರು.	ಹೆಸರು.	೧೦೦ಕ್ಕೆ ಗುಣಿಗೆ ಬಿದ್ದ ಗುಣಗಳು.	ಸರ್ಟಿಫಿಕೇಟು.
	ಒಸ್ಸೇ ವರ್ಷದವರು.		
೧	ಶ್ರೀನಿವಾಸ ವೆಂಕಟೇಶ ಕಟ್ಟಿ.	೬೪೩	ಎಳ್ಳೆ ರೂ.
೨	ಗೋವಿಂದ ಕೃಷ್ಣ ಕಲಿವಾಳ.	೬೪೨	ಎಳ್ಳೆ ರೂ.
೩	ಮಹಾದೇವ ರಾಮಚಂದ್ರ ಕುಲಕರ್ಣಿ.	೬೪೪	ಎಳ್ಳೆ ರೂ.
೪	ಕಲ್ಲಂಭಟ್ಟ ಮಾದಾಭಟ್ಟ ಕೋಳಿವಾಡ.	೬೪೨	ಎಳ್ಳೆ ರೂ.
೫	ಪಂಕರ ಜೇವಾಜಿ ಉಪ್ಪಿನ ಬೆಟಗೇರಿ.	೬೧೧	ಎಳ್ಳೆ ರೂ.
೬	ನಾರಾಯಣ ವಾ. ಜೋಸಿ.	೬೦೩	ಎಳ್ಳೆ ರೂ.
೭	ಸುಬ್ಬಾಜಿ ನ. ಪೂಜಾರಿ.	೬೦೨	ಎಳ್ಳೆ ರೂ.
೮	ಬಾಳಾಜಿ ಗುರಾಚಾರ್ಯ ಹಡಕೋಳ.	೫೬೧	ಎಂ ರೂ.
೯	ಫಕೀರ ಗೌಡ ಪ. ಬಿದ್ದನ ಗವಡರ.	೫೮೨	ಎಂ ರೂ.
೧೦	ನಾರಾಯಣ ಬಾಳಾಜಿ ಹಿರೇನರ್ತಿ.	೫೬೦	ಎಂ ಠೂ.
೧೧	ಸೇತೂ ಮದ್ಧವ ಗು. ಡಂಬಳ.	೫೦೪	ಎಂ ರೂ.
೧೨	ಕಲ್ಲೋಳಿ ಜೇವಾಜಿ ಕುಲಕರ್ಣಿ.	೪೬೨	ಎಂ ರೂ.
೧೩	ಸ್ವಾಮಿ ಗೋವಿಂದ ಕುಲಕರ್ಣಿ.	೪೪೯	ಎಂ ರೂ.

DHARWAR TRAINING COLLEGE CERTIFICATE EXAMINATION—1892.

ಧಾರವಾಡ ಟ್ರೇನಿಂಗಕಾಲೇಜಿದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು. ೧೮೯೨.

ಇತಿಹಾಸ ಭೂಗೋಲ.

೩ನೇ ವರ್ಷ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣಗುಣಗಳು.)

೧. ಪರದೇಶದವರು ಬರದಿಟ್ಟ ಲೇಖಗಳಿಂದ ಹಿಂದು ೯
ಸ್ಥಾನದ ಇತಿಹಾಸವನ್ನು ತಿಳುಕೊಳ್ಳುವದಕ್ಕೆ ಅನುಕೂ
ಲವಾಗುತ್ತದೆ. ಆ ಲೇಖಗಳು ಯಾವವು? ಅವನ್ನು
ದವರು ಯಾರು?

೨. ಯುರೋಪದೊಳಗಿನ ತುರ್ಕಸ್ಥಾನದ ಈಗಿನ ರಾ ೧೧
ಜ್ಯವನ್ನು ಯಾರು ಎಂದು ಸ್ಥಾಪಿಸಿದರು? ಆ ದೇಶವನ್ನು
ಪೊದಲು ಯಾರು ಆಳುತ್ತಿದ್ದರು? ಅವರು ಅಲ್ಲಿ ಬರಲಿಕ್ಕೆ
ಕಾರಣವೇನಾಯಿತು?

೩. ರೋಮು ಸಾಮ್ರಾಜ್ಯದ ಆರಂಭಕಾಲದ ರಾಜ್ಯದಾಡಳಿತೆ ೧೨
ಯನ್ನು ವಿವರಿಸಿರಿ ಆದರಲ್ಲಿ ಏನೇನು ಹೆಚ್ಚು ಕಡಿಮೆ ಎಂದೆಂ
ದು ಆಯಿತು? ಆಯಾಯ ಹೆಚ್ಚು ಕಡಿಮೆಯಿಂದ ಆದ ಪರಿ
ಣಾಮಗಳು ಯಾವವು?

೪. (ಅ) ಕೆಳಗೆ ಬರೆದ ಸಂಗತಿಗಳು ಯಾವ ವರ್ಷದ ೧೦
ಲ್ಲಾದವು?

೧ ಅಥೆನ್ಸನನ್ನು ಸ್ಪಾರ್ಟನ್ನರು ತಕ್ಕೊಂಡದ್ದು.
೨ ಇಜಿಪ್ತವು ರೋಮು ರಾಜ್ಯಕ್ಕೆ ಸೇರಿದ್ದು.
೩ ಸಾಲಸ್ಟ್ಯೆನವು ರೋಮುದನರಿಗೆ ಅಧೀನ
ವಾದ ಸಿರಿಯ ಪ್ರಾಂತದೊಳಗೆ ಸೇರಿಸಲ್ಪ
ಟ್ಟದ್ದು.

೪ ಗಾಲರು ರೋಮ ಪಟ್ಟಣವನ್ನು ಸ್ಥಾಪಿಸಿದ್ದು?
(ಬ) ಕೆಳಗೆ ಬರೆದ ವರ್ಷಗಳಲ್ಲಿ ಏನು ನಡೆಸಿದವು?
(೧) ಕ್ರಿ. ಪೂ. ೧೫೪, ೧೯೦, ೫೫, ೧೩೩.

೫. ಯೆಹೂದೀ ಜನರ ಇತಿಹಾಸವನ್ನು ಸ್ವಲ್ಪದರಲ್ಲಿ ಬರೆಯಿರಿ. ಅವರು ಯಾವ ಕುಲದವರು? ಆ ಕುಲದವರು ಯಾರು ಎಂದಿಗೆ ಪ್ರಬಲರಾದರು? ಯಾವ ರಾಜ್ಯಗಳನ್ನು ಸ್ಥಾಪಿಸಿದರು?

೬. ಬಟರವರ್ಥ, ರಾಂಚೀ, ತ್ರಿನಿದಾದ, ಅಮೂರ, ರ ೧೦
ತಲಾವು, ಪ್ರಿತೋರಿಯ, ಮೋಹನಾ, ಪತುಕೊರಿನ, ಮೇ
ರಾಕ್ಯೂಜಿ ಮತ್ತು ತೆಹುವಾನ ಇವೇನು? ಇಲ್ಲಿವೆ? ಯಾತರ
ಪಲುವಾ ಹೆಸರಾಗಿವೆ?

೭. ಜರ್ಮನಿ, ಇತಲಿ, ಗ್ರೀಸ ಮತ್ತು ಫ್ರಾನ್ಸ ಈ ದೇಶ ೮
ಗಳ ವಿದ್ಯಾಲಯಗಳು ಇರುವ ಪಟ್ಟಣಗಳನ್ನೂ ರಶಿಯ,
ಅಫಗಾನಿಸ್ಥಾನ ಮತ್ತು ಇರಾಣ ಈ ದೇಶಗಳಲ್ಲಿ ವ್ಯಾಪಾ
ರದ ಬಗ್ಗೆ ಪ್ರಸಿದ್ಧ ಇರುವ ಪಟ್ಟಣಗಳನ್ನೂ ಹೇಳಿರಿ.

೮. ಚೀನ ಪೋರ್ಚುಗಾಲ, ಫ್ರಾನ್ಸ ಮತ್ತು ಬ್ರಾಝಿಲ್ ೮
ಬಂದರಗಳನ್ನೂ ಬೆಲಜಿಮ, ಸ್ವಿತ್ಸರಲಂಡ, ಇತಲಿ, ಜ
ಪಾನ ಇಜಿಪ್ತ ಮತ್ತು ಗ್ರೀಸ ಈ ದೇಶಗಳ ಧರ್ಮಗಳ
ನ್ನೂ ರಾಜ್ಯರೀತಿಗಳನ್ನೂ ಹೇಳಿರಿ.

೯. ಏಶಿಯ, ಯುರೋಪ, ಆಫ್ರಿಕ ಮತ್ತು ಅಮೇರಿ ೧೦
ಕ ಈ ಪ್ರತಿ ಒಂದು ಖಂಡಗಳಲ್ಲಿ ಎಲ್ಲಕ್ಕೂ ಲಾಭವಾದ ಒಂ
ದೊಂದು ಹೊಳೆಯು ಯಾವದು? ಅವುಗಳಿಗೆ ಕೂಡುವ
ನದಿಗಳು ಯಾವವು ಮತ್ತು ಅವುಗಳ ಮೇಲಿರುವ ಪಟ್ಟಣ
ಗಳು ಯಾವವು?

೧೦. ಹಿಂದುಸ್ಥಾನದ ನಕಾಶೆಯನ್ನು ತೆಗೆದು ಅದರಲ್ಲಿ ೧೪
ಮುಂಬಾಯಿ ಇಲಾಖೆಯ ಬಂದರುಗಳನ್ನೂ ಮಧ್ಯ ಹಿಂ
ದುಸ್ಥಾನದ ಸಂಸ್ಥಾನಗಳನ್ನೂ ಪಂಜಾಬ ಮತ್ತು ಬಂಗಾ
ಲ ಇವುಗಳ ನದಿಗಳನ್ನೂ ತೋರಿಸಿರಿ.

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಇನಾಮಿನ ಪರೀಕ್ಷೆಯು.

ಈ ಪರೀಕ್ಷೆಯು ೧೯೧೬ನೇ ಇಸವಿ ಮೇ ತಿಂಗಳ ಕೊನೆಗೆ ಅಥ
ಜೂನ ತಿಂಗಳ ಪ್ರಾರಂಭದಲ್ಲಿ ಆಗುವದು. ಪರೀಕ್ಷೆಯ ತಾರೀಖು ಹಿ
ನಿಂದ ತಿಳಿಸಲ್ಪಡುವದು. ಪರೀಕ್ಷೆಗೆ ಕೂಡುವವರು ಎಪ್ರಿಲ ತಿಂ
ಅಂತ್ಯದೊಳಗಾಗಿ ಅರ್ಜಿಗಳನ್ನು ಕಳಿಸತಕ್ಕದ್ದು. ಪರೀಕ್ಷೆಯ
ಯಗಳು ಕೆಳಗೆ ಬರೆದ ಪ್ರಕಾರ ಇರುತ್ತವೆ.

೧ನೇ ತರಗತಿ.

೧ನೇ ಪ್ರಶ್ನೆಯ ಕಾಗದ.

ಪದ್ಯ— (೧) ಪಂಪಭಾರತ ೧ಷನೆಯು ಆಶ್ವಾಸ.
(೨) ಜಗನ್ನಾಥ ವಿಜಯ ೧ನೆಯ ಆಶ್ವಾಸ.

ಗದ್ಯ— (೧) ಚಿಕ್ಕದೇವರಾಜ ವಂಶಾವಳಿ ೧ರಿಂದ ೪೦ ಪುಟ.
(೨) ಶೂರಸೇನ ಚರಿತ್ರೆ ೧ರಿಂದ ೧೪೦ ಪುಟ.

ನಾಟಕ— ಚಂಡ ಕೌಶಿಕ ನಾಟಕ ಮೊದಲಿನ ೨ ಅಂಕಗಳು.

೨ನೇ ಪ್ರಶ್ನೆಯ ಕಾಗದ.

ವ್ಯಾಕರಣ— ಶಬ್ದಮಣಿ ದರ್ಪಣ: ಸಂಧಿ ಪ್ರಕರಣದಿಂದ ಆಖ್ಯಾತ ಪ್ರ
ಸಂಪೂರ್ಣ.

೩ನೇ ಪ್ರಶ್ನೆಯ ಕಾಗದ.

ಕೊಟ್ಟ ವಿಷಯದ ಮೇಲೆ ಪ್ರಬಂಧರಚನೆ.

ವಯಸ್ಸಿನ ನಿರ್ಬಂಧವಿಲ್ಲ. ಇನಾಮು ರೂಪಾಯಿ ೧೬—೧೦

೨ನೆಯ ತರಗತಿ.

೧ನೇ ಪ್ರಶ್ನೆಯ ಕಾಗದ.

ಪದ್ಯ— (೧) ರಾಜಶೇಖರ ವಿಲಾಸ (ಷಡಕ್ಷರಿಕೃತ) ೪ನೆಯ ಆಶ್ವಾಸ
(೨) ಕಾದಂಬರಿ (ನಾಗವರ್ಮ) ೧ರಿಂದ ೧೦೦ ಪದ್ಯ

ಗದ್ಯ— (೧) ಮುದ್ರಾ ಮುಂಜೂಷ ೫೨ರಿಂದ ೧೦೦ ಪುಟಗಳವರೆಗೆ.
(೨) ರಾಜಶೇಖರ ಚರಿತ್ರೆ ೧ರಿಂದ ೪೦ ಪುಟ.

೨ನೇ ಪ್ರಶ್ನೆಯ ಕಾಗದ.

ವ್ಯಾಕರಣ— ಕೈಪಿಡಿ ಉತ್ತರಾರ್ಧ.